ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ



ಬೋರಿಸ್ ಪಾಸ್ತೆರ್‌ನಾಕ್

ವಾಚಿಕೆ

ಕೇಶವ ಮಳಗಿ

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಬೋರಿಸ್ ಪಾಸ್ತರ್‌ನಾಕ್

ವಾಚಿಕೆ

ಬೋರಿಸ್ ಪಾಸ್ತರ್‌ನಾಕ್ (೧೮೯೦-೧೯೬೦)

ಆಧುನಿಕ ರಷಿಯಾದ ಪ್ರಮುಖ ಕವಿ, ಕಾದಂಬರಿಕಾರ, ಅನುವಾದಕ ಬೋರಿಸ್ ಪಾಸ್ತರ್‌ನಾಕ್ ಹುಟ್ಟಿ ಬೆಳೆದದ್ದು, ಬದುಕಿನ ಬಹುಭಾಗ ಕಳೆದದ್ದು ಮಾಸ್ಕೋ ನಗರದಲ್ಲಿ. ಯಹೂದಿ ತಂದೆ ಲಿಯೊನಿದ್ ಪ್ರಸಿದ್ಧ ಕಲಾವಿದ ; ತಾಯಿ ರೋಸಾ ಪಿಯಾನೋ ವಾದಕಿ. ಮಾರ್ಬರ್ಗ್‌ನಲ್ಲಿ ತತ್ವಶಾಸ್ತ್ರ ಅಭ್ಯಸಿಸಿ ನಂತರ ಮಾಸ್ಕೋ ವಿಶ್ವವಿದ್ಯಾಲಯದಿಂದ ಪದವಿ ಪಡೆದಾಗ ಬೋರಿಸ್ ಯುವಕವಿ. ೧೯೨೨ರಲ್ಲಿ 'ಮೈ ಸಿಸ್ಟರ್, ಲೈಫ್', ೧೯೨೩ರಲ್ಲಿ 'ಥೀಮ್ಸ್ ಆಂಡ್ ವೇರಿಯೇಷನ್ಸ್', ೧೯೨೬ರಲ್ಲಿ '೧೯೦೫', ೧೯೩೨ರಲ್ಲಿ 'ಸೆಕೆಂಡ್ಸ್ ಬರ್ತ್' ಕಾವ್ಯಸಂಗ್ರಹಗಳನ್ನು ಬೋರಿಸ್ ಪ್ರಕಟಿಸಿ ತನ್ನ ಕಾಲದ ಗಮನಾರ್ಹ ಕವಿಯೆಂದು ಹೆಸರು ಗಳಿಸಿದ. ಈ ನಡುವೆ ಕೆಲಕಾಲ ಕ್ರಿಯಾಶೀಲ ಬರವಣಿಗೆಯಿಂದ ಮೌನವಾಗಿದ್ದ ಬೋರಿಸ್, ಅನುವಾದದಲ್ಲಿ ತೊಡಗಿಕೊಂಡ. ಇಂದಿಗೂ ರಷ್ಯನ್ ಭಾಷೆಯಲ್ಲಿ ಅತ್ಯುತ್ತಮ ಅನುವಾದಗಳೆಂದು ಹೆಸರು ಮಾಡಿರುವ ಶೇಕ್ಸ್‌ಪಿಯರ್‌ನ 'ಕಿಂಗ್‌ಲಿಯರ್' 'ಹ್ಯಾಮ್ಲೆಟ್' 'ಒಥೆಲೊ' 'ನಾಲ್ಕನೆಯ ಹೆನ್ರಿ', 'ರೋಮಿಯೋ-ಜೂಲಿಯೆಟ್'ಗಳನ್ನು ಈ ಸಮಯದಲ್ಲಿ ಪ್ರಕಟಿಸಿದ.

೧೯೫೭ರಲ್ಲಿ ರಷಿಯಾದ ಪ್ರಕಾಶನ ಸಂಸ್ಥೆಗಳಿಂದ ತಿರಸ್ಕೃತವಾದ 'ಡಾಕ್ಟರ್ ಜಿವಾಗೋ' ಹಸ್ತಪ್ರತಿ ಇಟಲಿಯಲ್ಲಿ ಪ್ರಕಟಗೊಂಡಾದ ಮೇಲೆ ಬೋರಿಸ್‌ನ ವೈಯಕ್ತಿಕ ಬದುಕಿನಲ್ಲಿ ಕಷ್ಟಪರಂಪರೆ ಆರಂಭವಾಯಿತು. ೧೯೫೮ರಲ್ಲಿ ವಿಶ್ವದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ ನೊಬೆಲ್ ಪಡೆದ ಮೇಲೆ ಅದು ಇನ್ನೂ ಹೆಚ್ಚಾಯಿತು. ಬಹುಮಾನ ಸ್ವೀಕರಿಸದಿರುವಂತೆ ನೈತಿಕ ಒತ್ತಡ ಹೆಚ್ಚಾದಾಗ ಕವಿಯಿಂದ ಪ್ರಶಸ್ತಿಯ ತಿರಸ್ಕಾರ. ಕಾದಂಬರಿಯ ಅತಿ ಕಟುಟೀಕೆ ಎದುರಿಸಬೇಕಾಯಿತು. ಗೆಳತಿ ಓಲ್ಗಾಳ ಬಂಧನ, ಕೈದಿಗಳ ಕ್ಯಾಂಪಿನಲ್ಲಿ ಶಿಕ್ಷೆ, ಬೋರಿಸ್ ಪಾಸ್ತರ್‌ನಾಕ್‌ಗೆ ಬಾರಿಬಾರಿ ಅನಾರೋಗ್ಯ, ಹೃದಯಾಘಾತ. ೧೯೬೦ರಲ್ಲಿ, ತನ್ನ ಎಪ್ಪತ್ತನೆ ವಯಸ್ಸಿನಲ್ಲಿ ಬೋರಿಸ್ ನಿಧನ ಹೊಂದಿದ್ದು ಮಾಸ್ಕೋ ಬಳಿಯ ಪೆರಿಡೆಲ್ಕಿನೊದಲ್ಲಿ.

ಪಾಸ್ತರ್‌ನಾಕ್‌ನ ಈ ವಾಚಿಕೆಯನ್ನು ಕತೆಗಾರ ಕೇಶವ ಮಳಗಿ ಸಿದ್ಧಪಡಿಸಿದ್ದಾರೆ.

ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ

ಬೋರಿಸ್ ಪಾಸ್ತರ್‌ನಾಕ್

ವಾಚಿಕೆ

ಆಯ್ಕೆ / ಅನುವಾದ :

ಕೇಶವ ಮಳಗಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು - ೫೬೦ ೦೧೮

BORIS PASTERNAK : Selected writings of Nobel Laureate Boris Pasternak, Selected and translated by Keshava Malagi, Published by Kannada Pustaka Pradhikara (Kannada Book Authority) Pampa Mahakavi Road, Chamarajapet, Bangalore - 560 018.

First Edition : 1997, pages : ixx + 236 = 255

Price : 34-00

ಬೆಲೆ : ೩೪

ಮೊದಲ ಮುದ್ರಣ : ೧೯೯೭

ರಕ್ಷಾಪುಟ : ರಾ. ಸೂರಿ

ಅಕ್ಷರ ಜೋಡಣೆ :

ಪ್ರಶಾಂತ್ ಎಂಟರ್‌ಪ್ರೈಸಸ್
ನಂ. ೨೧೩, ಬಾಲಾಜಿರಸ್ತೆ
ತ್ಯಾಗರಾಜನಗರ
ಬೆಂಗಳೂರು - ೫೬೦ ೦೨೮
ಫೋನ್ : ೬೦೪೦೧೬

ಮುನ್ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ಅನೇಕ ಯೋಜನೆಗಳನ್ನು ರೂಪಿಸಿಕೊಂಡಿದ್ದು, ಅವುಗಳಲ್ಲಿ ಮುಖ್ಯವಾದುವೆಂದರೆ, ಕನ್ನಡದಲ್ಲಿ ಆಯಾ ವರ್ಷ ಪ್ರಕಟವಾಗುವ ಕೃತಿಗಳನ್ನು ಲೇಖಕರಿಂದ ; ಪ್ರಕಾಶಕರಿಂದ ಕೊಂಡು ಗ್ರಂಥಾಲಯಗಳ ಮೂಲಕ ಓದುಗರಿಗೆ ತಲುಪಿಸುವುದು ಹಾಗೂ ಅತ್ಯುತ್ತಮವಾದ ಕೃತಿಗಳನ್ನು ಪರಿಣತ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸುವುದು.

ಈ ಯೋಜನೆಗಳಿಗೆ ಪೂರಕವಾಗಿ ಕಳೆದ ಐದು ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಸೃಜನಶೀಲವಾದ ಸೃಜನೇತರವಾದ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುತ್ತಾ ಬಂದಿದೆ. ಕನ್ನಡದ ಮೌಲಿಕವಾದ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದು ಪುನರ್ ಮುದ್ರಣವಾಗದಿದ್ದ ಗ್ರಂಥಗಳನ್ನು, ''ಜನಪ್ರಿಯ ಪುಸ್ತಕ ಮಾಲೆ ''ಯ ಮೂಲಕ ಪ್ರಕಟಿಸುತ್ತಾ ಬಂದಿದೆ. ಹಾಗೆಯೇ ಸಮಕಾಲೀನ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಮಾನವಿಕ ಶಾಸ್ತ್ರ ವಿಚಾರ, ಕಲೆ, ಶಿಶು ಸಾಹಿತ್ಯ ಹಾಗೂ ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಕೃತಿಗಳನ್ನು ಹೊರತರುವ ಉದ್ದೇಶದಿಂದ ಮೂಲಭೂತ ಶೈಕ್ಷಣಿಕ ಮಾಲೆ, ವಿಜ್ಞಾನ ದೀಪ ಮಾಲೆ, ಮಕ್ಕಳ ಪುಸ್ತಕ ಮಾಲೆಗಳನ್ನು ಪ್ರಾರಂಭಿಸಿದೆ. ಅಲ್ಲದೆ, ಸಂಕಲನವನ್ನು ಸಂಪಾದಿಸಿ ಪ್ರಕಟಿಸುವ ಕೆಲಸವನ್ನು ಮಾಡುತ್ತಿದೆ.

ಜಗತ್ತಿನ ಬೇರೆ ಬೇರೆ ವಿಜ್ಞಾನಿಗಳ, ತತ್ವಜ್ಞಾನಿಗಳ ಬದುಕು ಮತ್ತು ಬರಹಗಳನ್ನು ಕುರಿತು ತಜ್ಞರಿಂದ ಬರೆಯಿಸಿ ಕನ್ನಡದ ಓದುಗರಿಗೆ ತಲುಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನೂ ಪ್ರಾಧಿಕಾರ ಹೊಂದಿದೆ. ಹೀಗೆ

ಪರಿಚಯಿಸುವುದರ ಮೂಲಕ ಬೇರೆ ಬೇರೆ ದೇಶಗಳ ಭಾಷೆ, ಸಂಸ್ಕೃತಿ ಹಾಗೂ ನಾಗರಿಕತೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನೊಬೆಲ್ ಬಹುಮಾನ ವಿಜೇತ ಲೇಖಕರ ಮಾಲಿಕೆಯೊಂದನ್ನು 'ನೊಬೆಲ್ ಪುರಸ್ಕೃತ ಸಾಹಿತ್ಯ ಮಾಲೆ' ಎಂದು ಆರಂಭಿಸುತ್ತಿದ್ದೇವೆ.

ನೊಬೆಲ್ ಬಹುಮಾನ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತವಾದ ಬಹುಮಾನ. ಆಲ್‌ಫರ್ಡ್ ನೊಬೆಲ್ ತನ್ನ ಉಯಿಲಿನಲ್ಲಿ ತನ್ನ ಉಳಿದಿರುವ ಆಸ್ತಿಯನ್ನೇ ಮೂಲ ಬಂಡವಾಳವಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಐದು ಬಹುಮಾನಗಳನ್ನು ಕೊಡುವಂತೆ ತಿಳಿಸಿದ್ದಾರೆ. ಈ ಬಹುಮಾನಗಳು 'ಭೌತಶಾಸ್ತ್ರ', 'ರಸಾಯನಶಾಸ್ತ್ರ', 'ಶರೀರಶಾಸ್ತ್ರ', ಅಥವಾ 'ವೈದ್ಯಕೀಯ ಶಿಕ್ಷಣ', 'ಸಾಹಿತ್ಯ' ಹಾಗೂ 'ಮನುಕುಲದ ಶಾಂತಿಗಾಗಿ' ಎಂದು ಸೂಚಿಸಿದ್ದಾರೆ. ಹಾಗೆ ಆಯಾ ವರ್ಷ ಬಹುಮಾನ ಪಡೆಯುವವರು ಹಿಂದಿನ ವರ್ಷಾವಧಿಯಲ್ಲಿ ಮಾನವ ಕುಲಕ್ಕೆ ತುಂಬಾ ಪ್ರಯೋಜನಕಾರಿಯಾದ, ಅತ್ಯಂತ ಶ್ರೇಷ್ಠ ಕಾರ್ಯ ಮಾಡಿರಬೇಕು. ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಅಕಾಡೆಮಿಗಳು ಆಯ್ಕೆ ಮಾಡಿ ಬಹುಮಾನವನ್ನು ನಿರ್ಧರಿಸುತ್ತವೆ. ಈ ಬಹುಮಾನ ನೀಡುವಲ್ಲಿ ಅಭ್ಯರ್ಥಿಗಳ ರಾಷ್ಟ್ರೀಯತೆಯನ್ನು ಪರಿಗಣಿಸಬಾರದೆಂಬುದನ್ನು ನೊಬೆಲ್ ಸೂಚಿಸಿದ್ದಾನೆ. ಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಪುರಸ್ಕಾರವನ್ನು ಪಡೆದ ಸಾಹಿತಿಗಳನ್ನು ಕುರಿತು ಕೃತಿಗಳನ್ನು ಕನ್ನಡಿಗರಿಗೆ ತಲುಪಿಸುವುದು ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ.

ಪ್ರಸ್ತುತ, 'ನೊಬೆಲ್‌ವಾಚಿಕೆಗಳು' ಎಂಬ ಈ ಮಾಲಿಕೆಯ ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಿದ್ಧಪಡಿಸಿಕೊಟ್ಟಿದೆ. ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಪ್ರೊ|| ಬರಗೂರು ರಾಮಚಂದ್ರಪ್ಪ ಅವರು ಬೇರೆ ಬೇರೆ ಲೇಖಕರಿಂದ ಹಸ್ತಪ್ರತಿಯನ್ನು ಸಿದ್ಧಪಡಿಸಲು ನೆರವಾಗಿದ್ದಾರೆ, ಅಂತೆಯೇ ಅಕಾಡೆಮಿಯು ಸಿದ್ಧಪಡಿಸಿದ ಈ ಕೃತಿಗಳನ್ನೆಲ್ಲಾ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಇಂದಿನ ಅಧ್ಯಕ್ಷರಾದ ಶ್ರೀ ಶಾಂತರಸರವರು ಒಪ್ಪಿಗೆ ನೀಡಿದ್ದಾರೆ.

ಇವರಿಗೆ ಪ್ರಾಧಿಕಾರವು ಆಭಾರಿಯಾಗಿದೆ. ಈ ಮಾಲಿಕೆಯಲ್ಲಿನ ಈ ಕೃತಿಗಳು ಇಷ್ಟು ಅಚ್ಚುಕಟ್ಟಾಗಿ ಹೊರ ಬರಲು ಶ್ರೀ ಲಿಂಗರಾಜು ಅವರೂ ಶ್ರಮಿಸಿದ್ದಾರೆ. ಪ್ರಸ್ತುತ ಕೃತಿ 'ಬೋರಿಸ್ ಪಾಸ್ತರ್‌ನಾಕ್' ಅನ್ನು ಕೇಶವ ಮಳಗಿ ಅನುವಾದಿಸಿದ್ದಾರೆ. ಈ ಪುಸ್ತಕಗಳಿಗೆ ರಾ. ಸೂರಿ ಅವರು ಹೊದಿಕೆಗಳನ್ನು ಸಿದ್ಧಪಡಿಸಿದ್ದಾರೆ. ಹಾಗೆಯೇ ಈ ಪುಸ್ತಕವನ್ನು ಅಂದವಾಗಿ ಪ್ರಶಾಂತ್ ಎಂಟರ್ ಪ್ರೈಸಸ್ ಅವರು ಮುದ್ರಿಸಿಕೊಟ್ಟಿದ್ದಾರೆ. ಈ ಎಲ್ಲರಿಗೂ ಕೃತಜ್ಞತೆಗಳು. ಸಹೃದಯ ಕನ್ನಡಿಗರು ಈ ಮಾಲಿಕೆಯನ್ನು ಆದರದಿಂದ ಸ್ವಾಗತಿಸಿ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆಂದು ಆಶಿಸುತ್ತೇನೆ.

ನೆಲಮನೆ ದೇವೇಗೌಡ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

ಅನುಕ್ರಮಣಿಕೆ

ಕವಿತೆಗಳು

ಕಥೆಗಳು

ಅನುವಾದಕನ ಟಿಪ್ಪಣಿ

ಬೋರಿಸ್ ಲಿಯೋನಿದೊವಿಚ್ ಪಾಸ್ತರ್‌ನಾಕ್ (೧೮೯೦-೧೯೬೦) ತನ್ನ ಬದುಕಿನ ಕೊನೆಯ ಮೂರು ವರ್ಷಗಳಲ್ಲಿ ದಿಢೀರನೆ ಅಂತಾರಾಷ್ಟ್ರೀಯ ಸಾಹಿತ್ಯ-ರಾಜಕೀಯ ವೇದಿಕೆಯಲ್ಲಿ ಖ್ಯಾತಿ ಗಳಿಸಿದ. ಆತನ ಪ್ರಸಿದ್ಧಿಗೆ ಒಡೆದು ಕಾಣುವ ಕಾರಣ - 'ಡಾಕ್ಟರ್ ಝಿವಾಗೋ' ಕಾದಂಬರಿ; ನೊಬೆಲ್ ಪಾರಿತೋಷಕ. ಸೋವಿಯತ್‌ನಲ್ಲಿ ದಶಕಗಳ ಕಾಲ ಹಿಡಿದಿಟ್ಟಿದ್ದ ಕಲಾವಿದರ ಅಭಿವ್ಯಕ್ತಿ, ವಿರೋಧವನ್ನು ಮೀರಿ ಪುಟಿದೆದ್ದು, ಎಲ್ಲರ ಸಾಮೂಹಿಕ ದನಿಯೆಂಬಂತೆ 'ಡಾಕ್ಟರ್ ಝಿವಾಗೋ' ದ ಮೂಲಕ ಕಾಣಿಸಿಕೊಂಡಿತ್ತು. ಇಪ್ಪತ್ತರ ದಶಕದಿಂದ ಸೋವಿಯೆತ್ ಹೊರಗೆ ಅನುಮತಿಯಿಲ್ಲದೆ ಬರಹಗಾರರು ಯಾವ ಕೃತಿಯನ್ನೂ ಪ್ರಕಟಿಸುವಂತಿರಲಿಲ್ಲ. ಈ ರೂಢಿಗತ ಅಂಧ ಸಂಪ್ರದಾಯ ಮುರಿದು ಬೋರಿಸ್ ತೋರಿಸಿದ ಧೈರ್ಯ ಎಲ್ಲ ಕಾಲಕ್ಕೂ ಮೆಚ್ಚುವಂತದ್ದೇ. ಆದರೆ ಸ್ಟಾಕ್ ಹೋಂ ತಾನು ನೀಡಿದ ಪಾರಿತೋಷಕ ಅತ್ಯಂತ ಶ್ರೇಷ್ಠ; ಸಮಂಜಸವೆಂದು ರುಜುವಾತು ಪಡಿಸಲು ಎಲ್ಲ ಬೌದ್ಧಿಕ ಚೌಕಟ್ಟನೊಳಗೆ ನೋಡಿದರೂ ಪ್ರಶಸ್ತಿಯ ಹಿಂದೆ ರಾಜಕೀಯ ಉದ್ದೇಶಗಳಿದ್ದಿರಬಹುದೇ ಎಂಬ ಅನುಮಾನವನ್ನು ತಳ್ಳಿ ಹಾಕಲಾಗುವುದಿಲ್ಲ. ಪಾಸ್ತರ್‌ನಾಕ್ ವಿಷಯದಲ್ಲಷ್ಟೇ ಅಲ್ಲ, ಅದು ನೀಡುವ ನೊಬೆಲ್ ಕಾಲ ಕಾಲಕ್ಕೆ ಕಟು ಟೀಕೆಗೆ, ವಿಮರ್ಶೆಗೆ ಒಳಗಾಗಿರುವುದನ್ನು ಗಮನಿಸಿದರೆ ಈ ಮಾತಿನ ಅರ್ಥ ಸ್ಪಷ್ಟವಾದೀತು.

ನೊಬೆಲ್ ನೀಡುವ ಮುಂಚೆಯೇ ಬೋರಿಸ್ ತನ್ನ ದೇಶದಲ್ಲಿ ಮೆಚ್ಚಿನ ಕವಿಯಾಗಿದ್ದ; ಅತ್ಯುತ್ತಮ ಅನುವಾದಕನಾಗಿದ್ದ. ಒಂದು ಸಂಕ್ರಮಣ ಸ್ಥಿತಿಯಲ್ಲಿ ಕಾವ್ಯ-ಸಾಹಿತ್ಯ ನಿರ್ಮಾಣ ಮಾಡಿದ ಬೋರಿಸ್ ಒಂದರ್ಥದಲ್ಲಿ ಎಲ್ಲ ಚಳವಳಿಯಿಂದಲೂ ಒಳ್ಳೆಯ ಅಂಶವನ್ನು ಪಡೆದು ಬೆಳೆದು ಬಂದವನೆಂದು ವಿಮರ್ಶಕರು ಗುರ್ತಿಸುತ್ತಾರೆ. ರಷಿಯನ್ 'ಸಿಂಬಲಿಸಂ' ಪ್ರಭಾವದಿಂದ ಬರೆಯಲಾರಂಭಿಸಿ 'ಭವಿಷ್ಯವಾದಿ' ಕಾವ್ಯದಿಂದಲೂ ಪಡೆದು, ಆಮೇಲ ಕ್ರಾಂತಿನಂತರದ ಸೋವಿಯತ್‌ನಲ್ಲಿ ತನ್ನದೇ ಸ್ವಂತ ಧ್ವನಿ ರೂಢಿಸಿಕೊಂಡು, ಆಧುನಿಕ

ಭಾವಗೀತೆಯನ್ನು ಹೊಸ ಅರ್ಥದಲ್ಲಿ ಬೆಳೆಸಿದವನು ಈತ. ಈತನದು ಅತಿಗೆ ಹೋಗದ ಸಮನ್ವಯ ಧ್ವನಿ. ಗುಂಪಿನಲ್ಲಿದ್ದಾಗ ಒಂಟಿಯಂತೆ ಕಾಣುವ; ಒಂಟಿಯಾಗಿದ್ದಾಗ ಗುಂಪಿನ ಗುಂಗಿಗೊಳಗಾದಂತೆ ಈತನ ಸಾಹಿತ್ಯ ಸೃಷ್ಟಿ. ವೈಯಕ್ತಿಕ ನೋವಿಗೆ ಕಾವ್ಯದಲ್ಲಿ ಎಷ್ಟು ಪ್ರಾಮುಖ್ಯತೆ ನೀಡಿದನೊ, ಕ್ರಾಂತಿ, ಸಮಾಜವಾದಕ್ಕೂ ಅಷ್ಟೇ ಮಹತ್ವ ನೀಡಿದ. ಆದರೆ ವ್ಯಕ್ತಿ, ವ್ಯಕ್ತಿತ್ವದ ಅಧಿಕೃತತೆಗೆ ಹೆಚ್ಚಿನ ಪ್ರಾಶಸ್ತ್ಯ ''ಎಲ್ಲರಿಗಿಂತಲೂ 'ತಾನು ಭಿನ್ನ'ಎಂದು ತೋರಿಸಿಕೊಳ್ಳುತ್ತಿದ್ದ'' ಎಂದು ನದೇಜಾ ಮಾಂದಲ್‌ಷ್ತಮ್ ಹೇಳುತ್ತಾಳೆ. ಹೀಗಾಗಿಯೇ, ಹಲವೊಮ್ಮೆ ಈತನ ದಂದ್ವ, ಗೊಂದಲದಿಂದಾಗಿ 'ಬಿಡಿಸದ ಒಗಟಂತೆ ಕಾಣುವ ಇಪ್ಪತ್ತನೆ ಶತಮಾನದ ಮಹತ್ವದ ಲೇಖಕ '-ಎನ್ನುವ ತೀರ್ಮಾನಕ್ಕೆ ವಿಮರ್ಶಕರು ಬರಬೇಕಾಯಿತು.

ಒಂದು ರೀತಿಯಿಂದ ಬೋರಿಸ್ ತನ್ನ ಸಮಕಾಲೀನರಲ್ಲಿಯೇ ಅದೃಷ್ಟಶಾಲಿ. ಆನಾ ಅಖ್ಮತೋವಾ, ತ್ಸ್ವೇತಯೇವಾ, ಮಾಂದಲ್‌ಷ್ತಮ್, ಟೈಟಿಯನ್ ತಬ್ಜಿಜ್ಜೆ, ಪಾವೆಲ್ ಯಾಷಿವಿಲಿಯರಂತೆ ತೀವ್ರ ನೋವು-ಸಾವಿಗೆ ಒಳಗಾಗಲಿಲ್ಲ. ಆತನಿಗೆಂದೂ ಹಣದ ಕೊರತೆ ಉಂಟಾಗಲಿಲ್ಲ; ಪುಸ್ತಕದ ಪ್ರಕಟಣೆಗೆ, ನಿರ್ದಿಷ್ಟವಾದ ಒಂದೆರಡು ಉದಾಹರಣೆ ಬಿಟ್ಟರೆ, ಎಂದೂ ಪ್ರಯಾಸವಾಗಲಿಲ್ಲ. ಅವನ ಸಂಕಷ್ಟಗಳೇನಿದ್ದರೂ ತಾತ್ಕಾಲಿಕ.

●

●

'ನಮ್ಮ ಮನಸ್ಸಿನೊಳಗೆ ಹೆಡೆಯಾಡುವ ವಿನಾಶದ ದನಿಯನ್ನು ನಾವು ಸದಾ ಹತ್ತಿಕ್ಕುತ್ತಿರಬೇಕು' ಎಂದ ಬೋರಿಸ್ ಅನುಭವ ಮಾಗದೆ ಕಾಗದದ ಮೇಲೆ ಕಾರಿ ಕೊಳ್ಳುವ ಚಾಳಿಯನ್ನು ಕಟುವಾಗಿ ವಿರೋಧಿಸುತ್ತಿದ್ದ. ಅನಗತ್ಯವಾಗಿ ವೈಯಕ್ತಿಕ ಬದುಕು -ಉಂಡದ್ದು, ಉಟ್ಟಿದ್ದರ ಕುರಿತು ಬರೆಯುವುದು, ಮಾತಾಡುವುದನ್ನು ಕಂಡರೆ ಅಸಹ್ಯಪಟ್ಟುಕೊಳ್ಳುತ್ತಿದ್ದ. 'ನನ್ನಲ್ಲಿ ಯಾವ ವ್ಯವಸ್ಥಿತ ದಾಖಲೆಗಳಿಲ್ಲ, ಹಸ್ತಪ್ರತಿ, ಪತ್ರಗಳು ಪೇರಿಸಿಡುವುದು ನನಗೆ ಒಗ್ಗದ್ದು. ಗುಪ್ತವಾಗಿ ಮುಚ್ಚಿಡುವ ಅಮೂಲ್ಯವಾದುದೇನೂ ನನ್ನಲ್ಲಿಲ್ಲ. ನನ್ನ ಕೋಣೆ ಹೊಟೇಲಿನ ಕೋಣೆಯಂತೆ ಸರಳ, ಸ್ವಚ್ಛ, ಸಾಧಾರಣ ವಿದ್ಯಾರ್ಥಿಯಂತೆ ಬದುಕುವುದು ನನಗಿಷ್ಟ' ಎಂದು ಒಂದೆಡೆ ಆತ ಬರೆದುಕೊಂಡ.

ಹೀಗಾಗಿಯೇ ಅವನ ಎರಡೂ ಆತ್ಮ ವಿವರಣೆಯಲ್ಲಿ ತನ್ನ ವೈಯಕ್ತಿಕ ಬದುಕಿಗಿಂತ ಹೆಚ್ಚಾಗಿ, ತನ್ನ ಮೇಲೆ ಪ್ರಭಾವ ಬೀರಿದವರ ಕುರಿತು, ತನ್ನ ಕಾಲದ ವೈರುದ್ಧ್ಯಗಳ ಕುರಿತು, ಸಾಂಸ್ಕೃತಿಕ ವಾತಾವರಣದ ಕುರಿತು ಬರೆದ. ಅವನ ಆತ್ಮ ವಿವರಣೆ ಬಿಟ್ಟರೆ ತನ್ನ ಗೆಳೆಯರಿಗೆ ಬೋರಿಸ್ ಬರೆದ ಪತ್ರಗಳಲ್ಲಿ ಅವನ ತುಂಡು ತುಂಡಾದ ವೈಯಕ್ತಿಕ ಜೀವನವನ್ನು ಕಾಣುತ್ತೇವೆ. ಅಲ್ಲಿ ಕೂಡ ಸಾಹಿತ್ಯ- ಕಲೆ-ವಿಮರ್ಶೆಯ ಬಗೆಗೆ ಅವನ ಆಸಕ್ತಿ ಅಧಿಕ. ಆದ್ದರಿಂದಲೇ ಅವನ ಕಥೆ, ಕಾವ್ಯ, ಕಾದಂಬರಿಯಷ್ಟೇ ಈ ಪತ್ರಗಳು ಸಾಹಿತ್ಯ ಪ್ರಾಧಾನ್ಯತೆ ಪಡೆದಿವೆ.

●

●

ರಷಿಯಾದ ಆಡಳಿತ, ಕಮ್ಯೂನಿಸಂ ಬಗ್ಗೆ ಅನುಮಾನ, ಭಿನ್ನಾಭಿಪ್ರಾಯವಿದ್ದ ವರೂ ಕೂಡಾ ಅಲ್ಲಿನ ಸಾಹಿತ್ಯವನ್ನು ಪ್ರಿತಿಸದೆ ಇರಲಾರರು ; ಅಲ್ಲಿನ ಸಾಹಿತ್ಯ ಪರಂಪರೆಗೆ ಅಂಥ ಸೆಳೆತ, ಪಾಶ್ಚಾತ್ಯ ವ್ಯಕ್ತಿವಾದಿ ಸಾಹಿತ್ಯ ಸಿದ್ಧಾಂತಗಳು ಬರಡು ಬೌದ್ಧಿಕ ಕಸರತ್ತಾಗಿ ಸೊರಗುತ್ತಿದ್ದ ವೇಳೆಯಲ್ಲೇ ಇಲ್ಲಿನ ಸಾಹಿತ್ಯ ಜೀವಂತಿಕೆಯಿಂದ ಪುಟಿಯುತ್ತಿತ್ತು. ಇಲ್ಲಿನ ಭೌಗೋಲಿಕ ಶ್ರೀಮಂತಿಕೆ ಕೂಡಾ ಅಂಥದ್ದೇ. ಸಾಹಿತಿಗಳು ಅದನ್ನು ಸ್ಪರ್ಶಿಸಿದಲ್ಲೆಲ್ಲ ಪರಿಮಳ ಸೂಸುವಂಥದು. ಹಾಗೆಂದೇ ರಷಿಯಾದ ಪ್ರಮುಖ ಸಾಹಿತಿಗಳು ಸಮಾಜ, ನಿಸರ್ಗ, ವ್ಯಕ್ತಿ, ಒಳಿತು-ಕೆಡಕು, ಜೀವ-ಮರಣ, ಪ್ರೇಮ-ಕಾಮ ಎಲ್ಲದರ ಬಗ್ಗೆಯೂ ಒಂದೇ ಸಲಕ್ಕೆ ಬರೆಯಬಲ್ಲರು. ಪ್ರೇಮದ ಕಥೆ ಹೇಳುತ್ತಲೇ ಆಧ್ಯಾತ್ಮಕ್ಕೆ ನೆಗೆಯಬಲ್ಲರು. ಟಾಲ್‌ಸ್ಟಾಯ್, ದಸ್ತಯೇವಸ್ಕಿ, ಬ್ಲೋಕ್, ಚೆಕಾಪ್, ಗೋರ್ಕಿ, ತುರ್ಗನೆಫ್, ಅಖ್ಮತೋವಾ, ಯೆತಿಷಂಕೋರಂಥ ಬರಹಗಾರರು ರಷಿಯನ್ ಮಣ್ಣಿನಲ್ಲಿ ಮಾತ್ರ ಹುಟ್ಟಬಲ್ಲರೇನೋ ಎಂಬಷ್ಟು ಅವರಿಗೂ-ರಷಿಯನ್ ನೆಲಕ್ಕೂ ಅವಿನಾಭಾವ ಸಂಬಂಧ. ಪಶ್ಚಿಮದ ಕಸರತ್ತು ಇಲ್ಲಿ ಸಹಜ-ಸರಳ ಸೃಷ್ಟಿಕ್ರಿಯೆಯಾಗುತ್ತದೆ, ಅದರ ಹಿರಿಮೆ-ಮಹತ್ವ ಇರುವುದು ಕೂಡ ಇಂಥಲ್ಲೇ.

ಈ ಹಿನ್ನೆಲೆಯಲ್ಲಿ ರಷ್ಯಾದ ಪ್ರಮುಖ ಕವಿ, ಬರಹಗಾರ ಪಾಸ್ತರ್‌ನಾಕ್‌ನನ್ನು ಓದಿದಾಗ ನಿರಾಶೆಯಾಗಬಹುದು. ಇದಕ್ಕೆ ಕಾರಣ - ಅವನ 'ಡಾಕ್ಟರ್ ಜಿವಾಗೋ' ಕಾದಂಬರಿಯನ್ನು ಬಿಟ್ಟರೆ ಇಂಗ್ಲಿಷಿನಲ್ಲಿ ಪ್ರಾತಿನಿಧಿಕ ಬರಹಗಳು

ದೊರೆಯದಿರುವುದು. ರಷ್ಯನ್-ಇಂಗ್ಲಿಷ್ ಆವೃತ್ತಿಗಳಲ್ಲಿ ಕರ್ತರಿಪ್ರಯೋಗಕ್ಕೆ ಒಳಗಾದ ತುಣುಕು ಬರಹಗಳಿಂದ ಯಾವುದೇ ಸಾಹಿತಿಯ ಒಟ್ಟು ಸಾಧನೆ ಅಳೆಯುವುದು ಕಷ್ಟ. ಜತೆಗೆ ರಷ್ಯನ್ನರು ಮಾಡಿದ ಇಂಗ್ಲಿಷ್ ಅನುವಾದಗಳು ಬರಹದ ಅರ್ಥ; ಸೌಂದರ್ಯಕ್ಕಿಂತ ಹೆಚ್ಚಾಗಿ ಮೂಲಕ್ಕೆ ಅಂಧನಿಷ್ಠತೆ ತೋರುವುದರಿಂದ ಓದುವುದೇ ದುಸ್ತರವಾಗಿಸುತ್ತವೆ. ಸ್ವತಃ ಅತ್ಯುತ್ತಮ ಅನುವಾದಕನೆಂದು ತಾಯ್ನಾಡಿನಲ್ಲಿ ಹೆಸರು ಗಳಿಸಿದ್ದ ಪಾಸ್ತರ್‌ನಾಕ್‌ನ ಇಂಗ್ಲಿಷ್ ಅನುವಾದಗಳ ಮೂಲಕ ರಷ್ಯಯನ್ನರು ಅವನ ಇತಿಶ್ರೀ ಹಾಡುವಂತಿವೆ ಈ ಅನುವಾದಗಳು. ಹಾಗಾಗಿ, ರಷ್ಯನ್- ಇಂಗ್ಲಿಷ್ ಅನುವಾದದ ಜತೆಗೆ ಪಾಸ್ತರ್‌ನಾಕ್‌ನನ್ನು ಪದೆಪದೆ ಅನುವಾದಿಸಿದ ಬ್ರಿಟಿಷರ ಅನುವಾದಗಳನ್ನು ಇಲ್ಲಿ ಆಶ್ರಯಿಸಿದೆ. ೧೯೫೮ರಿಂದ ರಷ್ಯನ್ ಅಧಿಕೃತ ಪ್ರಕಾಶಕರಿಂದ ಬಹಿಷ್ಕಾರಕ್ಕೆ ಒಳಗಾಗಿದ್ದ ಪಾಸ್ತರ್‌ನಾಕ್ ಬರಹಗಳು ಗೊರ್ಬಚೇವ್‌ರ ಪೆರಸ್ತ್ರೋಯ್ಕ ಹಾಗೂ ಗ್ಲಾಸ್‌ನಾಸ್ತ್ ದೆಸೆಯಿಂದ ಮೊದಲ ಬಾರಿಗೆ ೧೯೯೦ರಲ್ಲಿ ಎವ್ಗೆನಿ ಪಾಸ್ತರನಾಕ್ ಸಂಪಾದಿಸಿದ ಬೋರಿಸ್ ಪಾಸ್ತರ್‌ನಾಕ್ ಆಯ್ದ ಬರಹಗಳನ್ನು ಪ್ರಕಟಿಸಿದರು. ಕನ್ನಡದಲ್ಲಿಯೂ ಬೇರೆ ರಷಿಯನ್ ಬರಹಗಾರರಂತೆ ಇವನ ಅನುವಾದ ಕಾಣಸಿಗದು. ಎಸ್. ದಿವಾಕರ್ 'ಕಥಾ ಜಗತ್ತು' ನಲ್ಲಿ ಅನುವಾದಿಸಿದ ***ತೂಲಾದಿಂದ ಬಂದ ಪತ್ರಗಳು*** ಕಥೆ ಅಡಿಗರ 'ಕಾವ್ಯಜಗತ್ತು' ಸಂಗ್ರಹದಲ್ಲಿ ಅನುವಾದಿಸಿದ ಮೂರು -ನಾಲ್ಕು ಕವಿತೆ ಬಿಟ್ಟರೆ ಯಾವ ಅನುವಾದವನ್ನೂ ನಾನು ನೋಡಿದ ನೆನಪು ನನಗಿಲ್ಲ. ಇದ್ದರೆ ನನ್ನ ಅಜ್ಞಾನಕ್ಕೆ ಮನ್ನಣೆ ಇರಲಿ.

●

●

ಬೋರಿಸ್ ಪಾಸ್ತರ್‌ನಾಕ್ ಒಂದರ್ಥದಲ್ಲಿ ಪಕ್ಕಾ ಮಾಸ್ಕೋ ನಗರದ ಮಧ್ಯಮ ವರ್ಗದ ಲೇಖಕ. ಅವನ ಸಂವೇದನೆ, ಬರಹ ಎಲ್ಲ ನಗರದ್ದೇ, ಶಿಷ್ಟ ಸಾಹಿತ್ಯವೆಂದು ಕರೆಯಬಹುದಾದಷ್ಟು ಸುಸಂಸ್ಕೃತ ಬರಹ ಅವನದು.

ತನ್ನ ಸಮಕಾಲೀನ ಬರಹಗಾರರಿಂದ ಪ್ರೀತಿ-ದ್ವೇಷ ಎರಡನ್ನೂ ಈತ ಸಂಪಾದಿಸಿದ್ದ. ಇವನ ದ್ವಂದ್ವ ನೀತಿ ಯಾವಾಗಲೂ ಕಟು ವಿಮರ್ಶೆಗೆ ಗೆಳೆಯರಿಂದ ಒಳಗಾಗುತ್ತಿದ್ದವು. 'ಈತನೊಂದಿಗೆ ಮುಕ್ತ ಮಾತುಕತೆ ಎಂದಿಗೂ ಸಾಧ್ಯವಿಲ್ಲ, ಏನಿದ್ದರೂ ಅವನು ಹೇಳುತ್ತಾನೆ; ನಾವು ಕೇಳಬೇಕು

[ಗ್ಲೋದ್‌ಕೊವ್]; 'ಈ ವ್ಯಕ್ತಿಯ ಕಪಟತನ ಸಹಿಸುವುದು ಅಸಾಧ್ಯ (ಆಖ್ಮತೊವಾ); ಇವನಿಗೆ ಸಹನೆಯೇ ಇಲ್ಲ, ಯಾವಾಗ ವಿನಯ ಮರೆಯಾಗಿ ದುರಹಂಕಾರ ತಲೆ ಎತ್ತುತ್ತದೋ ಗೊತ್ತಾಗುವುದಿಲ್ಲ [ವಿನೋಕರ್]' ಎಂಬುದು ಅವನ ಸಮಕಾಲೀನರ ಅಭಿಪ್ರಾಯವಾದರೂ ಬೋರಿಸ್ ಸ್ವಭಾವತಃ ಸ್ನೇಹ ಜೀವಿಯಾಗಿದ್ದ, ಸ್ನೇಹಕ್ಕಾಗಿ ಏನೆಲ್ಲವನ್ನೂ ಮಾಡಬಲ್ಲವನಾಗಿದ್ದ ಎಂಬುದೂ ಸುಳ್ಳಲ್ಲ. ಇದಕ್ಕೆ ಉದಾಹರಣೆ ಅವನ ಬದುಕಿಂದಲೇ ಸಿಗುತ್ತದೆ.

●

●

ಪ್ರಾತಿನಿಧಿಕ ಬರಹಗಳು ಸಿಗುವುದು ಕಷ್ಟಸಾಧ್ಯವಾದ ಹಲವೊಮ್ಮೆ ತೀರ ಅಮೂರ್ತವೆನ್ನಿಸುವಂತೆ ಬರೆಯುವ ಬೋರಿಸ್‌ನನ್ನು ಅನುವಾದಿಸುವುದು ಶ್ರಮದ ಕೆಲಸ. ಹಾಗಾಗಿ ಸುಲಭವಾಗಿ ಅನುವಾದಕ್ಕೆ ಒಗ್ಗುವ, ಸಾಧ್ಯವಾದಷ್ಟೂ ಪ್ರಾತಿನಿಧಿಕವಾಗಿರುವ ಬರಹವನ್ನಿಲ್ಲಿ ಕನ್ನಡಿಸಲಾಗಿದೆ.

'ಬೋರಿಸ್ ಬದುಕು-ಬರಹ'ದಲ್ಲಿ ಬಾಲ್ಯ, ಪ್ರಭಾವ, ಸಾಹಿತ್ಯ ಚಳವಳಿ, ರಾಜಕೀಯ ವಾತಾವರಣ ಅವನ ಒಟ್ಟು ಬದುಕಿನ ಹಿನ್ನೆಲೆಯಲ್ಲಿ ಸ್ಥೂಲವಾಗಿ ಹೇಳಲು ಯತ್ನಿಸಿದೆ. ಎಲ್ಲೂ ಅವನೊಬ್ಬ ಭಾರೀ ನಾಯಕ ಎಂಬ ಪಾಶ್ಚಾತ್ಯ ನಿಲುವನ್ನು ಸಮರ್ಥಿಸಲು ಹೋಗಿಲ್ಲ, ಅದರ ಅಗತ್ಯವೂ ಇದ್ದಂತಿಲ್ಲ.

ಆತನ ಪ್ರಾತಿನಿಧಿಕ ಕವಿತೆಗಳೆಂದು ಗುರುತಿಸುವ ಕವಿತೆಗಳನ್ನು ಕಾವ್ಯ ವಿಭಾಗದಲ್ಲಿ ಅನುವಾದಿಸಿದೆ. ಬಿಡಿ ಬಿಡಿ ಚಿಂತನೆಗಳು ಬೋರಿಸ್ ಆರಂಭಕಾಲದಲ್ಲಿ ಬರೆದ ಲೇಖನ.

ಮಾಯಕೋವಸ್ಕಿ ನೆನಪುಗಳು, ಜನ, ಅವನ ನಡೆ-ನುಡಿ, ೧೯೦೦-ರ ಸಮಯ ಅವನ ಎರಡು ಜೀವನ ವಿವರಣೆಗಳಿಂದ ಆಯ್ದು ಅನುವಾದಿಸಿದ ಭಾಗಗಳು.

'ನನ್ನ ನೆನಪಿನಿಂದ' ಲೇಖನ ಗೆಳೆಯರಿಗೆ , ಆನಾ ಆಖ್ಮತೋವಾಳಿಗೆ ಬರೆದ ಪತ್ರಗಳು ಅವನ ಪತ್ರಸಾಹಿತ್ಯದಿಂದ ಆಯಲಾಗಿದೆ. ಒಟ್ಟು ಇಪ್ಪತ್ತೆಂಟು ವರ್ಷಗಳ ಅವಧಿಯಲ್ಲಿ (೧೯೩೧-೫೯) ಈ ಕಾಗದಗಳನ್ನು ಬೋರಿಸ್ ಬರೆದ. ತನ್ನ ಗೆಳೆಯರೊಂದಿಗೆ ಅವನಿಗಿದ್ದ ಆತ್ಮೀಯತೆ, ನವುರಾದ ಸಂಬಂಧವನ್ನು ಇವು

ತೋರುತ್ತವೆ. ಪಾಸ್ತರ್‌ನಾಕ್‌ನ ಒಟ್ಟು ಸಾಹಿತ್ಯದಲ್ಲಿ ಅವನು ಬರೆದ ಪತ್ರಗಳಿಗೆ ಅತ್ಯಂತ ಪ್ರಮುಖ ಸ್ಥಾನವಿದೆ. ಇದೇ ವಿಭಾಗದಲ್ಲಿ ಕ್ರುಶ್ಚೇವ್‌ಗೆ, 'ಪ್ರಾವ್ದಾ' ಪತ್ರಿಕೆಗೆ ಬರೆದ ಪತ್ರಗಳು ನೊಬೆಲ್ ಪ್ರಶಸ್ತಿಯ ಗೊಂದಲದ ಹಿನ್ನೆಲೆಯಲ್ಲಿವೆ.

ಕಥೆ ವಿಭಾಗದಲ್ಲಿ ಅವನ ಅತ್ಯಂತ ಗಮನಾರ್ಹವಾದ 'ತುಲಾದಿಂದ ಪತ್ರಗಳು' 'ಲುವ್ಹರ್‌ಳ ಬಾಲ್ಯ', 'ಆಕಾಶದ ದಾರಿಗಳು' 'ಅಪೆಲೆಸ್‌ನ ಗುರುತು' ಕಥೆಗಳಲ್ಲಿ ಕೊನೆಯ ಎರಡು ಕಥೆ ಅನುವಾದಿಸಿದೆ.

'ಆಕಾಶದ ದಾರಿಗಳು' ಮೊದಲು ಈಗಿನ ಸ್ವರೂಪದ ಮೂರರಷ್ಟಿತ್ತಂತೆ ! ಮೊದಲು ಪ್ರಕಟವಾದ ಕತ್ತರಿ ಪ್ರಯೋಗಕ್ಕೆ ಒಳಗಾದ ಸದ್ಯದ ಮಾದರಿಯಲ್ಲಿದೆ! ಆಮೇಲೆ ಅದರ ಮೂಲ ಹಸ್ತ ಪ್ರತಿಯೂ ಸಿಗದೆ, ಮತ್ತೊಮ್ಮೆ ಬರೆಯಲಾರದೆ ಬೋರಿಸ್ ಬಹಳ ಪಶ್ಚಾತ್ತಾಪ ಪಡುತ್ತಿದ್ದನೆಂದು ಅವನ ಮಗ ಎವ್ಗೆನಿ ಹೇಳುತ್ತಾನೆ.

೧೯೨೪ರಲ್ಲಿ ಈ ಕಥೆ ಬರೆದಾಗ ಕ್ಯಾಂಪಿನಲ್ಲಿ ನೀಡುವ ಚಿತ್ರ ಹಿಂಸಾಕಾಂಡವನ್ನು ವಿರೋಧಿಸುವ ಉದ್ದೇಶವಿತ್ತಂತೆ. ಸದ್ಯದ ಸ್ವರೂಪದ ಬಗ್ಗೆ ಹೇಳುವುದಾದರೆ - ಬದುಕನ್ನು ನಡೆಸುವ ಮುಖ್ಯ ಶಕ್ತಿ ಯೋಗಾಯೋಗ -ಎಂಬುದು ಇದರ ಹಿಂದಿನ ನಿಲುವು ಎಂಬಂತೆ ಕಾಣುತ್ತದೆ. ಬೇರೆ ಸೆಳೆತಕ್ಕೆ ಒಳಗಾಗಿ ಬೆಸೆದ ಸಂಬಂಧವೊಂದು - ಇದು ನಿನ್ನದು, ನಿನಗೆ ಸೇರಿರುವುದರಿಂದ ನೀನು ಮಾಡಲೇಬೇಕು ಎಂದಾಗ ಸಹಜ ಕುತೂಹಲ, ಸಂಬಂಧದ ಸೆಳೆತ, ಉತ್ಸಾಹವನ್ನೇ ಕಳೆದುಕೊಳ್ಳುವುದನ್ನು ಈ ಕಥೆ ಸೂಚ್ಯವಾಗಿ ತಿಳಿಸುತ್ತದೆ. ಬದುಕಿನ ಬೇರೆ ಬೇರೆ ಕಾಲಘಟ್ಟದಲ್ಲಿ ಎರಡು ಸಂದರ್ಭಗಳಲ್ಲಿ ಮುಖಾ-ಮುಖಿಯಾಗುವ ಗಂಡು ಹೆಣ್ಣು ಈ ಕಥೆಯ ಕೇಂದ್ರ ಪಾತ್ರಗಳು. ಇಲ್ಲಿ ಅನುವಾದಿಸಿದ ಚಿರಂತನ ಕಥೆಯ ಮೂಲದ ಹೆಸರು [IL Tratto De Appeles] 'ಅಪೆಲೆಸ್ ಮಾರ್ಕ್' ಕಥೆ ಬರೆದದ್ದು ೧೯೧೫ ಎಂದು, ೧೯೧೮ ಎಂದು ಎರಡು ಅಭಿಪ್ರಾಯವಿದೆ. ಒಟ್ಟಿನಲ್ಲಿ ಈ ಹಿಂಚು ಮುಂಚಲ್ಲಿ ಬೋರಿಸ್ ಇಟಲಿ ಸುತ್ತಾಡಿದ್ದು, ಆ ವೇಳೆಯಲ್ಲಿ ಕಥೆ ಬರೆದಿರಬೇಕು. ಕಥೆ ಬರೆದ ಸಂದರ್ಭ: ಬೋರಿಸ್, ಮಾಯಕೋವಸ್ಕಿಗೆ ಕಲೆಯ ಬಗೆಗಿದ್ದ ಧೋರಣೆ, ಸಿದ್ಧಾಂತವನ್ನು ಖಂಡಿಸಲು. ಕಥೆಯಲ್ಲಿ ನೇರವಾಗಿ ಎಲ್ಲೂ ಮಾಯಕೋವಸ್ಕಿಯ ಹೆಸರು ಪ್ರಸ್ತಾಪಿಸದಿದ್ದರೂ ಕ್ರಾಂತಿಕಾರಿ ರೊಮ್ಯಾಂಟಿಸಂ ಅನ್ನು ; ವಾಸ್ತವ ಮಾರ್ಗವನ್ನು ಪ್ರತಿನಿಧಿಸುವ ಎರಡು ಪಾತ್ರಗಳು ನೇರವಾಗಿಯಲ್ಲದಿದ್ದರೂ ಸೂಚ್ಯವಾಗಿ ಮಾಯಕೋವಸ್ಕಿ

ಯನ್ನು ಬೋರಿಸ್ ಪಾಸ್ತರ್‌ನಾಕ್‌ನನ್ನು ಪ್ರತಿನಿಧಿಸುವಂತಿವೆ. ಪಾಸ್ತರ್‌ನಾಕ್ ವಿಮರ್ಶಕರು ಗುರ್ತಿಸುವಂತೆ ಈ ಕಥೆಯ ಆರಂಭದಲ್ಲಿ ಹೆನ್ರಿಶ್ ಹೈನೆಯನ್ನು ಹುಡುಕಿಕೊಂಡು ಬರುವ ಎಮಿಲೋ ರೆಲೆನ್ಸ್ಕಿ ಮಾಯಕೋವಸ್ಕಿಯನ್ನು ಪ್ರತಿನಿಧಿಸುತ್ತಾನೆ. ಹೆನ್ರಿಶ್ ಹೈನೆ ಸ್ವತಹ ಬೋರಿಸ್ ಪಾಸ್ತರ್‌ನಾಕ್‌ನನ್ನೇ ಪ್ರತಿನಿಧಿಸುತ್ತಾನೆ.

ಇಲ್ಲಿನ ರೆಲೆನ್ಸ್ಕಿ 'ಖಡ್ಗವಾಗಲಿ ಕಾವ್ಯ' ಎನ್ನುವ ಪಂಥದವನು. ಇದು ಮಾಯಕೋವಸ್ಕಿಯ ಫ್ಯೂಚರಿಸಂನ, ಕಾವ್ಯ ಹೊಸನುಡಿಗಟ್ಟುಗಳನ್ನು ಸೃಷ್ಟಿಸಿ, ಜನರ ದನಿಯಾಗಿ, ಸಮಾಜಮುಖಿಯಾಗಿರಬೇಕು ಎನ್ನುವ ಪ್ರಣಾಳಿಕೆಯನ್ನು ಧ್ವನಿಸುವಂಥದ್ದು. ಇಂಥ ರೆಲೆನ್ಸ್ಕಿ, ಹೈನೆ ಮನೆಯಲ್ಲಿಲ್ಲದಾಗ ಅವನ ಸೇವಕ ಲ್ಯಾಕಿಗೆ, ಹೈನೆಗೆ ನೀಡುವಂತೆ ಹೇಳಿ, 'ರಕ್ತಕ್ರಾಂತಿಯ ಕಾವ್ಯ ಸಂದೇಶ' ಕೊಟ್ಟು ಹೋಗುತ್ತಾನೆ. ಇದಕ್ಕೂ ಮೊದಲು ಕಥೆಯ ಘೋಷಿತ ವಾಕ್ಯವಾಗಿ ಅಪೆಲೆಸ್-ಜ್ಯೂಸ್‌ರ ದಂತಕಥೆಯನ್ನು ಉದ್ಧರಿಸಲಾಗಿದೆ. ಈ ದಂತಕಥೆಯ ಆಧಾರದ ಮೇಲೆಯೇ ಕಥೆ ರೂಪಕವಾಗಿ ಬರೆಯಲಾಗಿದೆ. ಇಲ್ಲಿನ ರೂಪಕ ಕಥೆ ಅತ್ಯಂತ ಸಂಕೀರ್ಣವಾದುದು, ಸೈದ್ಧಾಂತಿಕ ಅ್ಯಲೆಗರಿಯಾಗಿ ಮಾತ್ರ ಇದನ್ನು ತೆಗೆದುಕೊಳ್ಳಬೇಕೆಂದು ಬೋರಿಸ್‌ನ ವಿಮರ್ಶಕರು ಒತ್ತಿ ಹೇಳಿದ್ದಾರೆ!

ಒಬ್ಬ 'ರೊಮ್ಯಾಂಟಿಕ್' ಕವಿ, ಇನ್ನೊಬ್ಬ 'ವಾಸ್ತವಮಾರ್ಗ'ದ ಸಹಕವಿಗೆ ಕಾವ್ಯಾತ್ಮಕವಾಗಿ ಸವಾಲೆಸೆದು ಆತನ ಪ್ರತಿಕ್ರಿಯೆ ಬಯಸುತ್ತಾನೆ. ರೊಮ್ಯಾಂಟಿಕ್ ಕವಿ ಬಯಸಿದ ಗುರುತು, ಛಾಪು, ಚಿಹ್ನೆಯನ್ನು ಮೂಡಿಸಲು ವಾಸ್ತವಮಾರ್ಗದ ಕವಿ ಸಜ್ಜಾಗುತ್ತಾನೆ. ಇದೀಗ 'ಕ್ರಾಂತಿಕಾರಿ ರೊಮ್ಯಾಂಟಿಸಂ' ಅಥವಾ 'ವಾಸ್ತವಮಾರ್ಗ' ಯಾವುದು ಪ್ರಸ್ತುತ ಎಂದು ನಿರ್ಧಾರವಾಗಬೇಕು.

ಆದರೆ ಕಾರ್ಯಪ್ರವೃತ್ತನಾಗುವ ವಾಸ್ತವಮಾರ್ಗದ ಕವಿ ಹೆನ್ರಿಶ್ ಹೈನೆ ಆಯ್ದುಕೊಳ್ಳುವ ಮಾರ್ಗ ಮಾತ್ರ ಅಸಾಹಿತ್ಯಕವಾದುದು. ನಿಜ ಬದುಕಿಗೆ ನಿಕಟವಾದ ವಾಸ್ತವ ಮಾರ್ಗದ್ದು ! ಹಾಗೆಂದೇ, ರೆಲೆನ್ಸ್ಕಿ ಪೀಸಾದಲ್ಲಿದ್ದಾಗ ಆತನ ಚಲುವೆ-ಕೋಮಲೆಯಾದ ಪ್ರೇಯಸಿಯನ್ನು ಮರುಳುಮಾಡಿ ಕಾಮಿಸಲು ಫೆರೆರಾಗೆ ಪಯಣಿಸುತ್ತಾನೆ ! ವಾಮಮಾರ್ಗದಿಂದ, ಪತ್ರಿಕೆಯಲ್ಲಿ ಸುಳ್ಳು ಸುದ್ದಿ ಛಾಪಿಸಿ ಕಮಿಲಾಳನ್ನು ತನ್ನ ಹೊಟೇಲಿಗೆ ಬರುವಂತೆ ಮಾಡಿ ಅವಳನ್ನು

ಕೂಡುತ್ತಾನೆ ! ಈ ಮೂಲಕ 'ಜ್ಯೂಸ್'ಗೆ 'ಅಪೆಲೆಸ್' ನೀಡುವಂತಹ ಪಂಥಾಹ್ವಾನ ನೀಡುತ್ತಾನೆ. ಕಥೆಯ ಸೂಚ್ಯ ಸಾರಾಂಶವೆಂದರೆ ; ನಂಬಲು, ಆಚರಿಸಲು ವಾಸ್ತವವಲ್ಲದ ರೊಮ್ಯಾಂಟಿಸಂಗಿಂತ, ಕ್ರಿಯೆಯುಳ್ಳ ವಾಸ್ತವ ಮಾರ್ಗ ಹೆಚ್ಚು ಪ್ರಸ್ತುತ ; ನಂಬಿಕೆಗೆ ಅರ್ಹ !

ಒಂದು ಸಾಹಿತ್ಯ ಚಳವಳಿಯ ನಂಬಿಕೆ, ಶ್ರದ್ಧೆ, ನಿಲುವುಗಳೇನೆ ಇರಲಿ; ಈ ಚಳುವಳಿಯ ಸತ್ಯಾಸತ್ಯತೆಯನ್ನು ಪ್ರಶ್ನಿಸಲು ಸಾಹಿತ್ಯದೊಳಗಿನ ಚೌಕಟ್ಟಿನಲ್ಲೇ ಉತ್ತರ ಹುಡುಕಬೇಕಾಗುವುದು ಸೈದ್ಧಾಂತಿಕವಾಗಿ ಅನಿವಾರ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು 'ರೂಪಕ'ವೆಂದು ಪರಿಗಣಿಸಿದರೂ ಕೂಡ ಈ ಕಥೆಯ ವಾಸ್ತವ ಮಾರ್ಗದ ಕವಿ ಹೆನ್ರಿಶ್ ಹೈನೆಯ ಕ್ರಿಯೆ ಪ್ರಶ್ನಾರ್ಹವಾಗಿದೆ. ಅಪೆಲೆಸ್-ಜೂಸ್‌ರ 'ಅಲೆಗರಿ' ಈ ಕಥೆಯನ್ನು ಸಮರ್ಥಿಸುವುದಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಹಾಗೆ ನೋಡಿದರೆ ಬೋರಿಸ್ ಖುದ್ದಾಗಿ ರೊಮ್ಯಾಂಟಿಸಂನಿಂದ ಸ್ಫೂರ್ತಿ ಪಡೆದವನು; ನಮ್ಮ ನವೋದಯದವರಂತೆ ಅವನೂ ನಿಸರ್ಗದ ಚೆಲುವು ಇತ್ಯಾದಿಗಳನ್ನು ಮನತುಂಬಿ ಹಾಡಿದವನು. ಅವನ ಅಭಿವ್ಯಕ್ತಿ ಬೇರೆ ಬಗೆಯದಾದರೂ ಸತ್ವದಲ್ಲಿ, ವೈಯಕ್ತಿಕ ತುರ್ತಿನ ಕಾವ್ಯದೊಂದಿಗೆ ಸಮಾಜವಾದವನ್ನು ಖಾನೆಸುಮಾರು ಹಾಡಿ ಹೊಗಳಿದವನು.

ಈ ಎಲ್ಲವನ್ನೂ ಬದಿಗಿಟ್ಟು ಕೇವಲ ಕತೆಯನ್ನಷ್ಟೇ ನೋಡುವುದಾದರೂ ಈ ಕಥೆಯಲ್ಲಿ ಎದ್ದು ಕಾಣುವ ಕೊರತೆ : ತೊಡಕಿನ ನಿರೂಪಣೆ. ಈ ಮೊದಲೊಮ್ಮೆ ಗುರುತಿಸಿದಂತೆ *ಸಿಂಬಲಿಸಂನಿಂದ* ಪ್ರಭಾವಗೊಂಡು ಬರೆದ ಗದ್ಯ-ಪದ್ಯಗಳಲ್ಲಿ ಅಮೂರ್ತತೆ, ಅನಗತ್ಯ ವಿವರಣೆ, ಕ್ಲೀಶೆ ಬರಹವನ್ನು ಎಳೆದು, ತೆಳುವಾಗಿಸುತ್ತವೆ. ಇದನ್ನು ಬಿಟ್ಟಂತೆ ಈ ಕಥೆಯಲ್ಲಿ ಅಲ್ಲಲ್ಲಿ ಆಕರ್ಷಕ ವಿವರಣೆಗಳಿವೆ. ಆದರೆ ಕಥೆಯ ಹಿಂದಿನ ಕ್ರಿಯೆ ಮಾತ್ರ, ಅದೂ ಸಂಪೂರ್ಣವಾಗಿ ಅಸಾಹಿತ್ಯಕವಾದುದು, ಕಥೆಯ ಗುಣಮಟ್ಟವನ್ನು ಕುಸಿಯುವಂತೆ ಮಾಡುತ್ತದೆ. ಇಲ್ಲಿ ಬಳಸಿರುವ, ಆ ಕಾಲದ ಹೊಸ ತಂತ್ರ, ಶೈಲಿಗಳೂ ಹಲವೊಮ್ಮೆ ಓದಿಗೆ ತೊಡಕಾಗುತ್ತವೆ. ಅಥವಾ ಮೂಲದಲ್ಲಿ ಸ್ಪಷ್ಟವಾಗಿ, ಸರಳವಾಗಿದ್ದುದು ಇಂಗ್ಲಿಷನ್ನೆ ನೆಚ್ಚಿಕೊಂಡು ಅನುವಾದ ಮಾಡುವಾಗ ಈ ಸಮಸ್ಯೆಗೆ ಸಮರ್ಪಕವಾಗಿ ಉತ್ತರ ದೊರೆಯಲಾರದೇನೋ. ಜತೆಗೆ ಇಲ್ಲಿ ಅನುವಾದಿಸಿದ ಎರಡೂ ಕಥೆಗಳ ಮೂರು ಬೇರೆ ಬೇರೆ ಬಗೆಯ ಅನುವಾದವನ್ನು ಓದಿದ ಮೇಲೂ ಅಭಿಪ್ರಾಯದಲ್ಲಿ ಅಂಥ ಬದಲಾವಣೆ

ಸಾಧ್ಯವಾಗಲಿಲ್ಲ.

ಹೀಗಾಗಿ, ಬೋರಿಸ್ ಬರೆದ ಕಥೆಗಳಲ್ಲಿ - ಕಲೆ, ಕಪಟತನ, ಮನುಷ್ಯರ ಸಮಯಸಾಧಕತೆಯನ್ನು ಅವನ ಬೇರೆಲ್ಲ ಕಥೆಗಳಿಗಿಂತ 'ಲೆಟರ್ಸ್ ಫ್ರಮ್ ತೂಲಾ' (***ತೂಲಾದಿಂದ ಬಂದ ಪತ್ರಗಳು :*** ಎಸ್ ದಿವಾಕರ್‌ರ ಅನುವಾದ, ***ಕಥಾ ಜಗತ್ತು,*** ನೋಡಿ) ಹೆಚ್ಚು ಯಶಸ್ವಿಯಾಗಿ, ಅಚ್ಚುಕಟ್ಟಾಗಿ ನಿಭಾಯಿಸುವ ಚಿಕ್ಕಕಥೆ.

●

●

'ಪಯಣ' 'ಡಾಕ್ಟರ್ ಝಿವಾಗೋ' ಕಾದಂಬರಿಯ ಮೊದಲ ಭಾಗದ ಕೊನೆಯ ಅಧ್ಯಾಯ. ಒಂದರ್ಥದಲ್ಲಿ ಇಡೀ ಕಾದಂಬರಿಯ ಆಶಯವನ್ನು ಅತ್ಯಂತ ಸಾಂದ್ರವಾಗಿ ಹೇಳುವ ಭಾಗ.

ತಾತ್ಕಾಲಿಕ ಸರ್ಕಾರ, ಕ್ರಾಂತಿಯ 'ಕಿರುಕುಳ'ದಿಂದ ಬೇಸತ್ತ ಯೂರಿ; ತೋನ್ಯಾ, ಆಕೆಯ ತಂದೆ ಅಲೆಗ್ಸಾಂಡರ್ ಗ್ರೊಮಿಕೊ ಆಶ್ರಯ ಹುಡುಕಿ ಇನ್ನೊಂದು ಮೂಲೆಗೆ ಪಯಣಿಸುವ ಅನುಭವವನ್ನು ಈ ಭಾಗ ನಿರೂಪಿಸುತ್ತದೆ. ರೈಲು ಪಯಣದಲ್ಲಿ ಝಿವಾಗೋ ಕುಟುಂಬ ಎದುರಾಗುವ ಜನ, ಇಡೀ ರಷ್ಯನ್ ಸಮುದಾಯವನ್ನು ಪ್ರತಿನಿಧಿಸುತ್ತಾರೆ. ಕಾರ್ಮಿಕರು, ರೈತರು, ಬಲವಂತವಾಗಿ ಸೈನ್ಯ ಸೇರಲು ಹೊರಟ ಯುವಕರು, ಸ್ಟ್ರೆಲಿಂಕೊವ್‌ನಂಥ ಸೈನ್ಯಾಧಿಕಾರಿಗಳು, ಕದ್ದು ತಿಂಡಿ ಮಾರುವ ಹಳ್ಳಿ ಹೆಂಗಸರು ..... ಹೀಗೆ ೧೯೧೭ರ ಸಾಮಾಜಿಕ ಜೀವನ, ಕ್ರಾಂತಿಯ ಬಗೆಗೆ ಬೋರಿಸ್‌ನ ಯೂರಿಯ ಅಭಿಪ್ರಾಯವನ್ನು ಹಿಡಿದಿಡಲಾಗಿದೆ. ಆಶ್ಚರ್ಯವೆನ್ನಿಸುವ ಮಟ್ಟಿಗೆ ಈ ಭಾಗ ಅಚ್ಚುಕಟ್ಟಾಗಿದೆ. [ಈ ಕಾದಂಬರಿಯ ಚರ್ಚೆ ಮುಂದಿನ ಬರಹದಲ್ಲಿದೆ]

ಬೋರಿಸ್‌ನ ಗದ್ಯದ ಬಗೆಗೆ ಹೇಳುವುದಾದರೆ ಆತ ಕೆಲವು ಭಾಗಗಳನ್ನು ಅಚ್ಚುಕಟ್ಟಾಗಿ , ಚೆನ್ನಾಗಿ, ಹಲವೊಮ್ಮೆ ಚೆಂದದ ಬರವಣಿಗೆ ಮೂಲಕ ಸಾಧಿಸುತ್ತಾನೆ. ಆದರೆ ಹಲವೊಮ್ಮೆ ಬರಹದ ಅರ್ಥವನ್ನು ಹಿಗ್ಗಿಸದೆ ; ಕಥೆಗೆ ಪೂರಕವಾಗದೆ ಅನಗತ್ಯ ವಿವರಗಳು ತಲೆಹಾಕುತ್ತವೆ. ಅದೂ 'ಸಿಂಬಲಿಸಂ' ಪ್ರಭಾವದಿಂದ ಬರೆದ ಬರಹಗಳಲ್ಲಿ; ಅನಗತ್ಯವಾಗಿ ಅಮೂರ್ತತೆ ಸಾಧಿಸಲಾಗಿದೆಯೇನೊ ಎನ್ನಿಸುತ್ತವೆ. ಇಲ್ಲಿ ಅನುವಾದಿಸಿದ ಎರಡು ಕಥೆಗಳಲ್ಲಿ ಈ

ಅಂಶ ಎದ್ದು ಹೊಡೆಯುತ್ತದೆ. ಇದೇ ಕಾರಣದಿಂದ ಅರ್ಧದಷ್ಟು ಅನುವಾದಿಸಿದ 'ಲುವ್ವೆರ್‌ಳ ಬಾಲ್ಯ' ಕಥೆಯನ್ನು ಇಲ್ಲಿ ಸೇರಿಸಲಿಲ್ಲ.

ಕೊನೆಯದಾಗಿ, ಇತರ ರಷಿಯನ್ ಲೇಖಕರಂತೆ ಬೋರಿಸ್ ಪಾಸ್ತರ್‌ನಾಕ್ ನನ್ನ ಮೆಚ್ಚಿನ ಬರಹಗಾರನೇನೂ ಅಲ್ಲ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಆದರೆ ನನ್ನ ಯಾವ ಅಭಿಪ್ರಾಯವನ್ನೂ, ಪೂರ್ವಗ್ರಹವನ್ನೂ ಅನುವಾದದಲ್ಲಿ ಹೇರಿಲ್ಲ. ಬೋರಿಸ್ ಕನ್ನಡಿಗರು ಓದಬೇಕಾದ ಲೇಖಕ ಎಂಬ ಭಾವನೆ ಹಾಗೂ ವಿಶಾಲ ಹರವಿನಲ್ಲಿ ಅವನ ಸಾಹಿತ್ಯವನ್ನು ಪ್ರಾತಿನಿಧಿಕವಾಗಿ ತಿಳಿಸಬೇಕೆನ್ನುವ ಆಶಯ ಮಾತ್ರ ಈ ಅನುವಾದದ ಹಿಂದಿದೆ, ಅದಲ್ಲದೆ ಯಾವ ಸಿದ್ಧಾಂತಗಳೂ ಈ ಅನುವಾದದ ಹಿಂದಿಲ್ಲ. ಪ್ರತಿ ಅನುವಾದವೂ ಇನ್ನೊಂದು ಅನುವಾದದ ಸಾಧ್ಯತೆಯೊಂದಿಗೇ ಹುಟ್ಟುತ್ತವೆ, ಒಂದು ಅನುವಾದ ಇನ್ನೊಂದರ ಹುಟ್ಟಿಗೆ ಕಾರಣವಾಗುತ್ತದೆಂಬ ವಿನಯ ನನಗಿದೆ. ಇದಕ್ಕಿಂತ ಉತ್ತಮ ಅನುವಾದ ಬಂದರೆ ಅದು ಒಳ್ಳೆಯದೇ. ಆದರೆ ಈ ಸದ್ಯದ ಬೋರಿಸ್ ಬಗೆಗಿನ ಬರಹ ಅವನ ಆಯ್ದ ಬರಹಗಳ ಅನುವಾದದಿಂದ ತುಸುವಾದರೂ ಪ್ರಯೋಜನವಾದರೆ ನನ್ನ ವೇಳೆ ಮತ್ತು ಶ್ರಮ ಸಾರ್ಥಕವಾದಂತೆ.

ಕೃತಜ್ಞತೆ : ಈ ಕೆಲಸ ಒಪ್ಪಿಸಿ, ತಡವಾದರೂ ಹಸ್ತಪ್ರತಿಗಾಗಿ ಕಾದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರಿಗೆ, ಹಸ್ತಪ್ರತಿ ಓದಿದ ಕಮಲ ಅವರಿಗೆ ಹಾಗೂ ಇದೀಗ ಪ್ರಕಟಿಸುತ್ತಿರುವ ಪುಸ್ತಕ ಪ್ರಾಧಿಕಾರದ ನೆಲೆಮನೆ ದೇವೆಗೌಡ ಅವರಿಗೆ.

ಕೇಶವ ಮಳಗಿ

೨೨-೧೧-೧೯೯೪

ಓರಿಯಂಟ್ ಲಾಂಗಮನ್ ಲಿಮಿಟೆಡ್
೮೦/೧, ಮಹಾತ್ಮಾಗಾಂಧಿ ರಸ್ತೆ
ಬೆಂಗಳೂರು - ೫೬೦ ೦೦೧

ಬೋರಿಸ್ ಪಾಸ್ತರ್‌ನಾಕ್ : ಬದುಕು - ಬರಹ

೧

'ಪಾಸ್ತರನಾಕ್ ಹುಟ್ಟುಕವಿ, ಕಾಡಿನ ಹಕ್ಕಿ' ಎಂದಳು ಆ ಕಾಲದ ಪ್ರಮುಖ ಕವಿ, ಅವನ ಸಮಕಾಲೀನೆ , ಅವನಿಗಿಂತ ವರ್ಷ ಹಿರಿಯಳಾಗಿದ್ದ ಆನಾ ಆಖ್ಮತೋವಾ.

'ಮಾಸ್ಕೋ ನಗರ ಬೋರ್‍ಯಾನ ಹುಟ್ಟಿನಿಂದಲೇ ಅವನಿಗೆ ಉಡುಗೊರೆಯಾಗಿ ಬಂದಿತ್ತು' ಎಂದಳು ಪಾಸ್ತರ್‌ನಾಕ್ ಕುಟುಂಬದ ಸ್ನೇಹಿತೆ -ನದೇಜ್ಞಾ ಮಾಂದೆಲ್‌ಸ್ತಮ್. ಈಕೆಯ ಮಾತಿನಲ್ಲಿ ಉತ್ಪ್ರೇಕ್ಷೆಯೇನಿಲ್ಲ. ಪಾಸ್ತರ್‌ನಾಕ್ ಹುಟ್ಟಿದ್ದು, ತನ್ನ ಬದುಕಿನ ಎಪ್ಪತ್ತು ವರ್ಷಗಳಲ್ಲಿ ಕ್ರಿಯಾಶೀಲ ದಿನಗಳನ್ನು ಕಳೆದದ್ದು, ಬರೆದದ್ದು, ಅನುವಾದಿಸಿದ್ದು ಎಲ್ಲ ಮಾಸ್ಕೋದಲ್ಲಿಯೇ. ಮಧ್ಯದ ಬೆರಳೆಣಿಕೆಯ ಕಾಲದಲ್ಲಿ ಆತ ಅಲೆಮಾರಿಯಾಗಿದ್ದರೂ ಅದು ತಾತ್ಕಾಲಿಕ. ಆತ ಕೊನೆಯುಸಿರೆಳೆದದ್ದು ಸಹ ಮಾಸ್ಕೋದಿಂದ ತುಸು ದೂರದಲ್ಲಿ. ಮಾಸ್ಕೋ - ಬೋರಿಸ್ ಬದುಕಿನ - ಬರಹದ ಕರ್ಮಭೂಮಿ.

ಬೋರಿಸ್ ಲಿಯೋನಿದೊವಿಚ್ ಪಾಸ್ತರ್‌ನಾಕ್ ಹುಟ್ಟಿದ್ದು ೨೯ ಜನವರಿ ೧೮೯೦ರಲ್ಲಿ. ತಂದೆ ಲಿಯೋನಿದ್ ಓಸಿಪೋವಿಚ್ ಈತ ಹುಟ್ಟಿದಾಗ ಬದುಕಿನಲ್ಲಿ ಭದ್ರ ಕಾಲೂರಲು ಪ್ರಯತ್ನಿಸುತ್ತಿದ್ದ ಕಲಾವಿದ. ತಾಯಿ ರೋಸಲಿಯಾ ತನ್ನ ಎಂಟನೆಯ ವರ್ಷದಿಂದಲೇ ರಷಿಯಾ-ಹೊರದೇಶದಲ್ಲಿ ಪಿಯಾನೋ ಸಂಗೀತ ಕಚೇರಿ ನಡೆಸಿ ಪ್ರಸಿದ್ಧಳಾಗಿದ್ದಾಕೆ. ಲಿಯೋನಿದ್ ರೋಸಲಿಯಾ ಇಬ್ಬರೂ ದಕ್ಷಿಣ ರಷಿಯಾಕ್ಕೆ ಸೇರಿದ ಒದೆಸ್ಸಾದವರು. ಕವಿ ಆನಾ ಆಖ್ಮತೋವಾ ಕೂಡ ಇಲ್ಲಿಯವಳೇ. ಕಾಲಾಂತರದಲ್ಲಿ ಲಿಯೋನಿದ್ ಉದ್ಯೋಗ ಅರಸಿ ಮಾಸ್ಕೋಕ್ಕೆ ವಲಸೆ ಬಂದ. ರೋಸಲಿಯಾ ಕೂಡ ಮಕ್ಕಳು ಹುಟ್ಟುವವರೆಗೆ ಒಪೇರಾಗಳಲ್ಲಿ ಕಚೇರಿ ನೀಡಿ ಹಣ, ಅದಕ್ಕಿಂತ ಕೀರ್ತಿ ಗಳಿಸಿದವಳು.

ಬೋರ್ಯ್ಯಾ ಹುಟ್ಟಿದಾಗ ಇವರ ಮನೆಯಿದ್ದುದ್ದು - ವೈವಿಧ್ಯತೆಗೆ ಹೆಸರಾದ ಕೇಂದ್ರ ಮಾಸ್ಕೋದ ಓರುರ್ಝ್ನಿ ಓಣಿಯಲ್ಲಿ. ಮನೆ ಮುಂದೆಯೇ ಭಾವಿ ಪಾದ್ರಿಗಳಿಗೆ ತರಬೇತು ನೀಡುವ ಕ್ರೈಸ್ತ ವಿದ್ಯಾಪೀಠ. ಒದ್ದೆಮುದ್ದೆಯಾದ ದಾದಿಯರು, ಪಾದ್ರಿಣಿ ಯರು, ನಿಗೂಢವಾಗಿ ಕಂಡು, ಕಾಡುವ ಹೆಂಗಸರು, ಭಿಕ್ಷುಕರು... ರಸ್ತೆ ಕೊನೆಗೆ ರುದ್ರಭೂಮಿ. ಇಂಥಲ್ಲಿ ಬೋರಿಸ್‌ನ ಬಾಲ್ಯದ ಆರಂಭಕಾಲ ಕಳೆಯಿತು. 'ಇವೆಲ್ಲ ನನ್ನ ಬರಹದ ಮೂಲ ದ್ರವ್ಯ ' ಎಂದು ಮುಂದೆ ಅವನೇ ಬರೆದುಕೊಂಡ. ಕ್ರೈಸ್ತ ಧರ್ಮ ಬಾಲ್ಯದಲ್ಲಿ, ಆನಂತರ ಬಹುವಾಗಿ ಆಕರ್ಷಿಸಿ ಅವನ ಮೇಲೆ ಗಾಢ ಪ್ರಭಾವ ಬೀರಿತು. ಕ್ರಿಸ್ತನ ಮರುಹುಟ್ಟಿನಲ್ಲಿದ್ದ ಅವನ ನಂಬಿಕೆ ಬಲವಾಗಿ ಮುಂದೆ ಆತನನ್ನು ಶ್ರದ್ಧಾವಂತ ಕ್ರಿಸ್ತಧರ್ಮಿಯನ್ನಾಗಿಸಿತು. ಆತನ ಕವಿತೆಗಳಲ್ಲಿ, 'ಡಾಕ್ಟರ್ ಝಿವಾಗೋ' ಕಾದಂಬರಿಯಲ್ಲಿ ಕ್ರಿಸ್ತನ ಪುನರುತ್ಥಾನ ಮತ್ತೆ ಮತ್ತೆ ಚರ್ಚೆಯಾಗುವ ವಿಷಯ.

ಬೋರಿಸ್‌ನ ತಂದೆ ಲಿಯೋನಿದ್‌ನದೆ ಬೇರೆ. ಆತ ಯಹೂದಿ ಧರ್ಮದಲ್ಲಿ ಗಾಢ ನಂಬಿಕೆಯುಳ್ಳವನು. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡರೆ ತನ್ನ ಉದ್ಯೋಗಕ್ಕೆ ಭದ್ರತೆಯೊದಗಿ, ಕಲಾವಿದನಾಗಿ ಒಳ್ಳೆಯ ಸ್ಥಾನ ಗಳಿಸಬಹುದೆಂದು ಗೊತ್ತಿದ್ದರೂ ಪ್ರಜ್ಞಾಪೂರ್ವಕವಾಗಿ ಅಂಥ ಅವಕಾಶ ಬದಿಗೊತ್ತಿದ್ದ. ಹೇಗೂ ಇರಲಿ, ಮಾಸ್ಕೋದ ಶಿಲ್ಪ-ಚಿತ್ರ ಕಲಾಶಾಲೆಯಲ್ಲಿ ಲಿಯೋನಿದ್‌ಗೆ ೧೮೯೪ರಲ್ಲಿ ಉಪಾಧ್ಯಾಯನಾಗಿ ನೇಮಕ ಮಾಡಿಕೊಂಡರು. ಆತನಿಗೆಂದು ಕ್ರೆಮ್ಲಿನ್ ಪೂರ್ವಕ್ಕಿದ್ದ ಕೇಂದ್ರ ಮಾಸ್ಕೋದಲ್ಲಿ ವಸತಿಗೃಹವನ್ನೂ ಶಾಲೆ ನೀಡಿತು.

ಬೋರ್ಯ್ಯಾನ ಬಾಲ್ಯದ ಮಾಸ್ಕೋ ಚಿತ್ರಕಶಕ್ತಿಯುಳ್ಳದ್ದು. ಕಲಾವಿದನಾದ ಅಪ್ಪ ತನ್ನ ರೇಖಾಚಿತ್ರ, ವರ್ಣಚಿತ್ರ, ಭಾವಚಿತ್ರಗಳಲ್ಲಿ ಮಾಸ್ಕೋದ ವೈಶಿಷ್ಟ್ಯ, ಸೊಗಡು ಸೆರೆಹಿಡಿದಿದ್ದ. ಬೋರಿಸ್‌ನ ನಂತರ ಲಿಯೋನಿದ್-ರೋಸಲಿಯಾರಿಗೆ ಇನ್ನೂ ಮೂರು ಮಕ್ಕಳು ಹುಟ್ಟಿದರು. ೧೯೦೦ರಲ್ಲಿ ಜೋಸೆಫಿನ್, ೧೯೦೨ರಲ್ಲಿ ಲಿಡಿಯಾ, ಹಾಗೂ ಇವರಿಬ್ಬರಿಗೆ ಅಣ್ಣನಾದ, ಬೋರಿಸ್‌ನ ತಮ್ಮನಾದ ಅಲೆಗ್ಸಾಂಡರ್, ೧೮೯೩ರಲ್ಲಿ. ಜೋಸೆಫಿನ್ ಒಂದೆಡೆ ದಾಖಲಿಸಿದಂತೆ -

'ನಮ್ಮ ಮನೆಯಲ್ಲಿ ಮೂರು ಸೂರ್ಯರು ಅಥವಾ ನಕ್ಷತ್ರಗಳು'. ಮೂವರು ಸಾಮಾನ್ಯ ಜೀವಿಗಳು. ಅಲೆಕ್, ಲಿಡಿಯಾ, ನಾನು ಸಾಮಾನ್ಯ

ಜೀವಿಗಳಾದರೆ, ಅಪ್ಪ-ಅಮ್ಮ ಬೋರ್‍ಯಾ ಅಣ್ಣ, ಸ್ವತಂತ್ರ ಮಿನುಗುವ ನಕ್ಷತ್ರಗಳು ಅಥವಾ ಸೂರ್ಯರು!' ಬೋರಿಸ್‌ನ ತಾಯಿ ಸಾರ್ವಜನಿಕವಾಗಿ ಪಿಯಾನೋ ನುಡಿಸುವುದನ್ನು ಬಿಟ್ಟ ಮೇಲೆ ಮನೆಯಲ್ಲೇ ಗಂಟೆಗಟ್ಟಲೆ ಪಿಯಾನೋ ನುಡಿಸುತ್ತಿದ್ದುದು ಬಾಲಕ ಬೋರಿಸ್‌ನ ಮೇಲೆ ವಿಚಿತ್ರ ಪರಿಣಾಮ ಬೀರಿತು. ಬಾಲಕನ ಬದುಕಿನಲ್ಲಿ, ಅರೆ ನಿದ್ರೆ - ಅರೆ ಎಚ್ಚರ ಸ್ಥಿತಿಯಲ್ಲಿ, ತಿರುವು ಬಂದ ದಿನ ಸಂಗೀತ-ಸಾಹಿತ್ಯದ ಸಮಾಗಮದ ದಿನ. ೨೩ ನವೆಂಬರ್ ೧೮೯೪ರಂದು. ಅಂದು ಮೊದಲ ಬಾರಿಗೆ ಆತ ಟಾಲ್‌ಸ್ಟಾಯ್‌ರನ್ನು ಕಂಡಿದ್ದ. (ನೋಡಿ : 'ಜನ, ಅವರ ನಡೆ-ನುಡಿ').

ಬಾಲಕ ಬೋರಿಸ್‌ನ ಎದುರೇ ವಿಶ್ವದ ಭಾರಿ ನಗರಗಳಲ್ಲಿ ಒಂದಾಗಲು ಸ್ಪರ್ಧೆಯಲ್ಲಿನಂತೆ ಮಾಸ್ಕೋ ಅವ್ಯಾಹತವಾಗಿ ಬೆಳೆಯುತ್ತಿತ್ತು. 'ಮಾಸ್ಕೋ ಮಾಂತ್ರಿಕನ ಮಾಯಾಲೋಕದಂತೆ ದೊಡ್ಡ-ದೊಡ್ಡ ಕಲ್ಲು- ಇಟ್ಟಿಗೆಗಳ ಭಾರೀ ಕಟ್ಟಡಗಳನ್ನು ಬೀದಿ ಬೀದಿಯಲ್ಲೂ ತುಂಬಿಕೊಂಡಿತ್ತು'. ಇಂಥ ಮಾಸ್ಕೋದಲ್ಲಿ ಅವನ ತಾಯಿ ಮನೆಯಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ ನೀಡಿದಳು. ಜತೆಗೆ ಜರ್ಮನ್ ಫ್ರೆಂಚ್ ಕಲಿಸಲು ಉಪಾಧ್ಯಾಯರು ಬರುತ್ತಿದ್ದರು. ಆತ ಹತ್ತು ವರ್ಷದವನಿದ್ದಾಗ, ಮತ್ತೊಮ್ಮೆ ಮರುಜನ್ಮ ಪಡೆದಂತೆ ಇವರು ಅಜ್ಜನ ಮನೆಯಿರುವ ಒದೆಸ್ಸಾಕ್ಕೆ ಹೊರಟಾಗ, ಕಪ್ಪು ನಿಲುವಂಗಿ ತೊಟ್ಟು ವಿಚಿತ್ರ ರೀತಿಯಲ್ಲಿ ಜರ್ಮನ್ ಮಾತಾಡಿ, ಕಥಾ ಪಾತ್ರವೆನ್ನಿಸುವಂತಿದ್ದ ಜರ್ಮನ್ ಕವಿ ರೇನೆ ರಿಲ್ಕ್‌ರನ್ನು ಕಂಡ.

ಹನ್ನೊಂದನೆ ವಯಸ್ಸಿಗೆ ರಾಜ್ಯ ಸರ್ಕಾರಕ್ಕೆ ಸೇರಿದ್ದ ಶಾಲೆಗಳಲ್ಲಿ ಒಂದಾಗಿದ್ದ ಮಾಸ್ಕೋ ಜಿಮ್ನಾಸಿಯಂಗೆ ಸೇರಿದ. ಅಲ್ಲಿ ಗ್ರೀಕ್-ಲ್ಯಾಟಿನ್‌ನಲ್ಲಿ ಪರಿಣತಿ ನೀಡಲಾಗುತ್ತಿತ್ತು. ಇತರೆ ವಿಷಯಗಳಲ್ಲಿ ಅವನಿಗೆ ಸಸ್ಯಶಾಸ್ತ್ರದಲ್ಲಿ ಆಸಕ್ತಿ. ಆತ ಓದುವಾಗಲೂ ಸಾಹಿತ್ಯದಲ್ಲಿ ಹಳೆಯ ತಲೆಮಾರಿನವರಿಗಿಂತ ಸಮಕಾಲೀನರಿಂದ ಪ್ರಭಾವಗೊಂಡದ್ದೇ ಹೆಚ್ಚು. ಷೇಕ್ಸ್‌ಪಿಯರ್, ಪುಷ್ಕಿನ್‌ರನ್ನು ಬಿಟ್ಟರೆ ಇಸ್ಕಿಲಸ್, ಹೋಮರ್, ಹೊರೇಸ್‌ನಂಥವರು ಅಷ್ಟಾಗಿ ಆಕರ್ಷಣೀಯವೆನ್ನಿಸಲಿಲ್ಲ. ಬದಲಿಗೆ ಅವನ ಸಮಕಾಲೀನರಾದ ರಿಲ್ಕ್, ಬ್ಲೋಕ್, ಮಾಯಕೊವಸ್ಕಿ, ತ್ವೇತಯೇವಾರಿಂದ ಅವನ ಚೇತನ ಬಡಿದೆದ್ದದ್ದು ಆಶ್ಚರ್ಯಕರವಾಗಿದೆ. ಶಾಲೆಯಲ್ಲೂ ಆತ ಆಕರ್ಷಕ ವ್ಯಕ್ತಿಯಾಗಿರದೆ ಎಲ್ಲರಿಂದ ತಪ್ಪಿಸಿಕೊಂಡು

ಒಂಟಿಯಾಗಿರುತ್ತಿದ್ದ ಹುಡುಗನಾಗಿದ್ದ. ಹಲವೊಮ್ಮೆ ಪೇಲವನಾಗಿ, ಅಸಹ್ಯವಾಗಿ ಅವನ ಗೆಳಯರಿಗಾತ ಕಾಣುತ್ತಿದ್ದ.

ಪಾಸ್ತರ್‌ನಾಕ್ ಕುಟುಂಬ ಪ್ರತಿ ಬೇಸಿಗೆಯಲ್ಲಿ ಅಜ್ಜ-ಅಜ್ಜಿಯರನ್ನು ನೋಡಲು ಒದೆಸ್ಸಾಗೆ ಹೋಗುತ್ತಿತ್ತು. ಹಾಗೆಯೇ, ಮಾಸ್ಕೋದಿಂದ ದಕ್ಷಿಣ-ಪಶ್ಚಿಮಕ್ಕೆ ಎಪ್ಪತ್ತು ಮೈಲಿ ದೂರವಿದ್ದ ಓಬೊಲೆನ್ಸಿಕೊಯ್‌ನಲ್ಲಿ ಬಾಡಿಗೆಗೆ ಹಿಡಿದ 'ಹಳ್ಳಿ ಮನೆ'('ಡಾಚಾ')ಯಲ್ಲೂ ತಂಗುತ್ತಿದ್ದರು. ಹಾಗೊಮ್ಮೆ ೧೯೦೩ರಲ್ಲಿ, ಹಳ್ಳಿಮನೆಗೆ ಹೋದಾಗ ವಿಚಿತ್ರ ಘಟನೆಗಳು ನಡೆದವು. ನೀರಿನಲ್ಲಿ ಕೊಚ್ಚಿಹೋಗುತ್ತಿದ್ದ ಮನೆ ಪಕ್ಕದ ಹುಡುಗಿಯನ್ನು ಹರೆಯದನೊಬ್ಬ ರಕ್ಷಿಸಿದ. ಈ ಘಟನೆಯಿಂದ ಅವಮಾನಗೊಂಡ ಹುಡುಗಿ ಮತ್ತೆ ಆತ್ಮಹತ್ಯೆಗೆ ಯತ್ನಿಸಿದಳು. ಬೋರಿಸ್ ಕುದುರೆ ಮೇಲಿಂದ ಬಿದ್ದು ಕಾಲು ಮುರಿದುಕೊಂಡಿದ್ದ. ಅವರ ಹಳ್ಳಿಮನೆ ಬೆಂಕಿಗಾಹುತಿಯಾಗಿ ಸಣ್ಣ ಪುಟ್ಟ ಸುಟ್ಟ ಗಾಯವಾದವು. ಇದರಿಂದಾಗಿ ಮುಂದೆ ಬೋರಿಸ್ ಮೂರು ಸಲ ಸೈನ್ಯ ಸೇರಲು ಹೋದಾಗ, ಆತನ ಕಾಲು ಸರಿಯಿಲ್ಲವೆಂದು ತಿರಸ್ಕೃತಗೊಂಡ. ಬೋರಿಸ್ ಪ್ರಸಿದ್ಧ ಸಂಗೀತ ಸಂಯೋಜಕ ಸ್ಕ್ರೇಬಿಯನ್‌ನನ್ನು ಕಂಡದ್ದು ಕೂಡ ಇಲ್ಲಿಯೇ.

ಬೋರಿಸ್ ೧೯೦೪-೫ರಲ್ಲಿ ಮಾಸ್ಕೋ ಶಾಲೆಯಲ್ಲಿದ್ದಾಗ ಜಪಾನಿನೊಂದಿಗೆ ಯುದ್ಧ ಮತ್ತು ಅದೇ ಕಾಲದಲ್ಲಿ ನಡೆದ ವಿಫಲಕ್ರಾಂತಿಯಿಂದಾಗಿ ಓದಿಗೆ ಅಡ್ಡಿಯಾಯಿತು. ಮುಂದೆ ಈ ವಿಫಲಕ್ರಾಂತಿಯ ಕುರಿತು ಒಂದು ಸುದೀರ್ಘ ಕವನ '೧೯೦೫' ಬರೆದ. ಆತ್ಮ ವಿವರಣೆಯಲ್ಲೂ ಈ ಕುರಿತು ವಿವರವಾಗಿ ದಾಖಲಿಸಿದ. ['ನೋಡಿ : ೧೯೦೦ರ ಸಮಯ']

ಕ್ರಾಂತಿಯ ಬೇಗುದಿಯಿಂದ ಕುಟುಂಬವನ್ನು ಸುರಕ್ಷಿತವಾಗಿಡಲು ಲಿಯೋನಿದ್ ೧೯೦೫ರಲ್ಲಿ ಎಲ್ಲರನ್ನೂ ಬರ್ಲಿನ್‌ಗೆ ಕರೆದೊಯ್ದ. ಆ ವರ್ಷವಿಡೀ ಅವರು ರಷ್ಯನ್ ವಲಸೆಗಾರರಿಂದ ತುಂಬಿದ್ದ ಬರ್ಲಿನ್‌ನಲ್ಲೇ ಉಳಿದರು. ಅದೇ ಸಮಯಕ್ಕೆ ಬರ್ಲಿನ್‌ನಲ್ಲಿದ್ದ ಮಾಕ್ಸಿಂ ಗೋರ್ಕಿಯ ರೇಖಾಚಿತ್ರವನ್ನು ಲಿಯೋನಿದ್ ಬರೆದದ್ದು ಬೋರಿಸ್‌ನ ನೆನಪಿನಲ್ಲಿ ಅಚ್ಚಳಿಯದೆ ನಿಂತಿತು.

೧೯೦೭ರ ಆರಂಭಕ್ಕೆ ಮಾಸ್ಕೋಕ್ಕೆ ಬಂದಾಗ -ಯುವಕ ಬೋರಿಸ್‌ನಿಗೆ ರೈಲುಗಳ ಬಗ್ಗೆ ವಿಚಿತ್ರ ಆಕರ್ಷಣೆ ಹುಟ್ಟಿತ್ತು. ಇದಕ್ಕೆ ಕಾರಣ

ಲೋಕೋಮೋಟಿವ್‌ನಲ್ಲಿ ಮ್ಯಾನೇಜರ್‌ನಾಗಿದ್ದ ಆತನ ಚಿಕ್ಕಪ್ಪನಾಗಿದ್ದ ಅಲೆಗ್ಸಾಂಡರ್. ಇದೇ ಚಿಕ್ಕಪ್ಪ ಮುಂದೆ ಪೀತರ್ಸ್‌ಬರ್ಗ್‌ಗೆ ಹೋಗಿ ಬರಲು ಬೋರಿಸ್‌ನಿಗೆ ರೇಲ್ವೆ ಪಾಸ್ ಕೊಡಿಸಿದ್ದ [ನೋಡಿ '೧೯೦೦ರ ಸಮಯ'] . ಒಟ್ಟಿನಲ್ಲಿ ರೈಲು ನಿಲ್ದಾಣ, ಹೊಗೆ, ಹಳಿಗಳು, ಜಂಗುಹಿಡಿದು ಮೂಲೆ ಸೇರಿದ ಇಂಜೀನುಗಳು ಅವನನ್ನು ಬಹುವಾಗಿ ಕಾಡಿದವು. ಡಾಕ್ಟರ್ ಜಿವಾಗೋ ಕಾದಂಬರಿಯಲ್ಲಿ ಇದರ ದಟ್ಟ ವಿವರಗಳನ್ನು ಕಾಣಬಹುದು. [ನೋಡಿ 'ಫಯಣ']. ರಷಿಯಾದ 'ಸಿಂಬಲಿಸಂ' ಪ್ರತಿಪಾದಕ ಕವಿ ಬ್ಲೋಕ್‌ನ ಕಾವ್ಯಕ್ಕೆ ಮರುಳಾದದ್ದು, ಮಾಯಕೊವಸ್ಕಿ ಗೆಳೆಯನಾದದ್ದು ಬೋರಿಸ್‌ನ ಬದುಕಿನ ಗತಿ ಬದಲಾಯಿಸಿದವು. ಈ ಎರಡರಲ್ಲಿ ಮೊದಲ ಘಟನೆ ನಡೆದದ್ದು ಇದೇ ಸರಿಸುಮಾರಿಗೆ.

೧೯೦೮ರಲ್ಲಿ ಜಿಮ್ನಾಸಿಯಂ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ, ಸ್ವರ್ಣಪದಕ ಪಡೆದ ಬೋರಿಸ್ ತನ್ನ ಸಂಗೀತ ಪಾಠದೊಂದಿಗೆ, ಕಾನೂನು ವಿದ್ಯಾಭ್ಯಾಸ ಮಾಡಲು ಮಾಸ್ಕೋ ವಿಶ್ವವಿದ್ಯಾಲಯ ಸೇರಿದ್ದ. ಆದರೆ ಬೋರಿಸ್‌ನ ಸಂಗೀತಗುರು ಸ್ಕ್ರೇಬಿಯನ್‌ಗೂ ಬೋರಿಸ್‌ನಿಗೂ ಸಂಗೀತದ ಮೂಲತತ್ವದ ಬಗೆಗೆ ಅಭಿಪ್ರಾಯ ಭೇದ ಬಂದು ಬೋರಿಸ್ ಸಂಗೀತವನ್ನು ಬಿಟ್ಟು ಕೊಡುವ ನಿರ್ಧಾರ ಮಾಡಿದ. ಇದರ ಜತೆಗೆ ಕಾನೂನು ಶಾಸ್ತ್ರವೂ ಶುಷ್ಕವಾಗಿ ತತ್ವಶಾಸ್ತ್ರವನ್ನು ಅಧ್ಯಯನ ವಿಷಯವಾಗಿ ಆರಿಸಿಕೊಂಡ. ಆದರೆ ತತ್ವಜ್ಞಾನ ಅಧ್ಯಯನಕ್ಕೂ ೧೯೧೦ರಲ್ಲಿ ಮತ್ತೊಂದು ತಡೆ ಬಂತು. ಅವನ ಭಾವನಾ ಪ್ರಪಂಚದ ಮೇಲೆ ನಿಚ್ಚಳ ಪ್ರಭಾವ ಬೀರಿದ್ದ ಟಾಲ್‌ಸ್ಟಾಯ್ ಆ ವರ್ಷ ತೀರಿಕೊಂಡರು. ಟಾಲ್‌ಸ್ಟಾಯ್‌ರ ಚಿಂತನೆ, ಅದರಲ್ಲೂ ಅವರ ಕ್ರಿಶ್ಚಿಯನ್ ಧಾರ್ಮಿಕ ನಂಬಿಕೆ, ಒಳಿತು,-ಕೆಡುಕಿನ ಜಿಜ್ಞಾಸೆ ಬೋರಿಸ್‌ನನ್ನು ಸಂಪೂರ್ಣ ತನ್ನೆಡೆ ಸೆಳೆದುಕೊಂಡಿತ್ತು. ಮೇ ೨, ೧೯೫೫ರಲ್ಲಿ ಬರೆದ ಪತ್ರವೊಂದರಲ್ಲಿ ಬೋರಿಸ್ ಹೀಗೆ ಬರೆದುಕೊಂಡ: '೧೯೧೦-೧೨ರ ಸಮಯದಲ್ಲಿ ಹಿಂದೆಂದಿಗಿಂತ ನಾನು, ನನ್ನೊಳಗೇ ಕ್ರಿಶ್ಚಿಯನ್ ಚಿಂತನೆಗಳನ್ನು ಮಥಿಸುತ್ತ ಬದುಕಿದ್ದೆ. ಆ ಸಮಯದಲ್ಲೇ ನನ್ನ ಸತ್ವದ ಬೇರುಗಳು ಆಳಕ್ಕೆ ಹೊಕ್ಕು ಆಕಾರ ಪಡೆದವು. ನನ್ನ ದೃಷ್ಟಿಕೋನ - ಬದುಕು - ಜಗತ್ತು, ವಸ್ತುವಿನ ಬಗೆಗೆ - ಹಿಗ್ಗುತ್ತ ಹೋಯಿತು'.

೧೯೧೦ರ ಸುಮಾರಿಗೆ ಮಾಸ್ಕೋ ವಿಶ್ವವಿದ್ಯಾಲಯದಲ್ಲಿ ಬರ್ಗ್ಸೋನಿಸಂ

ಹಾಗೂ ಹಸ್ಸೆರ್ಲೀಸಂನ ಪ್ರಭಾವ ಜೋರು. ಈ ಸಿದ್ಧಾಂತಗಳನ್ನು ಹಾದುಬಂದ ಬೋರಿಸ್‌ಗೆ ಇದೀಗ ಪ್ರೊಫೆಸರ್ ಹೆರ್ಮನ್ ಕೊಹಿನ್‌ರಿಂದಾಗಿ ಕಾಂಟಿಸಂ (ಇಮಾನ್ಯುಯಲ್ ಕೆಂಟ್‌ನ ತತ್ವ ಮೀಮಾಂಸೆ) ಬಗ್ಗೆ ಕುತೂಹಲ ತಳೆಯಿತು. ಹೇಗಾದರೂ ಮಾಡಿ ಜರ್ಮನಿಯ ಮಾರ್‌ಬರ್ಗ್‌ಗೆ ಹೋಗಿ ಅಲ್ಲಿ ತತ್ವಶಾಸ್ತ್ರ ಕಲಿಯುವ ಹಂಬಲ. ಆಗ ಮಾಸ್ಕೋದಲ್ಲಿ ಜರ್ಮನ್ ಸಿದ್ಧಾಂತಗಳ ಬಗ್ಗೆ ಆಕರ್ಷಣೆ ಇದ್ದುದ್ದರಿಂದ ವಿಶ್ವವಿದ್ಯಾಲಯ ಮಾರ್‌ಬರ್ಗ್‌ಗೆ ಹೋಗುವ ಅವಕಾಶವನ್ನು ಒದಗಿಸುತ್ತಿತ್ತು. ೧೯೧೨ರಲ್ಲಿ ಬೋರಿಸ್‌ನ ಆಸೆ ನೆರವೇರಿತು. ತಾಯಿ ರೋಸಾ ಆಗೀಗ ಕೂಡಿಟ್ಟ ಇನ್ನೂರು ರೂಬೆಲ್ಲನ್ನು ಮಾರ್‌ಬರ್ಗ್‌ಗೆ ಹೋಗಿ ಬಾ ಎಂದು ನೀಡಿದಳು. ಟಾಲ್‌ಸ್ಟಾಯ್‌ರ ಸರಳ ಜೀವನ ಶೈಲಿಗೆ ಮಾರು ಹೋಗಿದ್ದ ಬೋರ್ಯಾ ರೈಲಿನ ನಾಲ್ಕನೆಯ ದರ್ಜೆಯಲ್ಲೂ ಪಯಣಿಸಲು ತಯಾರಾಗಿದ್ದ ! ಮಾರ್ಬರ್ಗ್ ಭೇಟಿ ಅವನ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರುವಂಥದ್ದು. ತನ್ನ 'ಸೇಫ್ ಕಂಡೆಕ್ಟ್ 'ಆತ್ಮ ವಿವರಣೆಯಲ್ಲಿ ವಿವರವಾಗಿ ಅಲ್ಲಿನ ಘಟನೆಗಳ ಬಗ್ಗೆ ಬೋರಿಸ್ ದಾಖಲಿಸಿದ್ದಾನೆ. ಪ್ರೊಫೆಸರ್ ಕೊಹೆನ್ ಇವನಿಂದ ಎಷ್ಟೊಂದು ಪ್ರಭಾವಿತರಾದರೆಂದರೆ ಪದವಿ ಮುಗಿವ ಮುಂಚೆಯೇ ಪ್ರೌಢ ಪ್ರಬಂಧ ಬರೆಯುವಂತೆ ಒತ್ತಾಯಿಸಿದರು. ಜತೆಗೆ ಜರ್ಮನ್ ಬೌದ್ಧಿಕ ವಲಯದಲ್ಲಿ ದಂತಕಥೆಯಂತಿದ್ದವರು ಬೋರಿಸ್‌ನನ್ನು ಮನೆಗೆ ಊಟಕ್ಕೆ ಆಹ್ವಾನಿಸಿ ಗೌರವ ನೀಡಿದರು ! ಇದೊಂದು ಸಾಮಾನ್ಯ ಘಟನೆಯಾಗಿರಲಿಲ್ಲ. ತತ್ವ ಶಾಸ್ತ್ರದ ವಿದ್ಯಾರ್ಥಿ ಸಂಕೀರ್ಣವಾದ ನಿರ್ಧಾರದ ಗಳಿಗೆ ಮುಟ್ಟಬೇಕೆನ್ನು ವಷ್ಟರಲ್ಲಿ ಅತಾತ್ವಿಕವಾದ ಸಮಸ್ಯೆಯೊಂದು ಅವನಿಗೆ ಗಂಟುಬಿತ್ತು. ಆತ ತುಂಬ ದಿನಗಳಿಂದ ಪ್ರೀತಿಸುತ್ತಿದ್ದ ಇಡಾ ವೈತೊಸ್ಕಾಯಾ ಆಕೆಯ ತಂಗಿಯೊಂದಿಗೆ ಮಾರ್‌ಬರ್ಗ್‌ಗೆ ಬಂದಿದ್ದಳು. ಬೋರಿಸ್ ತನ್ನ ಪ್ರೀತಿ, ಮದುವೆಯ ನಿರ್ಧಾರ ತಿಳಿಸಲು ಸರಿಯಾದ ಸಮಯವಿದೆಂದು ಭಾವಿಸಿದ. ಇವನು ಆಕೆಯನ್ನು ಪ್ರೀತಿಸುವುದು ಅವಳಿಗೂ ಗೊತ್ತು. ಆದರೆ ಇವನ ಆತುರ, ಕೇಳೇಬಿಡುವೆ ಎನ್ನುವ ಭಾವನೆ ಅವಳಿಗೆ ಆಶ್ಚರ್ಯ ತರಿಸಿತು. 'ಆಕೆ ಗೋಡೆಯತ್ತ ಹೋಗುತ್ತಲೇ ಇದ್ದಳು. ನಂತರ ಇವೆಲ್ಲವನ್ನೂ ನಿಲ್ಲಿಸಲು ಇರುವುದು ಒಂದೇ ದಾರಿ ಎಂದು ಕಂಡುಕೊಂಡು, ತಿರುಗಿ ನನ್ನನ್ನು ತಿರಸ್ಕರಿಸಿದಳು' ಎಂದು ಬೋರಿಸ್ ಬರೆದುಕೊಂಡಿದ್ದಾನೆ. ಪಾಸ್ತರ್‌ನಾಕ್ ಇದರಿಂದ ತೀವ್ರವಾಗಿ ನೊಂದುಕೊಂಡ-

ಈ ಎಲ್ಲ ವಿವರಗಳನ್ನೂ ತನ್ನ 'ಮಾರ್‌ಬರ್ಗ್' ಎನ್ನುವ ಕವಿತೆಯಲ್ಲಿ ಬರೆದಿದ್ದಾನೆ. ನಂತರ ಪ್ರೊಫೆಸರ್ ಕೊಹೆನ್‌ರ ಮನೆಯತ್ತಲೂ ಹೋಗಲಿಲ್ಲ. ತತ್ವಶಾಸ್ತ್ರದಲ್ಲಿ ಅಧ್ಯಯನ ಮಾಡಬೇಕೆಂಬ ವಿಚಾರವನ್ನೇ ಬಿಟ್ಟ. ಒಂದರ್ಥದಲ್ಲಿ ಕೊಹೆನ್‌ರನ್ನು ಮಹಾವ್ಯಕ್ತಿಯೆಂದು ಅಂದುಕೊಂಡಿದ್ದರೂ ಮಾರ್‌ಬರ್ಗ್‌ನಲ್ಲೇ ಡಾಕ್ಟರೇಟ್ ಮಾಡೆಂದು ತಾಕೀತು ಮಾಡಿದ್ದು, ಕೊನೆಯ ನಿರ್ಧಾರವೆಂಬಂತೆ ಅವರು ಆಡುತ್ತಿದ್ದ ಮಾತು ಅವನಿಗೆ ಹಿಡಿಸಲಿಲ್ಲ. ಹಾಗೆಂದೇ 'ಡಾಕ್ಟರ್ ಝಿವಾಗೋ' ಕಾದಂಬರಿಯ ಲಾರಾಳಿಂದ - 'ಕೇವಲ ತತ್ವಶಾಸ್ತ್ರಕ್ಕೆ ಮೀಸಲಾದ ಕೃತಿಗಳು ನನಗೆ ಇಷ್ಟವಾಗೊಲ್ಲ, ನನ್ನರ್ಥದಲ್ಲಿ ತತ್ವಶಾಸ್ತ್ರ ಕಲೆಯ-ಬದುಕಿನ ದಾರಿಯಲ್ಲಿ ಬಂದು ಹೋಗುವ ಒಂದು ಚಿಕ್ಕ ರೇಖೆಯಂತಷ್ಟೇ. ಅದನ್ನೇ ಓದ್ತಾ ಕೂಡೋದು ಕುದುರೆ ಲದ್ದಿ ತಿಂದಷ್ಟೇ ವ್ಯರ್ಥ'- ಎಂದು ಹೇಳಿಸಿದ !

ತತ್ವಜ್ಞಾನಿಯಾಗುವ, ಇಡಾಳ ಗಂಡನಾಗುವ ಯೋಚನೆ ಬಿಟ್ಟವನೇ ಆಗಸ್ಟ್ ೧೯೧೨ರಲ್ಲಿ, ಮಾರ್‌ಬರ್ಗ್ ತೊರೆದು ಇಟಲಿಯ ಮಿಲಾನ್, ವೆನಿಸ್, ಫ್ಲೊರೆನ್ಸ್ ತಿರುಗಾಟಕ್ಕೆ ಹೊರಟು ಕೊನೆಗೆ ಪೀಸಾದಲ್ಲಿದ್ದ ತಂದೆ-ತಾಯಿಯನ್ನು ಕೂಡಿಕೊಂಡ. ಗದ್ಯ-ಪದ್ಯ ಬರೆಯುವುದನ್ನು ರೂಢಿಸಿಕೊಳ್ಳತೊಡಗಿದ; ಕಂಡ ನದಿ, ಬೆಟ್ಟ, ಸಮುದ್ರ, ಹಳೆಯ ಕೋಟೆ ಕಾವ್ಯಕ್ಕಿಳಿಸಿದ.

●
●

೨

ಸಾಹಿತ್ಯದ ಅರಿವು ಸ್ಪಷ್ಟವಾಗಿ ಮೂಡಿ, ತನ್ನ ಧ್ವನಿಯನ್ನು ಹುಡುಕಿ ಹೊರಟ ಬೋರಿಸ್‌ನ ಎದುರು ಸಂಕೀರ್ಣವಾದ ದಾರಿಗಳು ತೆರೆದು ನಿಂತಿದ್ದವು. ಆ ಕಾಲಕ್ಕೆ ಕಾವ್ಯ ಕಟ್ಟುವುದಕ್ಕಿಂತ ಕವಿ ಎಂದು ಹೇಳಿಕೊಳ್ಳುವ ಆಡಂಬರದಲ್ಲಿ - ತೋರಿಕೆಯಲ್ಲಿ ರಷ್ಯನ್ ಸಾಹಿತ್ಯವಿತ್ತು. ಸಾಹಿತ್ಯ-ಸಾಂಸ್ಕೃತಿಕ ವೇದಿಕೆಯಲ್ಲಿ ಕಪಟತನದ ಜಗಳ, ಇವೆಲ್ಲಕ್ಕಿಂತ ಮಿಗಿಲಾದುದು 'ಸಿಂಬಲಿಸಂ'ನ ಬಿಡಿಸಿಕೊಳ್ಳಲಾಗದ ಕದಂಬ ಬಾಹುಗಳು. 'ಮ್ಯೂಸೆಜೆಟೆಸ್ ' 'ಲಿರಿಕಾ' 'ಸೆಂಟ್ರಿಫ್ಯೂಗಾ' ಗುಂಪುಗಳು ಬೇರೆ. 'ಸಿಂಬಲಿಸಂ' ನಿಂದ ಯಾವ ಸಾಹಿತಿಯೂ ತಪ್ಪಿಸಿಕೊಳ್ಳಲಾರದಷ್ಟು ಅದರ ಪ್ರಭಾವವಿತ್ತು. ಬೋರಿಸ್ ೧೯೧೩ರಲ್ಲಿ

'ಸಿಂಬಲಿಸಂ - ಚಿರಂತನತೆ 'ಎಂಬ ಪ್ರಬಂಧ ಬರೆದು ಓದಿದವನೇ, ಅವನೂ 'ಸಿಂಬಲಿಸಂ'ನ ಕೂಸೇ.

ಚಿನ್ನದ ಯುಗದಿಂದ ಬೆಳ್ಳಿಯ ಯುಗ ದಾಟಿ, ಗದ್ಯದ ಸಾಮ್ರಾಜ್ಯ ಸುತ್ತಿ ರಷಿಯನ್ ಸಾಹಿತ್ಯ ಮತ್ತೆ ಕಾವ್ಯದತ್ತ ಬಂದಿತ್ತು. ಪುಷ್ಕಿನ್‌ನ ಭಾವಗೀತಾತ್ಮತೆ, ಎವ್ಗೆನಿ ಓನ್ಗಿನ್‌ನ ವಾಸ್ತವ ಗದ್ಯ, ಎವ್ಗೆನಿ ಬೊರಾತ್ಸಿವೆಸ್ಕಿಯ ಅನುಭಾವಿ ಕಾವ್ಯ, ಮಿಖಾಯಿಲ್ ಲೆರ್ಮಂತೆವ್‌ನ ಅಮೂರ್ತ ಕಾವ್ಯ .... ತಮ್ಮ ಕಾಲವನ್ನು ಮುಗಿಸಿದ ಮೇಲೆ ಎಲ್ಲೆಲ್ಲೂ ಗದ್ಯದ ಮಾತೇ. ನಿಕೋಲಾಯ್ ಗೋಗೊಲ್ ಚಿತ್ರಿಸಿದ ಮನುಷ್ಯನ ಅವನತಿ, ತುರ್ಗನೆಫ್‌ನ ಕೋಮಲ, ಸೂಕ್ಷ್ಮ ವಿವರಗಳ ಗದ್ಯ, ಎಲ್ಲ ತಂತ್ರವನ್ನೂ ಚಿಕಣಾ ಚೂರಾಗಿಸಿ, ಪಾಪಿಗಳ, ನತದೃಷ್ಟರ ಬದುಕಿನ ವ್ಯಂಗ್ಯವನ್ನು ಚಿತ್ರಿಸುತ್ತಲೇ ಆಳದಲ್ಲಿ ಧಾರ್ಮಿಕ ನೆಲೆಯಲ್ಲಿ ಸಮಸ್ಯೆಗಳಿಗೆ ಸಮಾಧಾನ ಹುಡುಕಿದ ದಸ್ತಯೇವ್‌ಸ್ಕಿ, ಟಾಲ್‌ಸ್ಟಾಯ್‌ರ ಸರಳವಾದ - ನೈತಿಕವಾಗಿ ಶುದ್ಧ ಜೀವನ ತತ್ವ ಪ್ರತಿಪಾದಿಸುವ ನಿರಾಡಂಬರ ಗದ್ಯ, ಮನುಷ್ಯ ರೋಗಗ್ರಸ್ತ ಜೀವಿಯಲ್ಲದೆ ಬೇರೇನೂ ಅಲ್ಲವೆಂದು ಬರಹದುದ್ದಕ್ಕೂ ನಿರೂಪಿಸಿದ ಚೆಕಾಫ್ ಆ ಕಾಲದ ಗದ್ಯ ಬರಹವನ್ನು ತುಂಬಿ ತುಳುಕುವಂತೆ ಮಾಡಿ ರಷ್ಯನ್ ಗದ್ಯವನ್ನು ಜಗತ್ತಿನ ಶ್ರೇಷ್ಠ ಗದ್ಯವೆಂದು ಅಭಿಪ್ರಾಯಕ್ಕೆ ತಂದು ನಿಲ್ಲಿಸಿದ್ದರು.

ಗದ್ಯದ ಮೇಲುಗೈಯಿಂದಾಗಿ ಮೂಲೆ ಸೇರಿದ್ದ ಪದ್ಯ-ಕಾವ್ಯ ಮತ್ತೆ ಹತ್ತೊಂಬತ್ತನೆಯ ಶತಮಾನದ ಕೊನೆಗೆ ತನ್ನ ಉತ್ತುಂಗಕ್ಕೆ ತಲುಪಿ, ಮುಂದಿನ ಕಾಲಘಾನವನ್ನು ಕವಿಗಳಿಗೆ - ಕಾವ್ಯಕ್ಕೆ ಬಿಟ್ಟುಕೊಟ್ಟಿತು.

ಪುಷ್ಕಿನ್ ಕಾಲದಿಂದಲೂ ರಷಿಯನ್ ಸಾಹಿತ್ಯಕ್ಕೂ ಫ್ರೆಂಚ್ ಬೌದ್ಧಿಕ ಚಳವಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ಪುಷ್ಕಿನ್‌ನ ಆರಂಭಕಾಲದ ಕಾವ್ಯ ಕೂಡ ಫ್ರೆಂಚ್‌ನ ಹದಿನೆಂಟನೆ ಶತಮಾನದ ಭವ್ಯ ಶೈಲಿಯಾದ 'ರೋಕೊಕೊ' [ರೊ-ಖೊಹ್‌ಖೊ]ದಿಂದ ಪ್ರಭಾವಗೊಂಡದ್ದೇ. 'ರಷಿಯನ್ ಸಿಂಬಲಿಸಂ'ನ ಬೇರುಗಳು ಸಹಜವಾಗಿಯೇ ಫ್ರೆಂಚ್ ಸಿಂಬಲಿಸಂನಿಂದ ಪ್ರೇರೇಪಿತಗೊಂಡಿದ್ದವು.

೧೮೮೬ರಲ್ಲಿ ಫ್ರಾನ್ಸ್‌ನ ಜೀನ್ ಮೋರೆ 'ಸಂಕೇತವಾದದ ಪ್ರಣಾಳಿಕೆ' ಬರೆಯುವ ಮುನ್ನವೇ ಆ ಸಿದ್ಧಾಂತದ ಸಮರ್ಥ ಅಭಿವ್ಯಕ್ತಿಯೆಂಬಂತೆ

ಬೋದಿಲೇರ್‌ನ 'ಫ್ಲೋರ್ ದ ಮಾಲ್', ೧೮೫೭ರಲ್ಲಿ ಪ್ರಕಟವಾಗಿತ್ತು. ಇರಲಿ, ಮೋರೆಯ ಸಿಂಬಲಿಸಂ ಪ್ರಣಾಳಿಕೆ ಪ್ರಕಾರ : 'ಸಿಂಬಲಿಸ್ಟ್ ಕವಿ ಪೂರ್ವನಿಶ್ಚಿತ ಚಿಂತನೆಯನ್ನು ಒಂದು ಗಟ್ಟಿ ನೆಲೆಯಲ್ಲಿ ಗ್ರಹಿಸಿ, ಅನುಭವವನ್ನು ಸಾಂದ್ರವಾಗಿ ವೈಯಕ್ತಿಕ ಸಂಕೇತಗಳ ಮೂಲಕ ಅಭಿವ್ಯಕ್ತಿಸುತ್ತಾನೆ.' ಈ ವೈಯಕ್ತಿಕ ಸಂಕೇತಗಳು ಈ ಚಳವಳಿಯ ಮುಖ್ಯ ಲಕ್ಷಣ ; ಆಭರಣ. ಇದರಿಂದಲೇ ಕವಿ ತನ್ನೆಲ್ಲ ವೈಯಕ್ತಿಕ, ಸಾಮಾಜಿಕ, ರಾಜಕೀಯ, ಇತಿಹಾಸದ ಅನುಭವವನ್ನು ಹೇಳಬೇಕು. ಕವಿತೆ ತನ್ನೊಳಗೇ ಎಲ್ಲ ಅರ್ಥವನ್ನು ಹೊಮ್ಮಿಸಬೇಕಲ್ಲದೆ, ಕಾವ್ಯದ ಹೊರಗೆ ಅದಕ್ಕೆ ಯಾವ ವಿಶೇಷ ಅರ್ಥವನ್ನೂ ಆರೋಪಿಸಬಾರದು. ಅತ್ಯುತ್ತಮ ಸಂಕೇತವಾದಿ ಕವಿತೆ ಸಾಂದ್ರವಾಗಿ ಎಲ್ಲವನ್ನೂ ಸೂಚಿಸುವಂತಿದ್ದು ರೂಪಕ,ಲಯ, ಮಾಂತ್ರಿಕ ಶಕ್ತಿಯನ್ನು ಪಡೆದಿರಬೇಕು. ಫ್ರೆಂಚ್‌ನ 'ಸಿಂಬಲಿಸಂ' ಹುಟ್ಟಿದ್ದು 'ವಾಸ್ತವ ಮಾರ್ಗದ ಸೆಲೂನ್ ಕಾವ್ಯ' ಮತ್ತು ಲಯಶುದ್ಧತೆಯತ್ತ ಅತಿ ಒಲವು ತೋರಿದ ಪರ್ನಾಸ್ಸಿಯನ್ಸ್‌ಗೆ ಎದುರಾಗಿ. ಸಿಂಬಲಿಸಂ ಕಾವ್ಯಮಾರ್ಗದ ಅಲ್ಲಿನ ಪ್ರಮುಖರು: ರೇನೆ ರಿಲ್ಕ್, ವೆಲೆರ್, ಲಾಫರ್ಗ್, ಬೋದಿಲೇರ್.

'ಸಿಂಬಲಿಸಂ'ನಿಂದ ಪ್ರಭಾವಗೊಂಡು ಕಾವ್ಯ ರಚಿಸಿದ ಮೊದಲ ರಷಿಯನ್ ಕವಿ : ವ್ಲದಿಮೀರ್ ಸೋಲ್ಯೆವ್ (೧೮೫೩-೧೯೦೦). ಅವನಲ್ಲಿ, ಬಹುತೇಕ, ಆಧ್ಯಾತ್ಮಿಕ ಪ್ರೇಮಗೀತೆಯ ಶೈಲಿ, ಅನುಭಾವಿ ಕಾವ್ಯದತ್ತ ತುಡಿತ ಕಾಣಬಹುದು.

'ರಷಿಯನ್ ಸಿಂಬಲಿಸಂ' ನಿಜವಾಗಿ ಆರಂಭವಾದದ್ದು ಆ ಶತಮಾನದ ಕೊನೆಯಲ್ಲಿದ್ದ ವಾಸ್ತವದ ಅನೇಕ ವೈರುಧ್ಯಗಳನ್ನು ಕಾವ್ಯದಲ್ಲಿ ಪ್ರತಿಬಿಂಬಿಸುವುದ ರೊಂದಿಗೆ. ಅಂದರೆ ವಾಸ್ತವದ ಆಚೆ ಇರುವ ವಾಸ್ತವ ಸಾಧ್ಯತೆಗಳನ್ನು ನೋಡುತ್ತಲೇ ಫ್ರೆಂಚ್‌ರಂತೆ ಸಂಕೇತವಾದ ಕೇವಲ ಸೌಂದರ್ಯ ಮೀಮಾಂಸೆ ಎಂದು ತಿಳಿಯದೆ, ಅದೊಂದು ವೈಯಕ್ತಿಕ ಸಿದ್ಧಾಂತವೆಂದು ತಿಳಿದು ರಷಿಯನ್ನರು ಕಾವ್ಯ ರಚಿಸಿದರು. ಸ್ಫೂರ್ತಿ ಮತ್ತು ತಂತ್ರಕ್ಕಾಗಿ ರಷ್ಯನ್ ಹಳೆಯ ಕವಿಗಳಾದ ಬೋರಟಿನ್‌ಸ್ಕಿ, ತ್ಯುಚೇವ್‌ರಂಥವರಿಗೆ ಮೊರೆ ಹೋದರೆ ಇನ್ನರ್ಧ ಫ್ರೆಂಚ್‌ನ ಬೋದಿಲೇರ್ ನಂಥವನಿಂದ ಸ್ಫೂರ್ತಿ ಪಡೆದರು.

ಹಳೆ ತಲೆಮಾರಿನ ವೆಲೆರ್‌ಬ್ರೂಸೆವ್‌ರಂಥವರು ಫ್ರೆಂಚ್ ಸಿಂಬಲಿಸಂಗೆ ಜೋತುಬಿದ್ದರೆ ಯುವಜನಾಂಗದ ವೆಚೆಸ್ಲೆವ್ ಇವಾನೋವ್ ಹಾಗೂ

ಅಲೆಗ್ಸಾಂಡರ್ ಬ್ಲೋಕ್‌ನಂಥವರು ಒಂದು ಸ್ವಂತ ಸಿದ್ಧಾಂತ ರೂಪಿಸಿಕೊಂಡು ಹೆಚ್ಚು ಹೆಚ್ಚು ಆಧ್ಯಾತ್ಮಿಕ ನಿಷ್ಠರಾದರು. ಆದರೆ ಎಲ್ಲ ಸಂಕೇತಮಾರ್ಗಿಗಳಿಗೂ 'ಕಲೆ' ಒಂದು 'ದಿವ್ಯ'ವಾದ ; 'ಪವಿತ್ರ'ವಾದ ಸ್ವಯಂಸಿದ್ಧ ಮಾರ್ಗವಾಗಿತ್ತು. ಕವಿಗಳು ಆ ಮಾರ್ಗದ ವಕ್ತಾರರು, ಆಚಾರ್ಯರು.

'ನನ್ನ ಕಾವ್ಯ ಅರ್ಥವಾಗಬೇಕಾದರೆ ನನ್ನ ಆಧ್ಯಾತ್ಮಿಕ ಅನುಭವದ ಅರಿವು ಇದ್ದರಷ್ಟೇ ಸಾಲದು' - ಎಂದು ಘೋಷಿಸಿದ ಅಲೆಕ್ಸಾಂಡರ್ ಬ್ಲೋಕ್ [೧೮೮೦-೧೯೨೧] ನನ್ನು ರಷಿಯನ್ ಸಿಂಬಲಿಸಂ ಹುಟ್ಟುಹಾಕಿದ ಸಮರ್ಥ ಕವಿಯೆಂದು ಗುರ್ತಿಸಲಾಗುತ್ತದೆ. ತನ್ನ ಆಧ್ಯಾತ್ಮಿಕ ವಾಸ್ತವತೆಯನ್ನು ಲಯಬದ್ಧ ಪದಗಳಿಂದ ಹೇಳುವ, ಭಾವಗೀತಾತ್ಮತೆಯನ್ನು ತನ್ನ ಕಾವ್ಯದ ಪ್ರಮುಖ ಲಕ್ಷಣ ಮಾಡಿಕೊಂಡ ಬ್ಲೋಕ್ ಆರಂಭಕಾಲದಲ್ಲಿ ಬೋರಿಸ್‌ನ ಮೇಲೆ ಅಗಾಧ ಪರಿಣಾಮ ಬೀರಿದ.

ಆಮೇಲೆ ಬಂದದ್ದು ಮಿಖಾಯಿಲ್ ಖುಜ್ಮಿನ್ ಬೀಜ ನೆಟ್ಟ-'ಆಕ್ಮಿಯಿಸಂ' ಈ ಚಳವಳಿಯ ಪ್ರಮುಖ ಕವಿ ಓಸಿಪ್ ಮಾಂದಲ್‌ಷ್ತಮ್. ಆತನ ಕಾವ್ಯ ಆಡು ನುಡಿಗಳ ಕೋಶವನ್ನೇ ಕಟ್ಟುತ್ತದೆ ಎಂದು ವಿಮರ್ಶಕರು ಗುರ್ತಿಸುತ್ತಾರೆ. ಇದೇ ಶಾಲೆಯ ಇನ್ನೊಬ್ಬ ಪ್ರಮುಖ ಕವಿ ಆನಾ ಅಖ್ಮತೋವಾ. ಬೋರಿಸ್‌ನ ಸಮಕಾಲೀನೆ. ಸ್ತಾಲಿನ್‌ನ ಅಧಿಕಾರಶಾಹಿ ದಬ್ಬಾಳಿಕೆಯಲ್ಲಿ ತನ್ನದೆಲ್ಲವನ್ನೂ ಕಳೆದುಕೊಂಡವಳು. ಅವಳ ಚಿಕ್ಕ ಚಿಕ್ಕ ಕವಿತೆಗಳು ಒಳ ಬದುಕನ್ನು ಬಿಂಬಿಸಿ, ಆತ್ಮೀಯವಾಗುತ್ತವೆ. ಆರಂಭಕಾಲದಲ್ಲಿ ಭಾವೋನ್ಮಾದದಲ್ಲಿ ವೈಯಕ್ತಿಕ ಬದುಕು, ಪ್ರೀತಿ-ಪ್ರೇಮದ ಸಂಕೀರ್ಣ ಅನುಭವವನ್ನು ಕಾವ್ಯವಾಗಿಸಿದರೂ ನಂತರದ ದಿನಗಳಲ್ಲಿ ಪ್ರಖರ ರಾಜಕೀಯ ನಿಲುವಿನ ಕವಿತೆಗಳನ್ನು ಬರೆದಳು.

ಬೋರಿಸ್ ಕಾವ್ಯ ಬರೆಯಲು ತೊಡಗಿದಾಗ ಪುಷ್ಕಿನ್‌ನ ಚಿನ್ನದ ಯುಗ, ಟಾಲ್‌ಸ್ಟಾಯ್‌ರ ಭವ್ಯ ಗದ್ಯದ ಯುಗವನ್ನು ಹಾದು ಬಂದ 'ಸಿಂಬಲಿಸಂ', 'ಆಕ್ಮಿಯಿಸಂ' ಹಿನ್ನೆಲೆಯಲ್ಲಿದ್ದರೆ ; ಮುಂದೆ 'ಭವಿಷ್ಯವಾದಿ' ಕಾವ್ಯ ಚಳವಳಿ 'ಫ್ಯೂಚರಿಸಂ ' ಕಾದು ನಿಂತಿತ್ತು.

ಈ ಚಳವಳಿ ಕೇವಲ ರಷಿಯಾಕ್ಕಷ್ಟೇ ಸೀಮಿತವಾಗಿರಲಿಲ್ಲ. ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೇನ್‌ನಲ್ಲೂ ಇದರ ದಾರಿಗಳು ಮೂಡಿದ್ದವು. ಕಲೆ ಮತ್ತು

ಬದುಕಿನೊಂದಿಗೆ ಖಚಿತವಾದ ಬದ್ಧತೆ, ಕಳೆದ ಕಾಲವನ್ನು ನಾಶಮಾಡಿ ಹೊಸದನ್ನು ಕಟ್ಟುವ ಉತ್ಸಾಹ ಈ ಚಳವಳಿಯ ಹಿಂದಿತ್ತು. ಇಟಲಿಯ ಫಿಲಿಪೊ ಮರಿನೆ ೧೯೦೯ರಲ್ಲಿ ಭವಿಷ್ಯವಾದಿ ಕಾವ್ಯದ ಪ್ರಣಾಳಿಕೆ ಬರೆದ. ರಷಿಯಾದ ಮಾಯಾಕೋವಸ್ಕಿ, ಫ್ರಾನ್ಸ್‌ನ ಗುಲಿಮ್ ಅಪೋಲಿನ್ ಕ್ರಾಂತಿಯ ರಂಗನ್ನು ಕಾವ್ಯಕ್ಕೆ ತುಂಬಲು ನೋಡಿದರು. ರೂಢಿಗತ ನಂಬಿಕೆಯನ್ನು ಬುಡಮೇಲು ಮಾಡಿ, ಕಾವ್ಯ ಭಾಷೆಯನ್ನೇ ಬದಲಿಸಲು ನೋಡಿದ ಮಾಯಕೋವಸ್ಕಿ ಈ ಚಳವಳಿಯ ಅತ್ಯಂತ ಪ್ರಮುಖ ಕವಿ [ನೋಡಿ : ಮಾಯಕೋವಸ್ಕಿಯ ನೆನಪುಗಳು] ಸಿಂಬಲಿಸಂ ಕವಿಗಳ ಕಲ್ಪನೆಯಾದ *ಕಲೆ ದಿವ್ಯವಾದ ಮಾರ್ಗ* ಎಂಬ ನಿಲುವನ್ನು ಕವಿಗಳು ಅದರ ಪುರೋಹಿತರು ಎಂಬ ಅಭಿಪ್ರಾಯವನ್ನು ತುಂಡರಿಸಿ ಕವಿತೆಯನ್ನು ಭಾವುಕತೆಯಿಂದ ಬೇರ್ಪಡಿಸಿ, ಸಾಮಾಜಿಕ ಹೊಣೆಯನ್ನು ಕಾವ್ಯಕ್ಕೆ ಹೊರಿಸಿದರು. ಈ ಮಾರ್ಗದ ಪ್ರಣಾಳಿಕೆಗೆ (೧೯೧೨) ಅಂತಿಮರೂಪ ಕೊಟ್ಟು ಸಹಿ ಮಾಡಿದವರಲ್ಲಿ ಮಾಯಕೊವಸ್ಕಿಯೂ ಒಬ್ಬ.

ಬೋರಿಸ್ ಪಾಸ್ತರ್‌ನಾಕ್ ಕೂಡಾ ತನ್ನ ಕಾಲಮಾನದ ಸಾಹಿತ್ಯ ಚಳವಳಿಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ೧೯೧೩ರ ಆರಂಭಕ್ಕೆ 'ಮ್ಯೂಸಜೆಟೆಸ್' ನಿಂದ ಹೊರಬಿದ್ದು ಸಿಂಬಲಿಸಂ ಪ್ರಭಾವ ಜೋರಾಗಿದ್ದ 'ಲಿರಿಕಾ' ಗುಂಪನ್ನು ಸೇರಿಕೊಂಡ. ಇವನ ಸಂಗಡ ಉತ್ಸಾಹಿ ಯುವಕವಿಗಳಾದ ಯೂಲಿಯೆನ್ ಅನಿಸಿಮೋವ್, ನಿಕೋಲಾಯ್ ಅಸಿಯೇವ್, ಸೆರ್ಗೆಯ್ ಬೊಬ್ರೋವ್ ಕೂಡಾ ಅಲ್ಲಿದ್ದರು. ೧೯೧೩ರ ಸುಮಾರಿಗೆ ಈ ಗುಂಪು ತನ್ನ ಪ್ರಕಾಶನದಿಂದ ಕಾವ್ಯ ಸಂಗ್ರಹವೊಂದನ್ನು ಪ್ರಕಟಿಸಿತು. ಇದರಲ್ಲಿ ಬೋರಿಸ್‌ನ ಐದು ಗೀತೆಗಳಿದ್ದವು. ಇವು ಅವನ ಮೊದಲ ಪ್ರಕಟಿತ ಗೀತೆಗಳು. ಇಲ್ಲಿಂದ ಆತನ ನಿಜವಾದ ಸಾಹಿತ್ತಿಕ ಬದುಕು ಆರಂಭವಾಗಲಿತ್ತು.

ಪಾಸ್ತರ್‌ನಾಕ್ ತನ್ನ ಮೊದಲ 'ಲಿರಿಕಾ'ಗಳನ್ನು ಬರೆದಾಗ ಮಾಸ್ಕೋ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಕೊನೆಯ ವರ್ಷದ ಕೋರ್ಸ್ ಕಲಿಯುತ್ತಿದ್ದ. ೧೯೧೩ ರಲ್ಲಿ, ಮಾಸ್ಕೋದಿಂದ ದಕ್ಷಿಣಕ್ಕಿರುವ ಮೊಲೋಡಿಯ ಹಳ್ಳಿಮನೆಯಲ್ಲಿ ಪಾಸ್ತರ್‌ನಾಕ್ ಕುಟುಂಬದ ಬೇಸಿಗೆ ರಜೆ ಕಳೆಯಲು ಹೋದರು. ಅಲ್ಲಿ, ೧೯೧೪ರಲ್ಲಿ, 'ಲಿರಿಕಾ' ಪ್ರಕಾಶನದಡಿಯಲ್ಲಿ ಪ್ರಕಾಶಿಸಿದ ಸಂಕಲನ 'ಟ್ವಿನ್ ಇನ್ ಕ್ಲೌಡ್ಸ್' ಸಂಗ್ರಹದ ಬಹುತೇಕ ಕವಿತೆಗಳನ್ನು ಬರೆದ - 'ಕಾವ್ಯ ಬರೆಯುವುದು,

ಹೊಡೆದು ಹಾಕುವುದು, ಮತ್ತೆ ತಿದ್ದುವುದು ಕಣ್ಣೀರು ತುಂಬಿ ಬರುವಷ್ಟು ಖುಷಿ ತರುವ ಕೆಲಸವಾಗಿತ್ತು' - ಪಾಸ್ತರ್‌ನಾಕ್‌ನಿಗೆ. ಮೊದಲ ಸಂಕಲನದ ಹೆಸರೇ 'ಸಂಕೇತವಾದ'ದ ಪ್ರಭಾವವನ್ನು ಒತ್ತಿ ಹೇಳುವಂತಿತ್ತು, ಕವಿತೆಗಳೂ ಅಷ್ಟೇ. ಆದರೆ ಮುಂದೆ 'ನಿಸರ್ಗ ಕವಿ'ಯಾಗಲಿದ್ದ ಪಾಸ್ತರ್‌ನಾಕ್‌ನ ಮನಸ್ಸಿನೊಳಗಿನ ಭಾವನೆಗೆ 'ಸಿಂಬಲಿಸಂ' ಹೇಳಿ ಮಾಡಿದ್ದಾಗಿರಲಿಲ್ಲ. ಇಂಥ ಹಸಿ ಹಸಿ ಕವಿತೆ ಪ್ರಕಟಿಸಬಾರದಿತ್ತು ಎಂದು ಮುಂದೆಷ್ಟೋ ಸಲ ಅವ ಹಲುಬಿದ.

●

●

ಅಂಥ ಕಾಲ ೧೯೧೪ರ ಆರಂಭದಲ್ಲಿ ಬಂದಿತ್ತು. ಪಾಸ್ತರ್‌ನಾಕ್ ಹಾಗೂ ಇನ್ನಿಬ್ಬರು ಕವಿಗೆಳೆಯರು- ಯೆಸೆಯೆವ್, ಬೊಬ್ರೊವ್ 'ಲಿರಿಕಾ 'ತ್ಯಜಿಸಲು ನಿರ್ಧರಿಸಿದರು. 'ಸಿಂಬಲಿಸಂ' ಸಲಹೆ -ಹೊಸ ಅಂಶಗಳನ್ನು ಬಯಸಿದ್ದ ಯುವಕವಿಗಳನ್ನು ನಡೆಸಲಾರದಷ್ಟು ಬೌದ್ಧಿಕ ದಾರಿದ್ರ್ಯ ಅನುಭವಿಸುತ್ತಿತ್ತು ; ಮೇಲಾಗಿ ಈ ಚಳವಳಿ ತನ್ನೊಳಗನ್ನು ತಟ್ಟಿ ಬೆಳೆಯಲು ಬಿಡುತ್ತಿಲ್ಲವೆಂಬ ಭಾವನೆ ಬೋರಿಸ್‌ನಲ್ಲಿ ಬಲವಾಗುತ್ತ ಹೋಗಿತ್ತು. ಉಳಿದದಾರಿ-ಅಲ್ಲಿಂದ ಹೋಗು[illegible]ವುದು. 'ಲಿರಿಕಾ' ದಿಂದ ಹೊರಬಂದ ಮೂವರು ಮುಂದೆ ಫ್ಯೂಚರಿ[illegible]ಸ ಭಾಗವಾಗಲಿದ್ದ ಸೆಂಟ್ರಿಫ್ಯೂಗಾ ಸೇರಿದರು. ಇಲ್ಲಿಯೇ ತನ್ನ ಕಾ[illegible] ಸಾಹಿತ್ಯ-ರಾಜಕೀಯದಲ್ಲಿ ದಂತಕಥೆಯಾಗಿದ್ದ ಹದಿನಾಲ್ಕನೆ ವ[illegible] ಬೋಲ್ಷೆವಿಕ್ ಕ್ರಾಂತಿಕಾರಿ ಪಕ್ಷ ಸೇರಿದ ಶಾಂತ ವ್ಯಕ್ತಿತ್ವದ, ಬೋರಿಸ್[illegible]ತ ಮೂರು ವರ್ಷ ಚಿಕ್ಕವನಾದರೂ ಅವನನ್ನು ಮಂತ್ರಮುಗ್ಧನನ್ನಾಗಿಸಿದ್ದ ಮಾಯಕೋವಸ್ಕಿಯನ್ನು ಭೇಟಿಯಾದದ್ದು [ನೋಡಿ: 'ಮಾಯಕೋವಸ್ಕಿ ನೆನಪುಗಳು']

ಮಾಯಕೋವಸ್ಕಿಯೊಂದಿಗಿನ ಭಾವನಾತ್ಮಕ ಸಂಬಂಧ ಸಹಜವಾಗಿಯೇ ಬೋರಿಸ್ ಪಾಸ್ತರ್‌ನಾಕ್‌ನ ಕಾವ್ಯದ ಮೇಲೂ ಆಯಿತು. ಸಿಂಬಲಿಸ್ಟ್ ಪಂಥದಿಂದ ಹೊರಬಂದ ಈತ ಥೇಟು 'ಭವಿಷ್ಯವಾದಿ'ಯಂತೆ ಪದ್ಯ ಬರೆದ ! ಆದರೆ ಕಾಲಕಳೆದಂತೆ ಮಾಯಕೊವಸ್ಕಿಯ ಪ್ರಭಾವಳಿಯಿಂದ ಬಿಡಿಸಿಕೊಳ್ಳಲು ಮನಸ್ಸಿನಲ್ಲೇ ಸಿದ್ಧತೆ ನಡೆಸಿದ. ೧೯೧೬ರಲ್ಲಿ 'ಕಪ್ಪು ಗಾಜಿನ ಪಾತ್ರೆ' [illegible] ಲೇಖನದಲ್ಲಿ ಇದರ ಸ್ಪಷ್ಟ ಕುರುಹಿದೆ. ಮಾಯಕೊವಸ್ಕಿ ಬಗ್ಗೆ ಆತ ಬರೆದ [illegible]

ಹೋಗುವ ಅವನ ರೂಪಕಗಳು, ನೇರತನ, ಆತ ಯಾರನ್ನೂ ; ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದಾನೊ ಅದನ್ನು, ಅವರನ್ನು ಗೊಂದಲಕ್ಕೆ ತಳ್ಳುತ್ತದೆ' . ಅಂದರೆ ರಾಜಕೀಯ ಮತ್ತು ಕಲೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ 'ಕಾವ್ಯ ಮತ್ತು ಇತಿಹಾಸ' ' ಎರಡೂ ಒಂದಕ್ಕೊಂದು ಸ್ಪರ್ಧಿಗಳಲ್ಲ. ಕಲೆ ಬದುಕನ್ನು ಪ್ರಭಾವಗೊಳಿಸಬೇಕಿಲ್ಲ, ಏಕೆಂದರೆ ಕಲಾವಿದನ ಕೆಲಸ ನಾಳಿನ ಇತಿಹಾಸವನ್ನು ಸೃಷ್ಟಿಸುವುದಿಲ್ಲ'. ಆದರೆ ಮಾಯಕೊವಸ್ಕಿ ಇದರ ವಿರುದ್ಧ ದಿಕ್ಕಿನಲ್ಲಿದ್ದ.

ಜಗತ್ತಿನ ಕೇಂದ್ರ ತಾನೇ ಎಂಬಂತೆ ವರ್ತಿಸುತ್ತಿದ್ದ ಮಾಯಕೊವಸ್ಕಿಯ ನಡತೆ ಪಾಸ್ತರ್‌ನಾಕ್‌ಗೆ ಅಷ್ಟಾಗಿ ಹಿಡಿಸುತ್ತಿರಲಿಲ್ಲ. ಕವಿಯೇ ಕಾವ್ಯದ ವಸ್ತು. ಇಸ್ಪೀಟು ಆಟಗಾರನಂತೆ ಇಡೀ ಆಟದ ಜಾಗವನ್ನು ಪೂರ್ತಿ ಆವರಿಸಿರುತ್ತಿದ್ದ. ರಾಜ-ರಾಣಿ, ಜಾಕಿ ಎಲ್ಲ ಅವನೇ. ಸುತ್ತ ತುಂಬಿಕೊಂಡ ಅಹಂ. ಹೀಗಾಗಿ ಆಟವೇ ವಿಫಲ. ಸಂಕೇತವಾದಿಗಳನ್ನು, ಭವಿಷ್ಯವಾದಿಗಳನ್ನು ಇದೀಗ ಮಾಯಕೋವಸ್ಕಿಯನ್ನು ಗೇಲಿ ಮಾಡಿದ ಪಾಸ್ತರ್‌ನಾಕ್‌ಗೆ ಕಲೆಯಲ್ಲಿ ತನ್ನ ದಾರಿ ತನ್ನದೆ ಎಂದು ಗೊತ್ತಾಗತೊಡಗಿತು. ಅಲ್ಲದೆ ೧೯೧೫-೧೬ ಯುದ್ಧದ ಸಮಯ. ಯುದ್ಧದ ಕುರಿತು ಇವನೂ ಕವಿತೆಗಳನ್ನು ಬರೆದನಾದರೂ ಮಾಸ್ಕೋದಿಂದ ದೂರದಲ್ಲಿದ್ದ ಉರಾಲ್ಸ್‌ನಲ್ಲಿದ್ದುದರಿಂದ ಮಾಯಕೋವಸ್ಕಿಯ ಪ್ರಭಾವ ಕಳಚತೊಡಗಿತು. 'ಅವನನ್ನೇ ಅನುಕರಿಸುವುದು, ಬರೆಯುವುದು' ಬಿಡಲು ದಿಟ್ಟ ನಿರ್ಧಾರ ಮಾಡಿದ. ಎರಡು ಯುದ್ಧಗಳು ಕಳೆದವು. ಬೋರಿಸ್ ಉರಾಲ್ಸ್‌ನಲ್ಲೇ ತನ್ನ ಎರಡನೆಯ ಸಂಗ್ರಹ 'ಓವರ್ ಬ್ಯಾರಿಯರ್ಸ್' ಪ್ರಕಟಿಸಿದ. ಈ ಸಂಗ್ರಹದಲ್ಲಿ ಬಾಲ್ಯದ ೧೯೦೫ರ ಕ್ರಾಂತಿ, 'ಮಾರ್ಬರ್ಗ್', ಹಿಮ- ಗಾಳಿ, ಮಣ್ಣಿನ ವಾಸನೆ....ಗಳ ಮೂಲಕ ಮೆಲ್ಲನೆ ಬೋರಿಸ್ ನಿಸರ್ಗದತ್ತ ವಾಲುವುದನ್ನು ನಿಚ್ಚಳವಾಗಿ ಗುರ್ತಿಸಬಹುದಿತ್ತು. ಮೊದಲಿನ ಪುಸ್ತಕಕ್ಕೂ, ಈಗಿನದಕ್ಕೂ ವ್ಯತ್ಯಾಸ ತಟ್ಟನೆ ಕಂಡು ಹಿಡಿದು, ಕವಿ ಪಾಸ್ತರ್‌ನಾಕ್ ಹುಡುಕುತ್ತ ಎಲ್ಲ ಕಡೆ ಅಲೆದು ಕೊನೆಗೆ ತನ್ನ ಧ್ವನಿಯನ್ನು ಕಂಡುಕೊಂಡಿದ್ದು ಎದ್ದು ಕಾಣವ ಹಾಗಿತ್ತು.

ಈ ವರ್ಷಗಳಲ್ಲಿ ಬೋರಿಸ್ ತನ್ನ ಜೀವನಾದಾಯಕ್ಕಾಗಿ ಸಾಹಿತ್ಯ ಬಿಟ್ಟು ಬೇರೆ ಬೇರೆ ಚಿಕ್ಕಚಿಕ್ಕ ಕೆಲಸ ಮಾಡಿದಂತೆ ತೋರುತ್ತದೆ. ಮಾಸ್ಕೋದ

ಕೈಗಾರಿಕೋದ್ಯಮಿಯ ಮಗನಿಗೆ 'ಟ್ಯೂಷನ್' ಹೇಳಿಕೊಡುವುದು; ಉರಾಲ್ಸ್‌ನ ಕಾರ್ಖಾನೆಯೊಂದರಲ್ಲಿ ಕಾರಕೂನನಾಗಿದ್ದದ್ದು ;ವಿದೇಶ ರಾಜತಾಂತ್ರಿಕ ಕಛೇರಿಯಲ್ಲಿ ಗ್ರಂಥ ಪಾಲಕನಾಗಿದ್ದು...... ಹೀಗೆ.

●

●

೨

ಫೆಬ್ರವರಿ ೧೯೧೭ ರಷಿಯಾದ ರಾಜ್ಯಾಧಿಪತ್ಯ ಎರಡುಸಲ ನಡೆದ ಕ್ರಾಂತಿಯಿಂದ ಇದ್ದಕ್ಕಿದಂತೆ ಕೊನೆಗೊಂಡಿತು. ಪೆತ್ರೊಗ್ರಾದ್‌ನಲ್ಲಿ ಗಲಭೆ-ದಂಗೆಗಳಾಗಿ ಎರಡನೇ ನಿಕೋಲಾಸ್‌ನನ್ನು ದಿಢೀರನೆ ಅಪಹರಿಸಲಾಯಿತು. ಫೆಬ್ರವರಿಯ ಕ್ರಾಂತಿ ಸುದ್ದಿ ತಲುಪಿದಾಗ ಬೋರಿಸ್ ಉರಾಲ್ಸ್‌ನ ಜನವಿದೂರ ಹಳ್ಳಿ *ತಿಖೈ ಗೋರಿಯಲ್ಲಿದ್ದ*. ತಕ್ಷಣವೇ ಅಲ್ಲಿ ಗೆಳೆಯನಾಗಿದ್ದ ಬೋರಿಸ್ ರೆಝಬರ್‌ಸ್ಕಿ ವೃತ್ತಿಯಲ್ಲಿ ಎಂಜಿನಿಯರ್ ಜತೆಗೆ ಕ್ರಾಂತಿಕಾರಿ. ಬೋರಿಸ್ ಸ್ವತಃ ಉತ್ಸಾಹಿ ಕ್ರಾಂತಿಕಾರಿಯಲ್ಲದಿದ್ದರೂ ಎಂದೂ ತ್ಸಾರ್ ದಬ್ಬಾಳಿಕೆ ಬೆಂಬಲಿಸಿದವನಲ್ಲ, ಹೀಗಾಗಿಯೇ ೧೯೧೭ರ ಫೆಬ್ರವರಿಯ ಕ್ರಾಂತಿಯ ವಿಜಯವನ್ನು ಭಾವೋದ್ವೇಗಗೊಂಡು ಆಚರಿಸಿದ ಕ್ರಾಂತಿಕಾರಿಗಳ ಖುಷಿಯಲ್ಲಿ ಇವನೂ ಪಾಲುದಾರನಾದ. ಫೆಬ್ರವರಿಯ ಕ್ರಾಂತಿಯ ನಂತರ ಎಂಟು ತಿಂಗಳ ಕಾಲ, ಅಂದರೆ ಅಕ್ಟೋಬರ್ ಕ್ರಾಂತಿಯವರೆಗೆ, ತಾತ್ಕಾಲಿಕ ಸರ್ಕಾರ ಬೇಕಾಬಿಟ್ಟಿ ಆಡಳಿತ ನಡೆಸಿತು. ಇದಾದ ನಲ್ವತ್ತು ವರ್ಷದ ನಂತರ ಪಾಸ್ತರ್‌ನಾಕ್ ಈ ಎರಡು ಕ್ರಾಂತಿಗಳ ನೆನಪು ತಂದುಕೊಂಡು ಬರೆಯುತ್ತಾನೆ : 'ಜನ, ರಾಜಕೀಯ ಸಭೆಗಳಲ್ಲಿ ಸ್ವಂತ ಆಸಕ್ತಿಯಿಂದ ಸೇರಿ ನಿಜಕ್ಕೂ ತಮಗೆ ಸಂಬಂಧಪಟ್ಟ ವಿಷಯ ಚರ್ಚಿಸುತ್ತಿದ್ದರು. ಹೇಗೆ, ಯಾಕೆ ಬದುಕಬೇಕು. ನಿಜಕ್ಕೂ ಸಾರ್ಥಕವಾಗುವಂತೆ ನಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುವುದು ಹೇಗೆ ? ಮನುಷ್ಯ ಮತ್ತು ಪ್ರಕೃತಿಯ ನಡುವೆ ಅಡ್ಡಗೋಡೆಯಾಗಿದ್ದ ವ್ಯವಸ್ಥೆಯನ್ನು ಜಗತ್ತಿನ ನಿಯಮವೊಂದು ಕಿತ್ತು ಹಾಕಿತ್ತು. ಕ್ರಾಂತಿ ನಡೆದ ೧೯೧೭ರ ಆ ಬೇಸಿಗೆಯಲ್ಲಿ ಬೀದಿ-ಮರಗಳು, ಗಿಡಗಳು ಭಾಷಣ ಮಾಡುತ್ತ ಜನರಿಗೆ ಮಾರ್ಗದರ್ಶಕರಂತೆ ಕಾಣುತ್ತಿದ್ದವು !' 'ಡಾಕ್ಟರ್ ಝಿವಾಗೋ' ಕಾದಂಬರಿಯಲ್ಲೂ ಒಂದೆಡೆ

ಹೇಳುತ್ತಾನೆ 'ರಷಿಯಾದ ಭೂಮಿತಾಯಿ ಚಲಿಸತೊಡಗಿದ್ದಳು..... ನಕ್ಷತ್ರ - ಮರ - ಗಿಡಗಳು ಮಾತುಕತೆ ನಡೆಸಲು ಹತ್ತಿರ ಹತ್ತಿರ ಬಂದವು. ಹೂಗಳು ರಾತ್ರಿಯೆಲ್ಲ ತತ್ವಜ್ಞಾನ ಚರ್ಚಿಸಿದವು. ಇಟ್ಟಿಗೆಯ ಕಟ್ಟಡಗಳು ರಾಜಕೀಯ ಭಾಷಣ ಮಾಡಿದವು. ... ' 'ಡಾಕ್ಟರ್ ಜ಼ಿವಾಗೋ' ಕಾದಂಬರಿಯ ನಾಯಕ ಡಾಕ್ಟರ್ ಯೂರಿಯ ಮಾತುಗಳೆಲ್ಲ ಪಾಸ್ತರ್‌ನಾಕ್ ಮನಸ್ಸಿನಲ್ಲಿ ಹುಟ್ಟಿದಂಥವೇ. 'ಜ಼ಿವಾಗೋ' ಕಾದಂಬರಿಯ ಎಲ್ಲ ಪಾತ್ರಗಳ ಅಭಿಪ್ರಾಯ ಕೂಡ, ಘಟನೆ ನಡೆದ ನಲ್ವತ್ತು ವರ್ಷದ ನಂತರ ಅಂದರೆ 'ಡಾಕ್ಟರ್ ಜ಼ಿವಾಗೋ' ಪ್ರಕಟವಾದದ್ದು ೧೯೫೭ರಲ್ಲಿ ಎಂಬುದನ್ನು ಗಮನಿಸಿದರೆ ಕ್ರಾಂತಿಯ ಕುರಿತು ಬೋರಿಸ್‌ನ ನಿಜವಾದ ನಿಲುವು ಏನೆಂಬುದು ತಿಳಿಯುತ್ತದೆ.

ಕ್ರಾಂತಿಯ ನಂತರ ಅತ್ಯಂತ ಸಂಕೀರ್ಣ ರಾಜಕೀಯ ಸ್ಥಿತಿಯನ್ನೆದುರಿಸುತ್ತಿದ್ದ ದೇಶ ಎಲ್ಲ ಕಲಾವಿದರನ್ನೂ ಸಹಜವಾಗಿಯೇ ತಳಮಳದಲ್ಲಿ ತಳ್ಳಿತು. ಮೂಡದ ನಂಬಿಕೆ, ಅಸ್ಥಿರತೆಯ ಭಯ, ನೆಮ್ಮದಿಯ ಆಕಾಂಕ್ಷೆ ಇದು ಜನರ ಮನದ ಭಾವನೆಯಾಗಿದ್ದರೆ - ಮುಂದಿನ ದಾರಿ ಯಾವುದು, ಎಂಥದು, ನೀಲನಕ್ಷೆ ಏನು ? ಎಲ್ಲಿದೆ ? ಎಂಬುದು ಕಲಾವಿಧರು ಎದುರಿಸಿದ ಪ್ರಶ್ನೆ.

ರಷಿಯಾ ಸೋವಿಯತ್ ಒಕ್ಕೂಟವಾದರೂ ಅದರ ಹಿಂದಿದ್ದದ್ದು ಕ್ರಾಂತಿ ಪೂರ್ವ ರಷಿಯಾದ ಸಂಸ್ಕೃತಿಯೇ. ಈ ಕಾಲದ ಸಾಹಿತ್ಯವನ್ನು 'ಬಹುದೇಶಗಳ ಸೋವಿಯೆತ್ ಸಾಹಿತ್ಯ ' ಎಂದು ಕರೆಯುವುದು ವಾಡಿಕೆ. 'ಆಕಾರದಲ್ಲಿ ದೇಶ; ಸತ್ವದಲ್ಲಿ ಸಮಾಜವಾದ' ಎಂಬ ಸ್ತಾಲಿನ್‌ನ ಘೋಷಣೆ ಹುಟ್ಟಿ, 'ಬೂರ್ಷ್ವಾ ಅಂಶವಿರುವ ರಾಷ್ಟ್ರೀಯತೆ'ಯನ್ನು ಹೊಡೆದೋಡಿಸಲು ತಯಾರಿ ನಡೆಯಿತು. ಇಂಥ ಸ್ಥಿತಿಯಲ್ಲಿ ಸಾಹಿತ್ಯ ಯಾವ ಹೊಸ ಸಿದ್ಧಾಂತ - ಚಳವಳಿಗಳೂ ಇಲ್ಲದೆ ತಟಸ್ಥವಾದಂತಿತ್ತು. 'ಸಿಂಬಲಿಸಂ', 'ಫ್ಯೂಚರಿಸಂ' ಪ್ರಭಾವವಿಲ್ಲದ ಯಾವ ಕಾವ್ಯವೂ ಈ ಕಾಲದಲ್ಲಿ ಹುಟ್ಟಲಿಲ್ಲ. ಈ ಕಾಲದಲ್ಲಿ ಬದುಕಿದ್ದ ಎಲ್ಲ ಸಾಹಿತಿಗಳೂ ಹಿಂದಿನ ಚಳವಳಿಯಲ್ಲಿ ಇದ್ದವರೇ-'ಸಿಂಬಲಿಸಂ' ಅನ್ನು ಅಲೆಗ್ಸಾಂಡರ್ ಬ್ಲೋಕ್, ಅಂದ್ರೆ ಬೆಲಿ, ವೆಲೆರ್ ಬ್ರುಸೋವ್, ಪ್ರತಿನಿಧಿಸಿದರೆ ಮಾಯಕೊವಸ್ಕಿ, ಬೋರಿಸ್ ಪಾಸ್ತರ್‌ನಾಕ್ 'ಫ್ಯೂಚರಿಸಂ ' ಪ್ರತಿನಿಧಿಸುತ್ತಿದ್ದರು. ಗದ್ಯದಲ್ಲೂ ಮಾಕ್ಸಿಂ ಗೋರ್ಕಿ, ಸೆರಾಫಿಮೋಚಿವ್, ವೆರೆಸೆಯೆವ್ ರಂಥವರು 'ವಾಸ್ತವಮಾರ್ಗ' ವನ್ನು

ಅವಲಂಬಿಸಿದ್ದರು. ಈ ಸಮಯದಲ್ಲಿ ಹುಟ್ಟಿದ ಕೆಲವು ಪಂಥಗಳು ಬಹುಬೇಗ ಹೇಳ ಹೆಸರಿಲ್ಲದಂತಾದವು. ಈ ಸಮಯದಲ್ಲಿ ಮಾಯಕೋವಸ್ಕಿಯ ಗುಂಪಿನ ಪ್ರಭಾವ ಉತ್ತುಂಗದಲ್ಲಿತ್ತು. ಆತನ 'ಲೆಫ್ಟ್ ಫ್ರಂಟ್ ಆಫ್ ದಿ ಆರ್ಟ್ಸ್' *Lef (LEF)* ಅನೇಕ ಉತ್ಸಾಹಿ, ಕ್ರಾಂತಿಯನ್ನು ಬೆಂಬಲಿಸುವ ಕವಿಗಳನ್ನು ಮುನ್ನುಗ್ಗಿಸಿತು. ಆದರೆ ಮುಂದೆ ರಾಜಕೀಯದಲ್ಲಿ ತೀರ ಸಂಪ್ರದಾಯವಾದಿಗಳಾದ 'ಫಾರ್ಮಲಿಸ್ಟ್' ರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಾಗ 'ಪೆಟಿ ಬೂರ್ಷ್ವಾ' ಗುಂಪು ಎಂದು ಮಾಯಕೋವಸ್ಕಿ ಗುಂಪು ಎಲ್ಲೆಡೆಯಿಂದ ತೀವ್ರ ಖಂಡನೆಗೆ ಗುರಿಯಾಯಿತು. ಈ ನಡುವೆ ಬಾಲ್ಶೆವಿಕ್ ಪಕ್ಷದ ಮುಖಂಡರಾದ ಲೆನಿನ್, ಬುಖ್ರೇನ್, ಟ್ರಾಟ್‌ಸ್ಕಿ ಮುಂತಾದವರು 'ಕಾರ್ಮಿಕ ಸಂಸ್ಕೃತಿ'ಯ ಅಗತ್ಯವನ್ನು ಕಂಡುಕೊಂಡರು. ಈ ಸಮಯದಲ್ಲೇ *'Proletkul't'* ಎಂಬ ಪಂಥ, ರೈತನನ್ನು, ಕಾರ್ಮಿಕರನ್ನು ಒಗ್ಗೂಡಿಸಿ ಅವರನ್ನು ಕವಿ-ಕಲಾವಿದರನ್ನಾಗಿ ಮಾಡಲು ತರಬೇತು ನೀಡಿ 'ಕಾರ್ಮಿಕ ಸಂಸ್ಕೃತಿ' ಹುಟ್ಟು ಹಾಕಲು ನೋಡಿತು. ಕಲೆ ತನ್ನ ಕ್ರಿಯಾಶೀಲ ನಡಿಗೆಯಿಂದ ಹೆಜ್ಜೆಯೂರಬೇಕಲ್ಲದೆ ಪಕ್ಷದ ನಿರ್ದೇಶನದಂತಲ್ಲವೆಂದು ಅರಿತಿದ್ದ ಲೆನಿನ್ ಈ ಪ್ರಯತ್ನ ರಾಜಕೀಯವಾಗಿ ಅತ್ಯಂತ ಅಸಹ್ಯಕರವಾದ ಕ್ರಿಯೆಯಾಗಿ ಕಂಡು ಆ ಪ್ರಯತ್ನ ಅಷ್ಟಕ್ಕೇ ನಿಂತಿತು.

ಈ ಕಾಲದ ಎಲ್ಲ ತಳಮಳವನ್ನು ತನ್ನೊಳಗೆ ಅಡಗಿಸಿಕೊಂಡೂ ತನ್ನತನದ ಛಾಪು ತೋರಿದ ಮೂರನೆ ಸಂಕಲನ 'ಮೈ ಸಿಸ್ಟರ್, ಲೈಫ್', ೧೯೨೨ರಲ್ಲಿ ಪ್ರಕಟಿಸಿದ ಬೋರಿಸ್, ಮೊದಲ ಮಾತುಗಳಲ್ಲಿ ಹೀಗೆ ಬರೆದುಕೊಂಡ : 'ಈ ನೆಲದ ಮೇಲೆ ಇತಿಹಾಸಪೂರ್ವದ, ಸಹಜವಾಗಿ ಶ್ರುತಿಗೊಂಡ, ತನ್ನನ್ನು ತಾನು ಅರಿಯದ ಬೇಸಿಗೆಯೊಂದನ್ನು ಕಂಡೆ. ಈ ಕುರಿತು ಪುಸ್ತಕವೊಂದನ್ನು ಬರೆದು ನನಗೆ ಅಪೂರ್ವವಾಗಿ ಕಂಡ, ಕ್ರಾಂತಿ ಗಮನಿಸದ ವಿಷಯವನ್ನು ತಿಳಿಸಿದೆ. ಭೂಮಿಯೊಳಗೆ ಸುಪ್ತವಾಗಿ ಅಡಗಿದ್ದ ನೀತಿಯ ಖಜಾನೆ ಮಂತ್ರ ಶಕ್ತಿಯಿಂದೆಂಬಂತೆ ಹೊರಸೂಸುತ್ತಿತ್ತು. ಜನರ ತಲೆ ತುಸು ಎತ್ತರ ಬೆಳದಂತೆ ಕಾಣುತ್ತಿತ್ತು. ಹಾದಿಬದಿಯಲ್ಲಿ ಓಡಾಡುತ್ತಿದ್ದ ಜನ ಅನಾಮಿಕರಾಗಿರಲಿಲ್ಲ, ಬದಲಿಗೆ, ಇಡೀ ಮಾನವ ಕುಲದ ಸೂಚಿಯೆಂಬಂತೆ, ಅಭಿವ್ಯಕ್ತಿಯೆಂಬಂತೆ ಕಾಣುತ್ತಿದ್ದರು. ದಿನನಿತ್ಯದ ಬದುಕಿನ ಎಚ್ಚರದ ಜತೆಗೆ ಪ್ರತಿ ಹೆಜ್ಜೆಯೂ ಇತಿಹಾಸವಾಗುವ ಎಚ್ಚರ, ಚಿರಂತನತೆಯಿಂದ ಚಿಮ್ಮಿ ಎಲ್ಲೆಡೆ ತುಂಬಿಕೊಂಡಿತ್ತು.

ಈ ಕಿನ್ನರಲೋಕದ ಕಥಾ ಕಲ್ಪನೆಯಲ್ಲಿ ನಾನೀ ಪುಸ್ತಕ : 'ಮೈ ಸಿಸ್ಟರ್, ಲೈಫ್'- ಬರೆದೆ'.

ಈ ಸಂಕಲನ ತನ್ನ ಕಾಲದ ಎಲ್ಲ ಮಹತ್ವದ ಕವಿಗಳಿಂದಲೂ ಅಪಾರ ಮೆಚ್ಚುಗೆ ಗಳಿಸಿತು. ರಷಿಯಾದ ಪ್ರಮುಖ ಕವಿ ಒಸಿಪ್ ಮಾಂದಲ್‌ಷ್ತಮ್ - 'ಯಾವ ಮಾಂತ್ರಿಕನೂ ಮಾಡದ ಮೋಡಿಯನ್ನು ಸಮಸ್ಥಿತಿಯಿಂದ ಭಾಷೆಯ ಮೇಲಿನ ಅಸಾಧಾರಣ ಹಿಡಿತದಿಂದ ಸಾಧಿಸಿದ ಈ ಸಂಕಲನ ರಷಿಯಾದ ಹೊಸ ಕಾವ್ಯದ ಧ್ವನಿಯನ್ನು ಅತ್ಯುತ್ತಮವಾಗಿ ಪ್ರತಿನಿಧಿಸುತ್ತದೆ' ಎಂದ. ಸಂಗ್ರಹವನ್ನು ಓದಿದೊಡನೆ ಅವನ ಸಮಕಾಲೀನೆ ಮರೀನಾ ತ್ಸ್ವೇತಯೇವಾ 'ಮಿಂಚು ಸುರಿಸಿದ ಮುಗಿಲು' ಎನ್ನುವ ಲೇಖನ ಬರೆದಳು. - ಇಲ್ಲಿನ ಕವಿತೆಗಳು ನೆಲಕ್ಕೆ ಕಾಲೂರಿ ನಿಲ್ಲುತ್ತವೆ. ಪಾಸ್ತರನಾಕ್‌ನ ನಿದ್ದೆ ಕೂಡ ಇಲ್ಲಿ ಚಲನೆಯಲ್ಲಿದೆ ! ಕ್ರಾಂತಿಯಿಂದ ತಪ್ಪಿಸಿಕೊಳ್ಳಲು ಕವಿ, ಯಾವ ಬೌದ್ಧಿಕ ನೆಲಮಾಳಿಗೆಯನ್ನೂ ಹುಡುಕಿಕೊಂಡು ಹೊರಟಿಲ್ಲ. ಕ್ರಾಂತಿಯ ಬಗ್ಗೆ ಪಾಸ್ತರ್‌ನಾಕ್ ಹೇಳುವುದೆಲ್ಲ ಕ್ರಾಂತಿ ತನ್ನ ಬಗ್ಗೆ ತಾನೇ ಹೇಳಿಕೊಳ್ಳುವುದು- ಪರಿಣಾಮ ಭವಿಷ್ಯದಲ್ಲಿ ಅಡಗಿರುವುದು - ಎಂದು ಬರೆದು ಸಂಗ್ರಹದ ಅರ್ಧದಷ್ಟು ಕವಿತೆಗಳ ಕುರಿತು ವಿವರವಾಗಿ ಚರ್ಚಿಸಿದ್ದಳು. ಸ್ವತಃ ಪಾಸ್ತರ್‌ನಾಕ್‌ನೇ ತನ್ನ ಆತ್ಮ ವಿವರಣೆ 'ಸೇಫ್ ಕಂಡೆಕ್ಟ್'ನಲ್ಲಿ - 'ಈ ಸಂಕಲನದ ಕವಿತೆಗಳು ನನಗೇ ಅರಿವಿಲ್ಲದೇ ಹೊರಗಿನ ನಿಗೂಢ ಶಕ್ತಿಯ ಪ್ರೇರಣೆಯಿಂದ ಹುಟ್ಟಿದವು. ಇದನ್ನು ಹುಟ್ಟು ಹಾಕಿದ ಸ್ಫೂರ್ತಿಗೆ ನಿರ್ದಿಷ್ಟ ಹೆಸರು ನೀಡಲು ನಾನು ಇಚ್ಛಿಸಲಿಲ್ಲ, ಏಕೆಂದರೆ ಆ ಸ್ಫೂರ್ತಿಯ ಶಕ್ತಿ ನನ್ನ ಸುತ್ತಲಿದ್ದ ಕಾವ್ಯ ಸಿದ್ಧಾಂತಗಳನ್ನು ನನ್ನನ್ನು ಮೀರಿದ್ದಾಗಿತ್ತು' - ಎಂದು ತನ್ನ ಸಂಕಲನದ ಹಿಂದಿನ ಪ್ರೇರಣೆ ಕುರಿತು ಬರೆದ.

ಕ್ರಾಂತಿಯನಂತರ ರಷಿಯಾದಲ್ಲಿ ಕೇವಲ ಬರಹದಿಂದಷ್ಟೇ ಬದುಕುವುದು ಬೋರಿಸ್‌ನಿಗೆ ಅಶಕ್ಯವೆನ್ನಿಸಿತು. ಕೆಲವು ಸಲ ಹಸಿವೆಯಿಂದ ನರಳುವ ಪರಿಸ್ಥಿತಿಯೂ ಬಂತು. ಹೀಗಾಗಿ ಕ್ರಾಂತಿಯನಂತರ ಗೋರ್ಕಿಯ ಮೇಲ್ವಿಚಾರಣೆಯಲ್ಲಿ ಆರಂಭವಾದ ವಿಶ್ವ ಸಾಹಿತ್ಯದ ಅನುವಾದವನ್ನು ಬೋರಿಸ್ ಒಪ್ಪಿಕೊಳ್ಳಲೇಬೇಕಾಯಿತು. ಹಾಗೆಂದೇ, ಸದ್ಯಕ್ಕಾತ ತನ್ನ ಸೃಜನಶೀಲ ಬರಹವನ್ನು ಬದಿಗೊತ್ತಬೇಕಾಯಿತು. ಕ್ಲೈಸ್ಟ್, ಸ್ವಿನ್‌ಬರ್ನ್, ಬೆನ್‌ಜಾನ್ಸನ್ ನಾಟಕಗಳನ್ನು ಆತ ಅನುವಾದಿಸಿದ. ಈತನ ಅನುವಾದಗಳು ಮಾಲೆಯ ಸಂಪಾದಕನಾಗಿದ್ದ

ಅಲೆಗ್ಸಾಂಡರ್ ಬ್ಲೋಕ್‌ನಿಂದ ಕಟುಟೀಕೆಗೆ ಒಳಗಾದವು : 'ಅನುವಾದವನ್ನು ಅತಿ ಕಷ್ಟದಿಂದ ಮನಸ್ಸು ಬಂದಂತೆ ನಿಭಾಯಿಸಿದಂತಿದೆ. ನಾಟಕೀಯವಾಗಿ, ಜೀವವಿಲ್ಲದೆ ಸೊರಗಿರುವ ಈ ಅನುವಾದ ಪ್ರತಿಭಾಶೂನ್ಯತೆಯನ್ನು ಎತ್ತಿ ತೋರಿಸುತ್ತವೆ !' ಎಂದು ಬರೆದ. ಮುಂದೆ, ಬ್ಲೋಕ್‌ನ ಅಭಿಪ್ರಾಯ ಅತ್ಯಂತ ಸಮಂಜಸವಾಗಿತ್ತೆಂದು ಬೋರಿಸ್ ತನ್ನ ಆತ್ಮ ವಿವರಣೆಯಲ್ಲಿ ಬರೆದುಕೊಂಡ !

ಹೊಟ್ಟೆ ಹೊರೆಯುವುದಕ್ಕಾಗಿ ಅನುವಾದದೊಂದಿಗೆ ಕಥೆ-ಲೇಖನಗಳನ್ನು ಆ ಸಮಯದಲ್ಲಿ ಬೋರಿಸ್ ಬರೆದ. 'ಬಾಲ್ಜಾಕ್‌ನಂತೆ ಕಥಾನಾಯಕನನ್ನು ಸೃಷ್ಟಿಸಿ ಪ್ರೀತಿಯ ಬಗೆಗೆ ಕಾದಂಬರಿಯೊಂದನ್ನು ಬರೆಯುವೆ '-ಎಂದು ತ್ಸ್ವೇತಯೇವಾಳಿಗಾತ ಹೇಳಿದ್ದ, ಜತೆಗೆ ಬರೆದ. ಆದರೆ ಅತ್ಯಂತ ನಿಗೂಢವಾಗಿ ಹಸ್ತಪ್ರತಿ ಕಳೆದು ಹೋಯಿತು. ಕೊನೆಗೆ ಅದರ ಸಾರಾಂಶ ಸೇರಿಸಿ 'ಚೈಲ್ಡ್ ಹುಡ್ ಆಫ್ ಲುವ್ಹರ್ಸ್' ಎಂಬ ನೀಳ್ಗತೆ ಬರೆದ. ಇದೇ ಸಮಯದಲ್ಲಿ ಬರೆದ ಕಥೆಗಳು 'ತೂಲಾದಿಂದ ಬಂದ ಪತ್ರಗಳು' ಎಂದು ೧೯೨೨ರಲ್ಲಿ ಸಂಕಲನವಾಗಿ ಪ್ರಕಟಿಸಿದ. ಈ ಕಾಲದಲ್ಲಿ ನಡೆದ ರಷ್ಯನ್ ನಾಗರಿಕ ಯುದ್ಧ, ಕಡು ಚಳಿಗಾಲ, ಎಣ್ಣೆಯ ಕೊರತೆ, ಬರಗಾಲದಿಂದ ದೇಶ ತತ್ತರಿಸಿತು. ಸ್ತಾಲಿನ್‌ನ ಸಾಂಸ್ಕೃತಿಕ ಹತ್ಯಾಕಾಂಡ ಮುಂದುವರೆದಿತ್ತು. ೧೯೨೧ರಲ್ಲಿ ಆನಾ ಆಖ್ಮತೋವಾಳ ಹಿಂದಿನ ಪತಿ ನಿಕೋಲಾಯ್ ಗುಮಿಲೇವ್‌ಗೆ ಆಹುತಿಯಾದ.

ಇದೇ ವೇಳೆಗೆ ಅಂದರೆ ೧೯೨೧ರಲ್ಲಿ ತೀವ್ರ ಹೃದಯದ ಕಾಯಿಲೆಗೆ ತುತ್ತಾಗಿದ್ದ ಬೋರಿಸ್‌ನ ತಾಯಿ ರೋಸಲಿಯಾಳ ವೈದ್ಯಕೀಯ ತಪಾಸಣೆಗೆ ಅವನ ತಂದೆ, ರೋಸಲಿಯಾ, ಜೋಸೆಫಿನ್, ಲಿಡಿಯಾ ಜರ್ಮನಿಗೆ ಹೋದರು. ಮಾಸ್ಕೋದಲ್ಲುಳಿದದ್ದು ಬೋರಿಸ್, ಅವನ ತಮ್ಮ ಅಲೆಗ್ಸಾಂಡರ್. ಕ್ರಾಂತಿಯ ಉತ್ಸಾಹದಲ್ಲಿ ಅವನ ಮಗ ಬೋರಿಸ್‌ನಿಗೆ ಡಿಸೆಂಬರ್ ೧೯೨೧ರಲ್ಲಿ ಲೆನಿನ್‌ನನ್ನು ಕಾಣುವ ಅವಕಾಶ ದೊರೆಯಿತು. ಅವನ ಭೇಟಿಯಿಂದ ಸ್ಫೂರ್ತಿಗೊಂಡ ಬೋರಿಸ್ ಒಂದು ಗಪದ್ಯ ಬರೆದ. (ನೋಡಿ :'ಲೆನಿನ್')

೧೯೨೨ರ ಬೇಸಿಗೆಯ ಒಂದು ದಿನ ಬೋರಿಸ್ ಬಾಲ್ಷೆವಿಕ್ ಪಕ್ಷದ ಹಿರಿಯ ನಾಯಕನಾಗಿದ್ದ, ಅನಂತರ ಆ ಪಕ್ಷದಿಂದ ಹೊರಬಂದ, ಟ್ರಾಟ್‌ಸ್ಕಿಯನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಟ್ರಾಟ್‌ಸ್ಕಿಯೂ ಸಾಹಿತ್ಯ ಜ್ಞಾನವಿದ್ದವನು.

ಬೋರಿಸ್‌ಗೆ 'ಮೈ ಸಿಸ್ಟರ್, ಲೈಫ್'ನಲ್ಲಿ ಏನು ಹೇಳಲು ಪ್ರಯತ್ನಿಸಿದ್ದೀಯ ಎಂದು ಪ್ರಶ್ನಿಸಿದ. ಬೋರಿಸ್ 'ಪುಸ್ತಕದ ಓದುಗರಿಗೆ ಕೇಳಿ '! ಎಂದು ಉತ್ತರಿಸಿದ ! 'ನಿನ್ನ ಕವಿತೆಗಳು ಜನರನ್ನು ಕುರಿತು ಏನೂ ಹೇಳುವುದಿಲ್ಲವೇಕೆ '? ಎಂಬ ಇನ್ನೊಂದು ಪ್ರಶ್ನೆಗೆ - 'ಸ್ವಂತಿಕೆ, ಅಧಿಕೃತತೆ ಹೆಚ್ಚು ನನ್ನ ಪಾಲಿಗೆ'. ತನ್ನ ಸಂಕಲನ 'ಹೊಸ ಸಾಮಾಜಿಕ ವ್ಯವಸ್ಥೆಗೆ ತಕ್ಕ ಹೊಸ ಮೊಳಕೆ' ಎನ್ನುವ ಉತ್ತರ ಕೇಳಿ ಮಹಾನ್ ಕ್ರಾಂತಿಕಾರಿಗೆ ಉಸಿರು ಕಟ್ಟಿದ ಹಾಗಾಯಿತು ! ಆದರೆ ಆಮೇಲೆ ಮಾತುಕತೆಯನ್ನು ಸಂಪೂರ್ಣ ಹಿಡಿತದಲ್ಲಿಟ್ಟುಕೊಂಡು, ಟ್ರಾಟ್‌ಸ್ಕಿಯ ಅಭಿಪ್ರಾಯಗಳ ಅಭಿವ್ಯಕ್ತಿಗೆ ಅವಕಾಶ ನೀಡಲಿಲ್ಲವೆಂದು ಬೇಸರಪಟ್ಟುಕೊಂಡ. ಆದರೆ ಭಾರೀ ಮಾತುಗಾರನಾದ ಟ್ರಾಟ್‌ಸ್ಕಿಯೇ ನಿರುತ್ತರನಾಗುವಂತೆ ಮಾಡುವುದು ಸುಲಭದ ಮಾತಾಗಿರಲಿಲ್ಲ.

ಇದೇ ಬೇಸಿಗೆಯಲ್ಲಿ ಬೋರಿಸ್, ಎವ್ಗೆನಿಯಾ ವ್ಲದಿಮಿರೋವ್ನಾ ಲುರೆಯನ್ನು ಮದುವೆಯಾದ. ಎವ್ಗೆನಿಯಾ ಕಲಾವಿದೆಯಾಗಿದ್ದ, ನೀಲಕಂಗಳ ಯಹೂದಿ ಚೆಲುವೆ. ಗಿರ್ಲಾಂಡ್‌ನ ಪುರಾತನ ಚಿತ್ರದಿಂದ ಇಳಿದುಬಂದಂತೆ ಕಾಣುತ್ತಿದ್ದ ಅವಳು ಪಾಸ್ತರ್‌ನಾಕ್‌ಗಿಂತ ಆಕರ್ಷಣೀಯೆ. ಒಳ್ಳೆಯ ಫ್ರೆಂಚ್ ಮಾತಾಡುವ ಸುಶಿಕ್ಷಿತೆ. ಆಕೆಯೊಂದಿಗೆ ಸಮುದ್ರ ಪಯಣ ಮಾಡುತ್ತಾ ಬೋರಿಸ್ ಜರ್ಮನಿಯಲ್ಲಿದ್ದ ತನ್ನ ತಂದೆ-ತಾಯಿಯನ್ನು ಕೂಡಿಕೊಂಡ. ಇತ್ತ ರಷಿಯಾ ೧೯೨೨ರ ಡಿಸೆಂಬರ್ ತಿಂಗಳಲ್ಲಿ ಅಧಿಕೃತವಾಗಿ ಸೋವಿಯೆತ್ ಗಣರಾಜ್ಯ ಒಕ್ಕೂಟವಾಯಿತು. (ಯುಎಸ್‌ಎಸ್‌ಆರ್)

ಸುಮಾರು ಏಳು ವರ್ಷದಿಂದ ಬರೆಯುತ್ತಿದ್ದ ಕೆಲವು ಕವಿತೆಗಳನ್ನು ಕಲೆಹಾಕಿ, ಬೋರಿಸ್ 'ಥೀಮ್ಸ್ ಆ್ಯಂಡ್ ವೇರಿಯೇಷನ್ಸ್' ಎಂದು ಹೆಸರಿಟ್ಟ. ಬರ್ಲಿನ್ ಪ್ರಕಾಶಕರೊಬ್ಬರು ೧೯೨೩ರಲ್ಲಿ ಅದನ್ನು ಪ್ರಕಟಿಸಿದರು.

ಬೋರ್ರ್ಯಾ ೧೯೦೬ರಲ್ಲೊಮ್ಮೆ ಜರ್ಮನಿಗೆ ಬಂದಿದ್ದ. ಏನೇನೋ ನೆನಪುಗಳು ಅವನಲ್ಲೇ ಇದ್ದವು. ಇಡಾ ವಾಸೋತ್ಸ್ಕಯಾಳೊಂದಿಗೆ ವಿಫಲ ಪ್ರೇಮ, ಪ್ರೊಫೆಸರ್ ಕೊಹೆನ್‌ರ ನೆನಪು. ಅವನ ಹೆಂಡತಿಯೊಂದಿಗೆ ಬರ್ಲಿನ್‌ಗೆ ಹೋದಾಗ ಕೊಹಿನ್ ತೀರಿಕೊಂಡ ಸುದ್ದಿ ತಿಳಿದು ಬೋರಿಸ್ ಖಿನ್ನನಾದ . ವಿಶ್ವವಿದ್ಯಾಲಯ ತನ್ನ ಮೊದಲಿನ ಸೊಬಗು ಕಳೆದುಕೊಂಡಿತ್ತು. ಒಟ್ಟಿನಲ್ಲಿ

ನಿರಾಶೆ ಅವನನ್ನು ಕವಿದು ಮರಳಿ ತನ್ನ ನೆಲಕ್ಕೆ ಹೋದರೆ ಸಾಕೆನ್ನಿಸಿ ಎವ್ಗೆನಿಯಾಳೊಂದಿಗೆ ಮಾರ್ಚ್ ೧೯೨೩ರಲ್ಲಿ ಮಾಸ್ಕೋದತ್ತ ಪ್ರಯಾಣ ಬೆಳೆಸಿದ. ಸಾಹಿತ್ಯದಲ್ಲಿ ಇನ್ನಷ್ಟು ಗಟ್ಟಿಯಾಗಿ ನೆಲೆಯೂರಬೇಕು. ಸತ್ವಯುತವಾದುದನ್ನು ಬರೆಯಬೇಕು. ಇದೇ ಅವನ ತಲೆಯ ತುಂಬ ತುಂಬಿತ್ತು.

●

●

೪

೧೯೨೪ ಮಾರ್ಚ್, ಬರ್ಲಿನ್‌ನಿಂದ ಬಂದ ಪಾಸ್ತರ್‌ನಾಕ್ ಹಾಗೂ ಅವನ ಹೆಂಡತಿ ವಿಚಿತ್ರ ಸ್ಥಿತಿಯೆದುರಿಸಬೇಕಾಯಿತು. ಕೇವಲ ಬರಹದಿಂದ ಅವನ ಬದುಕು ಸಾಗುವ ಹಾಗಿರಲಿಲ್ಲ. ಅನುವಾದದ ಕೆಲಸವೂ ಸಾಕಷ್ಟಿರಲಿಲ್ಲ. ಜತೆಗೆ ಆರುತಿಂಗಳಲ್ಲಿ ಬೋರಿಸ್ ದಂಪತಿಗಳಿಗೆ ಎವ್ಗೆನಿ (ಅನುಬಂಧ ೨ರಲ್ಲಿ ಓದಿ) ಗಂಡು ಮಗು ಹುಟ್ಟಿತು. ಇದೆಲ್ಲಕ್ಕಿಂತ ಹೆಚ್ಚಾಗಿ ಪಾಸ್ತರ್‌ನಾಕ್ ಕುಟುಂಬ ೧೯೧೧ರಿಂದ ವಾಸವಾಗಿದ್ದ ಮನೆಯನ್ನು 'ಸಾಮೂಹಿಕ ಗೃಹ'ವಾಗಿ ಸರ್ಕಾರ ಮಾರ್ಪಡಿಸಿತ್ತು. ಮೊದಲು ಇವರ ಕುಟುಂಬವಿದ್ದ ಓಲ್ಖೊನ್ಕಾ ಓಣಿಯ ಕಟ್ಟಡದ ಮನೆಯಲ್ಲಿ ಇದೀಗ ಹದಿನೈದು ಕುಟುಂಬಗಳು ಸಾಮಾನು-ಸರಂಜಾಮುಗಳೊಂದಿಗೆ ಬೀಡುಬಿಟ್ಟಿದ್ದವು. ಕೈಗೆ - ಕಾಲಿಗೆ ತೊಡರುವ ಜನ ! ಹೊಸದಾಗಿ ಬಂದು ಸೇರುತ್ತಿರುವ ಬೋರಿಸ್ ದಂಪತಿಗಳಿಗೆ ನೆರೆಹೊರೆಯವರಿಂದ ಅಸಮಾಧಾನದ ಸ್ವಾಗತ ಕಾದಿತ್ತು.

ಇವರ ಕುಟುಂಬ ಒಂದು ಚಿಕ್ಕ ಕೋಣೆಯಲ್ಲಿ ತಮ್ಮ ಸಂಸಾರ ಹೂಡಬೇಕಿತ್ತು! ಮೇಲಾಗಿ ಮಾಮೂಲಿ ಹೆಂಗಸಿನಂತೆ ಎವ್ಗೆನಿಯೂ ಮನೆವಾರ್ತೆಯ ಹೆಣ್ಣಲ್ಲ. ಹೀಗಾಗಿ ಈ ಕಿಷ್ಕಿಂದೆಯಲ್ಲೇ ಮಗು ಎವ್ಗೆನಿಯನ್ನು ನೋಡಿಕೊಳ್ಳಲು ದಾದಿಯೊಬ್ಬಳನ್ನು ನೇಮಿಸಿಕೊಂಡರು. ಕಾಲಿಡಲು ಜಾಗವಿಲ್ಲ, ಜತೆಗೆ ಜನರ ಗದ್ದಲ. ಇಂಥಲ್ಲಿ ಹೊಸ ನಿರ್ಧಾರಗಳನ್ನು ಮಾಡಿಕೊಂಡು ಬಂದಿದ್ದ ಕವಿ ಸಾಹಿತ್ಯದಲ್ಲಿ ತೊಡಗಿಸಿಕೊಳ್ಳಬೇಕಿತ್ತು. ರಾತ್ರಿಯೆಲ್ಲ ನಿದ್ದೆಗೆಟ್ಟು ಕಡು ಚಹ ಕುಡಿಯುತ್ತ- ಸಿಗರೇಟು ಉರಿಸುತ್ತ ಈ ಕಿಷ್ಕಿಂದೆಯಲ್ಲೇ ಬೋರಿಸ್ ಬರಹಕ್ಕೆ ತೊಡಗಿದ. ಬೋರಿಸ್‌ಗೆ ಕೆಲವೊಮ್ಮೆ ಕೂಡಲೂ-ನಿಲ್ಲಲೂ ತ್ರಾಸದಾಯಕವಾದ

ಈ ಜಾಗದಿಂದ ತಪ್ಪಿಸಿಕೊಂಡು ತನ್ನ ತಮ್ಮ ಅಲೆಗ್ಸಾಂಡರ್ ಹಾಗೂ ಅವನ ಹೆಂಡತಿಯಿದ್ದ ಮನೆಗೆ ಹೋಗಿ ವಿರಮಿಸಿಕೊಳ್ಳುತ್ತಿದ್ದ !

ಇವೆಲ್ಲಕ್ಕಿಂತ ಹೆಚ್ಚಾಗಿ ಇಬ್ಬರು ಕಲಾವಿದರಿಗೆ ಮದುವೆಯೊಂದು ಕಗ್ಗಂಟು ಸೃಷ್ಟಿಸಿತ್ತು. ಬೋರಿಸ್‌ಗೆ ಓದು-ಬರಹದ ಅಗತ್ಯವಿತ್ತು. ಎವ್ಗೆನಿಯಾಳಿಗೆ ತನ್ನ ಚಿತ್ರಕಲೆಗೆ ಸ್ಟುಡಿಯೋ ಒಂದರ ಅಗತ್ಯವಿತ್ತು. ಟಾಲ್‌ಸ್ಟಾಯ್ ಪಾತ್ರಗಳಂತೆ ಬೋರಿಸ್ ಸರಳವಾಗಿ ಬದುಕುವವನಾದರೆ, ಎವ್ಗೆನಿಯಾ ಆಡಂಬರದ ಹೆಣ್ಣು. ಒಂದೇ ಸೂರಿನಡಿ ವಿರುದ್ಧ ಧ್ರುವಗಳು ಬದುಕುವುದು ಸಾಧ್ಯವಿರಲಿಲ್ಲ - ಘಟಸ್ಫೋಟ ಅನಿವಾರ್ಯವಾಯ್ತು. ಇವರಿಬ್ಬರ ವಿಚ್ಛೇದನದ ಕುರಿತು ಆನಾ ಆಖ್ಮತೋವಾ ಬರೆಯುತ್ತಾಳೆ : 'ಬೋರಿಸ್‌ನಿಗೆ ಹೆಣ್ಣು ಏನೆಂದು ಸರಿಯಾಗಿ ಅರ್ಥವಾಗಿರಲಿಲ್ಲ. ಅವನ ಹೆಂಡತಿ ಎವ್ಗೆನಿಯಾ ತುಂಬ ಒಳ್ಳೆಯವಳು, ಬುದ್ಧಿ ಜೀವಿ. ಆದರೆ, ಆಕೆ ತನ್ನನ್ನು ತಾನೇ ಶ್ರೇಷ್ಠ ಕಲಾವಿದೆ ಅಂದುಕೊಂಡಳು. ಇದರ ಫಲ ಬೋರಿಸ್ ತನ್ನ ಅನ್ನ-ಸಾರು ತಾನೇ ಬೇಯಿಸಿಕೊಳ್ಳಬೇಕಾಯ್ತು ! '

ಪಾಸ್ತರ್‌ನಾಕ್ ರಾಜಕೀಯ ನಿಲುವುಗಳನ್ನು ಕುರಿತು ಒಂದು ಸದ್ಯದ ನಿರ್ಧಾರಕ್ಕೆ ಬಂದಿದ್ದ. ತನ್ನ ದೇಶದ ರಾಜಕೀಯದೊಂದಿಗೆ ಗುರ್ತಿಸಿಕೊಳ್ಳಲು ತಾತ್ಕಾಲಿಕ ನಿರ್ಧಾರ ತಳೆದಿದ್ದ. ಅವನ ರಾಜಕೀಯ ನಿಲುವನ್ನು ವಿಶಾಲವಾಗಿ ಎರಡು ಭಾಗ ಮಾಡಬಹುದು. ೧೯೨೩ರಿಂದ ೪೬ರ ವರೆಗೆ ಒಂದು ಮುಖವಾದರೆ ೪೬ರಿಂದ ನಂತರದ್ದು ಇನ್ನೊಂದು. ೧೯೨೩-೪೬ರ ಅವನ ರಾಜಕೀಯ ನಿಲುವು ಹೊಯ್ದಾಟದ, ಪ್ರಯೋಗಶೀಲತೆಯ, ಅಸ್ಥಿರತೆಯ ರೂಪದಲ್ಲಿದ್ದು, ಸೋವಿಯೆತ್ ವ್ಯವಸ್ಥೆಯ ಬಗೆಗೆ ತುಂಬಿದ್ದ ಉತ್ಸಾಹ, ಆಸಕ್ತಿ ಇಲ್ಲಿ ಮೇಲುಗೈ ಪಡೆದಿದ್ದವು. ಕಾವ್ಯದಲ್ಲಿ ಸೋವಿಯೆತ್ ಸಮಾಜದ ಸಿದ್ಧಿ-ಸಾಧನೆ ಗುರಿಯನ್ನು ವಿವರಿಸುವುದು, ಅದನ್ನು ತಿರಸ್ಕರಿಸುವುದು ನಡೆದೇ ಇತ್ತು. ಲೆನಿನ್‌ನನ್ನು ಕಾವ್ಯದಲ್ಲಿ ವಿಮರ್ಶೆಯ ಅರಿವಿಟ್ಟುಕೊಂಡು ಪ್ರಶಂಸಿಸುತ್ತಿದ್ದ. ೧೯೪೬ರ ನಂತರ ಅವರ ರಾಜಕೀಯ ನಿರ್ಧಾರಗಳು ಸ್ಥಿರವಾದವು. ಒಂದು ರೀತಿಯಿಂದ ಸೋವಿಯೆತ್ ಸಮಾಜದ ಬಗೆಗೆ ಮನಸ್ಸಿನಲ್ಲೇ ಅಸಮಾಧಾನ ತುಂಬಿಗೊಂಡಿತ್ತು. 'ರಷಿಯಾದಂತಹ ರಾಜಕೀಯ ಬೇಗುದಿ ತುಂಬಿದ ದೇಶವಲ್ಲದೆ ಇತಿಹಾಸದಲ್ಲಿ ಸಾಧಾರಣ ಪರಿಸ್ಥಿತಿಯಲ್ಲಿ ಗುರ್ತಿಸುವ ಇನ್ನಾವುದೇ ದೇಶದಲ್ಲಿ, ಬೋರಿಸ್ ಪಾಸ್ತರ್‌ನಾಕ್‌ನನ್ನು ಈಗಿನಂತೆ ರಾಜಕೀಯ ಕಾರಣದಿಂದ ಗಮನಿಸದೇ ಕೇವಲ

ಅವನ ಸಾಹಿತ್ಯ ಸಾಧನೆಗೆ -ಶ್ರೇಷ್ಠತೆಗೆ ಪ್ರಶಂಸಿಸಬಹುದಿತ್ತು, ಎನ್ನುತ್ತಾನೆ, ಬೋರಿಸ್ ಪಾಸ್ತರ್‌ನಾಕ್ ಚರಿತ್ರಕಾರ ರೋನಾಲ್ಡ್ ಹಿನ್ಲೆ.

ಇಂಥ ತಳಮಳ ಸ್ಥಿತಿಯಲ್ಲಿ ಬೋರಿಸ್ ಮರಳಿ ಬಂದಿದ್ದ. ಲೆನಿನ್ ಆದಾಗ ತನ್ನ ಮೂರು ವರ್ಷದ ಆರ್ಥಿಕ ಯೋಜನೆ ಪೂರೈಸಿದ್ದ. ತನ್ನ ಚಾಲ್ತಿ ಕಳೆದು ಕೊಂಡು ಕೇವಲ ನಾಣ್ಯದ ಮುಖದಂತೆ ಗೋಚರಿಸತೊಡಗಿದ್ದ. ಜನೆವರಿ ೨೧, ೧೯೨೪ ರಷಿಯಾದ ಇತಿಹಾಸಕ್ಕೆ ಇನ್ನೊಂದು ಭಾರಿ ಪೆಟ್ಟು, ಕಾಮ್ರೇಡ್ ಲೆನಿನ್ ತನ್ನ ತಾಯಿನೆಲದಿಂದ ಬಹುದೂರ ಸರಿದಿದ್ದ. ನಂತರ ಅಧಿಕಾರ ಹಿಡಿದ ಸ್ತಾಲಿನ್, ಟ್ರಾಟ್‌ಸ್ಕಿ ಮತ್ತು ಇತರ ನಾಯಕರನ್ನು ಸಂಪೂರ್ಣ ಮೂಲೆಗುಂಪು ಮಾಡಿದ.

೧೯೨೪-೨೫ರ ಸುಮಾರಿಗೆ ಸ್ತಾಲಿನ್‌ನನ್ನು ಭೇಟಿಯಾಗಿದ್ದಾಗಿ ಬೋರಿಸ್ ಹೇಳಿಕೊಂಡಿದ್ದಾನೆ. ಬೋರಿಸ್ ಪಾಸ್ತರ್‌ನಾಕ್, ಮಾಯಕೊವಸ್ಕಿ, ಯೆಸೆನಿನ್ ರೊಂದಿಗೆ ಸ್ತಾಲಿನ್ ಜಾರ್ಜಿಯನ್ ಕಾವ್ಯದ ರಷಿಯನ್ ಅನುವಾದದ ಕುರಿತು ಚರ್ಚಿಸಿದನೆಂದೂ ಹೇಳಿದ್ದಾನೆ. ಜಾರ್ಜಿಯನ್ ಮಾತೃಭಾಷೆಯಾಗಿದ್ದ ಸ್ತಾಲಿನ್‌ಗೆ ಅನುವಾದದಲ್ಲಿ ವಿಶೇಷ ಆಸಕ್ತಿಯಿತ್ತೆಂದು ಕಾಣುತ್ತದೆ. ಈ ಅವಧಿಯಲ್ಲಿ (೧೯೨೪-೪೦) ಬೋರಿಸ್ ತನ್ನ ವಿಶಿಷ್ಟ ಪ್ರಕಾರವಾದ ಭಾವಗೀತೆಯನ್ನು ಬಿಟ್ಟು ದೀರ್ಘ ಕವನಗಳತ್ತ ಒಲಿದಂತೆ ಕಾಣುತ್ತದೆ. ಜತೆಗೆ ಜಾರ್ಜಿಯನ್ ಕವಿಗಳನ್ನು, ರಿಲ್ಕ್, ಷೇಕ್ಸ್‌ಪಿಯರ್‌ರನ್ನು ಅನುವಾದಿಸುತ್ತ ಸಾಹಿತ್ಯ ಜೀವನ ಕಳೆದನೆನ್ನಬಹುದು. ತನ್ನ ಕಾಲಮಾನ ಬಯಸುವ ಕ್ರಾಂತಿಕಾರಿ ವಸ್ತುವನ್ನಾಯ್ದು '೧೯೦೫ ' (೧೯೨೫-೨೬) ಎಂಬ ಖಂಡಕಾವ್ಯ ; 'ಲೆಫ್ಟಿನೆಂಟ್ ಶ್ಮಿದ್' (೧೯೨೬-೨೭) ಎಂಬ ನೀಳ್ಗವಿತೆಯನ್ನಾತ ಪ್ರಕಟಿಸಿದ. ಇದೇ ವೇಳೆಯ ಇನ್ನಿತರ ಕತೆ-ಕವಿತೆಗಳ ವಸ್ತು ಕೂಡ ಕ್ರಾಂತಿ, ಸಮಾಜವಾದವನ್ನೇ ಪ್ರತಿಬಿಂಬಿಸುತ್ತಿದ್ದವು. 'ಲೆಫ್ಟಿನೆಂಟ್ ಶ್ಮಿದ್' ಬಗೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಮಕಾಲೀನ ಕವಿ ತ್ವೇತಯೇವಾಳಿಗೆ ಆ ಕವಿತೆ 'ನೋವಿಮೀರ್'ನಲ್ಲಿ ೧೯೨೬ರಲ್ಲಿ, ಪ್ರಕಟವಾದಾಗ ಅರ್ಪಿತವಾಗಿತ್ತು !

ಬೋರಿಸ್ ತನ್ನ ಮೊದಲ ಜೀವನ ವಿವರಣೆ 'ಸೇಫ್ ಕಂಡೆಕ್ಟ್'ನ ಮೊದಲೆರಡು ಭಾಗ ಬರೆದದ್ದು ಸುಮಾರು ೧೯೨೯ ರ ವೇಳೆಗೆ, ಸ್ತಾಲಿನ್ ವ್ಯಕ್ತಿತ್ವದ ಪ್ರಭಾವ ಎಲ್ಲೆಡೆ ಹರಡಿ, ಕೈಗಾರೀಕರಣ, ಕೃಷಿಯ ರಾಷ್ಟ್ರೀಕರಣ; ಆಡಳಿತದ

ಕೇಂದ್ರೀಕರಣವನ್ನು ವ್ಯವಸ್ಥಿತವಾಗಿ ಲಾಗೂ ಮಾಡಿದ ಸಂದರ್ಭದಲ್ಲಿ. ಇದರ ಕೊನೆಯ ಅಧ್ಯಾಯ ಬರೆದದ್ದು; ಮಾಯಕೋವಸ್ಕಿ ೧೯೩೦ರ ಬೇಸಿಗೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಾದ ಮೇಲೆ. ತುಸು ದಿನಗಳಿಗೆ ಬೋರಿಸ್‌ನ ಎರಡೂ, ಜೀವನ ವಿವರಣೆ : 'ಎ ಸೇಫ್ ಕಂಡೆಕ್ಟ್' ಹಾಗೂ 'ಆನ್ ಆಟೋಬಯಾಗ್ರಫಿಕಲ್ ಸ್ಕೆಚ್ 'ಬಗ್ಗೆ ಅಲೆಗ್ಸಾಂಡರ್ ಗ್ಲಾದ್‌ಕೋವ್ ಹೇಳುತ್ತಾನೆ - 'ಬಾಲ್ಯದ ಅನುಭವಗಳು, ರಿಲ್ಕ್, ಸ್ಕ್ರೀಬಿಯನ್, ಮಾಯಕೊವಸ್ಕಿ ಯನ್ನು ನೆನಪಿಸಿಕೊಳ್ಳುವ ಅಧ್ಯಾಯಗಳು, ರಾಗ-ದ್ವೇಷ ಚಿತ್ರಿಸುವ ಅಧ್ಯಾಯಗಳು ರಷಿಯಾದ ಶ್ರೇಷ್ಠ ಗದ್ಯ ಸಾಹಿತ್ಯಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲವು !'

ರಾಜಕೀಯ ಒತ್ತಡದಿಂದ ಭ್ರಮನಿರಸಗೊಂಡ ವ್ಲದೀಮೀರ್ ಮಾಯಕೋವಸ್ಕಿಯ ಸಾವು ಬೋರಿಸನ್ ಮೇಲೆ ಗಾಢ ಪರಿಣಾಮ ಬೀರಿತು. ಆತ್ಮಹತ್ಯೆಯ ಆಲೋಚನೆ ಸುಳಿದದ್ದೂ ಉಂಟು. ಈ ಮಧ್ಯೆ ಅವನ ಮೊದಲ ಹೆಂಡತಿ ಎವ್ಗೆನಿಯಾ ತನ್ನ ತಾಯಿ ತೀರಿಕೊಂಡಿದ್ದರಿಂದ ತೀವ್ರ ಖಿನ್ನತೆಗೆ ಒಳಗಾಗಿದ್ದಳು. ಜತೆಗೆ ಕ್ಷಯದಿಂದ ನರಳುತ್ತಿದ್ದಳು. ಬೋರಿಸ್ ಅತಿಕಷ್ಟದಿಂದ ವೀಸಾ ಪಡೆದು ಆಕೆಯನ್ನು ಶುಶ್ರೂಷೆಗೆ ಜರ್ಮನಿಗೆ ಕಳಿಸಿದ. ಮಗ ಎವ್ಗೆನಿಯನ್ನು ಮ್ಯೂನಿಚ್‌ನಲ್ಲಿದ್ದ ತಂದೆ-ತಾಯಿ ಬಳಿ ಕಳುಹಿಸಿದ. ಎವ್ಗೆನಿಯಾ ವ್ಲದಿಮೀರೊವ್ನಾ ಬೇಗ ಗುಣಮುಖಳಾಗಿದ್ದೆ ಬೋರಿಸ್‌ನ ದಾರಿ ಸುಗಮವಾಯಿತು.

ಅವನ ಸ್ನೇಹಿತೆಯಾದ ಜ಼ಿನೈದಾ ನಿಕೊಲೈಯೆವ್ನಾ ಅವನ ಎರಡನೇ ಜೀವನ ಸಂಗಾತಿಯಾದಳು. ಇಬ್ಬರೂ ೧೯೩೧ರ ಬೇಸಿಗೆಯಲ್ಲಿ ಜಾರ್ಜಿಯಾದ ರಾಜಧಾನಿ ಟಿಫ್ಲಿಸ್‌ಗೆ ಪಯಣಿಸಿದರು. ಬೋರಿಸ್‌ನ ಕವಿ ಗೆಳೆಯ ಯಾಷಿವಿಲಿ ಅವರಿಗೆ ಆಶ್ರಯ ಒದಗಿಸಿದ (ನೋಡಿ : 'ನನ್ನ ನೆನಪಿನಿಂದ') ಈ ಗಳಿಗೆಗಳು ಬೋರಿಸ್‌ನ ಬದುಕಿನ ಖುಷಿಯ ಗಳಿಗೆಗಳು. ಬೆಟ್ಟ, ನದಿ, ಸಮುದ್ರ, ಜನಪದಗೀತೆ, ಕವಿಗೋಷ್ಠಿ, ಮೆಚ್ಚಿದವಳ ಸಾಂಗ್ಯ.... ಹೀಗೆ. ನಿರ್ದಿಷ್ಟ ಆದಾಯ, ಇರಲೊಂದು ಸೂರು ಇಲ್ಲದಿದ್ದರೂ ಅವರ ಸಂತೋಷಕ್ಕೆ ಅದು ಅಡ್ಡಿಯಾಗಲಿಲ್ಲ. ಈ ಉತ್ಕಟ ಸಂತೋಷದಲ್ಲಿ ಆತ ಮತ್ತೆ ಭಾವಗೀತೆಗಳನ್ನು ಬರೆದ ! ಜ಼ಿನೈದಾ ಎಷ್ಟೋ ಕವಿತೆಗಳಿಗೆ ಸ್ಫೂರ್ತಿಯಾದಳು. ಈ ಭಾವಗೀತೆಗಳ ಚಿಕ್ಕ ಸಂಗ್ರಹ 'ಸೆಕೆಂಡ್ ಬರ್ತ್' ೧೯೩೨ರಲ್ಲಿ ಪ್ರಕಟವಾಯಿತು. ನಿನ್ನ ಸರಳ, ಸಹಜ

ನಿರಾಡಂಬರ ಉತ್ಕಟ ಪ್ರೀತಿ ಬದುಕಿನ ಎಷ್ಟೋ ಸಂಕೀರ್ಣ ಸಮಸ್ಯೆಗೆ ಉತ್ತರ ಹುಡುಕಿಕೊಡುತ್ತವೆ ಎಂದು ಜ಼ಿನೈದಾಳ ಕುರಿತು ಬೋರಿಸ್ ಕಾವ್ಯಕಟ್ಟಿದ.

ಜಾರ್ಜಿಯಾದಿಂದ ವಾಪಸ್ಸು ಬಂದ ಹೊಸ ಜೋಡಿಗೆ ಮತ್ತೆ ಸಂಸಾರ ತಾಪತ್ರಯ ಶುರುವಾದವು. ಮೊದಲ ಹೆಂಡತಿ ಎವ್ಗೆನಿಯಾ ಗಂಡ ವಿಚ್ಛೆದನ ವಾಪಸ್ಸು ಪಡೆಯುವನೆಂಬ ನಂಬಿಕೆಯಿಂದ ಹಿಂತಿರುಗಿ ಬಂದಿದ್ದಳು. ಇದೀಗ ಬೋರಿಸ್ ಸಂಕಷ್ಟಕ್ಕೆ ಒಳಗಾದ. ಕಿಷ್ಕಿಂದೆ ಮನೆ ! ಇಬ್ಬರು ಜತೆಗಾತಿಯರು ! ಬೋರಿಸ್ ತನ್ನ ಮೊದಲ ಪತ್ನಿಯನ್ನು ಆದಷ್ಟು ಖುಷಿಯಾಗಿಡುವ ಉದ್ದೇಶದಿಂದ ವೊಲ್ಕೊನ್ಕಾ ಓಣಿಯ ಮನೆಯನ್ನು ಆಕೆಗೆ ಬಿಟ್ಟುಕೊಟ್ಟ. ಅವಳು ನೆಮ್ಮದಿಯಿಂದ ಬದುಕಲು ಬೇಕಾಗುವ ಹಣವನ್ನೂ ಒದಗಿಸಿದ. ಆತನ ಚಿಕ್ಕಪುಟ್ಟ ಕಾಯಿಲೆ, ಹಣದ ತೊಂದರೆಯನ್ನು ಕಡೆಗಾಣಿಸಿ ಚೆನ್ನಾಗಿ ನೋಡಿಕೊಳ್ಳಲು ಯತ್ನಿಸಿದ.

ಈ ರೀತಿಯಿಂದ ನೋಡಿದರೆ ಮೊದಲ ಪತ್ನಿಗಿಂತ ಜ಼ಿನೈದಾ ನಿಕೊಲಾಯಿವ್ನ ಬೋರಿಸ್‌ನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಳು. ಬೋರಿಸ್‌ನ ಬೇಕು- ಬೇಡಗಳನ್ನು ತಿಳಿದು ನಿಭಾಯಿಸುವುದರೊಂದಿಗೆ ಮೊದಲ ಗಂಡನಿಂದ ಪಡೆದ ತನ್ನ ಮಕ್ಕಳನ್ನೂ ನೋಡಿಕೊಳ್ಳುತ್ತಿದ್ದಳು. ಜ಼ಿನೈದಾಳ ಮನೆ ಹೆಂಡತಿ ಸ್ವಭಾವ ಬೋರಿಸ್‌ನ ಮುಂದಿನ ಮೂವತ್ತು ವರ್ಷಗಳ ಕಾಲ ಒಂದು ರೀತಿಯಿಂದ ಸುಗಮ ಎನ್ನುವಂತೆ ಮಾಡಿತು. ಆದರೆ ಮುಂದೆ ಇದೇ ಬೋರಿಸ್‌ನೇ ತನ್ನ ಎರಡನೇ ಮದುವೆ ಸಂತೋಷಕರವಾಗಿರಲಿಲ್ಲ . ತನ್ನ ಗಂಡನನ್ನು ಬಿಟ್ಟು ಬಂದವಳೊಂದಿಗೆ ಹೊಂದಿಕೊಂಡು ಬದುಕಿದಂತಿತ್ತು ಎಂದಿದ್ದಾನೆ. ಜ಼ಿನೈದಾಳಿಗೆ ಕೆಲವು ಇತಿ -ಮಿತಿಗಳಿದ್ದವು, ಆಕೆ ಬೋರಿಸ್‌ನ ಆತ್ಮ ಸಂಗಾತಿಯಾಗುವಷ್ಟು ಬುದ್ಧಿವಂತಳಾಗಿರಲಿಲ್ಲ. ಒಂದರ್ಥದಲ್ಲಿ ಕಾವ್ಯ-ಸಂಗೀತ ತಿಳಿಯದ ಕಗ್ಗಳಾಗಿದ್ದಳು. ಅವಳ ಈ ಗುಣ ಬೋರಿಸ್ ಮುಂದೆ ಉತ್ತಮ ಕಾವ್ಯ ಬರೆಯದಂತೆ ಮಾಡಿತು, ಎಂದು ಆನಾ ಆಖ್ಮತೋವಾ ಗುರ್ತಿಸುತ್ತಾಳೆ. ಏನೇ ಆದರೂ ಆತನ ಅಂತಿಮ ಗಳಿಗೆಯವರೆಗೆ, ಆಗೀಗಿನ ಜಾರ್ಜಿಯಾದ ಪ್ರಯಾಣದಲ್ಲಿ ಜ಼ಿನೈದಾ ಇದ್ದುದು ನಿಜ.

ಇಡೀ ವ್ಯವಸ್ಥೆಯ ಕೇಂದ್ರಿಕರಣದಿಂದ ಅಭಿವ್ಯಕ್ತಿ ಸ್ವಾತಂತ್ರ್ಯ ಬಯಸುತ್ತಿದ್ದ, ಅನ್ನಿಸಿದಂತೆ ಬರೆಯಬೇಕೆಂಬ ನಿಲುವಿದ್ದ ಬರಹಗಾರರ ಮೇಲೆ ಸೋವಿಯೆತ್

ಆಡಳಿತಗಾರರ ದೃಷ್ಟಿ ಬಿತ್ತು. ಮೊದಲ ಪಂಚವಾರ್ಷಿಕ ಯೋಜನೆ ಜಾರಿಗೊಂಡಾಗ, ಯಾವ ಬರಹಗಾರ ತನ್ನ ಬರಹದಲ್ಲಿ ಯೋಜನೆಯ ಕುರಿತು ಒಳ್ಳೆಯ ಅಭಿಪ್ರಾಯವನ್ನು ಹೊಂದಿಲ್ಲವೋ ಅಂಥವರನ್ನು ಹುಡುಕಲಾಯಿತು. ಬೋರಿಸ್‌ನ 'ಸೆಕೆಂಡ್ ಬರ್ತ್'ನ ಬಹುತೇಕ ಗೀತೆ-ಕವಿತೆಗಳು ಹೊಸ ಸಮಾಜವನ್ನು; ಅದರ ರೂವಾರಿ ಸ್ತಾಲಿನ್‌ನನ್ನು ಕೆಲವೆಡೆ ದಂಡಿಯಾಗಿಯೇ ಪ್ರಶಂಸಿಸಿದ್ದವು. ಕೆಲವೆಡೆ ಸ್ತಾಲಿನ್‌ನನ್ನು 'ಕಕೇಷಿಯನ್ ಪರ್ವತಕ್ಕೂ' ಅದನ್ನು ಜಯಿಸಿದ ಶೂರನಿಗೂ ಹೋಲಿಸಿದ್ದ. 'ಕ್ರಾಂತಿ ಕತ್ತಲಿನಿಂದ ಬೆಳಕಿನೆಡೆ ನಮ್ಮೆಲ್ಲರನ್ನೂ ತಂದಿದೆ', ಎಂದ, 'ತನ್ನ ದೇಶ ಗುಲಾಬಿಯಂತೆ ಅರಳಿದೆ', ಎಂದ, ಸ್ತಾಲಿನ್‌ನನ್ನು ಸ್ತಾಲಿನ್‌ವಾದವನ್ನು ಹೆಚ್ಚಾಗಿಯೇ ಹೊಗಳಿದ.

೧೯೩೦ರ ದಶಕದ ಬೋರಿಸ್ ಪಾಸ್ತರನಾಕ್‌ನ ರಾಜಕೀಯ ನಿಲುವು ಮೊದಲೇ ಹೇಳಿದಂತೆ ಹಲವೊಮ್ಮೆ ಅಸ್ಪಷ್ಟ, ಹಲವೊಮ್ಮೆ ಪಕ್ವವಾಗದ ಬಾಲಿಶವಾದ ನಿರ್ಧಾರಗಳಂತೆ ಕಾಣುತ್ತದೆ. ಅವನ ಹೊಗಳಿಕೆ -ತೆಗಳಿಕೆ, ಪುರಸ್ಕಾರ-ತಿರಸ್ಕಾರಗಳು ಅವನ ನಿಜವಾದ ನಿಲುವೇನಾಗಿತ್ತೆಂಬುದನ್ನು ತಿಳಿಸಲು ಕಷ್ಟಸಾಧ್ಯವಾಗಿಸುತ್ತವೆ. ಒಂದೆಡೆ ಸ್ತಾಲಿನ್‌ನನ್ನು ಅಟ್ಟಕ್ಕೇರಿಸುವುದು, ದಿಢೀರನೆ ಪಾತಾಳಕ್ಕೆ ತಳ್ಳುವಂಥ ರೂಪಕಗಳನ್ನು ಉಪಯೋಗಿಸಿ ಕವಿತೆಗಳನ್ನು ಬರೆಯುವುದು ನಡೆದೇ ಇತ್ತು. [ನೋಡಿ : 'ಹ್ಯಾಮ್ಲೆಟ್', 'ಅರಿತಿರಬೇಕಾಗಿತ್ತು ನಾನು, ಇದರ ಹಾದಿ' ಕವಿತೆಗಳು] ಇವನ ಗೊಂದಲ, ದ್ವಂದ್ವ ಡೋಲಾಯಮಾನ ನಿಲುವುಗಳು ಎಷ್ಟೋ ಸೂಕ್ಷ್ಮ-ಸಂಕೀರ್ಣ ಸಂದರ್ಭಗಳಲ್ಲಿ ಅವನ ಒಟ್ಟಾರೆ ವ್ಯಕ್ತಿತ್ವವನ್ನು ಅನುಮಾನದಿಂದ ನೋಡುವಂತೆ ಮಾಡುವುದು ಸುಳ್ಳಲ್ಲ. ಈ ದಶಕದಲ್ಲಿ ಸಾಧ್ಯವಾದಷ್ಟು ಆತ ಸ್ತಾಲಿನ್‌ಗೆ ಹತ್ತಿರದವನಾಗಲು ಪ್ರಯತ್ನಿಸಿದಂತಿದೆ; ಹಾಗೆ ಸ್ತಾಲಿನ್‌ಗೆ ಹತ್ತಿರದವನಾಗಿ ಆತನ ರಾಜಕೀಯ ನಿಲುವುಗಳನ್ನು ಬದಲಿಸಲು ಯತ್ನಿಸಿದಂತೆಯೂ ಕಾಣುತ್ತಾನೆ. ಆತನ ಅಂಥ ಗೊಂದಲಗಳನ್ನು ಪ್ರತಿನಿಧಿಸುವ ಕವಿತೆಗಳಲ್ಲಿ ಕಾಣಬಹುದು. 'ಸ್ತಾಲಿನ್' ತನ್ನ ರಾಜಕೀಯ ನಿಲುವುಗಳನ್ನು ಬದಲಿಸಿಕೊಳ್ಳುವಂತೆಯೂ ಬೋರಿಸ್ ಕವಿತೆಯೊಂದನ್ನು ಬರೆದ.

ಈ ಸರಿಸುಮಾರಿಗೆ, ಅಂದರೆ ನವೆಂಬರ್ ೭, ೧೯೩೨ರಲ್ಲಿ ಸ್ತಾಲಿನ್‌ನ ಎರಡನೇ ಪತ್ನಿ ನದೇಜಾ ಗುಂಡು ಹೊಡೆದುಕೊಂಡು ಸತ್ತಾಗ, ಬೋರಿಸ್‌ನ ನಿಲುವು ಶ್ಲಾಘನೀಯವಾಗಿದೆ. ಸರ್ಕಾರಿ ಪತ್ರಿಕೆಗಳು ಸತ್ಯವನ್ನು ಮುಚ್ಚಿಟ್ಟು ವರದಿ

ಪ್ರಕಟಿಸಿದರೆ ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಮೂವತ್ಮೂರು ಲೇಖಕರು ಸಹಿಮಾಡಿದ, ನದೇಜಾಳನ್ನು, ಸ್ತಾಲಿನ್‌ನನ್ನು ಹೊಗಳಿ ಅಟ್ಟಕ್ಕೇರಿಸಿದ ಪತ್ರವನ್ನು ಸಾಹಿತ್ಯಕ ಗೆಝೆಟ್ ೧೭, ನವೆಂಬರ್ ೧೯೩೨ರಂದು ಪ್ರಕಟಿಸಿತು. ಬೋರಿಸ್‌ನಿಗೂ ಆ ಪತ್ರಕ್ಕೆ ಸಹಿ ಮಾಡಲು ಕೇಳಿದಾಗ ತಿರಸ್ಕರಿಸಿದ ಬೋರಿಸ್, ನದೇಜಾ ಸಾಯುವ ಹಿಂದಿನ ದಿನ ಮೊದಲ ಬಾರಿಗೆ ಸ್ತಾಲಿನ್ ಕುರಿತು ಆಳವಾಗಿ ಯೋಚಿಸುತ್ತಿದ್ದೆ .... ಮರುದಿನ ಪತ್ರಿಕೆಗಳಲ್ಲಿ ಸುದ್ದಿಯೋದಿ ನಡುಗಿದಂತಾಯ್ತು. ನಾನೇ ಸ್ತಾಲಿನ್ ಪಕ್ಕದಲ್ಲಿಂತೆ, ಆ ಘಟನೆಗೆ ಸಾಕ್ಷಿಯಾದಂತೆನಿಸಿತು ಎಂದು ಬರೆದುಕೊಂಡ. ನಿಲುವು ಅತ್ಯಂತ ಕಠಿಣವಾದುದಾಗಿತ್ತು. ನಾಯಕನ ವೈಯಕ್ತಿಕ ಬದುಕನ್ನು ಒಂದೆಡೆ ಕೆದಕಿದ್ದರೆ, ಇನ್ನೊಂದೆಡೆ ಈ ಮುಂಚೆ ಸ್ತಾಲಿನ್‌ನನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ ಎಂದೂ ಅರ್ಥಹೊರಡಿಸುತ್ತಿತ್ತು. ಆದರೆ ಈ ಪತ್ರದ ಮೂಲಕವೂ ಬೋರಿಸ್‌ನನ್ನು ಸ್ತಾಲಿನ್ ಭೇಟಿಯಾಗುವ ಇಚ್ಛೆ ವ್ಯಕ್ತಪಡಿಸಲಿಲ್ಲ.

ಕವಿ ಒಸಿಪ್ ಮಾಂದಲ್‌ಷ್ತಮ್ ಸ್ತಾಲಿನ್ - ಬೋರಿಸ್‌ನ ಸಂಬಂಧಕ್ಕೆ ಹೊಸ ತಿರುವು ನೀಡಿದ. ಮಾಂದಲ್‌ಷ್ತಮ್ ಬೋರಿಸ್‌ನಂತೆ ಲೆನಿನ್-ಸ್ತಾಲಿನ್‌ರನ್ನು ಪ್ರಶಂಸಿಸಿ ಪದ್ಯ ಬರೆದವನಲ್ಲ. ಈ ಕಾರಣದಿಂದಾಗಿಯೇ ಬದುಕಲು ಸರಿಯಾದ ಮಾರ್ಗವಿಲ್ಲದೆ ಪರಿಪರಿಯಾಗಿ ನೋವು ಅನುಭವಿಸಿದನು. ಇದೀಗ ಸ್ತಾಲಿನ್‌ನನ್ನು ಹೀನಾಯವಾಗಿ ಕಾಣುವ ಕವಿತೆಯೊಂದನ್ನು ಬರೆದು ಎಲ್ಲರೆದುರೂ ಓದುತ್ತಿದ್ದ. 'ಕ್ರೆಮ್ಲಿನ್‌ನ ಯಜಮಾನ, ಹುಳುವಿನ ಹೊಟ್ಟೆಯಂತೆ ದಪ್ಪದ ಬೆರಳಿನವ, ಜಿರಳೆ ಕಾಲಂತೆ ಮೀಸೆ ಬಿಟ್ಟವ' ಇತ್ಯಾದಿಯಾಗಿ ಸ್ತಾಲಿನ್‌ನನ್ನು ಅದರಲ್ಲಿ ದೂಷಿಸಿದ್ದ.

ಏಪ್ರಿಲ್ ೧೯೩೪ರಲ್ಲಿ ಮಾಸ್ಕೋದ ತಿವೇರ್ ಬೋಲಿವಾರ್ಡ್‌ನಲ್ಲಿ ಪಾಸ್ತರ್‌ನಾಕ್‌ನನ್ನು ಮಾಂದಲ್‌ಷ್ತಮ್ ಭೇಟಿಯಾದ. ಸ್ತಾಲಿನ್ ಬಗ್ಗೆ ಬರೆದ ಕವಿತೆಯನ್ನು ಓದಿದ್ದಾದ ಮೇಲೆ - 'ನೀನದನ್ನು ಓದಲೂ ಇಲ್ಲ; ನಾನು ಕೇಳಲೂ ಇಲ್ಲ' ಎಂದು ಬೋರಿಸ್ ಅವನಿಗೆ ಹೇಳಿ ಕಳಿಸಿದ. ಮುಂದೆ ತಕ್ಷಣವೇ ಮಾಂದಲ್‌ಷ್ತಮ್‌ನ ದಸ್ತಗಿರಿಯಾಯಿತು. ಈ ವಿಷಯವನ್ನು ಅಧಿಕಾರಿಗಳಿಗೆ ತಿಳಿಸಿದವನು ನಾನಲ್ಲ ಎಂದು ಹೇಳಿಕೊಂಡು ಬೋರಿಸ್ ಇಡೀ ಮಾಸ್ಕೋ ಓಡಾಡುವಂತಾಯ್ತು.

ಬೋರಿಸ್ ಸುಮ್ಮನೆ ಕೂಡಲಿಲ್ಲ. ಮಾಂದಲ್‌ಷ್ತಮ್ ಬಿಡುಗಡೆಗಾಗಿ ನಿಕೋಲಾಯ್ ಬುಖರಿನ್‌ನನ್ನು ಕಂಡು ವಸ್ತುಸ್ಥಿತಿ ವಿವರಿಸಿದ. ಬುಖ್ರಿನ್ ಸ್ತಾಲಿನ್‌ನೊಂದಿಗೆ ಈ ಕುರಿತು ಚರ್ಚಿಸಿದ ಮೇಲೆ ಬೋರಿಸ್‌ನೊಂದಿಗೆ ಸ್ತಾಲಿನ್ ಎರಡು ಸಲ ದೀರ್ಘವಾಗಿ ಟೆಲಿಫೋನಿನಲ್ಲಿ ಮಾತಾಡಿದ. ಫಲಿತಾಂಶ ಮಾತ್ರ ಸೊನ್ನೆಯಾಗಿತ್ತು. ಮಾಂದಲ್‌ಷ್ತಮ್‌ನನ್ನು ಮೂರು ವರ್ಷ ಗಡಿಪಾರು ಶಿಕ್ಷೆ ನೀಡಿದ್ದು, ಅತಿ ಕಡಿಮೆ ಎಂಬುದು ಬೋರಿಸ್‌ನ ಅನ್ನಿಸಿಕೆಯಾಗಿತ್ತು. ಏನೇ ಆದರೂ ವಿಫಲತೆಯಿಂದ ನೊಂದ ಬೋರಿಸ್ ಈ ಕಾರಣದಿಂದಾ ಗಿಯೇ ಕವಿತೆಗಳನ್ನು ಬರೆಯಲಾಗುತ್ತಿಲ್ಲವೆಂದು ಮಾಂದೆಲ್‌ಷ್ತಮ್‌ನ ಪತ್ನಿ ನದೇಜಾಳಿಗೆ ಹೇಳಿದ್ದ. ಮುಂದೆಯೂ ಮಾಂದೆಲ್‌ಷ್ತಮ್‌ನಿಂದ ಬೋರಿಸ್ ಅವಮಾನ ಮಾಡಿಕೊಳ್ಳುವಂತಾಯ್ತು.

●

●

ಹೊಸ ಸಮಾಜವಾದಿ ವ್ಯವಸ್ಥೆಯಲ್ಲಿ ಬರಹಗಾರರ ಒಕ್ಕೂಟವೇ ಬರಹಗಾರರ ಪರವಾಗಿ ಅಂತಿಮ ತೀರ್ಮಾನ ಕೈಗೊಳ್ಳುತ್ತಿತ್ತು. ಪುಸ್ತಕ ಪ್ರಕಟವಾಗಲು, ಸಂಭಾವನೆ ಪಡೆಯಲು ಒಕ್ಕೂಟದ ಸದಸ್ಯರಾಗಿರುವುದು ಅವಶ್ಯಕವಾಗಿತ್ತು. ಈ ಸಮಯದಲ್ಲಿ ಅನೇಕ ಕುಕವಿಗಳು, ಸಮಯಸಾಧಕ ಬರಹಗಾರರು ಸರ್ಕಾರವನ್ನು ಅಧಿಕಾರದಲ್ಲಿದ್ದವರನ್ನು ಹಾಡಿಹೊಗಳುವ ಸಾಹಿತ್ಯ ಬರೆದು ಸರ್ಕಾರದಿಂದ ಎಲ್ಲ ಐಷಾರಾಮಿ ಸವಲತ್ತುಗಳನ್ನು ಪಡೆಯುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು.

ಇಂತಹ ಬೆಳವಣಿಗೆ ಕುರಿತು ಪಾಸ್ತರ್‌ನಾಕ್‌ನ ನಿಲುವು ಭಿನ್ನವಾಗಿತ್ತು. ಆತ ಈ ಹೊಸಸಾಹಿತ್ಯ ಕಳೆಯನ್ನು ಕಿತ್ತೊಗೆಯಲು ಜಾರ್ಜಿಯಾ-ರಷಿಯಾದಲ್ಲೆಲ್ಲ ಸಾಹಿತಿಗಳನ್ನು ಸಂಘಟಿಸಲು ನೋಡಿದ. ಜಾರ್ಜಿಯಾದಲ್ಲಿ ಕಲಾವಿದರ ಒಕ್ಕೂಟ ಸ್ಥಾಪಿಸಲು ಸೋವಿಯೆತ್ ಸರ್ಕಾರವೇ ೧೯೩೩ರಲ್ಲಿ ಅವನನ್ನಲ್ಲಿಗೆ ಕಳಿಸಿತು. ಆತ ರಷಿಯಾದ ಬರಹಗಾರರ ಒಕ್ಕೂಟಕ್ಕೆ ಚುನಾಯಿತನಾಗಿದ್ದ. ಈ ಸಮಯದಲ್ಲಿ ಗಡಿಪಾರಾಗಿ ಓರೋನ್ಜದಲ್ಲಿದ್ದ ಮಾಂದಲ್‌ಷ್ತಮ್, ಬೋರಿಸ್, ಸರ್ಕಾರಕ್ಕೆ ಮಾರಾಟವಾದವನೆಂದು ದೂಷಿಸಿದ. ಮಾಂದಲ್‌ಷ್ತಮ್‌ನನ್ನು ಕಂಡರಾಗದವರು ಈತ ಸದ್ಯದ ಒಕ್ಕೂಟಕ್ಕೆ

ವಿರುದ್ಧವಾಗಿ ಟ್ರಾಟ್‌ಸ್ಕಿಯೇಟ್ ಒಕ್ಕೂಟವನ್ನು ಓರೋನ್ಸದಲ್ಲಿ ಸಂಘಟಿಸುತ್ತಿದ್ದಾನೆಂದು ಆಪಾದಿಸಿದರು.

ಬರಹಗಾರರ ಒಕ್ಕೂಟದ ಮೊದಲ ಅಧಿವೇಶನದಲ್ಲಿ ಬೋರಿಸ್ ಪಾಲ್ಗೊಂಡದ್ದು ತುಂಬ ಗೊಂದಲಮಯದ್ದಾಗಿದೆ. ಎಲ್ಲರ ಜತೆಯಲ್ಲಿ ವೇದಿಕೆಯೇರಿ ಕೂತು ಬೋರಿಸ್‌ನನ್ನು ಎಲ್ಲರೂ ಹಾಡಿ ಹರಸಿದರು ! ಅವನೆಲ್ಲ ದ್ವಂದ್ವದ ನಡುವೆಯೂ ಶ್ರೇಷ್ಠ ಕವಿ ಎಂಬ ಮಾತೂ ಬಂದವು. ಬೋರಿಸ್‌ನನ್ನು ಈ ಅಸಾಹಿತಿಗಳು ಹೊಗಳಲು ತಕ್ಕ ಸಮಯವಿದಾಗಿತ್ತು ! ಏಕೆಂದರೆ ಮಾಯಕೊವಸ್ಕಿ, ಯೆಸೆನಿನ್ ತೀರಿಕೊಂಡಿದ್ದರು. ತ್ಸ್ವೇತಯೇವಾ ದೇಶಬಿಟ್ಟು ಅಲೆಮಾರಿಯಾಗಿದ್ದಳು. ಆನಾ ಅಖ್ಮತೋವಾ, ಮಾಂಡಲ್‌ಷ್ತಮ್ ಅವಕೃಪೆಗೆ ಗುರಿಯಾಗಿ ಭೂಗತ ಸ್ಥಿತಿಯಲ್ಲಿದ್ದರು. ಉಳಿದದ್ದು - ಬೋರಿಸ್ ಒಬ್ಬನೇ.

●

●

೧೯೩೫ರಲ್ಲಿ ಬೋರಿಸ್ ತೀವ್ರ ಕಾಯಿಲೆಗೆ ಒಳಗಾಗಿ ನಿದ್ರಾಹೀನತೆಯಲ್ಲಿ ಒಂದು ವರ್ಷ ಬಳಲಿದ [ನೋಡಿ : 'ಗೆಳೆಯರಿಗೆಂದು ಬರೆದ ಕಾಗದಗಳು'] ಇಂಥ ಕಾಯಿಲೆಯಲ್ಲೂ ಜೂನ್ ತಿಂಗಳಲ್ಲಿ ಆತ ಪ್ಯಾರಿಸ್‌ಗೆ ಹೋಗಬೇಕಾಯ್ತು. ಪ್ಯಾರಿಸ್‌ನ ಬರಹಗಾರರ ಒಕ್ಕೂಟವೊಂದು 'ಬೆಳೆಯುತ್ತಿರುವ ಫ್ಯಾಸಿಸಂ' ಬಗ್ಗೆ ಸಮಾವೇಶವೊಂದನ್ನು ನಡೆಸಿದ್ದರು. ರಷ್ಯಾದಿಂದ ಅಲೆಕ್ಸಿ ಟಾಲ್‌ಸ್ಟಾಯ್, ಇಲ್ಯಾ, ಎಹ್ರೆನ್‌ಬರ್ಗ್, ಇಜ್ಹಾಕ್ ಬಬೆಲ್‌ರನ್ನೊಳಗೊಂಡ ಬರಹಗಾರರ ತಂಡ ಅಲ್ಲಿಗೆ ಹೊರಟಿತ್ತು. ಕೊನೆಗಳಿಗೆಯಲ್ಲಿ ಫ್ರೆಂಚ್ ಬರಹಗಾರರು ಬೋರಿಸ್‌ನನ್ನು ಕಳಿಸುವಂತೆ ಒತ್ತಾಯಿಸಿದ್ದರಿಂದ ಸ್ತಾಲಿನ್‌ನ ಕಾರ್ಯದರ್ಶಿ ಬೋರಿಸ್‌ನನ್ನು ಪ್ಯಾರಿಸ್‌ಗೆ ಹೋಗುವಂತೆ ತಿಳಿಸಲು ಬಂದಿದ್ದ.

ಪ್ಯಾರಿಸ್‌ಗೆ ಹೋಗುವ ದಾರಿಯಲ್ಲಿ ಮ್ಯೂನಿಚ್‌ನಲ್ಲಿದ್ದ ಬೋರಿಸ್‌ನ ತಂಗಿ ಜೋಸೆಫಿನ್ ಅಣ್ಣನನ್ನು ನೋಡಲು ಬರ್ಲಿನ್‌ಗೆ ಬಂದಿದ್ದಳು. ಬೋರಿಸ್ ಖಿನ್ನನಾಗಿ ಕಣ್ಣಲ್ಲಿ ನೀರು ತುಂಬಿಕೊಂಡಿದ್ದನ್ನಾಕೆ ಗಮನಿಸಿದಳು. ಅನಿವಾರ್ಯವಾಗಿ ಪ್ಯಾರಿಸ್‌ಗೆ ಹೋಗಬೇಕಾಗಿರುವ ಪರಿಸ್ಥಿತಿಯನ್ನು ಬೋರಿಸ್ ವಿವರಿಸಿದ.

ಪ್ಯಾರಿಸ್‌ನಲ್ಲಿ ಬೋರಿಸ್‌ಗೆ ಒಳ್ಳೆಯ ಸನ್ಮಾನವೇ ದೊರೆಯಿತು. ಆತನ ಫ್ರೆಂಚ್ ಅನುವಾದಿತ ಕವಿತೆ ಓದಲಾಯಿತು. ಜನ ಅವನ ಕವಿತೆಗಳನ್ನು ಮೆಚ್ಚಿಕೊಂಡರು.

ಇದಕ್ಕಿಂತ ಹೆಚ್ಚಾಗಿ ಆತ ತಾನು ಹಿಂದೆ ಪ್ರೀತಿಸಿದ್ದ ಇಡಾಳನ್ನು ನೋಡಿದ. ಆಕೆ ಪ್ರಚೋದಿಸುವ ರೀತಿಯಲ್ಲಿ ಉಡುಗೆತೊಟ್ಟು ನಿದ್ದೆಗೆಡಿಸುವವಳಂತಿದ್ದಳು ! ಇನ್ನೂ ಹೆಚ್ಚಿನದೆಂದರೆ ಬೋರಿಸ್ ಮರೀನಾ ತ್ಸ್ವೇತಯೇವಾಳನ್ನು ಸಮಾವೇಶದಲ್ಲಿ ಕಂಡದ್ದು., ಆಕೆಯೊಂದಿಗೆ, ಆಕೆ ವಾಸಿಸುತ್ತಿದ್ದ 'ಮೆದೋನ್'ನಲ್ಲಿದ್ದ ಅವಳ ಮನೆಗೂ ಹೋದ. ತ್ಸ್ವೇತಯೇವಾ ಇನ್ನೊಬ್ಬ ಚೆಂದದ ಹೆಂಡತಿಯನ್ನು ಕಟ್ಟಿ ಕೊಂಡಿದ್ದಕ್ಕೆ ಬೋರಿಸ್‌ನೊಂದಿಗೆ ಮುನಿಸುಗೊಂಡಿದ್ದಳು ! ನಮ್ಮಿಬ್ಬರ ಪ್ರೀತಿಯನ್ನು ನೀನು ಮುರಿದೆ ಎಂದೂ ಬೈದಳು. ಪಾಸ್ತರ್‌ನಾಕ್ - 'ತ್ಸ್ವೇತಯೇವಾ ಹೆಣ್ಣಿಗಿರಬಹುದಾದ ಎಲ್ಲ ಹುಚ್ಚಿನ ಪ್ರತಿರೂಪದಂತೆ ಕಂಡಳು '!

೧೯೩೫ರ ವೇಳೆಗೆ ಅವನ ಕವಿತೆಗಳು ಇಂಗ್ಲಿಷ್‌ಗೆ ಅನುವಾದಗೊಂಡು ಪ್ರಕಟವಾದವು. ಅವನ ಆತ್ಮ ವಿವರಣೆ 'ಎ ಸೇಫ್ ಕಂಡೆಕ್ಟ್ 'ನ ರೆಘುಕ್ ಅನುವಾದವೂ ಈಗಲೇ ಪ್ರಕಟವಾಯಿತು. ೧೯೩೪-೩೭ರಲ್ಲಿ ಆತ ಸಂಪೂರ್ಣವಾಗಿ ಜಾರ್ಜಿಯನ್ ಕವಿತೆಗಳ ಅನುವಾದದಲ್ಲಿ ಕಳೆದ. ಅವನ ಪ್ರಾಣಸ್ನೇಹಿತರಾಗಿದ್ದ ಪಾವೆಲ್ ಯಾಷಿವಿಲಿ, ತಬಿಜ್ಞೆ ಇದೇ ಸಮಯದಲ್ಲಿ ಅನುವಾದಗೊಂಡರು.

ಸ್ತಾಲಿನ್‌ನ ಆಡಳಿತದಲ್ಲಿ ಕಲಾವಿದರ ಬರಹಗಾರರ ದಸ್ತಗಿರಿ ನಡೆದೇ ಇತ್ತು. ಆನಾ ಅಖ್ಮತೋವಾಳ ಅಧಿಕೃತವಾಗಿ ಮದುವೆಯಾಗಿದ್ದ ಪತಿ-ಕಲಾ ಇತಿಹಾಸಕಾರ ನಿಕೋಲಾಯ್ ಪುನಿನ್‌ನನ್ನು ಇದೇ ವೇಳೆಯಲ್ಲಿ ಬಂಧಿಸಲಾಯಿತು. ಬೋರಿಸ್ ಪುನಿನ್‌ನನ್ನು ಬಿಡುಗಡೆ ಮಾಡುವಂತೆ ವಿನಂತಿಸಿ ಸ್ತಾಲಿನ್‌ಗೆ ಪತ್ರ ಬರೆದ. ಫಲಿತಾಂಶ ಎಷ್ಟೊಂದು ಶೀಘ್ರವಾಗಿತ್ತೆಂದರೆ ತಕ್ಷಣವೇ ಪುನಿನ್‌ನನ್ನು ಬಿಡುಗಡೆ ಮಾಡಲಾಯ್ತು, (೧೯೩೫) !

ಆಡಳಿತ ಬಿಗಿಮುಷ್ಟಿ ಎಲ್ಲೆಡೆ ಚಾಚಿದ ಸಂದರ್ಭದಲ್ಲೇ ಮಾಂದಲ್‌ಷ್ತಮ್‌ನ ಗಡಿಪಾರು ಅವಧಿ ಮುಗಿದು (೧೯೩೭) ಮಾಸ್ಕೋಕ್ಕೆ ಮರಳುವ ದಾರಿಯಲ್ಲಿ ಪೆರಿಡೆಲ್ಕಿನೊ ನಿಲ್ದಾಣದಲ್ಲಿ ಪಾಸ್ತರ್‌ನಾಕ್‌ನನ್ನು ಭೇಟಿಯಾದರು.

ಮಾಂದಲ್‌ಷ್ತಮ್ ದಂಪತಿಗಳು ಮನೆಗೆ ಬರಕೊಡದೆಂದು ಜ಼ಿನೈದಾ ತಾಕೀತು ಮಾಡಿದ್ದಳು - ಗಂಡನನ್ನು ಅವಮಾನಿಸಿದವರೆಂಬ ಕಾರಣಕ್ಕೆ! ನಿಲ್ದಾಣದಲ್ಲೇ ಮಾಂದೆಲ್‌ಷ್ತಮ್ ಗಂಡ-ಹೆಂಡತಿ ಮಾತಾಡುತ್ತಾ ಮೈಮರೆತು ಮಾಸ್ಕೋದ ರೈಲನ್ನು ತಪ್ಪಿಸಿಕೊಂಡರು. ಆ ಮಾತುಕತೆಯಲ್ಲೂ ಪಾಸ್ತರ್‌ನಾಕ್‌ಗೆ ಸ್ತಾಲಿನ್ ಬಗ್ಗೆ ಇನ್ನೂ ಅಪಾರ ಪ್ರೀತಿ - ಗೌರವವಿದೆಯೆಂದು ಕಂಡುಕೊಂಡಳು. ೧೯೩೮ರಲ್ಲಿ ಮಾಂದಲ್‌ಷ್ತಮ್ ಎರಡನೇ ಬಾರಿ ದಸ್ತಗಿರಿಗೊಳಗಾದ. ಆತನನ್ನು ಪೂರ್ವದಾಚೆಗೆ ಕಳಿಸಲಾಯ್ತು. ಆತನ ಸಾವಿನ ಕುರಿತು ಸರಿಯಾದ ವಿವರಗಳು ಕೊನೆಗೂ ಸಿಕ್ಕಲಿಲ್ಲ.

●

●

೫

ಎರಡನೇ ಮಹಾಯುದ್ಧದಲ್ಲಿ ಜರ್ಮನಿ ಹಾಗೂ ಪಾಶ್ಚಾತ್ಯ ದೇಶದೊಂದಿಗಿದ್ದ ಬೆಂಬಲ ಮುರಿದು ಬಿದ್ದು (೧೯೩೮) ಜರ್ಮನಿ - ಸೋವಿಯೆತ್ ಒಕ್ಕೂಟಗಳು ಒಂದಾಗಿ (ನವೆಂಬರ್ ೧೯೩೯) ಪೋಲೆಂಡ್‌ನ್ನು ಬಗ್ಗುಬಡಿಯಲು ಫಿನ್ಲೆಂಡಿನತ್ತ ದಾಳಿಗೆ ನಡೆದವು. ಇದೇ ಅವಧಿಯಲ್ಲಿ ಬೋರಿಸ್‌ನ ತಂದೆ-ತಾಯಿ ಜರ್ಮನಿಯಿಂದ ಆಕ್ಸ್‌ಫರ್ಡ್‌ಗೆ ವಲಸೆ ಹೋದರು. ಅವನ ತಾಯಿ ರೋಸ಼ಲಿಯಾ ೧೯೩೯ರಲ್ಲಿ ಇಲ್ಲಿಯೇ ತೀರಿಕೊಂಡಳು.

ಈ ಸಮಯದಲ್ಲಿ ಸಾಂಸ್ಕೃತಿಕ ವಾತಾವರಣ ತುಸು ಬದಲಾದಂತಾಯ್ತು. ೧೯೪೦ರ ಬೇಸಿಗೆಯಲ್ಲಿ ೧೭ ವರ್ಷಕಾಲ ಬಹಿಷ್ಕರಿಸಿದ್ದ ಆನಾ ಅಖ್ಮತೋವಾಳ ಕವಿತೆಗಳನ್ನು 'ಆರು ಸಂಗ್ರಹಗಳಿಂದ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಲಾಯ್ತು. ಪಾಸ್ತರ್‌ನಾಕ್ ಖುಷಿಯಲ್ಲಿ ಅಭಿನಂದಿಸಿ ಪತ್ರ ಬರೆದ (ನೋಡಿ : ಪತ್ರಗಳು) ಆನಾ ಅಖ್ಮತೋವಾಳ - ಬೋರಿಸ್ ಪಾಸ್ತರ್‌ನಾಕ್‌ನ ಸಂಬಂಧ ವಿಚಿತ್ರವಾದುದು - ಸಂಕೀರ್ಣವಾದುದು. ರಾಗ-ದ್ವೇಷ ಜತೆ ಜತೆಯಲ್ಲೇ ಇರುವಂಥದ್ದು. ತಾಯಿ-ಮಗ, ಗೆಳೆಯ-ಗೆಳತಿ ಕಚ್ಚಾಡುವಂತೆ ಅವರ ಮಾತುಕತೆ. ಒಮ್ಮೆ ಕಹಿ- ಇನ್ನೊಮ್ಮೆ ಸಿಹಿ, ಇನ್ನೊಮ್ಮೆ ಒಗರು .... ಹೀಗೆ. ಆನಾ ಇವನ ಪತ್ರ ನೋಡಿ ಮೊದಲಿಗೆ ನಂಬಲಿಲ್ಲ. ಪಾಸ್ತರ್‌ನಾಕ್ ತನ್ನ ಕವಿತೆ

ಬಿಟ್ಟರೆ ಬೇರೆ ಯಾರ ಕವಿತೆಯನ್ನೂ ಓದುವುದಿಲ್ಲವೆಂದು ಅವಳ ನಂಬಿಕೆ ! ಬೇರೆ ಕವಿಗಳ ಕುರಿತು ಅವನು ಪದ್ಯ ಬರೆದಾಗಲೂ ಅವನೊಬ್ಬ ಕಪಟಿ, ಸುಳ್ಳು ಸುಳ್ಳು ಬರೆಯುತ್ತಾನೆ ! ಎಂದವಳಾಕೆ. ಪ್ಯಾರಿಸ್‌ಗೆ ಹೋದಾಗ, 'ಬೋರಿಸ್ ತ್ಸ್ವೇತಯೇವಾಳೊಂದಿಗೆ ಮಲಗಿ ಬಂದ '! ಎಂದು ಗೆಳೆಯರಿಗೆ ಪತ್ರ ಬರೆದಿದ್ದಳವಳು ! ೧೯೪೦ರಲ್ಲಿ ಪಾಸ್ತರ್‌ನಾಕ್ ಮನೆಗೆ ಹೋದಾಗ - ಜ಼ೆನ್ಯೆದಾ ಎಂಥ ಅಸಹ್ಯಕರ ಹೆಣ್ಣು ! ಗಂಡನೆದುರೇ ಅತಿಥಿಗಳನ್ನು ಗಮನಿಸದವಳಂತೆ ಇಸ್ಪೀಟು ಆಡುತ್ತಾ ಕೂತಿದ್ದಳು. ಪಕ್ಕಕ್ಕೆ (೧೯೩೭ರಲ್ಲಿ ಹುಟ್ಟಿದ್ದು) ಮಗು ಲಿಯೋನಿದ್ ಬಿದ್ದದ್ದು ಅವಳ ಗಮನಕ್ಕೆ ಬರಲಿಲ್ಲ. ಆಕೆ ನೆಲವನ್ನು ಹೂಳೆವಂತೆ ತೊಳೆಯುವುದೇ ಬೋರ‍್ಯಾಗೆ ದೊಡ್ಡ ಸಾಧನೆಯಂತೆ ಕಾಣುತ್ತಿತ್ತು, ಯಾಕೆಂದರೆ ಬೇರೆ ಯಾವ ಮೋಹಕತೆಯೂ ಅವಳಿಗಿರಲಿಲ್ಲ. ಎರಡನೇ ಬಾರಿ ವಿಚ್ಛೇದನ ಬಯಸದವರಷ್ಟೇ ಅವಳೊಂದಿಗೆ ಬದುಕಬಹುದಿತ್ತು ! ಎಂದು ಬರೆದಳು. ಎಂಥ ಹೊಟ್ಟೆಕಿಚ್ಚಿನ ಹೆಂಗಸು ಎಂದು ಕೊಂಡಾಗಲೇ 'ಒಸಿಪ್‌ನನ್ನು, ಬೋರಿಸ್‌ನನ್ನು ನಾನೆಷ್ಟು ಪ್ರೀತಿಸುವೆ. ಬೋರಿಸ್ ಚಿರಂತನ ಮುಗ್ಧ ಬಾಲಕ !' ಎಂದಳು. 'ಕುದುರೆಗಣ್ಣಿನ ' ಹುಡುಗ ಎಂದು ಕವಿತೆ ಕಟ್ಟಿದಳು. ಇಂಥ ಸಂಬಂಧವಿದ್ದ ಆನಾಳ ಸಂಗ್ರಹ ಪ್ರಕಟವಾದಾಗ ಸಹಜ ಖುಷಿಯಲ್ಲೇ ಬೋರಿಸ್ ಪತ್ರ ಬರೆದ - ಆದರೆ ಕೆಲವೇ ದಿನಕ್ಕೆ ಸಂಗ್ರಹ ಇದ್ದಕ್ಕಿದ್ದಂತೆ ಮೇಲಿನವರ ಅಣತಿಯಂತೆ ವಾಪಸ್ಸು ತೆಗೆದುಕೊಳ್ಳಲಾಯಿತು ! ಮತ್ತೆ ಆಖ್ಮತೋವಾ ಮೊದಲಿನ ಸ್ಥಿತಿಗೆ ತಳ್ಳಿಸಿಕೊಂಡಿದ್ದಳು. ಆಗಲೂ ಅವಳನ್ನು ಸಮಾಧಾನಿಸಿ ಬೋರಿಸ್ ಪತ್ರ ಬರೆದ (ನೋಡಿ : ಪತ್ರಗಳು)

ಯುದ್ಧದ ಭಯಾನಕ ದಿನಗಳು. ರಷಿಯಾದ ನೆಲ ರಕ್ತದಿಂದ ಕೆಂಪಾಯಿತು. ೧೯೪೧ರ ಡಿಸೆಂಬರ್ ಜೂನ್ ಅವಧಿಯಲ್ಲಿ ಆರು ಕವಿತೆಗಳನ್ನು ಬರೆದ. ಪಾಸ್ತರ್‌ನಾಕ್‌ನ ಈಗಿನ ಕಾಳಜಿ ಯುದ್ಧ ವ್ಯವಸ್ಥೆ, ಹಳೆಯ ಪಾರ್ಕ್‌ನ್ನು ಸಾಂಕೇತಿಕವಾಗಿ ಚಿತ್ರಿಸುವತ್ತ ಇದ್ದವು.

ಪ್ಯಾರಿಸ್‌ನಲ್ಲಿ ಬೋರಿಸ್‌ನನ್ನು ಭೇಟಿಯಾಗಿದ್ದ, ಹಳೆಯ ಆತ್ಮೀಯ ಗೆಳತಿ, ಪ್ರಿಯತಮೆಯಾಗಿದ್ದ ಮರೀನಾ ತ್ಸ್ವೇತಯೇವಾ ಇದೀಗ ತನ್ನ ತಾಯ್ನೆಲಕ್ಕೆ ಮರಳಿದ್ದಳು: ಎಷ್ಟೋ ವರ್ಷದ ದೇಶಾಂತರದ ನಂತರ. ಜತೆಯಲ್ಲಿ ಹರೆಯದ ಮಗನನ್ನು ಕರೆದುಕೊಂಡು ಬಂದಿದ್ದಳು. ಕೆಲವೇ ದಿನಗಳಲ್ಲಿ ಗಂಡ ಮತ್ತು

ಮಗಳು ಇವಳನ್ನು ಕೂಡಿಕೊಂಡರು. ಆದರೆ ಗಂಡ ಮತ್ತು ಮಗಳನ್ನು ದಸ್ತಗಿರಿ ಮಾಡಲಾಯಿತು, ಮತ್ತೆಂದೂ ಅವರನ್ನಾಕೆ ನೋಡಲಿಲ್ಲ. ಒಂದು ಕಾಲದಲ್ಲಿ ಬೋರಿಸ್‌ನೊಂದಿಗಿದ್ದ ಉತ್ಕಟ ಪ್ರೀತಿ ಕಡಿದುಬಿದ್ದಿದ್ದರೂ ಅವಳ ಕವಿತೆಯನ್ನು ಈಗಲೂ ಬೋರಿಸ್ ಆರಾಧಿಸುತ್ತಿದ್ದ. ತ್ಸ್ವೇತಯೇವಾಳನ್ನು ಜೀವಂತವಾಗಿಡಲು ಬೋರಿಸ್ ಆಕೆಯನ್ನು ಮೊದಲಸಲಕ್ಕೆ ಅನಾ ಅಖ್ಮತೋವಾಳ ಭೇಟಿಗೆ ಕರೆದೊಯ್ದ. ಆದರೆ ತ್ಸ್ವೇತಯೇವಾ ಕಾವ್ಯ ಬರೆಯುವುದನ್ನು ಬಿಟ್ಟಿದ್ದಳು, ನಿಶ್ಶಕ್ತಳಾಗಿದ್ದಳು. ಹೆಣ್ಣಾಗಿ ತನ್ನಲ್ಲಿ ಯಾವ ಆಕರ್ಷಣೆಯೂ ಉಳಿದಿಲ್ಲವೆಂದು ಅವಳಿಗೆ ಗೊತ್ತಿತ್ತು. ಮೊದಲೇ ಸೋತು ಹೋಗಿದ್ದಾಕೆ ಸ್ತಾಲಿನ್ ಆಳಿಕೆಯಿಂದ ಇನ್ನಷ್ಟು ರೋಸಿದ್ದಳು.

ಆಗಸ್ಟ್ ೩೧ರಂದು ಆಕೆ ಆತ್ಮಹತ್ಯೆ ಮಾಡಿಕೊಂಡಾಗ ಆಕೆಗಾಗಿ ರೋಧಿಸಲು ಅವಳ ಮಗನೂ ಆಕೆಯ ಬಳಿಯಿರಲಿಲ್ಲ. ಬೋರಿಸ್‌ನ 'ಮರೀನಾಳ ನೆನಪಿಗೆ' ಕವಿತೆ ಅವರ ಭಾವನಾತ್ಮಕ ಸಂಬಂಧವನ್ನು ತುಂಬ ಚೆನ್ನಾಗಿ ವಿವರಿಸುತ್ತದೆ.

ಯುದ್ಧದ ಸಮಯದಲ್ಲಿ ಯುದ್ಧ ನಡೆವ ಸ್ಥಳಗಳಿಗೆ ಬರಹಗಾರರ ಒಕ್ಕೂಟದ ಸದಸ್ಯರು ಭೇಟಿ ನೀಡುತ್ತಿದ್ದರು. ಕೆಂಪು ಸೇನೆಯ ಕಾಮ್ರೇಡರ ತಂಡಗಳನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ಕವಿತೆಗಳನ್ನು ಓದುತ್ತಿದ್ದರು. ಇಂಥ ಬರಹಗಾರರ ತಂಡದಲ್ಲಿ ಪಾಸ್ತರ್‌ನಾಕ್ ಕೂಡಾ ಇರುತ್ತಿದ್ದ. ಯುದ್ಧ, ದೇಶಪ್ರೇಮದ ಬಗ್ಗೆ ಕವಿತೆಗಳನ್ನು ಓದುತ್ತಿದ್ದ.

ಮೊದಲು ಗುರುತಿಸಿದಂತೆ ೧೯೪೦-೫೧ರ ವೇಳೆಯಲ್ಲಿ ಪಾಸ್ತರ್‌ನಾಕ್ ಅನುವಾದ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಈ ಕಾಲದಲ್ಲಾತ ಷೇಕ್ಸ್‌ಪಿಯರ್‌ನ ಎಂಟು ನಾಟಕಗಳನ್ನು ಅನುವಾದಿಸಿದ. ಹಾಮ್ಲೆಟ್, ರೋಮಿಯೋ -ಜೂಲಿಯೆಟ್, ಆಂಟನಿ- ಕ್ಲಿಯೋಪಾತ್ರ, ಓಥೆಲೋ, ಹೆನ್ರಿ IV, ಮ್ಯಾಕ್‌ಬೆತ್. ಇಂದಿಗೂ ರಷ್ಯನ್ ಭಾಷೆಯಲ್ಲಿ ಅಧಿಕೃತ ಅನುವಾದಗಳೆಂದರೆ ಇವನವೇ. ಇಡೀ ಸೋವಿಯತ್ ಸಾಹಿತ್ಯವೇ ಬೋರಿಸ್ ಅತ್ಯುತ್ತಮ ಅನುವಾದಕನೆಂದು ನಿರ್ವಿವಾದವಾಗಿ ಒಪ್ಪಿದೆ. ಅನುವಾದ ಒಂದು ಕಲೆ, ತಮ್ಮ ಸ್ವಂತ ಪ್ರತಿಭೆ- ಗುಣದಿಂದ ಅನುವಾದ ಮೂಲದೊಂದಿಗೆ ಸರಿಸಾಟಿಯಾಗಿ

ನಿಲ್ಲಬೇಕು - ಎಂಬುದು ಅವನ ನಂಬಿಕೆ. ಅವನ ನಂಬಿಕೆಯನ್ನು ಸಮರ್ಥಿಸುವಂತೆ ಅನುವಾದ ಪ್ರಕಟವಾದವು, ಜನಪ್ರಿಯವಾದವು. ನಾಟಕಗಳು ನೂರಾರು ಪ್ರದರ್ಶನ ಕಂಡವು.

ಬೌದ್ಧಿಕ ಜಗತ್ತನ್ನು ಹದ್ದು ಬಸ್ತಿನಲ್ಲಿಡುವ ಸ್ಟಾಲಿನ್‌ನ ಕಾರ್ಯವಿನ್ನೂ ನಡೆದೇ ಇತ್ತು. ೧೯೪೬, ಆಗಸ್ಟ್ ೧೪ರಂದು ಪಕ್ಷ 'ಝ್ವೇಜ್ದಾ' 'ಲೆನಿನ್ ಗ್ರಾದ್' ಪತ್ರಿಕೆಗಳನ್ನು ಪಕ್ಷದ ಸಿದ್ಧಾಂತಕ್ಕೆ ಹೊರತುಪಡಿಸಿದ ವಿಷಯ ಪ್ರಕಟಿಸುವುದೆಂಬ ಕಾರಣಕ್ಕೆ ಮಟ್ಟುಗೋಲು ಹಾಕಿತು. ಇದರ ಹಿಂದಿನ ಅತಿಮುಖ್ಯ ಉದ್ದೇಶವೆಂದರೆ - ಕೇವಲ ಕೆಲವರಿಗಷ್ಟೇ ಅರ್ಥವಾಗುವ ವೈಯಕ್ತಿಕ ಅನುಭವದ ಕವಿತೆ ಬರೆಯುವ ಆನಾ ಆಖ್ಮತೋವಾಳನ್ನು, 'ಕೋತಿಯ ಸಾಹಸಗಳು' ಎಂಬ ಕಥೆ ಮಿಖಾಯಿಲ್ ಝೊಶೆಂಕೊನನ್ನು ಬಗ್ಗು ಬಡಿಯುವುದಾಗಿತ್ತು.

ಕಮ್ಯೂನಿಷ್ಟ್ ಪಕ್ಷದ ಝ್ದನೊವ್‌ಶ್ಚೀನ್ ಎಂಬ ಈ ಕಾರ್ಯಕ್ರಮ ಸ್ಟಾಲಿನ್ ಸಾಯುವವರೆಗೂ, ಮಾರ್ಚ್ ೧೯೫೩, ಬರಹಗಾರರನ್ನು ಹೆಪ್ಪುಗಟ್ಟಿಸಿತ್ತು.

೧೯೪೬ - ಪಾಸ್ತರನಾಕ್ ನಿಧಾನಕ್ಕೆ ರಾಜಕೀಯ ನಿಲುವಿನ ಪಕ್ವತೆಯೆಡೆ ನಡೆಯುವ ಕಾಲ. ಆನಂತರ ಸ್ಟಾಲಿನ್ ಆಡಳಿತವನ್ನು ಆತ ಟೀಕಿಸಲು ಸಜ್ಜಾದವನಂತೆ ಕಂಡ.

●
●

೬

ಪಾಸ್ತರ್‌ನಾಕ್ ತನ್ನ ಬದುಕಿನ ಇನ್ನೊಂದು ಉತ್ಕಟ ಘಟ್ಟ ಮುಟ್ಟಿದ್ದು ಅಕ್ಟೋಬರ್ ೧೯೪೬, ಆತ ಮೊದಲಬಾರಿಗೆ ಮಾಸ್ಕೋದಲ್ಲಿ ಓಲ್ಗಾ ಸ್ವೇವೊಲೋದೊವ್ನಾ ಇವಾನ್‌ಸ್ಕಯಾಳನ್ನು ಭೇಟಿಯಾದಾಗ. ಓಲ್ಗಾ ಅವನ ಬದುಕಿನ ಕೊನೆಯ ಭಾಗ ದಲ್ಲಿ ಪ್ರೀತಿಯ ಜತೆಗಾತಿಯಾಗಿದ್ದವಳು, ಅವನೊಂದಿಗೆ ಕಳೆದ ವರ್ಷಗಳನ್ನು - 'ಎ ಕಾಪ್ಟಿವ್ ಆಫ್ ಟೈಮ್' ನೆನಪಿನ ಪುಸ್ತಕದಲ್ಲಿ ಹಿಡಿದಿಟ್ಟಿದ್ದಾಳೆ. ಈಕೆ 'ನೋವಿಮೀರ್' ಪತ್ರಿಕೆಯಲ್ಲಿ ಉಪಸಂಪಾದಕಿಯಾಗಿದ್ದಳು. ಬೋರಿಸ್ ಪತ್ರಿಕಾ ಕಚೇರಿಗೆ ಹೋದಾಗ ಅವಳನ್ನು ಮೊದಲ ಸಲ ನೋಡಿದ್ದು. ಆಕೆಗೆ ಮೂವತ್ತ

ನಾಲ್ಕು, ಬೋರಿಸ್‌ಗೆ ಐವತ್ತಾರು ! ಆಕೆಯ ವಯಸ್ಸಿಗೆ ನೋಡಲು ಸುಂದರವಾದ 'ಹೆಂಗಸು! ಆಕೆಯೂ ಸ್ತಾಲಿನ್‌ನ ಆಡಳಿತದ ವಿಮರ್ಶಕಿ, ಇಬ್ಬರ ಅಭಿಪ್ರಾಯಗಳೂ ಒಂದೇ. ಸಮಾಗಮಕ್ಕೆ ಸಾಕಿತ್ತು .

ಆಕರ್ಷಕ ಹೆಣ್ಣು ಎಂಥ ಸಮಾಜದಲ್ಲೂ ಅಪಾಯಕಾರಿಯೇ ! ಓಲ್ಗಾಳಿಗೂ ಅನೇಕ ಪ್ರೇಮ ಪ್ರಕರಣ, ನಿರಾಶೆಗಳಿದ್ದವು. ಆಕೆಯ ಗಂಡ ಇವಳಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆಮೇಲೆಯೂ ಆಕೆ ಇನ್ನೊಂದು ಮದುವೆಯಾಗಿದ್ದಳು. ಆತನೂ ಇವಳ ತೋಳುಗಳಲ್ಲಿ ಆಸ್ಪತ್ರೆಯಲ್ಲಿ ಸತ್ತಿದ್ದ. ಬೋರಿಸ್‌ನನ್ನಾಕೆ ಭೇಟಿಯಾದಾಗ ಮಾಸ್ಕೋದಲ್ಲಿ ತಾಯಿಯೊಂದಿಗೆ ಹಾಗೂ ಇಬ್ಬರು ಗಂಡಂದಿರಿಂದ ಹುಟ್ಟಿದ ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದಳು.

ಓಲ್ಗಾ, ಬೋರಿಸ್‌ನ ಕಾವ್ಯವನ್ನು ಚಿಕ್ಕವಳಾಗಿದ್ದಾಗಿನಿಂದ ಆರಾಧಿಸಿದವಳು; ಅರ್ಧದಷ್ಟು ತನಗೆ ಅರ್ಥವಾಗಿರದಿದ್ದರೂ ! ೧೯೩೦ರಲ್ಲಿ ತನ್ನ ಮೊದಲ ಪ್ರಿಯಕರನನ್ನು ಬೋರಿಸ್‌ನ ಕಾವ್ಯಗೋಷ್ಠಿಯೊಂದಕ್ಕೆ ಆಕೆ ಕರೆದೊಯ್ದಿದ್ದಳು. ನೋವಿಮೀರ್ ಕಛೇರಿಯಲ್ಲಿ ಅವಳನ್ನು ನೋಡಿದಮೇಲೆ ಬೋರ್‍ಯಾ ಯುವಕನಂತಾಗಿಬಿಟ್ಟ. ಪ್ರತಿದಿನ ಅವಳಿಗೆ ಫೋನ್‌ಮಾಡಿ ಗಂಟೆಗಟ್ಟಲೇ ಮಾತಾಡಿದ. ಅವಳನ್ನು ಮನೆಗೆ ಬಿಟ್ಟು ಬರಲು ದಿನವೂ ಪತ್ರಿಕಾ ಕಚೇರಿಗೆ ಈ ವಯಸ್ಸಿನಲ್ಲಿ ಎಡತಾಕಿದ ! ಏಪ್ರಿಲ್ ೫, ೧೯೪೭ರಂದು ಅಚಾನಕ್ ಆಕೆಯ ಮನೆಗೆ ಹೋದಾಗ ಅವಳ ಮನೆಯವರೆಲ್ಲ ಹೊರಗೆ ಹೋಗಿದ್ದರು. ಆ ರಾತ್ರಿ ಇಬ್ಬರೂ 'ಹೊಸದಾಗಿ ಮದುವೆಯಾದ ಜೋಡಿಯಂತೆ ಮಧುಚಂದ್ರ ಆಚರಿಸಿದರು. ! ಅವರು ಪ್ರೀತಿ ಮಾಡುವಾಗ ಆಕೆ ನೋಡಿದ 'ಸುಕ್ಕಾದ ಪ್ಯಾಂಟನ್ನು ನಾನು ಇಸ್ತ್ರಿ ಮಾಡುತ್ತಿದ್ದೆ'

- ಇದು ಅವರ ಹೊಸ ಪ್ರೀತಿಯ ಬಗ್ಗೆ ಆಕೆ ಹೇಳುತ್ತಿದ್ದ ಮಾತು.

ಆಕೆ ಕೆಲಸ ಮಾಡುತ್ತಿದ್ದ ನೋವಿಮೀರ್ ಸಂಪಾದಕನಿಗೂ , ಓಲ್ಗಾಳಿಗೂ ಆಗೀಗ ಜಗಳ ನಡೆದೇ ಇರುತ್ತಿತ್ತು. ಇದನ್ನು ಗಮನಿಸಿದ ಬೋರಿಸ್ - 'ನಾನು ನಿನ್ನನ್ನು ನೋಡಿಕೊಳ್ಳುವೆ, ಕೆಲಸಬಿಡು', ಎಂದ. ಪರಿಚಯವಾದ ಹದಿನೆಂಟು ತಿಂಗಳ ನಂತರ ಓಲ್ಗಾ ಕೆಲಸಕ್ಕೆ ರಾಜೀನಾಮೆ ನೀಡಿದಳು. ನಂತರ ಬೋರಿಸ್‌ನ ಪ್ರಭಾವದಿಂದ ಅನುವಾದದ ಕಾರ್ಯವನ್ನು ಕ್ರಮೇಣ ಗಳಿಸಿದಳು.

ಓಲ್ಗಾಳೊಂದಿಗೆ ಇನ್ನೊಂದು ಮನೆಮಾಡಿ ಸಂಸಾರ ಮಾಡುವ ಯೋಚನೆ ಬೋರಿಸ್‌ನಿಗಿತ್ತು. ಆದರೆ ಎರಡನೆಯ ಪತ್ನಿ ಜೆನ್ನೈದಾಳನ್ನು ವಿಚ್ಛೇದಿಸುವುದಕ್ಕೆ ಮನಸ್ಸಿರಲಿಲ್ಲ. 'ಆಕೆಯನ್ನು ಮದುವೆ ಮಾಡಿಕೊಂಡು ತಪ್ಪುಮಾಡಿದೆ , ಅವಳು ಅನುರೂಪಳಲ್ಲ'- ಎಂದು ಎಷ್ಟೋ ಸಲ ಅನ್ನಿಸಿ, ಓಲ್ಗಾಳೊಂದಿಗೆ ಈ ಮಾತು ಹೇಳಿದ್ದರೂ. ಆದರೆ ಇತ್ತ ಓಲ್ಗಾಳ ತಾಯಿ ಅವನು ಮದುವೆಯಾಗಿ ಅಧಿಕೃತವಾಗಿ ನಿನ್ನನ್ನೊಪ್ಪಿಕೊಂಡರೆ ಮಾತ್ರ ಈ ಸಂಬಂಧ ಸ್ವೀಕರಿಸು ಎಂಬ ಒತ್ತಡ ತರುತ್ತಿದ್ದಳು. ತಾಯಿಯೊಂದಿಗೆ ಸಂಬಂಧಿಕರ ಒತ್ತಡ ಸೇರಿ, ಓಲ್ಗಾ, ಬೋರಿಸ್‌ನೊಂದಿಗೆ ಒಂದು 'ಕೆಟ್ಟ ಕಾದಂಬರಿಯ, ಕೆಟ್ಟ ನಾಯಕಿಯಂತೆ', ವಾದಕ್ಕಿಳಿಯುತ್ತಿದ್ದಳು. ಒಮ್ಮೆ ದಿಢೀರನೇ ಪಾಸ್ತರ್‌ನಾಕ್‌ನ ಎರಡನೆ ಪತ್ನಿಯನ್ನು ಓಲ್ಗಾ ಭೇಟಿಯಾದಳು. 'ಭಾರೀ ತೂಕದ ಅಚಲವಾದ ಮನಸ್ಸಿನ ಹೆಣ್ಣು'. ಜೆನ್ನೈದಾಳೂ ಬೋರಿಸ್ ಬಗ್ಗೆ ತನ್ನ ಪ್ರೀತಿಯೆಲ್ಲಾ ಬತ್ತಿಹೋಗಿದೆಯೆಂದು, ಆದರೂ ತಮ್ಮ ಸಂಸಾರ ಮುರಿಯಲು ಬಿಡುವುದಿಲ್ಲವೆಂದು, ನಿನ್ನ-ಬೋರಿಸ್‌ನ ಸಂಬಂಧಕ್ಕೆ ಕ್ಯಾಕರಿಸಿ ಉಗಿಯ ಬೇಕೆನ್ನಿಸುವುದೆಂದೂ, ಹೇಳಿದಳು ! ಏನೆ ಇದ್ದರೂ, ಓಲ್ಗಾ, ಪಾಸ್ತರ್‌ನಾಕ್ ಬದುಕಿನ ಕೊನೆದಿನಗಳಲ್ಲಿ ಅವನ ಕಾವ್ಯಕ್ಕೆ, ಕಾದಂಬರಿಗೆ ಸ್ಫೂರ್ತಿಯಾಗಿದ್ದಳು. - ಡಾಕ್ಟರ್ ಝಿವಾಗೋದ ಲಾರಾ ಪಾತ್ರ ಡಾಕ್ಟರ್ ಝಿವಾಗೋ ಕವಿತೆಗಳು [ನೋಡಿ ಗಾಳಿ, ಉನ್ಮಾದ, ಮಾಗಿ ಕವಿತೆಗಳು] ಈ ಪ್ರಭಾವದಿಂದಲೇ ಹುಟ್ಟಿದಂಥವು - ಎಂದಾಕೆ ತನ್ನ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾಳೆ.

ಅವನ ಒಳಗಿನ ಬದುಕಂತೆ ಹೊರಗಿನ ಬದುಕನ್ನು ಆತ ಪ್ರಯಾಸದಿಂದ ನಿಭಾಯಿಸುವ ಪರಿಸ್ಥಿತಿಯಿತ್ತು. ಆನಾ ಆಖ್ಮತೋವಾ ಮತ್ತು ರ್ಝೊಶಂಕೊರ ವಿಚಾರಣೆ ಬೋರಿಸ್‌ಗೂ ಮುನ್ಸೂಚನೆಯಂತಿತ್ತು. ಆದರೆ, ಅದಾಗಲೇ ಬೋರಿಸ್ ಸ್ತಾಲಿನ್‌ನನ್ನು ಸ್ತಾಲಿನ್‌ವಾದ ಗಟ್ಟಿಯಾಗಿ ಎದುರಿಸುವ ನಿರ್ಧಾರ ಮಾಡಿದ್ದ. ಆನಾಳನ್ನು ಬರಹಗಾರರ ಒಕ್ಕೂಟದಿಂದ ಹೊರಹಾಕುವ ಗೊತ್ತುವಳಿ ಸೂಚಿಸುವ ಸಭೆಗವನು ಹಾಜರಾಗಲಿಲ್ಲ. ಬದಲಿಗೆ ಆನಾಳ ಮಾಸ್ಕೋ ಭೇಟಿಯಲ್ಲಿ, ಅವಳಿಗೆ ಗೊತ್ತಾಗದಂತೆ ಅವಳ ಕೋಣೆಯಲ್ಲಿ ಆಕೆಗೆ ಅಗತ್ಯವಿದ್ದ ಸಾವಿರ ರೂಬಲ್ಲನ್ನು ಇಟ್ಟು ಬಂದ. ಈ ರೀತಿ ಬೆಳವಣಿಗೆಯಿಂದಾಗಿ ಆತ ಹೊಸದಾಗಿ ಬರೆದು ಕಳಿಸಿದ ಕವಿತೆಗಳನ್ನು ಪ್ರಕಟಿಸಲಾಗಲಿಲ್ಲವೆಂದು 'ನೋವಿಮಿರ್' ತಿರಸ್ಕರಿಸಿತು.

ಜತೆಗೆ ರ್ಝುದನೋವ್‌ನಿಂದ ಆನಾ ಮತ್ತು ರ್ಝೊಶಂಕೋರ ಬಗ್ಗೆ

ಅವ್ಯಾಹತವಾದ ದಾಳಿ ನಡೆದೇ ಇತ್ತು. ಆಗಸ್ಟ್ ೧೯೪೬ರಲ್ಲಿ ಇವನ ಮೇಲೂ ಅಂಥ ಪ್ರವಾಹ ಅಧಿಕೃತವಾಗಿ ಪ್ರಾರಂಭವಾಯಿತು. ಮಾರ್ಚ್ ೧೯೪೭ರಲ್ಲಿ ಸಾಹಿತ್ಯ ಸಮಾವೇಶವೊಂದರಲ್ಲಿ ಅಲೆಗ್ಸಾಂಡರ್ ಫದೇವ್ ಅತ್ಯಂತ ಕಟುವಾಗಿ ಬೋರಿಸ್‌ನನ್ನು ಟೀಕಿಸಿದ - 'ಆತ ಸಿದ್ಧಾಂತ ವಿರೋಧಿ, ನಮ್ಮಲ್ಲೀ ಒಬ್ಬನಲ್ಲ. ಆತನ ಶತ್ರುಪ್ರೇಮ ಅತಿಯಾಗಿರುವುದರಿಂದಲೇ ವಿದೇಶಗಳಲ್ಲಿ ಅವನು ಪ್ರಸಿದ್ಧನಾಗಿದ್ದಾನೆ!' ಇನ್ನೊಬ್ಬ ಸಾಹಿತ್ಯ ವಿಮರ್ಶಕ ಹಾಗೂ ಮುಂದೆ ಬೋರಿಸ್‌ನ ಕಡು ವಿರೋಧಿಯಾಗಲಿದ್ದ ಅಲೆಕ್ಸಿ ಸೆರ್‌ಕೋವ್ ಅವಾಚ್ಯ ಶಬ್ದಗಳನ್ನು ಬಳಸಿ ಲೇಖನವನ್ನೂ ಬರೆದ.

ಹೀಗೆ ವ್ಯವಸ್ಥಿತವಾಗಿ ಅವನ ಅವಹೇಳನ ನಡೆದು, ಕವಿತೆಗಳನ್ನು ತಿರಸ್ಕರಿಸಿದ ಮೇಲೂ ಬೋರಿಸ್‌ನಿಗೆ ಗೋಥೆಯ 'ಫಾಸ್ಟ್'ಅನ್ನು ಜರ್ಮನ್‌ನಿಂದ ಅನುವಾದಿಸಲು ನೀಡಲಾಯಿತು. 'ಕಡೆಗೂ ನನ್ನನ್ನು ಉಪವಾಸದಿಂದ ಸಾಯಿಸದಿರಲು ಅವರು ನಿರ್ಧರಿಸಿದ್ದರು' ಎಂದು ಬೋರಿಸ್ ನಿಟ್ಟುಸಿರಿಟ್ಟ. ಇದರೊಂದಿಗೆ ಹಂಗೇರಿಯನ್ ಕವಿ - ಸಾಂದರ್ ಪೆತ್ಫೋಫಿ (೧೮೨೩-೪೯) ಕವಿತೆಗಳನ್ನು ಇದೇ ಸಮಯದಲ್ಲಿ ಅನುವಾದಿಸಿದ, ೧೯೪೯ರಲ್ಲಿ ಅವು ಪ್ರಕಟವಾದವು.

ಸ್ವಂತ ಕವಿತೆಗಳನ್ನು ತಿರಸ್ಕರಿಸಿದ ಒಕ್ಕೂಟ - ಆತನಿನ್ನೂ ಕವಿಯೆನ್ನುವುದನ್ನು ಒಪ್ಪಿಕೊಂಡಂತಿತ್ತು. ಹಾಗೆಂದೇ - 'ಯುದ್ಧಕೋರರಿಗೆ ಧಿಕ್ಕಾರ!' 'ಶಾಂತಿ ಮತ್ತು ಪ್ರಜಾಸತ್ತೆ!' ಎಂಬ ಘೋಷಣೆಯಡಿ ೩೨, ಫೆಬ್ರವರಿ ೧೯೪೮ರಲ್ಲಿ ಮಾಸ್ಕೋದ ಅತಿ ದೊಡ್ಡ ಕಲಾಕ್ಷೇತ್ರದಲ್ಲಿ ಕವಿಗೋಷ್ಠಿಯೊಂದು ನಡೆದು ಅಲ್ಲಿಗೆ ಬೋರಿಸ್‌ನನ್ನೂ ಕವಿತೆಯೊದಲು ಕರೆಯಲಾಗಿತ್ತು. ಯುದ್ಧ ಬಯಸುವ ಚರ್ಚಿಲ್‌ನನ್ನು ಮನಸೋ ಇಚ್ಛೆ ಬೈದು ಅಲೆಕ್ಸಿ ಸೆರ್ಕೋವ್ ಕವಿತೆಯೋದಲು ಆರಂಭಿಸಿದಾಗ ಬೋರಿಸ್ ಮುಂದಿನ ಸಾಲಿನಿಂದೆದ್ದು ಹಿಂದೆ ಹೋಗಿ ಕೂತ ಎಲ್ಲರೂ ಇಂಥ ಕವಿತೆಯೋದುವಾಗ ಬೋರಿಸ್ ಮಾತ್ರ ಷೇಕ್ಸ್‌ಪಿಯರ್‌ನ '೬೬'ನೇ ಸಾನೆಟ್ ಓದಿ, ರಾಜಕೀಯ ಸಾಲುಗಳಿಂದ ಅನೇಕರಿಗೆ ಮುಜುಗರ ಮಾಡುವುದರೊಂದಿಗೆ 'ಮೂರ್ಖನಾಗಲು ಲೈಸೆನ್ಸ್ ಪಡೆದವನಂತೆ' ಕಂಡ.

ಇದೇ ವರ್ಷ ಬೇಸಿಗೆಯಲ್ಲಿ ಇನ್ನೊಂದು ರಾಜಕೀಯ ಬೆಳವಣಿಗೆ. ಆದಾಗ ಉದ್ಭವಗೊಂಡ ಯಹೂದಿ ರಾಜ್ಯ ಇಸ್ರೇಲ್‌ನ ವಿದೇಶಮಂತ್ರಿ ಗೋಲ್ಡ್‌ಮೀರ್

ರಷಿಯಾಕ್ಕೆ ಭೇಟಿ ನೀಡಿದಳು. ಸಹಜವಾಗೇ ಅಪಾರ ಸಂಖ್ಯೆಯಲ್ಲಿದ್ದ 'ಸಯಾನಿಸಂ' (ಯಹೂದಿವಾದ) ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ಸೇರಿದಾಗ ಸ್ಟಾಲಿನ್‌ಗೆ ಅನುಮಾನ ಪ್ರಾರಂಭವಾಯಿತು. ಪರಿಣಾಮ : ಯಹೂದಿ ನಟ ಸೋಲೊಮನ್ ಮೈಖೋಲ್‌ನ ಕೊಲೆ, ಜತೆಗೆ, ಯಿದ್ದೀಶ್ ಭಾಷೆಯ ಸಾಹಿತ್ಯ - ರಂಗಮಂದಿರದ ದಮನ, ಇತಿಶ್ರೀ. ಬೋರಿಸ್ ಸ್ವತಃ ಯಹೂದಿಯಾದರೂ ಅದರ ರಾಜಕೀಯದ ಬಗೆಗೆ ಆಸಕ್ತಿಯಿರಲಿಲ್ಲವಾದ್ದರಿಂದ ಈ ಬಿಸಿ ಅವನಿಗೆ ಅಮರಿಕೊಳ್ಳಲಿಲ್ಲ.

ಆದರೆ ತೊಂದರೆ ಇನ್ನೊಂದು ರೀತಿಯಲ್ಲಿ ಕಾಣಿಸಿಕೊಳ್ಳಲಿತ್ತು. ೧೯೪೮ರ ಜನೇವರಿ ೩೦ರಂದು ತನ್ನ ಕಾದಂಬರಿ 'ಡಾಕ್ಟರ್ ಜಿವಾಗೋ'ದ ಕವಿತೆಗಳನ್ನು, ಷೇಕ್ಸ್‌ಪಿಯರ್‌ನ ಅನುವಾದ ಆಂಟನಿ-ಕ್ಲಿಯೋಪಾತ್ರವನ್ನು ಕೆಲವರ ಮುಂದೆ ವಾಚಿಸಿದ. ಕವಿತೆಗಳಲ್ಲಿ 'ಹ್ಯಾಮ್ಲೆಟ್' (ನೋಡಿ: ಕವಿತೆಗಳ ಅನುವಾದ) ಅವನನ್ನು ಇಕ್ಕಟ್ಟಿಗೆ ಸಿಕ್ಕಿಸಿತು.

ಈ ಇಕ್ಕಟ್ಟು - ಓಲ್ಗಾ ಇವಾನ್‌ಸ್ಕಿಯಾಳನ್ನು ೬ ಅಕ್ಟೋಬರ್ ೧೯೪೯ರಂದು ಬಂಧಿಸುವಲ್ಲಿ ಮುಕ್ತಾಯವಾಯಿತು. ಬೋರಿಸ್ - ಓಲ್ಗಾ ದೇಶ ತೊರೆಯಲು ಸಂಚು ಮಾಡಿದ್ದಾರೆಂಬ ಆಪಾದನೆ ಅವಳ ಮೇಲಿತ್ತು. ಬಗೆ ಬಗೆಯಾಗಿ ತೊಂದರೆ ನೀಡಿ ತಾವು ಆದೇಶಿಸಿದಂತೆ ಹೇಳಿಕೆ ಕೊಡಲು ಅವಳ ಮೇಲೆ ಮಾನಸಿಕ ಒತ್ತಡ ಹೇರಲಾಯಿತು. ಬೋರಿಸ್‌ನಿಗೆ ಉಳಿದದ್ದು ರೋಧಿಸುವುದಷ್ಟೇ. ಆಕೆಯನ್ನು ಮತ್ತೆಂದೂ ಜೀವಂತ ಕಾಣಲಾರೆನೆಂದು ಅವನಿಗನ್ನಿಸಿತು. ರಕ್ಷಣಾದಳದೊಂದಿಗೆ ಇದಕ್ಕೆಲ್ಲ ಕಾರಣ ನಾನು, ಅವಳನ್ನು ಬಿಡುಗಡೆ ಮಾಡಿ, ಎಂದು ಪರಿಪರಿಯಾಗಿ ಬೇಡಿಕೊಂಡರೂ ಪರಿಣಾಮ ಗೊತ್ತಿದದ್ದೇ ಆಗಿತ್ತು. ಓಲ್ಗಾಳನ್ನು ಬ್ರಿಟೀಷರ ಗುಪ್ತಚಾರಿಣಿ ಎಂಬ ಆಪಾದನೆ ಹೊರೆಸಿ ೫೮ನೇ ಕಲಮಿನಂತೆ ಆಕೆಯನ್ನು ನೂರಾರು ಮೈಲಿ ದೂರದ ಮರಡೋವಿನ್ ಗಣರಾಜ್ಯದ ಖೈದಿಗಳ ಕ್ಯಾಂಪಿಗೆ ಕಳಿಸಲಾಯಿತು.

ಓಲ್ಗಾಳ ಬಂಧನದಿಂದ ಬೋರಿಸ್ ಅಕ್ಷರಶಃ ಹುಚ್ಚನಂತಾದ. ಅವಳಿಗೆ ಧೈರ್ಯ ತುಂಬಲು ಕಾರಾಗೃಹಕ್ಕೆ ಪ್ರೇಮಪತ್ರಗಳನ್ನು; ಕವಿತೆಗಳನ್ನು ಬರೆದು ಕಳಿಸುತ್ತಿದ್ದ. ಓಲ್ಗಾಳ ಬಂಧನದ ನಂತರ ಬೋರಿಸ್, ಆನಾ ಆಖ್ಮತೋವಾಳನ್ನು ಪದೆಪದೆ ಭೇಟಿಯಾಗುತ್ತಿದ್ದ. ಆನಾಳದು ಇನ್ನೂ ಘೋರ, ಆಕೆಯ ಮಗ ಲೆವ್‌ನನ್ನೂ ಇಂಥದ್ದೇ ಆಪಾದನೆ ಮೇಲೆ ಬಂಧಿಸಿದ್ದರು.

ಯಾವ ಮೂಲಗಳಿಂದಲೂ ಓಲ್ಗಾಳನ್ನು ಬಿಡಿಸುವ ಪ್ರಯತ್ನ ಫಲಕಾರಿಯಾಗಲಿಲ್ಲ. ಬೋರಿಸ್‌ನ ವೈಯಕ್ತಿಕ ನೋವು, ಏನೇ ಇದ್ದರೂ, ತನ್ನ ಕುಟುಂಬವನ್ನು, ಓಲ್ಗಾಳ ಕುಟುಂಬವನ್ನು ಸಾಕಲು ಆತ ಹಣಕ್ಕಾಗಿ ಅನುವಾದ ಕಾರ್ಯ ಮಾಡಲೇಬೇಕಿತ್ತು. ಷೇಕ್ಸ್‌ಪಿಯರ್, ಗೋಥೆ ...... ಹೀಗೆ.

ಜತೆಗೆ ಆತನ ಜೀವನದುದ್ದಕ್ಕೂ ಕಾಡಿದ ಹರ್ಪಿಸ್ ಕಾಯಿಲೆ. ಇದೀಗ ೧೯೫೨ರ ಚಳಿಗಾಲದಲ್ಲಿ ಆತ ತೀವ್ರ ಹೃದಯಾಘಾತದಿಂದ ನರಳುವಂತಾಯ್ತು. ಆಗೆಲ್ಲ ಮುತುವರ್ಜಿವಹಿಸಿ ಬೋರಿಸ್‌ನನ್ನು ನೋಡಿಕೊಂಡವಳು ಜ಼ೆನ್ನೈದಾ - ಮರುಜನ್ಮ ಕೊಟ್ಟ ಜ಼ೆನ್ನೈದಾಗೆ ನಾನು ಕೃತಜ್ಞತೆಯಿಂದ ನನ್ನ ಬದುಕನ್ನು ಮೀಸಲಿಡುವೆ ಎಂದು ಗೆಳೆಯರೊಬ್ಬರಿಗೆ ಭಾವುಕನಾಗಿ ಬರೆದನಾತ.

●

●

೫ ಮಾರ್ಚ್ ೧೯೫೩: ಸ್ತಾಲಿನ್ ನಿಧನದ ದಿನ, ರಷಿಯಾದ ಬಿಗಿಮುಷ್ಠಿಯ ಆಡಳಿತದ ಕೊನೆಯಾದಂತಾಗಿ ಉತ್ತರಾಧಿಕಾರಿಯಾಗಿ ನಿಕಿತಾ ಕ್ರುಶ್ಚೇವ್ ಅಧಿಕಾರ ವಹಿಸಿಕೊಂಡ.

ಓಲ್ಗಾ ಇವಾನ್‌ಸ್ಕಿಯಾ ಐದು ವರ್ಷದ ಸೆರೆವಾಸದ ನಂತರ ಅಕ್ಟೋಬರ್ ೫೩ರಲ್ಲಿ ಬಿಡುಗಡೆಯಾದಳು. ಬೋರಿಸ್‌ಗೆ ಇದರಿಂದ ಖುಷಿಯಾದರೂ ವಾಸ್ತವದ ಕಠಿಣತೆಯ ನಡುವೆ ವಿರಹದ ತೀವ್ರತೆ ಕಡಿಮೆಯಾಗಿತ್ತು. ಅವಳನ್ನು ಸಂತೋಷದಿಂದ ಎದುರುಗೊಳ್ಳುವ ಬದಲು ತನ್ನ ಪರವಾಗಿ ಮಾತಾಡಲು ಓಲ್ಗಾಳ ಮಗಳು ಇರಿನಾಳನ್ನು ಕಳಿಸುವಷ್ಟು ಆತ ಜ಼ೆನ್ನೈದಾಳಿಗೆ ಋಣಿಯಾಗಿದ್ದ! ಈ ಮುಖ ಕೆಲವು ದಿನವಷ್ಟೇ, ಆಮೇಲೆ ಅಂತರ ಕೊಚ್ಚಿಹೋಯಿತು. ೧೯೫೪ರಲ್ಲಿ ಓಲ್ಗಾ ತಮ್ಮ ಹಳ್ಳಿಮನೆಯನ್ನು ತನಗಾಗಿ ಬೋರಿಸ್‌ಗಾಗಿ ಉಳಿಸಿಕೊಂಡು ಮಕ್ಕಳು-ತಾಯಿಯನ್ನು ಸಂಬಂಧಿಕರಲ್ಲಿ ತಂಗಲು ಕಳುಹಿಸಿದಳು. ಈ ಅರವತ್ನಾಲ್ಕರ ಇಳಿವಯಸ್ಸಿನಲ್ಲಿ ಬೋರಿಸ್ ತಂದೆಯಾಗುವ ಸಾಧ್ಯತೆ ತೋರಿಬ, ಆದರೆ ಓಲ್ಗಾ ಎರಡು ಸಲವೂ ಗರ್ಭಪಾತಕ್ಕೊಳಗಾದಳು.

ಸ್ತಾಲಿನ್ ನಿಧನದಿಂದಾಗಿ ಒಂದು ರೀತಿಯ ಸ್ವಾತಂತ್ರ್ಯದ ಹವೆ ಎಲ್ಲೆಡೆ

ಹರಿದಾಡಿತು. ರಾಜಕೀಯ ಸೆರೆವಾಸ ಅನುಭವಿಸುತ್ತಿದ್ದ ಅನೇಕರು ಬಿಡುಗಡೆಯಾದರು. ೧೯೫೪ರಲ್ಲಿ ಅಲೆಗ್ಸಾಂಡರ್ ಗ್ಲಾದಕೋವ್, ತ್ಸ್ವೇತಯೇವಾಳ ಮಗಳು ಅರಿದ್ನಾ ಎಫ್ರಾನ್ ೧೯೫೫ರಲ್ಲಿ ಆನಾ ಆಖ್ಮತೋವಾಳ ಮಗ ಲೆವ್ ಗುಮಿಯೇವ್ ೧೯೫೬ರಲ್ಲಿ ಬಿಡುಗಡೆಯಾದರು. ಬಂಧಿತನಾದಾಗಿನಿಂದ [೧೯೩೭ರಲ್ಲಿ] ಸುದ್ದಿಯಿರದಿದ್ದ ಜಾರ್ಜಿಯನ್ ಕವಿ ಟೈಟಿಯನ್ ತಬಿಡ್ಜೆಯ ಬಗ್ಗೆ ಅಧಿಕೃತವಾದ ಸುದ್ದಿ ಹೊರಬಿದ್ದಿತ್ತು. ಬಂಧಿಸಿದ ಎರಡು ತಿಂಗಳಿಗೇ ಅವನನ್ನು ಮುಗಿಸಲಾಗಿತ್ತು !

●

●

ಸೋವಿಯೆತ್‌ನಲ್ಲಿ ಇನ್ನೊಂದು ಪ್ರಮುಖ ರಾಜಕೀಯ ಬೆಳವಣಿಗೆ : ಫೆಬ್ರವರಿ ೧೯೫೬ರಲ್ಲಿ ನಡೆದ ಪಕ್ಷದ ಇಪ್ಪತ್ತನೆಯ ವಾರ್ಷಿಕ ಅಧಿವೇಶನ. ಅಲ್ಲಿ, ಕ್ರುಶ್ಚೇವ್ 'ಅತ್ಯಂತ ರಹಸ್ಯ ಭಾಷಣ' ಮಾಡಿದ. ಸೋವಿಯೆತ್ ಪತ್ರಿಕೆಯಲ್ಲೆಲ್ಲೂ ಪ್ರಕಟವಾಗದ ಈ ಸುದ್ದಿ ಅಮೇರಿಕಾದ ಏಜೆನ್ಸಿಯಿಂದ ವಿಶ್ವದಲ್ಲೆಲ್ಲ ಪ್ರಚಾರವಾಯಿತು ! ಕ್ರುಶ್ಚೇವ್, ಸ್ತಾಲಿನ್ ಆಡಳಿತವನ್ನು ಎರಡು ಕಾರಣದಿಂದ ಕಟುವಾಗಿ ಅಲ್ಲದಿದ್ದರೂ ವಿನೋದ - ವ್ಯಂಗ್ಯ ಬಳಿಸಿ ಟೀಕಿಸಿದ್ದ : ಮಹಾಯುದ್ಧದಲ್ಲಿ ರಕ್ಷಣಾ ವ್ಯವಸ್ಥೆಯನ್ನು ಸರಿಯಾಗಿ ನಿಭಾಯಿಸದಿದ್ದುದು, ಕಮ್ಯೂನಿಷ್ಟ್ ನಾಯಕರ ಬಗ್ಗೆ ಸ್ತಾಲಿನ್ ತಿರಸ್ಕಾರ ಮನೋಭಾವ ಹೊಂದಿದ್ದು, ಮುಖ್ಯವಾಗಿ ಟೀಕೆಗೆ ಒಳಗಾಗಿದ್ದವು. ಕ್ರುಶ್ಚೇವ್‌ನ ಟೀಕೆಯೇನೂ ಪ್ರಾಮಾಣಿಕವಾಗಿರಲಿಲ್ಲ. ಅಧಿಕಾರದಲ್ಲಿ ಉಳಿಯುವ, ವಿರೋಧಿಸುವವರನ್ನು ಬಗ್ಗಿ ಬಡಿಯುವ ತಂತ್ರವಾಗಿತ್ತಷ್ಟೇ.

೧೯೫೬ರ ಅವಧಿಯನ್ನು 'ವಿರೋಧಿ ಸಾಹಿತ್ಯ'ದ ವರ್ಷವೆಂದು ಗುರ್ತಿಸಲಾಗುತ್ತದೆ. ಸೋವಿಯೆತ್ ವ್ಯವಸ್ಥೆ ಧಿಕ್ಕರಿಸುವ ಅನೇಕ ಪುಸ್ತಕ ಖಾಸಗಿ ಪ್ರಕಾಶಕರಿಂದ ಪ್ರಕಟಗೊಂಡವು. ವದ್ಲಿಮೀರ್ ದುದ್ನಿಸ್ತೇವ್‌ನ 'ನಾಟ್ ಬೈ ಬ್ರೆಡ್ ಅಲೋನ್' ಕಾದಂಬರಿಯನ್ನ ಸರ್ಕಾರಿ ಪತ್ರಿಕೆ 'ನೋವಿಮೀರ್' ಧಾರಾವಾಹಿಯಾಗಿ ಪ್ರಕಟಿಸಿತ್ತು. ಬರಹಗಾರರ ಗುಂಪೊಂದು 'ಲಿಟರರಿ ಮಾಸ್ಕೋ' ಎಂಬ ಎರಡು ಬಿಡಿ ಹೊತ್ತಿಗೆಗಳನ್ನು ಪ್ರಕಟಿಸಿ, ಬಹಿಷ್ಕೃತಗೊಂಡಿದ್ದ 'ಆನಾ ಆಖ್ಮಾತೋವಾ', ತ್ಸ್ವೇತಯೇವಾಳ ಕವಿತೆಗಳೊಂದಿಗೆ 'ಷೇಕ್ಸ್‌ಪಿಯರ್‌ನ ದುರಂತ ನಾಟಕಗಳ ಅನುವಾದ'ದ ಕುರಿತು ಪಾಸ್ತರ್‌ನಾಕ್ ಬರೆದ ಲೇಖನವನ್ನೂ ಸೇರಿಸಿ

ಪ್ರಕಟಿಸಿತು. ಬೋರಿಸ್ ಮೊದಲಿಗೆ ಈ ಗುಂಪಿನೊಂದಿಗೆ ಸಹಕಾರ ತೋರಿದರೂ ಅವರ ಸ್ವಹಿತಾಸಕ್ತಿಗಳಿಂದಾಗಿ ಅವರಿಂದ ದೂರವಾದ. ೧೯೫೫ರ ಕೊನೆಯ ಸುಮಾರಿಗೆ 'ತನ್ನ ಪ್ರಮುಖ ಹಾಗೂ ಮಹತ್ವಾಕಾಂಕ್ಷೆಯ' ಕೃತಿಯಾದ 'ಡಾಕ್ಟರ್ ಝಿವಾಗೋ' ಪೂರ್ತಿಗೊಳಿಸಿದ್ದ. ತಕ್ಷಣವೇ ಮೂರು ಹಸ್ತಪ್ರತಿಗಳನ್ನು ಸಿದ್ಧಪಡಿಸಿ, ಡಾಕ್ಟರ್ ಝಿವಾಗೋ ಕವಿತೆಗಳನ್ನು ಒಂದು ಕಂತಿನಲ್ಲಿ ಪ್ರಕಟಿಸಿದ್ದ. 'ಝ್ನಮ್ಯಾ' ಪತ್ರಿಕೆಗೊಂದು 'ನೋವಿಮೀರ್' ಪತ್ರಿಕೆಗೊಂದು, 'ಗೋಸ್ಲಿದ್ಜ್' ಪ್ರಕಾಶನ ಸಂಸ್ಥೆಗೊಂದು ಪ್ರತಿ ಕಳುಹಿಸಿದ.

ತತ್‌ಕ್ಷಣದ ಪ್ರತಿಕ್ರಿಯೆ ನಿಗೂಢವಾಗಿತ್ತು. ಅಂದರೆ ಪ್ರಕಟಿಸುವ ಬಗ್ಗೆ, ಪ್ರಕಟಿಸದಿರುವುದರ ಬಗ್ಗೆ ಯಾವ ಸುಳಿವೂ ಇರಲಿಲ್ಲ. 'ಗೋಸ್ಲಿದ್ಜ್' 'ಝಿವಾಗೋ'ಕ್ಕಿಂತ ಬೋರಿಸ್‌ನ ಪ್ರಾತಿನಿಧಿಕ ಕಾವ್ಯಸಂಗ್ರಹ ಪ್ರಕಟಿಸಲು ಉತ್ಸುಕವಾಗಿತ್ತು. ಪಾಸ್ತರ್‌ನಾಕ್‌ನೂ ಒಪ್ಪಿ ಕರಾರಿಗೆ ಸಹಿ ಮಾಡಿದ ಮೇಲೆ, ಪ್ರಕಾಶಕರು ಈ ಕೆಲಸಕ್ಕಾಗಿ ಸಂಪಾದಕನೊಬ್ಬನನ್ನು ನೇಮಿಸಿದರು.

'ಗುಪ್ತ ಭಾಷಣ' ಮಾಡಿ, ವಾತಾವರಣ ತಿಳಿಯಾಗಿದೆಯೆಂಬ ಭ್ರಮೆ ಮೂಡಿಸಿ ವಾರ-ತಿಂಗಳುಗಳು ಕಳೆದರೂ ಯಾವ ಮೂಲದಿಂದಲೂ ಪುಸ್ತಕ ಪ್ರಕಟಿಸುವ ಬಗ್ಗೆ ಏನೂ ತಿಳಿಯಲಿಲ್ಲ. ಇಂಥ ಸಂದರ್ಭದಲ್ಲೇ ಹೊರದೇಶದಲ್ಲಿ ತನ್ನ ಕಾದಂಬರಿಯನ್ನೇಕೆ ಪ್ರಕಟಿಸಬಾರದೆಂಬ ಯೋಚನೆ ಬೋರಿಸ್‌ಗೆ ಬಂತು. ಮೇ ೧೯೫೬, ಮಾಸ್ಕೋದಲ್ಲಿ, ಇಟಲಿಯ ಮಿಲಾನ್‌ನ ಪ್ರಕಾಶಕ ಸಂಸ್ಥೆಯ ಪರವಾಗಿ ಕೆಲಸ ಮಾಡುತ್ತಿದ್ದ ಸೆರ್ಗಿಡೆ ಎಂಜಿಲೊ ಬೋರಿಸ್‌ನನ್ನು ಅವನ ಮನೆಯಲ್ಲಿ ಭೇಟಿಯಾದ. 'ಫೆಟ್ರಿಸಿ' ಪ್ರಕಾಶನ ಸಂಸ್ಥೆಗೆ ಕಾದಂಬರಿ ಕೊಡುವಂತೆ ಕೇಳಿದ. ಮಾಸ್ಕೋದ ಪ್ರಕಾಶಕರು ಏನೂ ಹೇಳದಿರುವುದು ಅವನಿಗೆ ಸಹಕಾರಿಯಾಗಿತ್ತು. ಮಾತುಕತೆ ಮುಗಿಸಿ, ಸೆರ್ಗಿ ಹೊರಟಾಗ ಬೋರಿಸ್ ಹೇಳಿದ - 'ಕೊನೆಗೂ ತೊಂದರೆಗೆ ಸಿಕ್ಕಿಕೊಳ್ಳಲು ನನ್ನನ್ನು ಆಹ್ವಾನಿಸುತ್ತಿದ್ದೀಯ'. ಹೀಗೆ ಹೇಳಲು ಕಾರಣ : ೧೯೨೦ರ ನಂತರ ಸರ್ಕಾರದ ಅನುಮತಿಯಿಲ್ಲದೆ ಯಾವ ಕೃತಿಯು ಹೊರದೇಶದಲ್ಲಿ ಪ್ರಕಟವಾಗಿರಲಿಲ್ಲ, ಹಾಗೆ ಪ್ರಕಟಿಸಿದವರನ್ನು; ಪ್ರಕಟಿತ ಸಾಹಿತ್ಯವನ್ನು ಸೋವಿಯೆತ್‌ನಲ್ಲಿ ಬಹಿಷ್ಕರಿಸಲಾಗುತ್ತಿತ್ತು. 'ಗ್ಲೋಸ್ಲಿದ್ಜ್' ಪ್ರಕಟಿಸಲಿದ್ದ ಆಯ್ದ ಕವಿತೆಗಳನ್ನು ಕೆಲವೆಡೆ ತಿದ್ದಿ, ಅದರೊಂದಿಗೆ ತನ್ನ ಜೀವನ ವಿವರಣೆಯ ಭಾಗವನ್ನು ಬರೆದು ಸೇರಿಸಿ ಪ್ರಕಾಶಕರಿಗೆ ಬೋರಿಸ್ ಆಗಲೇ

ಕೊಟ್ಟಾಗಿತ್ತು. ಅಚ್ಚಿನ ಮನೆಯಲ್ಲಿ ಕಂಪೋಸಿಂಗ್ ಮುಕ್ಕಾಲುಭಾಗ ಮುಗಿದು ಬೋರಿಸ್ ಕರಡನ್ನೂ ತಿದ್ದಿದ್ದ. ಆದರೆ ಝಿವಾಗೋ ಹೊರದೇಶದ ಪ್ರಕಾಶಕರಿಗೆ ನೀಡಿದ ಸುದ್ದಿ ತಿಳಿದದ್ದೇ ಕಪಿತೆಗಳ ಪ್ರಕಟಣೆಯನ್ನೂ ಏನೂ ಕಾರಣ ನೀಡದೆ ಅದು ಮೂಲೆಗೆ ತಳ್ಳಿತು.

ಕಾದಂಬರಿ ಸೃಷ್ಟಿಸಬಹುದಾದ ತೊಡಕನ್ನು ಮೊದಲಿಗೆ ಅರಿತವ - ದಿಮಿತ್ರಿ ಪೊಲಿಕರ್ಪೋವ್. ಈತ ಪಕ್ಷದಲ್ಲಿ ಸಾಂಸ್ಕೃತಿಕ ಕಾರ್ಯದರ್ಶಿ ; ಕಲೆಗೆ ಸ್ಸಂಬಂಧಿಸಿದ ನಿಯಮ ರೂಪಿಸುತ್ತಿದ್ದವ. ಆಡಳಿತದಲ್ಲಿ ಸ್ಟಾಲಿನ್ ಅಧಿಕಾರಿಗಳಂತೆ ಬಿರುಸಲ್ಲ, ಮೆದು. ಪ್ರಕಟಣೆ ತಡೆಯಲು ಬೇರೆ ಯೋಜನೆಗಳನ್ನೇ ಹಾಕಿ ಓಲ್ಗಾಳ ಮೂಲಕ ಬೋರಿಸ್‌ನ ಮನ ಒಲಿಸಲು ನೋಡಿ ವಿಫಲನಾದ. ಇನ್ನೊಂದು ಮೂಲ ಹುಡುಕಿದ. ಇಟಾಲಿಯನ್ ಕಮ್ಯೂನಿಷ್ಟ್ ಪಕ್ಷದ ನಾಯಕ ತೊಗ್ಲಿಟ್‌ನ ಮುಖೇನ ಸ್ವತಃ ಕಮ್ಯೂನಿಷ್ಟ್‌ನಾಗಿದ್ದ ಪ್ರಕಾಶಕ 'ಫೆಲ್ಟ್ರಿನ್'ನನ್ನು ಪ್ರಕಟಣೆ ತಡೆ ಹಿಡಿಯುವಂತೆ ಯತ್ನಿಸಿದ, ಆಗಲಿಲ್ಲ. ಬೋರಿಸ್‌ನ ಸಹಿಯಿರುವ ಟೆಲಿಗ್ರಾಂ ಅನ್ನು ಪ್ರಕಾಶಕನಿಗೆ ಕಳಿಸಿ ಮನವಿ ಮಾಡಿದ. ಆದರೆ ಪುಸ್ತಕ ಪ್ರಕಾಶಕ ಅಚಲನಾಗಿದ್ದ, ಪುಸ್ತಕ ಈಗಲೇ ಅಚ್ಚಿನ ಮನೆಯಲ್ಲಿದ್ದುದರಿಂದ ಬಿಟ್ಟುಕೊಡಲು ಸಿದ್ಧನಿರಲಿಲ್ಲ. ಇದರ ಜತೆಗೆ ಕ್ರೆಮ್ಲಿನ್‌ಗೆ ಇನ್ನೂ ಬೇಸರಿಸುವ ಸಂಗತಿಯಿತ್ತು. ಫೆಲ್ಟ್ರಿನ್ ಕಾದಂಬರಿಯನ್ನು ವಿಶ್ವದ ಅನೇಕ ಭಾಷೆಯ ಅನುವಾದದ ಹಕ್ಕನ್ನೂ ಅನೇಕ ಪ್ರಕಾಶಕರಿಗೆ ನೀಡಿದ್ದ. ಎಲ್ಲೆಡೆ ಪ್ರಕಟಣೆಯ ಸಿದ್ಧತೆ ನಡೆದಿದ್ದವು.

ಕಟ್ಟಕಡೆಯ ಅಸ್ತ್ರವಾಗಿ ಬೋರಿಸ್‌ನ ಸಾಹಿತ್ಯಕ ಕಡುವೈರಿ ಸೆರ್ಕೋವ್ ಕೆಲವು ಸಾಹಿತಿಗಳೊಂದಿಗೆ ಮಿಲಾನ್ ಪ್ರಕಾಶಕನನ್ನು ಕಂಡು ಮಾತನಾಡಲು ಹೋದವನು ಪುಸ್ತಕಗಳು ಇನ್ನೇನು ಅಂಗಡಿಗಳಲ್ಲಿ ಸಿಗಲಿವೆ ಎಂಬುದನ್ನು ಅರಿತು ೧೯ ಅಕ್ಟೋಬರ್ ೧೯೫೭ರಂದು ಪತ್ರಿಕಾಗೋಷ್ಠಿ ಕರೆದು - ಈಗಿನ ಇಟಾಲಿಯನ್ ಆವೃತ್ತಿ ಬೋರಿಸ್‌ನ ಇಚ್ಛೆಯಿಂದ ರಷ್ಯನ್ ಆವೃತ್ತಿಯೊಂದಿಗೆ ಪ್ರಕಟಿಸಲಾಗಿದೆ ಎಂದು ಹೇಳಿಕೆ ನೀಡಿದ, ವಸ್ತುಸ್ಥಿತಿ ಅದಕ್ಕೆ ತದ್ವಿರುದ್ಧವಾಗಿದ್ದುದು ಎಲ್ಲರಿಗೂ ಸ್ಪಷ್ಟವಾಗಿ ತಿಳಿದಿದ್ದರೂ.

ಎಲ್ಲಾ ಒತ್ತಡದ ನಡುವೆಯೂ ನವೆಂಬರ್ ೧೯೫೭ರಲ್ಲಿ 'ಡಾಕ್ಟರ್ ಝಿವಾಗೋ' ಇಟಾಲಿಯನ್ ಭಾಷೆಯ ಆವೃತ್ತಿ ಮೊದಲು, ನಂತರ ರಷ್ಯನ್ ಭಾಷೆಯ ಆವೃತ್ತಿ ಪ್ರಕಟವಾಯಿತು. ಹೇಗೂ ತೊಂದರೆ ಆಹ್ವಾನಿಸಿದ್ದ ಬೋರಿಸ್ 'ಗೋಸ್ಲಿಡ್ಜ್' ತಿರಸ್ಕರಿಸಿದ್ದ 'ಆಯ್ದ ಕಪಿತೆ' 'ಜೀವನ ವಿವರಣೆ'ಯನ್ನು ಹೊರದೇಶದ ಪ್ರಕಾಶಕರಿಗೆ

ನೀಡಿದ. ಆದರ ಮೊದಲ ಇಂಗ್ಲಿಷ್ ಅನುವಾದ ೧೯೪೯ರಲ್ಲಿ, ಆತನ ಇನ್ನಿತರ ಕೃತಿಗಳ ಅನುವಾದ ೧೯೬೧ರಲ್ಲಿ ('ಆನ್ ಆರ್ಬರ್' ಆವೃತ್ತಿ) ಪ್ರಕಟವಾಗಲಿದ್ದವು.

●
●

೭

'ಡಾಕ್ಟರ್ ಝಿವಾಗೋ' ನನ್ನ ಅತ್ಯಂತ ಮಹತ್ವದ ಹಾಗೂ ಮುಖ್ಯವಾದ ಕೃತಿ, ಜತೆಗೆ ಯಾವ ಅನುಮಾನವೂ ಇಲ್ಲದೆ ಧೈರ್ಯದಿಂದ ಅತ್ಯುತ್ತಮವಾದುದೆಂದು ಹೇಳಬಹುದಾದ ಕೃತಿ. ಈ ಮೊದಲಿನ ನನ್ನೆಲ್ಲ ಕಾವ್ಯ, ಆತ್ಮವಿವರಣೆ, ಈ ಕಾದಂಬರಿ ಬರೆಯಲು ನಡೆಸಿದ ಪೂರ್ವ ತಯಾರಿ ಮಾತ್ರ. ಈ ಕಾದಂಬರಿಯೊಂದೇ ನನ್ನ ಏಕೈಕ ಸಾಧನೆ ! ಎಂದು ಬೋರಿಸ್ ಪಾಸ್ತರ್‌ನಾಕ್ ತನ್ನ ಗೆಳೆಯರಿಗೆ ಪದೇ ಪದೆ ಹೇಳುತ್ತಿದ್ದ. ಹಾಗೆಂದು ಬರೆದುಕೊಂಡ, ಅವನ ಬಲವಾದ ನಂಬಿಕೆಯೂ ಅದೇ ಆಗಿತ್ತು. ಬೋರಿಸ್‌ನೆ ಹೇಳುವಂತೆ ಈ ಕಾದಂಬರಿಯನ್ನು ಸುಮಾರು ನಾಲ್ಕು ದಶಕಗಳ ಕಾಲ ಆತ ಬರೆಯುತ್ತಲೇ ಇದ್ದ. ಅಧಿಕೃತವಾಗಿ ಮುಗಿದ್ದದ್ದು ಮೇ - ಜೂನ್ ೧೯೫೬.

ಆಕಾರದಲ್ಲಿ ಬೃಹತ್ತಾಗಿರುವ ಇದರ ಕಥಾವಸ್ತು : ಕ್ರಾಂತಿಪೂರ್ವ ರಷಿಯಾದ ಸಮಗ್ರ ನೋಟ, ಹಾಗೂ ಕ್ರಾಂತಿಯ ನಂತರ ತಾತ್ಕಾಲಿಕ ಸರ್ಕಾರ, ಕಾರ್ಮಿಕರ ಸರ್ಕಾರದ ಕೆಲವು ವರ್ಷಗಳನ್ನು ವ್ಯಕ್ತಿಯೊಬ್ಬನ ಪ್ರಜ್ಞೆಯ ಮುಖೇನ ನೋಡುವುದು.

ಕಾದಂಬರಿಯ ಸಂಕ್ಷಿಪ್ತ ಕಥೆ :

ಕಥಾನಾಯಕ - ಯೂರಿ ಅಂದ್ರೆಯೆವಿಚ್ ಝಿವಾಗೋ. ಕಾದಂಬರಿ ಯುದ್ಧಕ್ಕೂ ಬೇರೆಲ್ಲ ಪಾತ್ರಗಳನ್ನು ನಿಯಂತ್ರಿಸಿ ಬೆಳೆಯುವ ಪಾತ್ರವಿದೊಂದೇ. ಬೇರೆಲ್ಲ ಪಾತ್ರಗಳು ಯೂರಿಗೆ ಪೂರಕವಾಗಿ ಬರುವಂಥವು. ಯೂರಿ ಪಕ್ಕಾ ಮಾಸ್ಕೋ ನಗರದ ಮನುಷ್ಯ, ವೈದ್ಯ, ಕವಿ, ಎಲ್ಲವನ್ನೂ ಕ್ರಿಯೆಯಲ್ಲಿ ತೊಡಗಿ ಕೊಳ್ಳುವುದಕ್ಕಿಂತ ಹೆಚ್ಚಾಗಿ, ಸಾಕ್ಷಿಯಾಗಿ ಗ್ರಹಿಸುವವನು.

ಸಾರ್ವಜನಿಕ ಕ್ರಿಯೆಯಿಂದಾಗಿ ಯೂರಿಯ ಕುಟುಂಬ, ಅವನ ಪ್ರೇಯಸಿ ಲಾರಿಸ್ಸಾ ಗೆಷೆರ್‌ರ ಬದುಕು ನಾಶವಾಗುತ್ತದೆ.

ಯೂರಿ ಮೊದಲು ಕಾಣಿಸಿಕೊಳ್ಳುವುದು ೧೯೦೧ರ ಸಮಯದಲ್ಲಿ. ಮಾಸ್ಕೋದ ಹೊರಗೆ, ತನ್ನ ತಾಯಿಯ ಅಂತಿಮ ಸಂಸ್ಕಾರದಲ್ಲಿ ಅಳುತ್ತಿರುವ ಬಾಲಕನಾಗಿ. ಯೂರಿಯ ತಂದೆ ಒಂದು ಕಾಲಕ್ಕೆ ವ್ಯಾಪಾರಸ್ಥ, ಲಕ್ಷಾಧೀಶ, ದಿವಾಳಿಯಾಗಿ, ಹೆಂಡತಿ- ಮಕ್ಕಳನ್ನು ಪರದೇಶಿಗಳನ್ನಾಗಿಸಿ, ರೈಲಿನಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡವ. ಈತನ ಆತ್ಮಹತ್ಯೆಗೆ ಕಾರಣನಾದವನು ಕೊಮರೋವಸ್ಕಿ ಎಂಬ ವಕೀಲ. ಪರದೇಶಿ ಬಾಲಕ ಯೂರಿ, ಗ್ರೋಮಿಕೊ ಕುಟುಂಬದೊಂದಿಗೆ ಮಾಸ್ಕೋ ನಗರಕ್ಕೆ ಬದುಕರಸಿ ಹೊರಡುತ್ತಾನೆ. ಗ್ರೋಮಿಕೋನ ಮಗಳು-ತೋನ್ಯಾ, ಯೂರಿಯ ವಯಸ್ಸಿನ ಹುಡುಗಿ. ಈ ಶ್ರೀಮಂತರ ನಡುವೆ ಇನ್ನೊಂದು ಸ್ಥಿತಿವಂತ ಕುಟುಂಬ ಜೀವಿಸಲು ಬರುತ್ತದೆ. ಅಮಾಲಿಯಾ ಗುಷೆರ್ ಬಲ್ಗೆರಿಯನ್ ಎಂಜಿನಿಯರ್‌ನ ವಿಧವಾ ಪತ್ನಿ. ಅವರ ಚಿಕ್ಕಮಗಳು ಲಾರಾ. ಯೂರಿಯ ತಂದೆಯ ತಂದೆಯ ಸಾವಿಗೆ ಕಾರಣನಾದ ಕೊಮರೋವಸ್ಕಿ ಈ ವಿಧವೆಯ ಗಂಡನ ಗೆಳೆಯ. ನಂತರ ಅಮಾಲಿಯಾಳ ಪ್ರಿಯಕರನಾದರೂ ಅವನ ಕಣ್ಣು ಲಾರಾಳ ಮೇಲೆಯೇ. ಮೂರು ವರ್ಷ ಉರುಳುತ್ತವೆ. ಲಾರಾ ಕೋಮರೋವಸ್ಕಿಯಿಂದ ತಪ್ಪಿಸಿಕೊಳ್ಳಲು ಸ್ಥಿತಿವಂತರೊಬ್ಬರ ಮನೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ಮುಂದೆ ದಾದಿಯಾಗಬೇಕೆಂಬ ಯೋಚನೆಯಿಂದ ಅದಕ್ಕೆ ಅಗತ್ಯವಾದ ಹಣವನ್ನು ಕೊಮರೋವಸ್ಕಿಗೆ ಕೇಳಿದಾಗ ಆತ ಅವಳನ್ನು ಅವಮಾನಿಸುತ್ತಾನೆ, ಜತೆಗೆ ಕಾದಂಬರಿಯಲ್ಲಿ ಸ್ಪಷ್ಟವಾಗಿ ಹೇಳದಿದ್ದರೂ ಅವಳನ್ನು ದೈಹಿಕವಾಗಿ ದುರುಪಯೋಗ ಪಡಿಸಿಕೊಳ್ಳುತ್ತಾನೆ. ಸಮಾರಂಭವೊಂದರಲ್ಲಿ ಲಾರಾ, ಕೊಮರೋವಸ್ಕಿಯ ಮಗ, ಇದೀಗ ಕ್ರಾಂತಿಕಾರಿ, ಪಾಶಾನೊಂದಿಗೆ ಸೇರಿ ಕೊಮರೋವಸ್ಕಿಯನ್ನು ಮುಗಿಸಲು ಯತ್ನಿಸುತ್ತಾಳೆ. ತಾನು ತುಂಬ ತೊಂದರೆಯಲ್ಲಿದ್ದೇನೆ, ನನ್ನನ್ನು ಮದುವೆಯಾಗು ಎಂದು ಬಾಲ್ಯ ಸ್ನೇಹಿತ ಪಾಶಾನನ್ನು ಕೇಳಿದಾಗ ಆತ ಖುಷಿಯಿಂದಲೇ ಒಪ್ಪಿಕೊಳ್ಳುತ್ತಾನೆ.

ಈ ವರ್ಷಗಳಲ್ಲಿ ಯೂರಿ ವೈದ್ಯನಾಗಿದ್ದಾನೆ - ಕವಿಯಾಗಿ ಬೆಳೆಯುತ್ತಿದ್ದಾನೆ. ಒಟ್ಟಿಗೆ ಬೆಳೆದ ತೋನ್ಯಾ-ಯೂರಿಗೆ ನಿಶ್ಚಿತಾರ್ಥವಾಗಿದೆ. ಅದೇ ಸಮಾರಂಭದಲ್ಲಿ ಯೂರಿ, ಲಾರಾ-ಪಾಶಾ ಮಾತನಾಡುತ್ತಿರುವುದನ್ನು ಗಮನಿಸುತ್ತಾನೆ. ಕೊಮರೋವಸ್ಕಿಯನ್ನು ಕೊಲ್ಲಲೂ ವಿಫಲಯತ್ನ ನಡೆಸಿದ ಲಾರಾ ಬಂಧಿತಳಾಗುತ್ತಾಳೆ. ಕೋರ್ಟು ಕಚೇರಿಗೆ ಭಯಪಟ್ಟ ಕೊಮರೋವಸ್ಕಿ ಕಾನೂನಿನ ಹೊರಗೆ ಸಮಸ್ಯೆ ಬಗೆಹರಿಸುತ್ತಾನೆ. ಆಮೇಲೆ ಲಾರಾ, ಪಾಶಾನನ್ನು

ಮದುವೆಯಾಗುತ್ತಾಳೆ. ಈ ನಡುವೆ ತೋನ್ಯಾ-ಯೂರಿಯವರಿಗೆ ಒಂದು ಮಗು ಹುಟ್ಟುತ್ತದೆ. ಇಷ್ಟುದಿನ ಮಾಸ್ಕೋದಲ್ಲಿ ವೈದ್ಯನಾಗಿದ್ದವನಿಗೆ, ಮಹಾಯುದ್ಧದ ನಂತರ ಗಾಲಿಕಲ್ ದಳಕ್ಕೆ ಡಾಕ್ಟರ್‌ನನ್ನಾಗಿ ನೇಮಿಸುತ್ತದೆ. ಇದೇ ವೇಳೆಗೆ ಲಾರಾ-ಪಾಶಾರಿಗೂ ಒಂದು ಹೆಣ್ಣು ಮಗು ಹುಟ್ಟಿದೆ. ಪಾಶಾ ಸೈನ್ಯ ಸೇರಿದ್ದಾನೆ. ಇದೇ ವೇಳೆಗೆ ಮಗುವನ್ನು ಸಂಬಂಧಿಕರ ಬಳಿ ಬಿಟ್ಟು ಲಾರಾ ಕೂಡಾ ದಾದಿಯಾಗಿ ಸೈನ್ಯದ ತುಕಡಿ ಸೇರುತ್ತಾಳೆ. ಯೋಗಾಯೋಗವೆಂಬಂತೆ ಯೂರಿ ವೈದ್ಯನಾದ ಆಸ್ಪತ್ರೆಗೇ ಅವಳೂ ದಾದಿಯಾಗಿ ಬರುತ್ತಾಳೆ.

ಯೂರಿ - ಲಾರಾಳ ನಡುವೆ ಪ್ರೇಮ ಬೆಸೆಯತೊಡಗುತ್ತದೆ. ಆದರೆ ಇಬ್ಬರೂ ಮದುವೆಯಾಗಿ ಮಕ್ಕಳಿರುವುದರಿಂದ ಈ ಥರದ ಸೆಳೆತ ಒಪ್ಪಿಕೊಳ್ಳಲು ಹಿಂಜರಿಕೆ ... ವಾರದ ನಂತರ ಲಾರಾ ಉರಾಲ್ಸ್‌ನ ಯೂರಿತೆನ್ ನಗರದಲ್ಲಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಲು ಹೊರಟುಬಿಡುತ್ತಾಳೆ. ತಾತ್ಕಾಲಿಕ ಸರ್ಕಾರ ಅಧಿಕಾರದಲ್ಲಿದ್ದ ಈ ಅವಧಿಯಲ್ಲಿ ನಾಗರಿಕಯುದ್ಧ ತಲೆದೂರಿದೆ. ಬೀದಿಬೀದಿಯಲ್ಲೂ ನೆತ್ತರು ಹರಿದಿದೆ. ಹೊಟ್ಟೆ ಬಟ್ಟೆಗೂ ತಾಪತ್ರಯ. ತೋನ್ಯಾ, ಯೂರಿ, ಗ್ರೊಮಿಕೊ ಕೂಳು-ನೀರು ಸಂಪಾದನೆಗೆ ತಲೆಕೆಳಗು ಮಾಡಬೇಕಾಗುತ್ತದೆ. ಕೊನೆಗೂ ತೋನ್ಯಾಳ ಅಜ್ಜನ ತೋಟವಿರುವ ಯೂರಿಕೆನ್ ಎಂಬ ವೆರಿಕಿನೋ ಪ್ರದೇಶದ ಹಳ್ಳಿಗೆ ವಲಸೆ ಹೋಗುತ್ತಾರೆ. [ನೋಡಿ 'ಪಯಣ' ಅನುವಾದ]

ಯೂರಿತೆನ್‌ನಲ್ಲಿ ಒಂದು ದಿನ ಲೈಬ್ರರಿಗೆ ಹೋದ ಯೂರಿ ಅಲ್ಲಿ ಲಾರಾಳನ್ನು ಕಾಣುತ್ತಾನೆ. ಮೊದಲಿಗೆ ಮಾತಾಡಲು ಹಿಂಜರಿದರೂ ನಂತರ ಇಬ್ಬರೂ ತಮ್ಮ ಮನಸ್ಸಿನ ಭಾವನೆಗಳನ್ನು ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಾರೆ. ಹೀಗೆ ವಾರಗಳ ಕಾಲ ಮಧ್ಯಾಹ್ನ ಅವರ ಪ್ರೇಮ ನಡೆಯುತ್ತದೆ. ಹೆಂಡತಿ ತೋನ್ಯಾಳಿಗೆ ಈ ವಿಷಯ ತಿಳಿದಾಗ , ಯೂರಿ ತಪ್ಪೊಪ್ಪಿಕೊಂಡು ಲಾರಾಳನ್ನು ತೊರೆದು ಬಿಡಬೇಕು ಎಂಬ ನಿರ್ಧಾರದಲ್ಲಿ ಮನೆಗೆ ಬರುವಾಗ ಕೆಂಪು ದಳವೊಂದು ತಮ್ಮ ತಂಡಕ್ಕೆ ವೈದ್ಯನ ಅಗತ್ಯವಿದೆಯೆಂದು ಅವನನ್ನು ಸೆರೆಹಿಡಿದು ಒಯ್ಯುತ್ತಾರೆ. ಎರಡು ವರ್ಷಗಳ ಈ ಯಾತನೆಯಿಂದ ಒಂದು ದಿನ ಯೂರಿ ತಪ್ಪಿಸಿಕೊಂಡು ಬಿಡುಗಡೆ ಪಡೆಯುತ್ತಾನೆ. ಮನೆಗೆ ಮರಳಿದರೆ ಬಂಡುಕೋರರ ದಾಳಿಯ ಭಯದಿಂದ ಹೆಂಡತಿ-ಮಕ್ಕಳು ಮಾಸ್ಕೋಕ್ಕೆ ಹೊರಟು ಹೋಗಿರುವುದಾಗಿ ತಿಳಿಯುತ್ತದೆ. ಬೇಸರದಿಂದ ಲಾರಾಳ ಮನೆಗೆ ಹೋದಾಗ ಅವಳೂ ಮನೆಯಲ್ಲಿಲ್ಲದಿರುವುದು ಕಂಡು ಹಾಗೇ ಒರಗಿ ನಿದ್ದೆ

ಮಾಡುವಾಗ ಲಾರಾ ಬಂದು ಎಬ್ಬಿಸುತ್ತಾಳೆ. ಇಬ್ಬರೂ ಪ್ರೀತಿಯ ಹುಚ್ಚು ಹೊಳೆಯಲ್ಲಿ ತೇಲುತ್ತಾರೆ.

ಯೂರಿಯ ಕ್ರಾಂತಿಯ ಬಗೆಗಿದ್ದ ಉತ್ಸಾಹ ಅಡಗಿಹೋಗಿದೆ. ಅದೇ ನಿರುತ್ಸಾಹದಲ್ಲಿ, ನಾಗರಿಕಯುದ್ಧ, ದಂಗೆ, ಕ್ರಾಂತಿಯ ಬೇಗೆಯಿಂದ ತಪ್ಪಿಸಿಕೊಳ್ಳಲು ಲಾರಾ ಆಕೆಯ ಮಗಳು ಕಾತ್ಯಾಳೊಂದಿಗೆ ವೆರಿಕಿನೊಕ್ಕೆ ಹೊರಡುತ್ತಾನೆ. ಸ್ವಚ್ಛ ಬದುಕು ಹುಡುಕಿ. ಆದರೆ ಹದಿನೈದು ದಿನದಲ್ಲೇ ಕೊಮರೋವಸ್ಕಿ ಇಲ್ಲಿ ದಂಗೆಯಿದೆ ಎಂಬ ಭೀತಿಯೊಡ್ಡಿದಾಗ ಲಾರಾ ಮಗಳ ಭವಿಷ್ಯಕ್ಕಾಗಿ ಕೊಮರೋವಸ್ಕಿಯೊಂದಿಗೆ ಪೂರ್ವದಂಚಿಗೆ ಹೋಗಲು ತಯಾರಿ ನಡೆಸುತ್ತಾಳೆ. ಯೂರಿ ಕೂಡಾ ಮಾಸ್ಕೋದಲ್ಲಿನ ತನ್ನ ಕುಟುಂಬವನ್ನು ನೋಡುವ ಆಶೆಯಿಂದ ಹೊರಡುತ್ತಾನೆ. ಇದೇ ಲಾರಾಳ ಕೊನೆ ಭೇಟಿ, ಅವಳಿಗೆ ಕೈಬೀಸಿದಾಗ ಅವನ ಒಳ ಮನಸ್ಸು ಹೇಳುತ್ತದೆ: 'ಇಲ್ಲಿಗೆ ನನ್ನ ಹೊಳೆವ ಸೂರ್ಯ ಮುಳುಗಿದ.'

ಯೂರಿ ಬದುಕಿನ ಕೊನೆಯ ಎಂಟು ವರ್ಷಗಳನ್ನು ಒಂದೇ ಅಧ್ಯಾಯದಲ್ಲಿ ಮುಗಿಸಲಾಗಿದೆ. ಮಾಸ್ಕೋಕ್ಕೆ ಕುಟುಂಬ ಹುಡುಕಿ ಹೊರಟವನಿಗೆ, ಅಲ್ಲಿ ಹೋದ ಮೇಲೆ ತಿಳಿಯುವುದು ಅವರು ದೇಶಭ್ರಷ್ಟರಾಗಿ ಪ್ಯಾರಿಸ್‌ನಲ್ಲಿದ್ದಾರೆಂದು. ಪ್ಯಾರಿಸ್‌ಗೆ ಹೋಗಲು ಅನುಮತಿ ಪತ್ರ ಪಡೆಯಲು ಯತ್ನಿಸಿ ವಿಫಲನಾಗುತ್ತಾನೆ. ನಂತರ ಅಲ್ಲಿಯೇ ಹಿಂದೆ ಗ್ರೊಮಿಕೋ ಕುಟುಂಬದವಳಾಗಿದ್ದ ಹುಡುಗಿಯನ್ನು ಮದುವೆಯಾಗುತ್ತಾನೆ. ಆತನ ಬದುಕು ಎಷ್ಟು ಛಿದ್ರವಾಗಿದೆಯೆಂದರೆ ವೈದ್ಯವೃತ್ತಿ, ಬರವಣಿಗೆ ಎರಡು ಅವನಿಗೆ ಸಾಧ್ಯವಾಗುವುದಿಲ್ಲ. ಒಂದು ದಿನ ನೂಕುನುಗ್ಗಲಿನ ಟ್ರಾಮ್‌ನಲ್ಲಿ ಮಾಸ್ಕೋದಲ್ಲಿ ಪಯಣಿಸುವಾಗ ಹೃದಯಾಘಾತವಾಗುತ್ತದೆ. ಉಸಿರಾಡಲು ಪ್ರಯತ್ನಿಸುತ್ತಿರುವಂತೇ, ನೂಕು ನುಗ್ಗಲಿನಲ್ಲಿ ಡಾಕ್ಟರ್ ಝಿವಾಗೋ ಕುಸಿದುಬಿದ್ದು ಸಾಯುತ್ತಾನೆ.

ಮುಕ್ತಾಯದ ಅಧ್ಯಾಯದಲ್ಲಿ ಲಾರಾ, ಆಕಸ್ಮಿಕವಾಗಿ ಯೂರಿಯ ಗೆಳೆಯರು ಆತನ ಕೊನೆಯ ಭೇಟಿಯ ಬಗೆಗೆ ಮಾತಾಡಿಕೊಳ್ಳುವುದನ್ನು ಕೇಳಿಸಿಕೊಳ್ಳುತ್ತಾಳೆ - ಇದಾದ ತಕ್ಷಣವೇ ಲಾರಾಳನ್ನು ಪೊಲೀಸರು ರಸ್ತೆಯಲ್ಲಿ ಬಂಧಿಸುತ್ತಾರೆ... ಅವಳ ಮಕ್ಕಳು, ಯೂರಿಯ ಕವಿತೆಗಳು, ನೆನಪುಗಳು ಮಾತ್ರ ಉಳಿಯುತ್ತವೆ.....

●

●

ಯೂರಿಗೆ ಗಾಢವಾದ ಕ್ರಿಶ್ಚಿಯನ್ ಧಾರ್ಮಿಕ ನಂಬಿಕೆಯುಂಟು, ಪುನರುತ್ಥಾನವನ್ನು ಆತ ಬಲವಾಗಿ ಸಮರ್ಥಿಸುವವನು. ಆತನ ಬದುಕು ಪೂರ್ತಿ ದ್ವಂದ್ವಗಳಿಂದ ಕೂಡಿದೆ. ಆತ ತೋನ್ಯಾ-ಲಾರಾ ಇಬ್ಬರನ್ನೂ ಪ್ರೀತಿಸಿದವನು. ಬೆಳಿಗ್ಗೆಯಿಂದ ರಾತ್ರಿಯವರೆಗೆ ತನಗಾಗಿ, ತನ್ನ ಕುಟುಂಬಕ್ಕಾಗಿ ಕೆಲಸ ಮಾಡುವುದು ಅವನಿಗಿಷ್ಟ. ಆದರೆ ಒಂದು ವ್ಯವಸ್ಥೆ ಸಂಕ್ರಮಣ ಸ್ಥಿತಿಯಲ್ಲಿರುವಾಗ, ಬದಲಾದ ಸ್ವರೂಪದಲ್ಲಿರುವಾಗ ಅಂಥ ಸಮಾಜದಲ್ಲಿ ತನ್ನ ಪಾತ್ರವೇನು ? ತಾನು ಎಲ್ಲಿ ಹೊಂದುವೆ ? ಎಂಬುದು ಕೊನೆಗೂ ಅವನಿಗರ್ಥವಾಗುವುದಿಲ್ಲ. ಬದುಕಿನ, ಸಾವಿನ ಒಗಟು, ಪ್ರೀತಿಯ ಸುಖ, ನೈತಿಕ ಜವಾಬ್ದಾರಿ ಯಾವುದು ಅರ್ಥವಾಗದ ಸ್ಥಿತಿಯಲ್ಲಿ **ಸಮೂಹದ ನೂಕುನುಗ್ಗಲಿ**ನಲ್ಲಿ ಉಸಿರಾಡಲು ಯತ್ನಿಸಿ, ನಿಶಕ್ತವಾಗಿರುವುದರಿಂದ ಸಾವನ್ನಪ್ಪುತ್ತಾನೆ.

●

●

ಇಂಥ ಸರಳ ವಸ್ತುವಿನ ಕಾದಂಬರಿಯನ್ನು 'ನೋವಿಮೀರ್' ಪತ್ರಿಕೆಯ ಸಂಪಾದಕೀಯ ವರ್ಗಒಂದು ಸುದೀರ್ಘ ವಿವರಣೆ ನೀಡಿ ತಿರಸ್ಕರಿಸಿದರೆ; 'ಗೋಸ್ಲಿರ್ಜ್' ಪ್ರಕಾಶನ ಸಂಸ್ಥೆ ನಿರುತ್ತರವಾಗಿ ಕಾದಂಬರಿ ಪ್ರಕಟಿಸುವುದಿಲ್ಲವೆಂದು ಸೂಚ್ಯ ಸುಳಿವು ನೀಡಿತ್ತು. ಪರಿಣಾಮ : 'ಡಾಕ್ಟರ್ ಜಿವಾಗೋ' ಹೊರದೇಶದಲ್ಲಿ ಪ್ರಕಟವಾಯಿತು. ಇದಕ್ಕೆ ನೋವಿಮೀರ್ ಸಂಪಾದಕರ ಸುದೀರ್ಘ ಉತ್ತರವೇನೆ ಇರಲಿ, ಕಾದಂಬರಿ, ಬರಹಗಾರನ ಕೈಮೀರಿ ಕೆಲವು ತಪ್ಪು ಅರ್ಥಗಳನ್ನು ಹೊರಡಿಸುವಂತಿತ್ತು. ಒಂದು ದೇಶದ ಇತಿಹಾಸ, ಕ್ರಾಂತಿ, ಹಲವೊಮ್ಮೆ ನಿರ್ಲಿಪ್ತವಾಗಿ ನೋಡಲು ಯತ್ನಿಸಿದ್ದರೂ ಬರಹಗಾರನ ಸುಪ್ತ ನಿಲುವು ಸಮಾಜಕ್ಕೆ ನೇತ್ಯಾತ್ಮಕವಾಗಿದೆ ಎಂಬ ಅಭಿಪ್ರಾಯ ಹೊರಡಿಸುವಂತಿತ್ತು.

'ಡಾಕ್ಟರ್ ಜಿವಾಗೋ'ದ ಬಗ್ಗೆ ಮೊದಲ, ಸಾಮಾನ್ಯ ಅಭಿಪ್ರಾಯ - ಅದು ಪಾಸ್ತರ್‌ನಾಕ್‌ನ ಬದುಕಿನ ಚಿತ್ರಣವೆಂಬುದು. ಬೋರಿಸ್‌ನ ಪತ್ನಿ ಜೆನ್ನೈದಾ ತೋನ್ಯಾಳ ಪಾತ್ರಕ್ಕೆ, ಓಲ್ಗಾ ಇವಾನ್‌ಸ್ಕಿಯೋ ಲಾರಾಳ ಪಾತ್ರಕ್ಕೆ; ಖುದ್ದು ಪಾಸ್ತರ್‌ನಾಕ್ ಯೂರಿಯ ಪಾತ್ರಕ್ಕೆ ಸ್ಫೂರ್ತಿಯೆಂದು ತೀರ ವೈಯಕ್ತಿಕ ಮಟ್ಟದ ವಿಮರ್ಶೆ ನಡೆಯಿತು. ಪಾಸ್ತರನಾಕ್‌ನ ವೈಯಕ್ತಿಕ ಬದುಕನ್ನು ವಿವರವಾಗಿ ನೋಡಿದರೆ ಕಾದಂಬರಿಯ ಮುಕ್ಕಾಲು ಅವನ ಆತ್ಮ ವಿವರಣೆಯಂತಿರುವುದು

ಸುಳ್ಳಲ್ಲ. ಆದರೆ ಮುಖ್ಯವಾದದ್ದು ಸ್ಫೂರ್ತಿ ಯಾರು, ಯಾವುದು ಎನ್ನುವುದಕ್ಕಿಂತ ಕಲಾಕೃತಿಯಾಗಿ ಅದೆಷ್ಟು ಯಶಸ್ವಿಯಾಗಿದೆ, ಬದುಕಿನ ಬಗ್ಗೆ ಅದು ಎಂಥ ಪ್ರಶ್ನೆ ಎತ್ತುತ್ತದೆ ಎನ್ನುವುದು.

'ಡಾಕ್ಟರ್ ಝಿವಾಗೋ' ತೀರ ವಿರುದ್ಧವಾದ ಎರಡು ವಿಮರ್ಶೆಗಳನ್ನು ಎದುರಿಸಿತು. ಎರಡೂ ಅಭಿಪ್ರಾಯಗಳು ಕಾದಂಬರಿಯನ್ನು ವಸ್ತುನಿಷ್ಠವಾಗಿ ನೋಡಲು ತೊಡಕು ಸೃಷ್ಟಿಸುವಂಥವು.

ಈ ಎರಡು ವಿಮರ್ಶೆಗಳಲ್ಲಿ ಅತಿಯಾದ ವ್ಯಕ್ತಿ ವೈಭವೀಕರಣ, ಹುಸಿ ಸಂವೇದನಾಶೀಲತೆ, ಆಧುನಿಕ ಸಮಾಜದಲ್ಲಿ ವ್ಯಕ್ತಿಯ ಅಸ್ತಿತ್ವದ ದುರಂತ ಇತ್ಯಾದಿಗಳನ್ನು ಧಾರಾಳವಾಗಿ ಉದ್ಧರಿಸಿ 'ಡಾಕ್ಟರ್ ಝಿವಾಗೋ,' ಯುದ್ಧದ ನಂತರ, ಈ ಐವತ್ತು ವರ್ಷಗಳಲ್ಲಿ ಬಂದ ಅತ್ಯಂತ ಶ್ರೇಷ್ಠ ಕೃತಿ; ರಷ್ಯನ್ ಕಾದಂಬರಿಗಳಲ್ಲೇ ಅತ್ಯಂತ ಸುಂದರವಾಗಿ ಹೆಣೆದ ಪ್ರೇಮಗಾಥೆ ... ಎನ್ನುವ ತೀರ್ಮಾನ ನೀಡಿದ ಪಾಶ್ಚಾತ್ಯ ವಿಮರ್ಶೆ ಮೊದಲ ಬಗೆಯದು. ಅಸ್ತಿತ್ವವಾದ; ದುರಂತ ಪ್ರಜ್ಞೆ, ಸೂಕ್ಷ್ಮ 'ವ್ಯಕ್ತಿ' ಸಮಾಜದಲ್ಲಿ ಎದುರಿಸುವ ಅಸ್ತಿತ್ವದ ಸಮಸ್ಯೆ... ಗಳಂಥ ವಿಷಯಗಳ ಮೇಲೆ ಬಂದ ಪಾಶ್ಚಾತ್ಯ ಕಾದಂಬರಿಗಳನ್ನಾಗಲಿ; ಪಾಶ್ಚಾತ್ಯ ಪ್ರಭಾವದಿಂದ ಹುಟ್ಟಿದ ಸಾಹಿತ್ಯ, ಸಾಹಿತ್ಯ ತತ್ವಗಳಾಗಲಿ ಒಂದು ಅತಿಯಾದ ನಿಲುವಿಗೆ ನಿಂತು ಹೇಗೆ ದಯನೀಯವಾಗಿ ಸೋಲು ಕಂಡವೆಂಬುದನ್ನು ಆಧುನಿಕ ಸಾಹಿತ್ಯದುದ್ದಕ್ಕೂ ನಾವು ಕಂಡಿದ್ದೇವೆ.

ಎರಡನೆ ಬಗೆಯ ವಿಮರ್ಶೆ ಬೋರಿಸ್ ಪಾಸ್ತರ್‌ನಾಕ್‌ನ ಸಮಕಾಲೀನರು, ಸೋವಿಯೆತ್ ಸಮಾಜದಲ್ಲಿದ್ದವರು ಮಾಡಿದ್ದು. ರಷಿಯಾದ ಇಲ್ಯಾ ಎಹ್ರೆನ್ ಬರ್ಗ್: 'ಬರಹಗಾರ ನೋಡದ, ಕೇಳದ ವಸ್ತುವಿನ ಕುರಿತು ಬರೆದ ಕಾದಂಬರಿ'ಯೆಂದು. 'ಈ ಕಾದಂಬರಿಯ ಕೆಲವು ಪುಟಗಳು ಎಷ್ಟು ನೀರಸವಾಗಿವೆಯೆಂದರೆ ನಾನೇ ಪೆನ್ಸಿಲ್ಲಿನಿಂದ ಕಾಟು ಹಾಕಿದೆ. ಇವುಗಳ ಸಪ್ಪೆತನ ನೋಡಿದರೆ, ಈ ಕಾದಂಬರಿ ಬೋರಿಸ್‌ನ ನಿರಭಿರುಚಿಯ ಓಲ್ಗಾ ಇವಾನ್‌ಸ್ಕಿಯೂ ಬರೆದಿದ್ದಾಳೆಂದೆನಿಸುತ್ತೆ.'- ಎಂದು ತೀರಾ ವೈಯಕ್ತಿಕ ಮಟ್ಟದ ವಿಮರ್ಶೆ ಮಾಡಿದವಳು ಆನಾ ಅಖ್ಮತೋವಾ. 'ಡಾಕ್ಟರ್ ಜಿವಾಗೋ ಲಘು ಓದಿಗೆ ತಕ್ಕುದಾಗಿದೆ.' ಎಂದಳು ನದೇಜಾ ಮಾಂದಲ್‌ಷ್ತಮ್. ಚುಕವೋಸ್ಕಿ: ಕಾದಂಬರಿಯ

ಮುಖ್ಯ ಪಾತ್ರಗಳೆಲ್ಲ ರಟ್ಟಿನಂತೆ ನಿರ್ಜೀವವಾಗಿವೆ. ಈ ನಿರ್ಜೀವತೆಯಲ್ಲಿ ಎದ್ದು ಕಾಣುವವನೆಂದರೆ ಸ್ವತಃ ಡಾಕ್ಟರ್ ಝಿವಾಗೋನ ಪಾತ್ರ ಎಂದು ವಿಮರ್ಶೆ ಬರೆದ. ಇವರೆಲ್ಲ ಬೋರಿಸ್‌ನ ಪ್ರೀತಿಪಾತ್ರ ಗೆಳೆಯರಾಗಿದ್ದರೆಂಬುದನ್ನು ಮರೆಯುವಂತಿಲ್ಲ.

ಎರಡೂ ಥರದ ವಿಮರ್ಶೆ ಬದಿಗಿಟ್ಟು ನೋಡಿದರೆ 'ಡಾಕ್ಟರ್ ಜಿವಾಗೋ' ಪಾಶ್ಚಾತ್ಯರಂತೆ ಸುಲಭವಾಗಿ ಒಪ್ಪಿಕೊಂಡು ಹೊಗಳಲು, ರಷಿಯನ್‌ರಂತೆ ತಿರಸ್ಕರಿಸಲು ಆಗದಂಥ ಕಾದಂಬರಿ. ಕಾದಂಬರಿಯ ಒಟ್ಟು ದೃಷ್ಟಿಕೋನದಲ್ಲೇ ಭಿನ್ನತೆ ಇದೆ ಎಂಬುದನ್ನು ಮೊದಲು ಒಪ್ಪಿಕೊಳ್ಳಬೇಕಾಗುತ್ತದೆ. ಜತೆಗೆ ಬೋರಿಸ್‌ನಂಥ ನಿಪುಣ ಬರಹಗಾರನ ಕೌಶಲ್ಯವನ್ನು, ಈ ಕಾದಂಬರಿ ಒಟ್ಟಾರೆಯಾಗಿ ಕಳೆದುಕೊಂಡಿವೆ. ಟಾಲ್‌ಸ್ಟಾಯ್, ದಸ್ತಯೇವಸ್ಕಿ, ತುರ್ಗ್‌ನೇಫ್, ಚೆಕಾಫ್‌ರ ಗದ್ಯದ ಬರವಣಿಗೆಯನ್ನು ಒಮ್ಮೆ ನೆನಪಿಸಿಕೊಂಡರೆ ಈ ಮಾತಿನ ಅರ್ಥ ಗೊತ್ತಾಗುತ್ತದೆ. ಇದರರ್ಥ ಝಿವಾಗೋ ಕೂಡ ಇಂಥದ್ದೇ ಗದ್ಯಪರಂಪರೆ ಮುಂದುವರಿಸಬೇಕಿತ್ತೆಂದು ಅಲ್ಲ. ಯಾವುದೇ ಕಲಾವಿದ, ಒಂದು ಪರಂಪರೆಗಳನ್ನು ಮೀರಿ ಹೊಸ ಘೋಷಿತ ನಿಲುವು, ಉದ್ದೇಶ, ಶೈಲಿ, ಪರಂಪರೆ ಬೆಳೆಸುತ್ತಲೇ ಇರುತ್ತಾನೆ. ಹಾಗೆ ಒಂದು ನಿರ್ದಿಷ್ಟತೆಗೆ ಅಂಟಿಕೊಂಡ ಲೇಖಕ ತನ್ನ ಮಾಂತ್ರಿಕತೆಯನ್ನೇ ಕಳೆದುಕೊಂಡು ಹಾಡಿದ್ದನ್ನೇ ಹಾಡುವ ಕಿಸಬಾಯಿ ದಾಸನಾಗುತ್ತಾನೆ, ಇರಲಿ.

'ಡಾಕ್ಟರ್ ಝಿವಾಗೋ' ಕಾದಂಬರಿಯನ್ನಷ್ಟೇ ನೋಡವುದಾದರೆ ನಿರೂಪಣೆಯ ಗೊಂದಲ ಈ ಕಾದಂಬರಿಯ ಇನ್ನೊಂದು ಸಮಸ್ಯೆ. ಇಲ್ಲಿ, ಎಷ್ಟೊಂದು ಪಾತ್ರಗಳು ಹುಟ್ಟುತ್ತವೆಂದರೆ ಆ ಪಾತ್ರಗಳಿಂದ ಇನ್ನು ಮೂರು-ನಾಲ್ಕು ಕಾದಂಬರಿಯನ್ನಾದರೂ ಹೆಣೆಯಬಹುದಿತ್ತು. ಪ್ರತಿ ಪುಟಕ್ಕೊಂದೊಂದರಂತೆ ಒಂದು ಹೊಸ ಪಾತ್ರ ಬರುತ್ತದೆ. ಅನಗತ್ಯವಾಗಿ ಆ ಪಾತ್ರದ ಇತಿಹಾಸ ಇತ್ಯಾದಿ ಹೇಳುತ್ತ, ಕಾದಂಬರಿಯ ಆ ಕ್ಷಣದ ಉದ್ದೇಶವೇ ಮರೆತು ಹೋದಂತಾಗುತ್ತದೆ. ಹೀಗಾಗಿಯೇ ಒಂದರ್ಥದಲ್ಲಿ ಸಮಗ್ರತೆಯನ್ನು; ಗಟ್ಟಿಯಾದ ಪ್ರಬಂಧ ಧ್ವನಿಯನ್ನು ಕಳೆದುಕೊಳ್ಳುತ್ತದೆ.

ಜತೆಗೆ, ಕಾದಂಬರಿಯ ದುರಂತ, ವ್ಯಕ್ತಿ ಇತಿಹಾಸವನ್ನು ದಾಖಲಿಸುವುದೇ ಅದರ ಉದ್ದೇಶವಾಗಿದ್ದರೆ, ಅದೊಂದು ಸಾಮಾನ್ಯ ಘಟನೆ, ಕಾಲದ ಘಟ್ಟದಲ್ಲಿ

ನಡೆಯುವ ಸಹಜ ಕ್ರಿಯೆ ಎಂಬಂತೆ ಚಿತ್ರಿಸಿರುವುದರಿಂದ ದುರಂತದ ಸಾಂಕೇತಿಕತೆಯೇ ಸಫಲವಾದಂತಿಲ್ಲ. ಮೇಲು ನೋಟಕ್ಕೆ ಡಾಕ್ಟರ್ ಝಿವಾಗೋನ ದುರಂತ ಸಮೂಹ ಕ್ರಿಯೆಯಿಂದ ಸಂಭವಿಸಿದ್ದು ಎಂದು ಕಾದಂಬರಿ ಹೇಳಲು ಯತ್ನಿಸುವಂತಿದೆ, ಆದರೆ ಆತನ ದುರಂತಕ್ಕೆ, ವಿನಾಶಕ್ಕೆ ಅವನ ದುರ್ಬಲತೆ, ಜವಾಬ್ದಾರಿಯಿಂದ ಪಲಾಯನ ಹೇಳುವ ಗುಣಗಳೂ ಕಾರಣವಲ್ಲವೆ ? ಎಂದು ಪ್ರಶ್ನಿಸಿದರೆ, ಕಾದಂಬರಿ ತನ್ನ ಮಿತಿಯೊಳಗೆ ಈ ಪ್ರಶ್ನೆಗೆ ಉತ್ತರಿಸುವುದಿಲ್ಲ.

ಈ ನಿಟ್ಟಿನಲ್ಲಿ ರೇಮಂಡ್ ವಿಲಿಯಮ್ಸ್‌ನ ಅಂಶಗಳು ಗಮನಾರ್ಹವಾಗಿದೆ. - 'ಡಾಕ್ಟರ್ ಝಿವಾಗೋ' ಕಾದಂಬರಿಯನ್ನು 'ಒಬ್ಬ ಸಂವೇದನಾಶೀಲ ಸಾಮಾನ್ಯ ವ್ಯಕ್ತಿ ಸಮೂಹ ಕ್ರಾಂತಿ ಕ್ರಿಯೆಯಿಂದಾಗಿ ನಶಿಸಿ ಹೋದ' ಎನ್ನುವ ಪಾಶ್ಚಾತ್ಯ ವ್ಯಕ್ತಿ ವೈಭವೀಕರಣದ ನೈತಿಕ ಓದನ್ನು 'ಕಾಲದ ಬದಲಾವಣೆಗೆ ಹೊಂದಿಕೊಳ್ಳಲಾಗದೆ ಕುಸಿದು ಸಾಯುವ ದುರ್ಬಲನ ಕತೆ' ಎನ್ನುವ ಅಂಧ ಸಮಾಜವಾದಿ ಓದನ್ನು ರೇಮಂಡ್ ತಿರಸ್ಕರಿಸುತ್ತಾನೆ. ಈ ಎರಡೂ ನೈತಿಕ ಓದು ಏಕಮುಖ ಹೊಂದಿವೆ ಮಾತ್ರವಲ್ಲ, ಎರಡು ರಾಜಕೀಯ ಹಿತಾಸಕ್ತಿ ಹೊಂದಿವೆ. ಈ ಉದ್ದೇಶದ ಸಫಲತೆಗೆ ವಿಮರ್ಶೆಯನ್ನು ಬಳಸಿಕೊಳ್ಳುತ್ತವೆ ಎನ್ನುವುದು ವಿಲಿಯಮ್ಸ್‌ನ ಅನ್ನಿಸಿಕೆ.

ವ್ಯಕ್ತಿ, ಆ ವ್ಯಕ್ತಿಯ ಅನುಭವದ ಹಿರಿಮೆ, ವ್ಯಕ್ತಿ ಇತಿಹಾಸ, ನಂಬಿಕೆ ಎತ್ತಿ ಹಿಡಿಯುವುದೇ ಈ ಕಾದಂಬರಿಯ ನೈತಿಕ ಉದ್ದೇಶವಾಗಿದ್ದರೆ ಅಂಥ ಪ್ರಯತ್ನದಲ್ಲಿ ಬೋರಿಸ್ ಪಾಸ್ತರ್‌ನಾಕ್ ದಯನೀಯವಾಗಿ ಸೋಲು ಅನುಭವಿಸಿದ್ದಾನೆಂದು ಈ ಮೊದಲೊಮ್ಮೆ ಹೇಳಿದೆ. ಅದನ್ನು ವಿವರವಾಗಿ ನೋಡುವ - ಡಾಕ್ಟರ್ ಯೂರಿ ಝಿವಾಗೋ ಬದುಕಿನುದ್ದಕ್ಕೂ ಒಂದಲ್ಲ ಒಂದು ರೀತಿಯಿಂದ ನುಣುಚಿಕೊಳ್ಳುತ್ತ, ವಿಶಾಲಾರ್ಥದಲ್ಲಿ ತನ್ನನ್ನು ನಂಬಿದವರಿಗೆ ಆಸರೆ ಒದಗಿಸಲಾರದೆ ಬದುಕಿ ಬಂದವನು. ಇಂಥ ಯೂರಿಯನ್ನು ನೈತಿಕ ನಾಯಕನನ್ನಾಗಿ ಮಾಡುವ ಪಾಶ್ಚಾತ್ಯ ವಿಮರ್ಶೆಯನ್ನು ಸಹಿಸುವುದು ತುಸು ಕಷ್ಟವೇ. ಕಾದಂಬರಿಯಲ್ಲಿ ಯೂರಿ ಮೂರು ಸಲ ತಾನು ಪ್ರೀತಿಸಿ, ಅವಳಿಂದ ಮಕ್ಕಳನ್ನು ಪಡೆದವಳನ್ನು ದೂರ ಸರಿಸುತ್ತಾನೆ. ವೈದ್ಯನಾಗಿ, ಅಗತ್ಯ ಸಂದರ್ಭದಲ್ಲಿ ಸಮಾಜಕ್ಕೆ ತಾನು ಸೇವೆ ಮಾಡುವುದು ಕರ್ತವ್ಯವೆಂದು ಅವನಿಗನ್ನಿಸುವುದಿಲ್ಲ. ಅವನ ಹುಸಿ ಗೊಣಗಾಟ; ಸಂವೇದನೆ ಸಾಮಾನ್ಯ ವ್ಯಕ್ತಿಗಳಿಗಿರಬಹುದಾದ ವಿಶಿಷ್ಟ ಗುಣಗಳಿಂದ ; ಸಾಮೂಹಿಕ ಕ್ರಿಯೆಗಳಿಂದ ಯಾವಾಗಲೂ ಅಂಜುತ್ತ ದೂರವುಳಿಯುವಂತೆ ಮಾಡುತ್ತವೆ. ಇಲ್ಲಿ

ದುರ್ಬಲತೆಯೇ ಅವನ ಗುಣ ವಿಶೇಷವೆಂದರೂ ಅದನ್ನು ಮೀರಿ ಗಟ್ಟಿಯಾಗಿ ಬೆಳೆಯುವ ಪ್ರಯತ್ನವನ್ನು ಎಲ್ಲಿಯೂ ಮಾಡುವುದಿಲ್ಲ. ಬದಲಿಗೆ 'ಇತಿಹಾಸಕ್ಕೂ - ನನಗೂ ಸಂಬಂಧವಿಲ್ಲ, ಅದು ಯಾವತ್ತೂ ನನ್ನನ್ನು ಏನೂ ಕೇಳಿಲ್ಲ'ವೆನ್ನುತ್ತಾನೆ. ದಸ್ತಯೇವ್‌ಸ್ಕಿ, ಚೆಕಾಫ್ ಸಾಹಿತ್ಯದಲ್ಲೂ ದುರ್ಬಲರು ದುರಂತವನ್ನಪ್ಪಿದರೂ ತಮ್ಮ ವ್ಯಕ್ತಿತ್ವದ ಹಿರಿಮೆಯನ್ನು ಬಲವಾಗಿ ಪ್ರತಿಪಾದಿಸುತ್ತಾರೆ. ಯೂರಿ ದುರ್ಬಲ ನಿಜ, ಆದರೆ ದುರ್ಬಲತೆ ಮೀರಲು ಅವನಿಗೆ ವಿಫುಲವಾದ ಅವಕಾಶಗಳಿವೆ. ಏಕೆಂದರೆ ಅವನಿಗೆ ಜವಾಬ್ದಾರಿ, ನೈತಿಕತೆ, ರಾಜಕೀಯ ಪ್ರಜ್ಞೆ ಕಲಿಸಬಲ್ಲ ವಿದ್ಯೆಯಿದೆ, ಜ್ಞಾನವಿದೆ, ಮೇಲಾಗಿ ಆತ ಸೂಕ್ಷ್ಮ; ಕವಿ. ಆದರೆ ಈ ಯಾವ ಸಾಧ್ಯತೆಗಳನ್ನೂ ಸತ್ಯವನ್ನೂ ಶೋಧಿಸಲು ಆತ ಕ್ರಿಯಾತ್ಮಕವಾಗಿ ಬಳಸಿಕೊಳ್ಳುವುದಿಲ್ಲ. ಅವನ ಜ್ಞಾನ-ಅನುಭವ ಕೂಡ ಅವನನ್ನು ದುರಂತದಿಂದ ತಪ್ಪಿಸಲಾಗದಿರುವುದಕ್ಕೆ ಕಾರಣ ಕೂಡಾ ಇದೇ. ಇದನ್ನು ಆಧುನಿಕ ಸಾಹಿತ್ಯ ಮತ್ತೆ ಮತ್ತೆ ಪ್ರತಿಪಾದಿಸುವ ವ್ಯಕ್ತಿತ್ವದ ಅಧಿಕೃತತೆ ಎಂದು ಬೇಕಾದರೆ ಹೇಳಬಹುದು.

ಹೀಗಾಗಿಯೇ, ಕಾದಂಬರಿಯಲ್ಲಿ ಸಂಭವಿಸುವ ಲಾರಾ-ಯೂರಿ, ತೋನ್ಯಾ, ಸ್ಟ್ರೆಲಿಂಕೊವ್‌ರ ದುರಂತದ ಅಂಶ ಅವರು ಕ್ರಮೇಣ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದರಲ್ಲಿದೆ. ಕ್ರಾಂತಿಯ ರಭಸ ಅವರ ದುರಂತವನ್ನು ; ವ್ಯಕ್ತಿತ್ವ ವಿನಾಶವನ್ನು ಹೆಚ್ಚಿಸುತ್ತದಷ್ಟೇ. ಹಾಗೆಂದೇ ಕಾದಂಬರಿಯ ಮುಖ್ಯ ಲಕ್ಷಣ : ಸಾಮೂಹಿಕ ಕ್ರಿಯೆಯಿಂದ ವ್ಯಕ್ತಿತ್ವ ನಾಶಹೊಂದುತ್ತದೆ ಎಂದು ಪ್ರತಿಪಾದಿಸುವುದಿಲ್ಲ, ಬದಲಿಗೆ, 'ಕ್ರಾಂತಿಯ; ಬದಲಾವಣೆಯ ಪ್ರಖರತೆಯಿಂದ ಅಳಿಸಿಹೋಗುವ ವ್ಯಕ್ತಿತ್ವವೊಂದು ಹೇಗೆ ಕ್ರಾಂತಿಗೇ ಮಾರಕವಾಗುತ್ತದೆ', ಎನ್ನುವುದು.

ಕ್ರಾಂತಿ, ಹಳೆಯ ಬದುಕನ್ನು ತೊರೆದು, ಹೊಸ ಬದುಕನ್ನು ಸ್ವೀಕರಿಸುವ ಪ್ರಕ್ರಿಯೆ ಎಂಬಂತೆ ಅರ್ಥೈಸಿದಾಗ; ಹಳೆಯ ವಾಸ್ತವ ಕಳೆದು, ಹೊಸ ಬದುಕಿನ ವಾಸ್ತವಿಕ ಕ್ರಿಯೆ ಎಂಬಂತೆ ಅರ್ಥೈಸಿದಾಗ ಕ್ರಾಂತಿ ಬಗೆಗಿನ ಪೂರ್ವಗ್ರಹಗಳು ಕಳಚಿ ಬೀಳುತ್ತವೆ. ಇಲ್ಲದಿದ್ದರೆ, ಕ್ರಾಂತಿಯೆಂದರೆ ಹೊಸ ವ್ಯವಸ್ಥೆಗಾಗಿ ನಡೆವ ಸಾಮೂಹಿಕ ಹತ್ಯೆ, ಕಗ್ಗೊಲೆ ಎಂಬ ಪ್ರತಿಗಾಮಿ ನಿಲುವು ಹುಟ್ಟುತ್ತದೆ. ಆಗ ಕಾದಂಬರಿಯ ಅರ್ಥವೇ ಬೇರೆ ಥರ ಹೊರಡುತ್ತದೆ. ಡಾಕ್ಟರ್ ಜಿವಾಗೋ, ಕಾದಂಬರಿಯಲ್ಲಿ ಒಂದೆಡೆ ಈ ಮಾತು ಹೇಳುತ್ತಾನೆ: ' ಸಂತೋಷ ವಿಶ್ವವ್ಯಾಪಿ, ಅದರ ರೂಪ, ಅನುಭವ, ಸೌಂದರ್ಯಗಳೆಲ್ಲ ಸಂತೋಷದೊಂದಿಗೆ ಅದರದೇ ಭಾಗವೆಂಬಂತೆ

ಸೇರಿಹೋಗಿವೆ, ಅದು ಯಾವಾಗಲೂ ಸಾವಿನ ಕುರಿತೇ ಧ್ಯಾನಿಸುತ್ತದೆ. ಆ ಸಾವಿನಿಂದಲೇ ಹೊಸ ಬದುಕನ್ನು ಹುಟ್ಟು ಹಾಕುತ್ತದೆ'. ಯೂರಿಯ ಈ ಮಾತುಗಳೇ, ಪಾಶ್ಚಾತ್ಯರ ವ್ಯಸನ ವಿಮರ್ಶೆಯಾದ ವ್ಯಕ್ತಿ ದುರಂತದ ಪರಿಕಲ್ಪನೆಯನ್ನು ತಳ್ಳಿ ಹಾಕುತ್ತವೆ.

ಒಬ್ಬ ವ್ಯಕ್ತಿ ಒಂದು ಸಮಾಜವನ್ನು ನೋಡುವುದು ತೀರ ವೈಯಕ್ತಿಕ ದೃಷ್ಟಿಕೋನದಿಂದ ಎಂದಾದಾಗ ಅದು ಸಮಾಜದ ಇತಿಮಿತಿಯಾಗಬೇಕಾದ ಅಗತ್ಯವಿಲ್ಲ; ಅದು ವೈಯಕ್ತಿಕ ಇತಿಮಿತಿ. ಹಾಗೆಯೇ ಒಂದು ಸಮೂಹ, ಒಂದು ಸಿದ್ಧಾಂತವನ್ನು ಅರ್ಥೈಸುವಾಗ ತೋರಿಸುವ ಇತಿಮಿತಿ ಅದು ಒಟ್ಟಾರೆ ಸಮಾಜದ; ಸಿದ್ಧಾಂತದ ಇತಿಮಿತಿಯಾಗಬೇಕಿಲ್ಲ. ಹಾಗೆಂದೇ ಕ್ರಾಂತಿಯ ಸನ್ನಿವೇಶವನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿ, ಅಂಥ ಸನ್ನಿವೇಶ ಸೃಷ್ಟಿಸಿದ ಸಿದ್ಧಾಂತವೇ ತಪ್ಪು ಎಂದು ಹೇಳಬೇಕಿಲ್ಲ. ಡಾಕ್ಟರ್ ಯೂರಿಯ ಮೇಲಿನ ಮಾತುಗಳನ್ನೇ ನೋಡಿದರೆ ಒಂದು ವ್ಯವಸ್ಥೆಯ ವಿಫಲತೆಯಲ್ಲಿಯೇ ಇನ್ನೊಂದು ಹೊಸ ಸಮಾಜದ ಹುಟ್ಟು ಕಾಣುತ್ತದೆ.

ಇವೆಲ್ಲವನ್ನೂ ಒಟ್ಟಾಗಿ ನೋಡಿದಾಗ ಡಾಕ್ಟರ್ ಝಿವಾಗೋ ರಷಿಯಾದ ಶ್ರೇಷ್ಠ ಗದ್ಯಪರಂಪರೆಗೆ ಸೇರಿದ್ದೆಂದು ಒಪ್ಪಿಕೊಳ್ಳಲಾಗದಿದ್ದರೂ ಅದು ತನ್ನ ಸೀಮಿತ ಉದ್ದೇಶಗಳಲ್ಲಿ ಗಮನಾರ್ಹ ಕೃತಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಯೂರಿಗೆ ಕ್ರಿಶ್ಚಿಯನ್ ಧರ್ಮದಲ್ಲಿ, ಗಾಢವಾದ ವಿಶ್ವಾಸ; ಹಾಗೆಂದೇ ಅವನು ಸಮಾಜ ನೋಡುವ ದೃಷ್ಟಿ ಬೇರೆಯಾಗುತ್ತದೆ. ಏನೇ ಇರಲಿ, ಕಾದಂಬರಿ ಸಮಾಜವಾದವೂ ಸೇರಿದಂತೆ ಎಲ್ಲ ವ್ಯವಸ್ಥೆಗಳೂ ವ್ಯಕ್ತಿ, ವ್ಯಕ್ತಿ ಇತಿಹಾಸ, ವ್ಯಕ್ತಿ ಅಭಿವ್ಯಕ್ತಿ, ಅವನ ವೈಯಕ್ತಿಕ ನೆಮ್ಮದಿ - ಕುಟುಂಬ ಜೀವನದ ಬಗ್ಗೆ (ಪಾಶ್ಚಾತ್ಯ ದೃಷ್ಟಿಕೋನದಿಂದಲ್ಲದೆ,) ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತದೆ. ಹಾಗೇ ಪ್ರಶ್ನೆ ಕೇಳುತ್ತಲೇ ಸಮಾಜವಾದಿ ವ್ಯವಸ್ಥೆಯಲ್ಲಿನ ಇತಿಮಿತಿ ಹೇಳುತ್ತದೆ. ಯಾವ ವ್ಯವಸ್ಥೆಯೂ ಅಂತಿಮ ವ್ಯವಸ್ಥೆಯಲ್ಲ, ಎಂಥ ವ್ಯವಸ್ಥೆಗೂ ವಿಮರ್ಶೆಸಾಧ್ಯವೆಂದು ಝಿವಾಗೋ ಒತ್ತಿ ಹೇಳುವಂತಿದೆ.

ಕಾದಂಬರಿಯ ಒಟ್ಟಾರೆ ನಿಲುವಿನ ಬಗ್ಗೆ ಏನೇ ಭಿನ್ನಾಭಿಪ್ರಾಯವಿದ್ದರೂ ನಿಸರ್ಗ, ಅದರ ನಿಗೂಢತೆ, ಬದಲಾವಣೆಯ ಮಾಂತ್ರಿಕತೆಯನ್ನು ಚಿತ್ರಿಸುವಾಗಲೆಲ್ಲ ಕವಿ ಪಾಸ್ತರ್‌ನಾಕ್ ತುಂಬ ಚೆನ್ನಾಗಿ ಬರೆಯುತ್ತಾನೆ ಎಂಬುದು ಕೂಡ ಈ

ಕಾದಂಬರಿಯ ಗುಣಾತ್ಮಕ ಅಂಶ - ಹೀಗೆ ತನ್ನ ಇತಿಮಿತಿಗಳಲ್ಲೇ ಒಳ್ಳೆಯ ಅಂಶಗಳನ್ನಿಟ್ಟುಕೊಂಡ ಕಾದಂಬರಿ 'ಡಾಕ್ಟರ್ ಜ಼ಿವಾಗೋ'

●

●

೮

'ಡಾಕ್ಟರ್ ಜ಼ಿವಾಗೋ'ದ ಇಟಾಲಿಯನ್ ಆವೃತ್ತಿಯ ಹಿಂದೆಯೇ ಫ್ರೆಂಚ್, ಜರ್ಮನಿ, ಇಂಗ್ಲಿಷ್ ಮತ್ತಿತರ ಭಾಷೆಯ ಆವೃತ್ತಿಗಳು ಪ್ರಕಟವಾಗಿ ಅದೊಂದು 'ಬೆಸ್ಟ್ ಸೆಲ್ಲರ್' ಸಾಲಿಗೆ ಸೇರಿತ್ತು. ಆದರೆ ಸೋವಿಯೆತ್‌ನಲ್ಲಿ ಮಾತ್ರ ಅದರ ಬಗ್ಗೆ ಇನ್ನೂ ಅಂತೆ - ಕಂತೆ ನಡೆದೇ ಇದ್ದವು. ಹಸ್ತಪ್ರತಿಯನ್ನು ಓದಿದ ಕೆಲವರಿಗೆ ; ಹೊರದೇಶದಿಂದ ಕಣ್ತಪ್ಪಿಸಿ ಪ್ರತಿ ತಂದ ಕೆಲವರಿಗಷ್ಟೇ ಕಾದಂಬರಿಯ ಬಗ್ಗೆ ಗೊತ್ತಿತ್ತು. ಜನಸಾಮಾನ್ಯರಿಗಂತೂ ಈ ಗೊಂದಲದ ಬಗ್ಗೆ ಏನೊಂದೂ ತಿಳಿಯದು. ಇದೇ ವೇಳೆಗೆ ಮಾಸ್ಕೋ ಬಿಬಿಸಿ ರೇಡಿಯೋ ಕಾದಂಬರಿಯ ಚರ್ಚೆ, ಕಥಾ ಸಾರಾಂಶಗಳನ್ನು ಬಿತ್ತರಿಸಿತು.

ಈ ನಡುವೆ ಪಾಸ್ತರ್‌ನಾಕ್‌ನ ಆರೋಗ್ಯ ಮತ್ತಷ್ಟು ಹದಗೆಟ್ಟು ಸಾವು-ಬದುಕಿನ ನಡುವಿತ್ತು. ಆತನ ಹಿತೈಷಿಗಳಿಂದ, ಸ್ನೇಹಿತರಿಂದ ಆತನ ತಪಾಸಣೆಗೆಂದು ಸರ್ಕಾರಕ್ಕೆ, ಬರಹಗಾರರ ಒಕ್ಕೂಟಕ್ಕೆ ಮಾಡಿದ ಮನವಿ ವಿಫಲವಾದವು. ಕೊನೆಗೆ ಮಾಮೂಲಿ ಆಸ್ಪತ್ರೆಯಲ್ಲಿ ಜನರಲ್ ವಾರ್ಡ್‌ನಲ್ಲಿ ಅವನನ್ನು ಸೇರಿಸಲಾಯ್ತು. ಬೋರಿಸ್‌ನಿಗೆ ಕ್ಯಾನ್ಸರ್ ಇರಬಹುದೆಂಬ ಅನುಮಾನ ಬಲವಾಗಿತ್ತು. ಆತ ಬದುಕಿದ್ದೂ ಸತ್ತಂತಾಗಿದ್ದ. ಇಂಥ ಸಾವು-ಬದುಕಿನ ಹೋರಾಟದ ನಡುವೆ ಆತ ಇನ್ನಷ್ಟು ಹೋರಾಟಕ್ಕೆ ಸಜ್ಜಾಗಬೇಕಿತ್ತು. ಆಸ್ಪತ್ರೆಯಲ್ಲಿ ಭೇಟಿಯಾದ ಗೆಳೆಯರಿಗೆ ಬೋರಿಸ್ ಸಾವಿನ ನಡುವೆಯೂ ವಿಚಿತ್ರ ಕಾಂತಿ ತುಂಬಿಕೊಂಡವನಂತೆ ಕಾಣುತ್ತಿದ್ದ. ಆತನ ಮುಖ ತೇಜಸ್ಸಿನಿಂದ ಹೊಳೆದಂತೆ ಭಾಸವಾಗುತ್ತಿತ್ತು. ಆತನ ಸಮಕಾಲೀನ ಯುವ ಕವಿ ಎವ್ಗೆನಿ ಯೆತಿಷೆಂಕೊ (ಪರಿಚಯಕ್ಕೆ ಅನುಬಂಧ ೨ ನೋಡಿ) ಆಸ್ಪತ್ರೆಯಲ್ಲಿದ್ದ ಬೋರಿಸ್‌ನನ್ನು ಹೀಗೆ ದಾಖಲಿಸುತ್ತಾನೆ: 'ಬೇಗುದಿ - ನೋವಿನಲ್ಲೂ ಹುಟ್ಟಿದ ಪ್ರತಿಯೊಂದು ಮಾತು ವೇದವಾಕ್ಯದಂತಿದ್ದವು. ಮಡುಗಟ್ಟಿದ ಮೋಡ ಆಕಾರ ಬದಲಿಸುತ್ತ, ಕ್ಷಣಕ್ಷಣಕ್ಕೆ ನುಗ್ಗಿಬರುವಂತೆ, ಮಾತುಗಳು,

ಜಲಪಾತದಂತೆ ಧುಮುಕುತ್ತಿದ್ದವು. ಆತ ಯುವಕನಂತೆ ಕಂಡು ಹೊಳೆಯುತ್ತಿದ್ದ.'

ಅಕ್ಟೋಬರ್ ೨೩, ೧೯೫೮, ಸ್ಟಾಕ್‌ಹೋಂನ ಸ್ವೀಡಿಶ್ ಅಕಾಡೆಮಿ ಬೋರಿಸ್ ಪಾಸ್ತರ್‌ನಾಕ್‌ನಿಗೆ ನೊಬೆಲ್ ಪಾರಿತೋಷಕ ಘೋಷಿಸಿದ ದಿನ. 'ಆಧುನಿಕ ಭಾವಗೀತೆಗೆ ಆತನ ಗಮನಾರ್ಹ ಕೊಡುಗೆ ; ರಷಿಯಾದ ಭವ್ಯ ಗದ್ಯ ಪರಂಪರೆಗೆ ಆತನ ವಿಶೇಷ ಕೊಡುಗೆಗಾಗಿ' - ಪ್ರಶಸ್ತಿ ನೀಡಲಾಗಿತ್ತು. ಇಳಿವಯಸ್ಸು, ಕಾಯಿಲೆಯಿಂದ ಜರ್ಜರಿತನಾಗಿದ್ದ ಬೋರಿಸ್ ಸಹಜವಾಗಿಯೇ ಖುಷಿಯಾಗಿರಬೇಕು. 'ಈ ಪ್ರಶಸ್ತಿ ನನ್ನ ಮನಸ್ಸು ತುಂಬಿ ಬಂದಿದೆ. ಇದೊಂದು ನೈತಿಕ ಬೆಂಬಲವಿದ್ದಂತಿದೆ. ಆದರೂ ನನ್ನ ಇಂದಿನ ಈ ಖುಷಿ ಏಕಾಂತದ ಖುಷಿ'- ಎಂದು ತನ್ನನ್ನು ಭೇಟಿಯಾಗಲು ಬಂದ ನ್ಯೂಯಾರ್ಕ್ ಟೈಮ್ಸ್‌ಗೆ ಗಾರ್ಡಿಯನ್ ಪತ್ರಿಕಾ ಪ್ರತಿನಿಧಿಗಳಿಗೆ - ಆತ ಹೇಳಿದ.

ಒಂದು ರೀತಿಯಲ್ಲಿ, ಕಾದಂಬರಿ ಹೊರದೇಶದಲ್ಲಿ ಪ್ರಕಟವಾದಾಗಿನಿಂದ ಒಳಗಡೆಯೇ ಮಡುಗಟ್ಟುತ್ತಿದ್ದ ಪಾಸ್ತರ್‌ನಾಕ್ ದ್ವೇಷ ಸ್ಫೋಟಿಸಲು ಅವನ ವಿರೋಧಿಗಳಿಗೆ, ಸರ್ಕಾರಕ್ಕೆ, ನೊಬೆಲ್ ಬಹುಮಾನ ಅಸ್ತ್ರ ಒದಗಿಸಿತ್ತು.

ನೊಬೆಲ್ ಬಗ್ಗೆ ಮೊದಲು ಅಧಿಕೃತ ಅಭಿಪ್ರಾಯ ಹೊರಟಿದ್ದು ಕ್ರೆಮ್ಲಿನ್‌ನ ಸಾಂಸ್ಕೃತಿಕ ಮಂತ್ರಿಯಾಗಿದ್ದ ಮಿಖಾಯಿಲೊನ್‌ನಿಂದ, 'ಈ ಆಯ್ಕೆ ಆಶ್ಚರ್ಯಕರವಾಗಿದೆ. ಪಾಸ್ತರ್‌ನಾಕ್ ಒಳ್ಳೆ ಕವಿ, ಉತ್ತಮ ಅನುವಾದಕನೆನ್ನುವುದು ನನಗೆ ಗೊತ್ತಿದೆ. ಆದರೆ ಆತನ ಅತ್ಯುತ್ತಮ ಕವಿತೆಗಳು ಪ್ರಕಟವಾಗಿ ದಶಕಗಳ ನಂತರ ಪ್ರಶಸ್ತಿ ನೀಡುತ್ತಿರುವುದು ಈಗೇಕೆ ?' ಕ್ರೆಮ್ಲಿನ್ ವಕ್ತಾರನ ಮಾತಿನಲ್ಲಿ ಇಡೀ ಪ್ರಶಸ್ತಿ ರಾಜಕೀಯ ಕುಟಿಲತೆಯಿಂದ ಕೂಡಿದೆ ಎಂಬ ಅರ್ಥ ಸ್ಪಷ್ಟವಾಗಿತ್ತು.

ಇಲ್ಲಿಂದ ಪಾಸ್ತರ್‌ನಾಕ್ ಮೇಲಿನ ದಾಳಿ ಅವ್ಯಾಹತವಾಗಿ ಪ್ರಾರಂಭವಾಯಿತು. ಬರಹಗಾರರ ಒಕ್ಕೂಟದ ಪತ್ರಿಕೆಯಾಗಿದ್ದ ಲಿಟರರಿ ಗೆಜೆಟ್‌ನ ಸಂಪಾದಕೀಯ ಪಾಸ್ತರ್‌ನಾಕ್‌ನನ್ನು ಅತ್ಯಂತ ಕಟುವಾಗಿ ಟೀಕಿಸಿ ಬರೆಯಿತು. 'ಡಾಕ್ಟರ್ ಜಿವಾಗೋ' ಕಾದಂಬರಿಯನ್ನು ಕ್ರಾಂತಿ ವಿರೋಧಿ ಪ್ರತಿಗಾಮಿಯೆಂದು ತಿರಸ್ಕರಿಸಿ ನೊವಿಮೀರ್ ೧೯೫೬ರಲ್ಲಿ ಕಾದಂಬರಿ ತಿರಸ್ಕರಿಸುವಾಗ ಬರೆದ ಪತ್ರವನ್ನು ಮೂರು ವರ್ಷ ಬಿಟ್ಟು ಪ್ರಕಟಿಸಿತ್ತು. ಕಮ್ಯುನಿಷ್ಟ್ ಪಕ್ಷದ ಮುಖ ಪತ್ರಿಕೆ ಪ್ರಾವ್ದಾ ಸಾಹಿತ್ಯದ ಮೇಲೆ ಪ್ರತಿಗಾಮಿಯ ಸವಾರಿ ಎಂದು ಲೇಖನ ಬರೆಯಿತು.

ಮಾಸ್ಕೋ ವಿದ್ಯಾರ್ಥಿಗಳು ಬೀದಿಗಿಳಿದು ಈ ಜುದಾಸನನ್ನು ದೇಶದಿಂದ ಹೊರಹಾಕಿ, ಎಂದು ಘೋಷಣೆ ಕೂಗಿದರು. ಯುವ ಕಮ್ಯೂನಿಷ್ಟ್ ಲೀಗ್‌ನ ನಾಯಕನೊಬ್ಬ ಪಾಸ್ತರ್‌ನಾಕ್‌ನನ್ನು ಒದ್ದೋಡಿಸುವಂತೆ ರೇಡಿಯೋ ಮಾಸ್ಕೋ ದಲ್ಲಿ ಕರೆ ನೀಡಿದ. ಬರಹಗಾರರ ಒಕ್ಕೂಟ ಬೋರಿಸ್‌ನನ್ನು ಒಕ್ಕೂಟ ದಿಂದ ಹೊರಹಾಕುವ, ಆತನ ಕೃತಿಗಳನ್ನು ಪ್ರಕಟಿಸದಿರುವ ನಿಲುವಳಿ ಸೂಚಿಸಿತು. ಇದೆಲ್ಲ ನಡೆದದ್ದು ಕೇವಲ ವಾರಾವಧಿಯಲ್ಲಿ.

ಬೋರಿಸ್ ಎಲ್ಲರಿಂದ ಎಷ್ಟೊಂದು ಬೇಸತ್ತನೆಂದರೆ ಅವನ ಪ್ರಿಯತಮೆ ಓಲ್ಗಾಳಿಗೆ ಹೇಳಿದ - 'ಬಹುಶಃ ನನಗೂ-ನಿನಗೂ ಉಳಿದಿರುವ ದಾರಿ ಕೇವಲ ಆತ್ಮಹತ್ಯೆ ಮಾತ್ರ ! '

ಈ ಎಲ್ಲ ತಳಮಳಕ್ಕೆ ಕೊನೆ ಹೇಳಲು ನಿರ್ಧರಿಸಿದವನೇ, ಓಲ್ಗಾಳನ್ನೂ ಕೇಳದೆ ಸ್ವಿಡಿಶ್ ಅಕಾಡೆಮಿಗೆ ಟೆಲಿಗ್ರಾಂ ಕಳಿಸಿದ 'ನಿಮ್ಮ ಪ್ರಶಸ್ತಿ ನಾನು ಬದುಕುತ್ತಿರುವ, ನನಗೆ ಸೇರಿದ ದೇಶಕ್ಕೆ ಅವಮಾನಮಾಡುವ ಅರ್ಥದಲ್ಲಿದೆ ಎನ್ನಿಸಿ ನನಗೆ ನೀಡಿದ ಬಹುಮಾನವನ್ನು ತಿರಸ್ಕರಿಸುತ್ತಿರುವೆ. ನನ್ನ ತಿರಸ್ಕಾರವನ್ನು ದಯವಿಟ್ಟು ಅಪಾರ್ಥಕ್ಕೆ ಹಚ್ಚಬೇಡಿ'. ಇದರ ಜತೆಗೆ 'ಪ್ರಾವ್ದಾ' ಪತ್ರಿಕೆಗೆ 'ನಿಕಿತಾ ಕ್ರುಶ್ಚೇವ್'ಗೆ ವೈಯಕ್ತಿಕ ಪತ್ರಗಳನ್ನು ಬರೆದ. (ನೋಡಿ : 'ಅನುವಾದ')

ಆಶ್ಚರ್ಯದ ವಿಷಯವೆಂದರೆ ಬೋರಿಸ್‌ನ ಸಮಕಾಲೀನನಾಗಿದ್ದ ಮಿಖಾಯಿಲ್ ಶೋಲೊಕೊವ್ ಕೂಡ ಉದ್ದಕ್ಕೂ ಬೋರಿಸ್‌ನನ್ನು ಪ್ರಶಸ್ತಿಗಾಗಿ ಕಟುವಾಗಿ ಟೀಕಿಸುತ್ತಲೇ ಬಂದ. ದೋನ್ ನದಿ ತೀರದ ಬದುಕಿನ ಬಗೆಗೆ ಅತ್ಯಂತ ಹೃದಯಂಗಮವಾಗಿ ಬರೆದ ಈ ಲೇಖನ ಸಣ್ಣತನ ಚಕಿತತೆ ಹುಟ್ಟಿಸುತ್ತದೆ. ಇನ್ನೂ ವ್ಯಂಗ್ಯವೆಂದರೆ ಈತನೇ ಮುಂದೆ ನೊಬೆಲ್ (೧೯೬೫ರಲ್ಲಿ)ಪಡೆದದ್ದು. ದೇಶದೊಳಗಡೆ ಪ್ರತಿಭಟನೆಯ ಅಲೆ ಬೋರಿಸ್‌ನ ವಿರುದ್ಧವಿದ್ದರೆ ದೇಶದ ಹೊರಗೆ ಬೋರಿಸ್‌ನ ಪರವಿತ್ತು. ವಿಶ್ವದಾದ್ಯಂತ ಸಾಹಿತಿಗಳು-ನಾಗರಿಕ ಹಕ್ಕು ಹೋರಾಟಗಾರರು ಬೀದಿಗಿಳಿದು ಪತ್ರಿಕೆಗಳಿಗೆ ಬರೆದು ಪ್ರತಿಭಟನೆ ತೋರಿಸಿದರು. ಭಾರತದ ಮುಲ್ಕ್‌ರಾಜ್ ಆನಂದ್, ಮೋಹಿತ್ ಸೇನ್, ಮಲಯಾಳಂ ಲೇಖಕ ಪಿ. ಕೇಶವ್‌ದೇವ್ ರಷಿಯಾದ ನಿಲುವನ್ನು ಉಗ್ರವಾಗಿ ಖಂಡಿಸಿದರು. ನೊಬೆಲ್ ಕಮಿಟಿಯ ಆಯ್ಕೆ ಸಮಿತಿ ಸದಸ್ಯರು ಬೋರಿಸ್‌ನನ್ನು ಯಾವ ಕಾರಣಕ್ಕೂ

ಪ್ರಶಸ್ತಿಗಾಗಿ ಆಯ್ಕೆ ಮಾಡಲಾಯಿತು ಎಂಬುದಕ್ಕೆ ಸಮಿತಿಗೆ ಸಲ್ಲಿಸಿದ್ದ ಲೇಖನಗಳನ್ನು ಪ್ರಕಟಿಸಿದರು.

ಇನ್ನೂ ದುರಂತ ವಿಚಾರವೆಂದರೆ ಇದೇ ಸ್ಟಾಕ್‌ಹೋಂ 'ಭೌತಶಾಸ್ತ್ರ'ಕ್ಕಾಗಿ ನೀಡುವ ನೊಬೆಲ್ ಪಾರಿತೋಷಕವನ್ನು ಬೋರಿಸ್‌ಗೆ ನೀಡಿದ ವರ್ಷವೇ ಸೋವಿಯೆತ್ ಭೌತ ವಿಜ್ಞಾನಿ ಚೆರ್ನಂಕೊವ್‌ಗೆ ನೀಡಲಾಯಿತು. ಚೆರ್ನಂಕೋ ಪ್ರಶಸ್ತಿಯನ್ನು ಸ್ವೀಕರಿಸಿದ, ಜತೆಗೆ ಆತನ ಸಾಧನೆಯನ್ನು ಸೋವಿಯೆತ್‌ನಲ್ಲೂ ಹೊಗಳಲಾಯಿತು. ಈ ದ್ವಂದ್ವ ನೀತಿಯ ಬಗೆಗೆ ಕ್ರೆಮ್ಲಿನ್ ಉತ್ತರ : 'ಶಾಂತಿ ಹಾಗೂ ಸಾಹಿತ್ಯಕ್ಕಾಗಿ ನೀಡುವ ನೊಬೆಲ್ ಯಾವಾಗಲೂ ರಾಜಕೀಯ ಪ್ರೇರಣೆಯಿಂದ ಕೂಡಿವೆ ' !

ಬೋರಿಸ್‌ನ ವಿವರಣೆ ಮಾಸ್ಕೋ ರೇಡಿಯೋದಲ್ಲಿ, ಪತ್ರಿಕೆಗಳಲ್ಲಿ ಬಿತ್ತರಿಸಿ; ಪ್ರಕಟಗೊಂಡು ವಿವಾದ ತಣ್ಣಗಾದಂತೆ ಕಂಡರೂ ಬೋರಿಸ್‌ನ ಕುಟುಂಬವನ್ನು ರಕ್ಷಣಾ ಪಡೆ ಸದಾ-ಕಣ್ಣಿಟ್ಟು ಕಾಯುತ್ತಿತ್ತು. 'ನಾನು ಓಡಿ ಹೋಗಬಹುದೆಂಬ ಭಯ ಅವರಿಗಿತ್ತು' - ಎನ್ನುತ್ತಾನೆ ಪಾಸ್ತರ್‌ನಾಕ್.

●

●

ಬದುಕಿನ ಕೊನೆಯ ಮೂರು-ನಾಲ್ಕು ವರ್ಷಗಳಲ್ಲಿ ಬೋರಿಸ್ ಬರೆದ ಕವಿತೆಗಳು ಆತನ ಸಾಹಿತ್ಯ ಬದುಕಿನಲ್ಲೇ ಅತ್ಯುತ್ತಮವಾದುವು ಎಂದು ಆತನ ವಿಮರ್ಶಕರು ಹೇಳುತ್ತಾರೆ. ಆತನೇ ಹೇಳಿದ - 'ಚಿಂತಿಸು, ಅನುಭವಿಸು, ಪ್ರೀತಿಸು, ಬದುಕು' ಎನ್ನುವ ತತ್ವಗಳು ಆತನ ಕೊನೆಯ ಸಂಕಲನ 'ವೆನ್ ಸ್ಕೈಸ್ ಕ್ಲಿಯರ್'ನಲ್ಲಿ ಪ್ರತಿಬಿಂಬಿತವಾಗಿವೆ. ಈ ಸಂಕಲನ ಆತನ ನಿಧನದ ನಂತರ ೧೯೬೫ರಲ್ಲಿ ಮಾಸ್ಕೋದಲ್ಲಿ ಅವನ ಕೃತಿಗಳ ಮೊದಲ ಕಂತೆಂದು ಪ್ರಕಟಿಸಲಾಯಿತು. ಈ ಸಂಕಲನ ಅವನ ಸಮಕಾಲೀನರಿಂದಲೂ ಪ್ರಶಂಸೆಗೆ ಒಳಗಾಯಿತು. ಮುಖ್ಯವಾಗಿ ಆನಾ ಅಖ್ಮಾ ತೋವಾಳಿಂದ.

ಆತನ ಬದುಕಿನ ಕೊನೆವರ್ಷದಲ್ಲಿ 'ಬ್ಲೈಂಡ್ ಬ್ಯೂಟಿ' ಎನ್ನುವ ನಾಟಕವನ್ನೂ ಬರೆದ. ರಷಿಯಾದ ಜೀತಪದ್ಧತಿ ಕುರಿತ ಈ ನಾಟಕ ಹತ್ತೊಂಬತ್ತನೆ ಶತಮಾನದ ಮಧ್ಯಭಾಗವನ್ನು (೧೮೩೫-೧೮೬೦) ಚಿತ್ರಿಸುತ್ತದೆ. ಈ ಅವಧಿಯಲ್ಲೇ ಸ್ಪಾನಿಶ್

ನಾಟಕಕಾರ ಕ್ಲಡಾರ್‌ನ ನಾಟಕವನ್ನು ಪೋಲಿಷ್ ಕವಿ, ನಾಟಕಕಾರ ಜೂಲಿಯಸ್ ಸ್ಲೊವಾಕ್ ನಾಟಕವನ್ನು ಆತ ಅನುವಾದಿಸಿದ.

ಫೆಬ್ರವರಿ ೧೦, ೧೯೬೦ ಪಾಸ್ತರ್‌ನಾಕ್‌ನಿಗೆ ಎಪ್ಪತ್ತು ವರ್ಷ. ಆತನ ಪೆರೆಡೆಲ್ಕಿನೊ ಮನೆಯಲ್ಲಿ ಗೆಳೆಯರು ಸಂತೋಷಕೂಟ ನಡೆಸಿದರು. ಆತ ತನ್ನ ಜೀವನದ ಗೆಳತಿಯಾಗಿದ್ದ ಓಲ್ಗಾ ಇವಾನ್‌ಸ್ಕಿಯಾಳೊಂದಿಗೆ ಹತ್ತಿರದ ತೋಟದಲ್ಲಿ ಸುತ್ತಾಡಿದ. ೨೩ ಫೆಬ್ರವರಿ, ತನ್ನ 'ಬ್ಲೈಂಡ್ ಬ್ಯೂಟಿ' ಹಸ್ತಪ್ರತಿಯನ್ನು ಆಕೆಗೆ ಪ್ರಕಟಣೆಗೆ ಅಣಿಗೊಳಿಸಲು ನೀಡಿದ. ಅಂದೇ ಆಕೆಯನ್ನು ಕೊನೆಯ ಸಲ ನೋಡಿದ್ದು. ಕಾಲು ಹಾಗೂ ಹೃದಯ ನೋವಿನಿಂದ ಕುಸಿದು ಆಸ್ಪತ್ರೆ ಸೇರಿದ. ನಿರ್ಜೀವವಾಗಿ ಮಲಗಿರುವ ತನ್ನನ್ನು ಓಲ್ಗಾ ಬಂದು ನೋಡುವುದು ಅವನಿಗೆ ಇಷ್ಟವಿರಲಿಲ್ಲ.

ಮೇ ೩೦, ೧೯೬೦ರಂದು ತನ್ನ ಪತ್ನಿ, ಇಬ್ಬರು ಮಕ್ಕಳು, ಓಲ್ಗಾರನ್ನು ಅಗಲಿ ಪಾಸ್ತರ್‌ನಾಕ್ ತೀರಿಕೊಂಡಿದ್ದ. ಮಾಸ್ಕೋ ಕಾವ್ಯ ಪ್ರೇಮಿಗಳೆಲ್ಲ ಸೇರಿದರು. ಸ್ಮಶಾನ ವಿಧಿಯನಂತರ ಆತನ ಅತ್ಯುತ್ತಮ ಕವಿತೆಗಳೆಂದು ಹೆಸರು ಮಾಡಿದ 'ಹ್ಯಾಮ್ಲೆಟ್' 'ಅರಿತಿರಬೇಕಾಗಿತ್ತು' (ಅನುವಾದ ನೋಡಿ) ವಾಚಿಸಲಾಯಿತು. ಅಲ್ಲಿಗೆ ಸಮಾಜವಾದಿ ಕ್ರಾಂತಿನಂತರದ ರಷಿಯಾ ಕಬ್ಬಿಣ ತೆರೆಯ ಆಡಳಿತವನ್ನು ತುಸುಕಾಲ ಮುಜುಗರಪಡಿಸಿದ್ದ; ಕ್ರೆಮ್ಲಿನ್ ಆಡಳಿತಗಾರರನ್ನು ಚಿಂತೆಗೀಡು ಮಾಡಿದ್ದ ಚೇತನದ ಕಥೆ ಮುಗಿದಿತ್ತು.

●

●

ಕವಿತೆಗಳು

ಐವತ್ತರ ನೆನಪುಗಳೆಲ್ಲ ಹಿಂಜರಿದು
ಗೊಂದಲ, ಗುಡುಗಾಟ ಅಳಿದವು.
ಬದುಕಿನ ಅರ್ಧಭಾಗ ಮುಗಿದು
ಇದೀಗ, ಭವಿಷ್ಯದ ಸರದಿ.

ದಂಗೆ, ದುರಂತ, ಕ್ರಾಂತಿ, ಬಂಡಾಯ
ಬದುಕಿನ.ಹಾದಿಯನ್ನು ಹಸನಾಗಿಸುವುದಿಲ್ಲ.
ಹಾಗೆಯೇ: ಒಳನೋಟ, ವಿವೇಕಿಯ ನಿಗಿನಿಗಿ
ಆತ್ಮದ ಧಗೆ, ಚೀರಾಟ ಔದಾರ್ಯವೂ ಕೂಡ.

1958
'Second Birth :
[Fifty year's memories recede']

ಹ್ಯಾಮ್ಲೆಟ್

ಸದ್ದೆಲ್ಲ ಸ್ತಬ್ಧ. ರಂಗವೇರಿದ ನಾನು
ತೆರೆಮರೆಗೆ ನಿಂತು ದೂರದ ಮರುದನಿಯ ಬೆನ್ನಟ್ಟಿ
ಬರುವ ಕಾಲ ತರುವುದೇನೆಂದು ತರ್ಕಿಸುವೆ.

ನೂರೆಂಟು ದುರ್ಬೀನು ನೋಟ;
ರಾತ್ರಿಯ ಕಗ್ಗತ್ತಲೆ - ಗುರಿನೆಟ್ಟಿವೆ ನನ್ನತ್ತಲೇ.
ಅಬಾ, ಅಪ್ಪಾಜಿ, ಸಾಧ್ಯವಾದರೆ ನಿನ್ನಿಂದ
ಸಾಗಿಸು ದೂರ ಈ ಬಟ್ಟಲು ನನ್ನಿಂದ.

ಮೆಚ್ಚಿ, ನಿನ್ನ ಶತಮೊಂಡು ಸಂಕಲ್ಪ,
ಸಮ್ಮತಿಸುವೆ ನನ್ನ ಪಾಲಿನ ಸೋಗಿಗೆ.
ಆದರೀಗ ನಡೆದಿದೆ ಬೇರೆಯದೇ ನಾಟಕಾಂಕ
ಇದೊಮ್ಮೆ ಬಿಟ್ಟುಬಿಡು ನನ್ನ ಪಾಡಿಗೆ.

ಎಂದೋ ನಿರ್ಧರಿಸಿದೆ ನಾಟಕದ ನಡೆನುಡಿ
ಈಗೆಲ್ಲೋ ಇಲ್ಲ ಹೊರಗೆ ಪಾರಾಗುವ ಹಾದಿ.
ಏಕಾಂಗಿ ನಾನು ; ಸುತ್ತೆಲ್ಲ ಸೇರಿದೆ ಸುಳ್ಳಿನ ಸಂತೆ ;
ಬದುಕಲ್ಲ ಸಲೀಸು; ಗಟಗಟ ನೀರು ಕುಡಿದಂತೆ

[Doctor Zivago's poems : Hamlet :
' the noise is stilled. I come out on the stage']

ಗಾಳಿ

ನನ್ನ ಕತೆ ಇಲ್ಲಿಗೆ ಮುಗಿದಂತೆ;
ನೀನು ಬದುಕಿಯೇ ಉಳಿಯುವೆ
ಗಾಳಿ : ಗುಟುರಿ, ಗೋಳಿಟ್ಟು
ಕಾಡು, ಸೂರು, ಅಲ್ಲಾಡಿಸುತ್ತಿದೆ.
ಬರೀ ಪೈನ್ ಮರವನ್ನಷ್ಟೇ ಅಲ್ಲ,
ಕಣ್ಣು ಚಾಚುವವರೆಗೂ ಹಬ್ಬಿದ
ಕಾಡುಗಿಡ; ತೀರದಲ್ಲಿ ತಂಗಿದ
ಹಾಯಿಯಿಲ್ಲದ ಹಡಗಿನೊಡಲು, ಅಲಗುವ ಹಾಗೆ
ಎಲ್ಲವನ್ನೂ ಹಿಡಿದು ಒಗ್ಗೂಡಿಸಿ ಗುದ್ದುತ್ತಿದೆ.

ಹೀಗೆಲ್ಲವನ್ನೂ ಜಪ್ಪಿಸಿ ನಡುಗಿಸುತ್ತಿರುವುದು
ಗುರಿಯಿರದ ಗೂಳಿಮದ; ಅಥವ ಹುಡುಗಾಟದಿಂದಲ್ಲ
ಅದಕ್ಕೆ ನಿನ್ನ ಹುಡುಕಾಟ.
ನಿನ್ನ ಕೊರಗಲ್ಲಿ ಹಾಡಿದ ಲಾಲಿಹಾಡು!
ಈ ಆರ್ಭಟ

[Doctor Zivago's poems : The wind :
' This is the end of me; but you live on.']

ಉನ್ಮಾದ

ಬಳುಕು ಬಳ್ಳಿ ಬಳಸಿದ ವಿಲ್ಲೋ ಮರದಡಿ
ಮಳೆಗಾಳಿ ಗುಡುಗಿನಿಂದ ಆಸರೆ ಬಯಸಿ ಓಡಿದೆವು.
ನೀಳ ನಿಲುವಂಗಿ ನಮ್ಮ ಭುಜವನ್ನು ಬಳಸಿತ್ತು,
ನನ್ನ ತೋಳು ನಿನ್ನನ್ನು ಬಾಚಿ ಬಿಗಿದಿತ್ತು.

ನನ್ನ ಈ ಊಹೆ ನಿಜವಲ್ಲ! ದಟ್ಟ ಮರಗಿಡವನ್ನೆಲ್ಲ
ಬಾಚಿ ತಬ್ಬಿರುವುದೆಲ್ಲ ಬಳ್ಳಿಯಲ್ಲ; ಬಯಕೆ, ಉನ್ಮಾದ!
ಹಾಗೆಂದೇ, ಬಾ ನೆಲಕ್ಕೆ ನಿಲುವಂಗಿ ಹಾಸೋಣ
ಹಾಸಿ, ತುಸುತುಸುವೇ ಒರಗೋಣ.

[Doctor Zivago's poems : Intoxication :
' under the ivy-circled willow tree']

ಬೆಳಗು

ನನ್ನ ಬಾಳಿನ ಉಸಿರಾಗಿದ್ದೆ ನೀನು,
ಅಷ್ಟರಲ್ಲಿ ವಕ್ಕರಿಸಿತು ವಿನಾಶಕ ಯುದ್ಧ.
ಕಾಲದ ರಾಟೆ ತಿರುತಿರುಗಿ
ನಿನಗಾಗಿ ಕಾದರೂ ನಿನ್ನ ಸುಳಿವಿಲ್ಲ, ಸುದ್ದಿಯೂ ಇಲ್ಲ.

ಈಗ ವರುಷ ವರುಷಗಳು ಉರುಳಿ,
ನಿನ್ನ ದನಿ ಕಾಡುತ್ತಿದೆ ಮನ ಕದಡಿ.
ಸೋತ ಜೀವಕ್ಕೆ ಸಂಜೀವಿನಿ ನಿನ್ನ ಸುವಾರ್ತೆ,
ಉರು ಹೊಡೆಯುವೆ ಇರುಳಿಡೀ.

ನನಗೋ- ಜನರ ಜತೆ ಜೀವಿಸಿ
ಅವರ ಮಂಜಾವ ಕಲರವ ಹಂಚಿಕೊಳ್ಳುವಾಸೆ.
ಅವರಿಗಾಗಿ ಕಣ್ಣೀರು ಹನಿಸಲು, ಎಲ್ಲವನ್ನೂ
ಚಿಕಣಾ ಚೂರಾಗಿಸಿ ಅವರ ಕಾಲಬಳಿ
ತಂದೊಟ್ಟಲು ಸಿದ್ಧ ನಾನು.

ಹಾಗೆಂದೇ, ಮುರಿದ ಅಟ್ಟದ ಮೆಟ್ಟಿಲು
ಮೊದಲ ಸಲವೆಂಬಂತೆ ಧಡಬಡಿಸಿ ಇಳಿದು
ಮಂಜು ಸುರಿದು ಬಿಕೋ ಎನ್ನುವ ಬೀದಿಗೋಡುವೆ.

ಹೊರಗೆ ದೀಪದ ಸಂತೆ; ಮನೆ ಕಿಷ್ಕಿಂದೆಯಂತೆ.
ಮುಂಜಾವ ಚಹಾ ಹೀರುವ ಜನಕ್ಕೆ ಬಸ್ಸಿನ ಚಿಂತೆ.
ಇನ್ನು ಚಿಟಿಕೆಯ ಸಮಯ
ಬದಲಾಗುವುದು ನಗರ ಗುರುತೇ ಸಿಗದಂತೆ

ರಪರಪ ರಾಚುವ ಹಿಮದ ಅಲೆ
ಬಾಗಿಲಿಗೆ ಹೆಣೆದಿದೆ ಮಂಜಿನ ಬಲೆ
ಸರಿಯಾದ ಸಮಯಕ್ಕೆ ಸ್ಥಳ ಸೇರಬೇಕೀ ಜನ
ಫಳಾರ, ಚಹಾ ಅರ್ಧಕ್ಕೇ ಬಿಟ್ಟು ಅಗೋ! ಹೊರಟರು.

ಅವರಿಗಾಗಿ, ಅವರ ಸ್ಥಿತಿಗಾಗಿ ಮನ ಮಿಡಿಯುತ್ತದೆ
ಕರುಳಲ್ಲಿ ಕರುಳಬಳ್ಳಿ ಹೆಣೆದ ಹಾಗೆ!
ಕರಗುವ ಮಂಜಿನೊಂದಿಗೆ ನಾನೂ ಕರಗುತ್ತ
ಕೆರಳುವೆ ಈ ಹಾಳು ಬೆಳಗನ್ನು ಶಪಿಸುತ್ತ.

ಈಗ ನನ್ನೊಳಗೆ ಮನೆ ಮಾಡಿದವರು
ಮಕ್ಕಳು, ಮರ, ಹೆಸರಿಲ್ಲದವರು ಮತ್ತು ಅವರ ಚಿಂತೆ!
ಅವರೆಲ್ಲರಿಗೆ ನಾನು ಸೋತು ಶರಣಾಗಿದ್ದೇನೆ
ಇದೊಂದೇ ನನ್ನ ದಿಗ್ವಿಜಯ, ಸಾಧನೆ!

[Doctor zivago's poems : day Break :
' You meant everything in my destiny']

ಮಾಗಿ

ಮನೆಮಂದಿಯನ್ನು, ಮನಮೆಚ್ಚಿದವರನ್ನು
ಚದುರಿ ಹೋಗಲು ಬಿಟ್ಟೆ.
ನಿಸರ್ಗವನ್ನು, ಮನದಾಳವನ್ನು
ಬದುಕಿಡೀ ಒಂಟಿತನ ತುಂಬಲು ಬಿಟ್ಟೆ.

ನಾನಿಲ್ಲಿ ನಿನ್ನೊಡನೆ - ಇರಲು ಪುಟ್ಟಮನೆ.
ಜನವಿಲ್ಲದೆ ಮರುಧರೆಯಾಗಿದೆ ಕಾಡು ಹೊರಗೆ.
ಕಾಲು ಹಾದಿ, ಕಾಡುಹಾದಿ ಕಳೆ ಕಸ ತುಂಬಿ ತುಳುಕಿವೆ
ಯಾವುದೋ ಹಳೆಯ ಹಾಡಲ್ಲಿ ಹಾಡಿದ ಹಾಗೆ.

ನಮ್ಮಿಬ್ಬರನ್ನೇ ದಿಟ್ಟಿಸಿ ದಿಟ್ಟಿಸಿ
ಗೂಡಿನ ಗೋಡೆ ಆಕಳಿಸಿವೆ ಬೇಸರಿಸಿ.
ಅಡ್ಡಗೋಡೆ ಕೆಡವಿ ಪಾರಾಗಲಿಲ್ಲ ನಾವು,
ಪ್ರಾಮಾಣಿಕವಾಗಿ ಅಪ್ಪುತ್ತೇವೇನೋ ಸಾವು !

ನಾನು ಪುಸ್ತಕದೊಡನೆ, ನೀನು ಕಸೂತಿಯೊಡನೆ
ನೀಳ ಮಧ್ಯಾಹ್ನ ಜತೆಗೇ ಕಳೆಯುವೆವು.
ಮುಂಜಾನೆಗೆ ಮುತ್ತಿಟ್ಟಿದ್ದೆಷ್ಟು ಸಲ
ನಿಲ್ಲಿಸಿದ್ದು ಯಾವಾಗ, ಎನ್ನುವುದನ್ನೂ ಮರೆಯುವೆವು.

ಮಾಗಿಯ ಘನ, ನಿರ್ದಯಿ ತರಗೆಲೆ
ಸರಸರ ಸದ್ದಲ್ಲಿ ಕೆಳಗುರುಳಲಿ.
ನಿನ್ನೆಯ ಶೋಕ, ಸಂಕಟ, ಕಹಿ ನೋಡಿದರೆ
ಈಗಿನದು ಇನ್ನೂ ಭಯಾನಕ, ಇರಲಿ.

ಓ ಚೆಲುವೆ, ಸೆಳೆತವೆ, ಸಡಗರವೇ!
ಸೇರಿ ಹೋಗು ನೀನೂ ಈ ಏಕಾಂತದಲ್ಲಿ,
ಮೌನದಲ್ಲಿ ಅಥವಾ ಹುಚ್ಚು ಉನ್ಮಾದದಲ್ಲಿ
ನೆಲೆಸು ಈ ಮಾಗಿಯ ಸೊಗಸಿನಲ್ಲಿ.

ಬಟ್ಟೆ ಬಿಚ್ಚಿ ಬಿಸುಟುತ್ತಿರುವೆ
ಕಾಡುಗಿಡ ಎಲೆಯನ್ನು ಕಳಚುವಂತೆ.
ತೊಟ್ಟಿರುವ ಗೌನಿಗಿದೆ ರೇಶಿಮೆ ಕುಚ್ಚು
ನನ್ನ ಎದೆಗೆ ಹಾಗೇ ಒರುಗತ್ತಿರುವೆ.

ದುರಂತದ ದಾರಿಯಲ್ಲಿ ನೀನೊಬ್ಬಳೆ ಆಸರೆ
ಬದುಕು ಭಯಾನಕ, ಬೇಡ ಅದರ ಚಿಂತೆ.
ಕೆಚ್ಚು, ನೀಡುತ್ತದೆ ಚೆಲುವಿನ ದಾರಿಗೆ ಹೊಳಪು
ಇದೇ ನಮ್ಮನ್ನು ಕರೆದು ಕೂಡಿಸುವ ಕಾಂತ, ಕಾಂತೆ !

[Doctor zivago's poems : Autum :
' I have allowed my family to scalter']

ದೈವಪರವಶತೆಯ ಪ್ರೀತಿ !

ಗೆಳತಿ, ದೈವಪರವಶತೆಯ ಕವಿಪ್ರೀತಿ
ಹುಟ್ಟಿಸುವಂತಿದೆ ಭೀತಿ!
ಅವ್ಯಕ್ತ ಭಾವ ಗತಕಾಲದ ಪಳಿಯುಳಿಕೆಯಂತೆ
ಮೆಲ್ಲಗೆ ಬೆಳಕಿನೆಡೆ ದೇಕುತ್ತಿದೆ.

ಕವಿಯ ರೂಢಿಗತ ಭೋರ್ಗರೆವ ಕಣ್ಣೀರು
ಮೋಡ ಮಡುಗಟ್ಟಿಟ್ಟಿದೆ - ಸಾಗಿಸು ನೀನೀಗ.
ಸರದಿ ಮುಗಿಸಿದ ಸರಕು ಆವನೀಗ
ಕವಡೆ ಕಿಮ್ಮತ್ತಿಲ್ಲ, ದಿನ ಮುಗಿಸಿದ ದೈನೇಸಿ.

ನೆರೆಮನೆಯವರು ಮದುವೆಯಾಗುವುದು,
ಸಾರಾಯಿ ಹೀರುತ್ತ, ಮೀನಿನುಪ್ಪಿನಕಾಯಿ
ಸೀಗಡಿಪಲ್ಯ ಚಪ್ಪರಿಸಿ ಕೇಕೆ ಹಾಕುವುದನ್ನು
ಕವಿ ಕಣ್ಣೆಟ್ಟು ದಿಟ್ಟಿಸುತ್ತಾನೆ.

ಬದುಕು ಚಿತ್ತಾಕರ್ಷ, ನಸ್ಯ ಡಬ್ಬಿಯಂಥ
ಗೂಡಲ್ಲೂ ಜನರಿಗೆ ಕೂಟದ ಸೆಳೆತ!
ಈಗವರು ಹುರಿಯಾಗಿ ಹೆಡೆಮುರಿ ಕಟ್ಟಿ
ಕವಿ ಮೇಲೆ ಹಗೆತನ ಸಾಧಿಸುತ್ತಾರೆ!

ಉಳ್ಳವರ ಸವಲತ್ತು ಕೊಂಕಿಸುವಾಗ
ಜನ ನಿರ್ಲಕ್ಷ್ಯ ಭುಜಕೊಡವಿ, ಕೂಡುತ್ತಾರೆ.
ಕವಿ ಕೂಡಾ ನಿನ್ನಂಥ ಪೋರಿಯನ್ನೇ ನೆಲದಿಂದೆತ್ತಿ
ಥಾಲಿಯಲ್ಲಿನ ತೀರ್ಥದಂತೆ ಗುಟುಕರಿಸಿದ್ದ.

ಮುತ್ತಿನ ಮತ್ತಲ್ಲಿ ಹಿಮಾಲಯ ಕರಗುತ್ತದೆ ;
ಮುಂಜಾನೆಗೆ ಕಣಿವೆ - ಕಂದರ ನೆನೆನೆನೆಸಿ.
ಚುಕ್ಕೆಗಳೆಲ್ಲ ಧೂಳಾಗಿ, ತೊದಲುತ್ತ ಇರುಳು
ಹಳ್ಳಿಯಲ್ಲೆಲ್ಲ ಅಂಬೆಗಾಲಿಡುತ್ತದೆ.

ಪುರಾತನ ಗುಣಿಯಲ್ಲಿ ಬಳಲಿದ ಜನ
ಹುಲ್ಲು ಹಾಸಿಗೆಯಲ್ಲಿ ಉನ್ಮಾದದಿಂದ ನಡುಗುತ್ತಾರೆ !
ಮಬ್ಬು ಮಸುಕಿನಲ್ಲೀಗ ಹಸಿರಿನ ಮಾತೇ ಇಲ್ಲ,
ಸೃಷ್ಟಿ ಪೂರ್ವಸ್ಥಿತಿ, ಕಾಡಾಚೆ ನೀರನ್ನು ಚಿಮುಕಿಸುತ್ತದೆ.

[Darling, it it's frightening ! When a poet loves]

ನೀನಿಲ್ಲಿ ಇರುವೆ

ಕಿಟಕಿಯಾಚೆ ನಿಶಬ್ದ. ಬಿಸಿಲಲ್ಲಿ ಬೇಯುತ್ತಿರುವ
ನಗರದಂತೆ ನೀನೂ ಇಲ್ಲೇ ಇರುವೆ.
ಇಬ್ಬರೂ ಒಂದೇ ಗಾಳಿ ಹೀರುತ್ತಿದ್ದೇವೆ.

ಈಡೇರದ ಬಯಕೆಯೊಂದಿಗೆ ಕನಸಲ್ಲೇ
ನಗರ ಹೋರಾಡುತ್ತಿದೆ.
ಅಂಗಿಯ ಕೊರಳಪಟ್ಟಿ ಬೆವರುವ ಹಾಗೆ
ಇಟ್ಟಿಗೆ ಕೊರಳಿಂದ ಅಳುತ್ತಿದೆ.

ಕಾಲುಹಾದಿಯ ನೀಳ ಮರಗಳು
ದಣಿಯುತ್ತ ನೆಲಕ್ಕೆ ಬಾಗುತ್ತಿವೆ.
ನಗರದ ಬೆವರಿನ ಹಿಂದೆ ಇದೀಗ
ಹಾದುಬಂದ ಅಡೆತಡೆಗಳಿಗಳಿವೆ.

ಸಾಲುಮರಗಳ ನಡುವೆ ಕವಲೊಡೆದ ಹಾದಿ
ದಿನದ ತಾಪತ್ರಯ ಬರೆಯಲು
ಭೂಮಿ ತಂದಿಟ್ಟ **ದೂರು ಪುಸ್ತ**ಕದಂತಿದೆ.

ನೀನಿಲ್ಲಿರುವುದು ಒಂದು ಕರೆಯಂತೆ -
ಅಪರಾಹ್ನ ಅವಸರದಲ್ಲಿ ಕೂತು
ಅ ಯಿಂದ ಅಃ ವರೆಗೆ ಓದುತ್ತ, ಈ
ಓನಾಮಕ್ಕೆ ನೀನೆಷ್ಟು ಸನಿಹದಲ್ಲಿರುವೆ
ಎಂದು ಅಳೆಯಲೆಂಬಂತೆ.

[You are here, we breathe selfsame air)

ಕಾಡು

ಸುಡು ಬಯಲಿನಲ್ಲೆಲ್ಲ ಹೂ ಪರಿಮಳ ತುಳುಕುತ್ತಿದೆ;
ಕಾಡಿನ ಕತ್ತಲು ಇಗರ್ಜಿಗಳನ್ನು ಕವಿದಿದೆ.
ಅವರು ಪ್ರೀತಿಸುವಂಥದ್ದೇನಿದೆ ಈ ಬದುಕಲ್ಲಿ?
ಅಂಗೈ ಜೇನಿನಂತೆ ಒಮ್ಮೆ ಎಲ್ಲವೂ ಅವರ ಸೊತ್ತಾಗಿತ್ತು.

ನಿದ್ರಿಸದೆ ನಿದ್ದೆಗೆ ಹಾತೊರೆಯುತ್ತೀಯ ನೀನು.
ಅಲ್ಲೊಬ್ಬ, ಹುಬ್ಬಿನ ಕೆಳಗೆ ಉರಿವೆರಡು ಕೆಂಡದುಂಡೆ
ಕಣ್ರೆಪ್ಪೆ ಸುಡುವಾಗ ತೂಕಡಿಸಿ ಕನಸುತ್ತಾನೆ.

ಅಲ್ಲಿ ಕಾಮನಬಿಲ್ಲು, ಬಣ್ಣದ ಚಿಟ್ಟೆ ಚಿಮ್ಮಿ,
ಪಾತರಗಿತ್ತಿ, ಹಾರುವ ಕುದುರೆ ಗಲ್ಲ ಸವರುತ್ತವೆ.
ಆಯತಪ್ಪದೆ ನಡೆಯುವ ಗಡಿಯಾರದಂತೆ
ಕಾಡಲ್ಲಿ ಮಿಂಚುಹುಳುಗಳ ಸಂತೆ.

ಅರೆಚಣ ಮಲಗಿರಬಹುದು ಅವನು,
ನೆತ್ತಿ ಮೇಲೆ ಚೂಪು ಚಪ್ಪಡಿ ಕಲ್ಲು.
ಹವೆಗೆ ತಕ್ಕಂತೆ ಬದಲಾಗುತ್ತ ಪರಿಶುದ್ಧ
ಆಕಾಶದವಕಾಶಕ್ಕೆ ಜಗ್ಗುತ್ತದೆ.

ನೆರಳು ಚದುರಿ, ಸೂಜಿಮೊನೆ ಗಿರಗಿಟ್ಟಲೆ ಸುತ್ತಿ,
ಗರುಡಗಂಭಕ್ಕೆ ಕತ್ತಲು ಕೆನೆಯುತ್ತದೆ.
ಹಗಲ ದಣಿವಾರಿಕೆ ನೀಲಿಯೊಳಗೆ ಮರೆಯಾಗುತ್ತದೆ.

ಆದಿಮ ಖುಷಿ- ಬಯಕೆ ಪುಟಿದು
ಕನಸಿನ ಸೂರ್ಯಾಸ್ತ ಮತ್ತೆ ಅಡವಿಯೆಲ್ಲ ತುಂಬಿದೆ.
ಅವರೆಲ್ಲ ಜತೆಗೂಡಿ ಮಲಗಿ, ನಿದ್ರಿಸುತ್ತಾರೆ.

[The field was clouded with a lilac heat]

ಪ್ರೀತಿ ಭಾರದ ಕಂತೆ

ಪ್ರೀತಿ ಭಾರದ ಕಂತೆ,
ನೀನು ಹಾಗಲ್ಲ, ಸರಳ-ನೇರ;
ನಿನ್ನ ಚೆಲುವಿನ ಸೆಳೆತ
ಬದುಕಿನ ಬಂಡಿಗೆ ಕೀಲು.

ಕನಸಿನ ಕಲರವ, ನಿಜಸುದ್ದಿಯ ಸದ್ದು
ಕೇಳುವುದು ಚೈತ್ರದ ಚಿಗುರಲ್ಲಿ;
ಗಾಳಿಯ ಹಗುರತೆ ನಿನಗೆ,
ನಿನ್ನ ಸಂಸಾರವೂ ಹುಟ್ಟುವುದಲ್ಲಿ.

ಹಗುರವಾಗಿ ಏಳುತ್ತ
ಮರಿಹಕ್ಕಿಯ ಎದೆನಡುಕದ ನುಡಿ ಕೇಳುತ್ತ,
ಮುಂಬರುವ ದಿನದಲ್ಲಿ ಬದುಕುತ್ತಿರು ನಿರಾಳ
ಇದಕ್ಕೇನೂ ಬೇಕಿಲ್ಲ ಭಾರಿ ಕಸರತ್ತು.

[Devotion is a heavy cross]

ನಿರ್ಗಮನ

ಹೊಸ್ತಿಲಲ್ಲಿ ನಿಂತು ನೋಡಿದವನಿಗೆ
ಮನೆಯ ಗುರುತೇ ಸಿಕ್ಕುತ್ತಿಲ್ಲ.
ಅವಳ ನಿರ್ಗಮನ ಹಠಾತ್ತು ಎರಗಿ
ಎಲ್ಲ ಅಸ್ತವ್ಯಸ್ತ, ಚೆಲ್ಲಾಪಿಲ್ಲಿ.

ಕೋಣೆಕೋಣೆಯಲ್ಲಿ ಚೀತ್ಕಾರ,
ಕಣ್ಣೀರು, ಸಿಡಿವ ತಲೆ, ನಿಟ್ಟುಸಿರು
ದುರ್ವಿಧಿಯನ್ನು ಊಹಿಸಲಾಗುತ್ತಿಲ್ಲ.

ಮುಂಜಾವಿನಿಂದ ಕಿವಿಯಲ್ಲಿ
ಕಡಲಿನ ಮೊರೆತ; ಅಪ್ಪಳಿಸುವ ನೆನಪಿನಲೆ,
ಕನಸೆ, ಭ್ರಮೆಯೆ ?

ಜೀವದುಸಿರಾಗಿದ್ದಳವಳು, ಹೆಜ್ಜೆ ಸಂಗಾತಿ.
ಪ್ರತಿ ಅಲೆಯೂ ಕೂಡುವಂತೆ ತೀರ
ಕಡಲು- ದಂಡೆಯ ಸಂಬಂಧ.

ಕಾಲದ ಕಠೋರತೆಯಲ್ಲಿ ಬೆಂದ ಬದುಕು,
ನೂರಾರು ಅಡೆತಡೆ. ಆದರೂ
ಕಂಟಕಗಳ ಕಣ್ತಪ್ಪಿಸಿ, ಕಡಲ ಭರತಿ
ಅವಳನ್ನು - ಅವನೆಡೆಗೆ ಎಳೆದು ತಂದಿತ್ತು.

ಈಗ : ಒಲ್ಲದ ಮನಸ್ಸಿನಿಂದ
ಹೊರಟು ಹೋಗಿದ್ದಾಳೆ.
ಇಬ್ಬರನ್ನೂ ಅಗಲಿಕೆ ಇಂಚಿಂಚಿ ತಿನ್ನುತ್ತದೆ,
ದುಃಖ; ಖಂಡಮಾಂಸವನ್ನು ಅಗೆಯುತ್ತದೆ.

ಸುತ್ತಲೂ ದಿಟ್ಟಿಸುತ್ತಾನೆ :
ಹೊರಟಾಗ ಎಲ್ಲ ಅಲ್ಲಲ್ಲೆ ಬಿಟ್ಟ
ಸಾಮಾನುಗಳು, ತುಂಬಿ ತುಳುಕುವ

ಮೇಜು, ಅರೆತೆರದ ಬಾಗಿಲು.
ತಲೆಕೆಳಗು ಮೇಲಾಗಿ ಬಿದ್ದ ಪಾತ್ರೆಗಳು
ಹರವಿದ ಅರಿವೆ, ಕಸೂತಿಗೆಂದು ಕತ್ತರಿಸಿದ ಬಟ್ಟೆ

ಎಲ್ಲ, ಎಲ್ಲ, ಬೆಳಗು ಜಾವದವರೆಗೆ ಜೋಡಿಸುತ್ತಾನೆ.
ಹೊಲಿಗೆಯಲ್ಲೇ ಅರ್ಧಕ್ಕೆ ಬಿಟ್ಟ ಸೂಜಿ - ದಾರ ಕಂಡು
ಅವಳೇ ಎದುರು ನಿಂತಂತಾಗಿ, ಕುಸಿದು,
ಸಶಬ್ದ ಕಣ್ಣೀರು ಹನಿಸುತ್ತಾನೆ.

'Dr. Zivago's poems'
[From the threshold a man looks in,]

ಕನಸಿನ ಭೂಶಿರ

ಮುದುರಿದ ಮನಸ್ಸಿನ ಯೋಚನೆಗಳೆಲ್ಲ
ತಂಬಾಕಿನ ಹಾಗೆ ಕಂದು ಕಂದು.
ಯುದ್ಧದಿಂದ ನಲುಗಿದ, ಹರಿದ ಹಾಯಿಯ
ಮೀನುಗಾರರ ಹಳ್ಳಿ, ಗಾಣದಿಂದಲೇ ಕಾಣುತ್ತದೆ.

ನೀರನ ಬಿಂಬ ಕಲಕುತ್ತ, ಏಡಿಕಾಯಿ
ಹಕ್ಕಿಯುಗುರು, ಹಾಯಿಪಟ ಕಣ್ಣಲ್ಲಿ ಸೆರೆಹಿಡಿದು,
ಅದೇ ಕಣ್ಣೀರಲ್ಲಿ ಜೇಡಿಮಣ್ಣು ಕಲಿಸುತ್ತ
ಆಕೆ ಕಾಯುತ್ತಿರುವುದು ಅದಾವ ಸೆಳೆತದಿಂದ ?

ಓಹೋ ! ಸುಮಾರು ಹೊತ್ತಿಂದ ಆಳವಿಲ್ಲದ
ಬೆಣಚುಗಲ್ಲು ತುಂಬಿದ ದಡವನ್ನು ತೋಡುತ್ತಲೆ ಇದ್ದಾರೆ.
ಓಹ್ ! ಆಳವಿಲ್ಲ, ಮುಗಿಯುತ್ತಿಲ್ಲ, ಇನ್ನೂ ಇನ್ನೂ
ಯೋಚನೆಗಳು ತಂಬಾಕಿನ ಹಾಗೆ ಕಂದು ಕಂದು.

ಇಂದೂ ನಾನವಳನ್ನು ಕಾಣಬಹುದೆ !
ರೈಲು ಬರಲಿನ್ನೂ ಒಂದು ಗಂಟೆಯುಂಟು, ಅಷ್ಟೇ.
ಆದರೆ ಈ ಒಂದು ಗಂಟೆ ನರಕ ಸೃಷ್ಟಿಸಿದ
ಬಿರುಗಾಳಿಯಿಂದ ಸಮುದ್ರ ಅಪ್ಪಳಿಸುತ್ತಿದೆ.

ಅಳುತ್ತಿರುವ ತೋಟ

ಘೋರ ! ಈ ಭೂಮಿಯಲ್ಲವನು ಏಕಾಂಗಿ;
ಕತ್ತು ಮೇಲೆತ್ತಿ ಕಣ್ಣೀರು ಹಾಕುತ್ತಾನೆ.
ಕಿಟಕಿಯಲ್ಲಿ ತೂಗುವ ಕೊಂಬೆ,
ಅಥವಾ ಬೇರೇನಾದರೂ ಸಾಕ್ಷಿ ಬೇಕೆ ?

ಉಬ್ಬರದ ಭಾರಕ್ಕೆ ಅರಳೆ ಮೆತ್ತನೆ ಮಣ್ಣು
ನಜ್ಜುಗುಜ್ಜು. ಬಹುದೂರ
ತೆನೆ ತುಂಬಿದ ಹೊಲದಲ್ಲಿ ಇರುಳು ಕಾಲಿಕ್ಕುತ್ತಿದೆ
ಸದ್ದಿಲ್ಲ. ಸಾಕ್ಷಿಯೂ ಇಲ್ಲ.
ಆತ ಅನಾಥ, ಇದು ಶತಸಿದ್ಧ,
ಗಟಾರ ಬಳಸಿ ಮೇಲೆ ಕೆಳಗೆ
ಗಿರಕಿ ಹಾಕುತ್ತಲೇ ಇದ್ದಾನಿನ್ನೂ.

●

ಮೌನ. ಎಲೆಯ ಸಪ್ಪಳವಿಲ್ಲ.
ಯಾವ ಥಳಕು - ಬಳುಕಿಲ್ಲ.
ರಕ್ಷಿಸಿ, ಅಡ್ಡಾದಿಡ್ಡಿ ನಡೆದು
ಎಚ್ಚರ ತಪ್ಪುತ್ತಿರುವ ಈ ಆಸಾಮಿಯನ್ನು.
ಕಣ್ಣೀರು ಚಿಮ್ಮಿ, ನಿಟ್ಟುಸಿರು.

[Horrible ! he drips, cocks ear,]

?

ಥಳಥಳಿಸುವ ಸರೋವರ ತೊಳೆದಂತಿದೆ ಹರಿವಾಣ
ತಲೆಯ ಮೇಲೆ ಮಡುಗಟ್ಟಿದೆ ಹತ್ತೂ ದಿಕ್ಕಿನ ಮೋಡ
ಕಣ್ಣು ಚಾಚುವವರೆಗೂ ಹಬ್ಬಿದೆ ಕೊರೆವ ಕಣಿವೆ ಸಾಲು.

ಮಿಂಚು, ಗಳಿಗೆಗೊಮ್ಮೆ ಸೀಳುತ್ತದೆ ಗಗನ
ಚಣಕ್ಕೊಂದು ಬಣ್ಣ ಕಟ್ಟಿ ಕುಣಿಯುವುದು ಕಾನನ.
ಧಗಧಗಿಸಿ ಒಮ್ಮೆ, ಮುಸುಕು ಧರಿಸಿ ಇನ್ನೊಮ್ಮೆ
ಎದೆ ನಡುಗಿಸಿ, ಸುರಿಸುತ್ತ ಬೂದಿ ದುಃಖಧಾರೆ.

ಮಳೆಗಾಲ ಮುಗಿವ ಮೊದಲ ದಿನಗಳಲ್ಲಿ
ಮೋಡದ ಹಿಂಡಿಗೆ ಕಣ್ಣುಮುಚ್ಚಾಲೆಯಾಟ.
ನೀಲಿ ಹರಡಿದಾಕಾಶಕ್ಕೆ ಹಬ್ಬದ ಹರುಷ
ಹೊಳೆವ ಹುಲ್ಲುಗಾವಲಿಗೆ ಸುಗ್ಗಿಯ ಹಿಗ್ಗು.

ಗಾಳಿ, ಮೆಲ್ಲ ಕೆಳಗಿಳಿದು ಅಂತರ ಅಳಿಸುವ ಘಳಿಗೆ
ಮರಮರದ ಚಿಗುರೆಲೆ ಅಹ! ಚಿತ್ತಾಕರ್ಷ
ನೋಡಿದಂತೆ ಗಾಜಿನಿಂದ ಬಣ್ಣ ಬಣ್ಣದ ಚಿತ್ರ.

ಬೆಳಗುತ್ತಿದೆ ಹಣತೆ ಗುಡಿಯ ಗೂಡಿನಲ್ಲಿ
ಯೋಗಿ- ಯತಿ, ದೊರೆ- ಸಂತ ಎಲ್ಲರೂ
ನೋಡುವರು ಬೆಚ್ಚಿ ಬೆರಗಾಗಿ ಕಿಂಡಿಯಲ್ಲಿ
ಹೊರಗೆ ಹರಡಿದ ಮಂತ್ರಮುಗ್ಧ ಶಾಶ್ವತ ಚೆಲುವು.

ದೂರದ ಉದಯರಾಗದ ಅನುಕರಣ ಆರಿಸಲು,
ದೇಗುಲದ ನೆಲಸಿಂಗಾರ ಸಿರಿಯ ನೋಡಲು
ನಾನೂ ಕೆಲವೊಮ್ಮೆ ದೈವ ಕೃಪೆಯನ್ನು ಪಡೆದೆ.

ಓ! ನನ್ನ ಜಗವೇ, ನಿಸರ್ಗವೇ, ವಿಶ್ವ ಸಮಸ್ತವೇ -
ನಿನ್ನ ಸೇವಕ ನಯ ವಿನಯದ ಅನುಭಾವಿಯ ಕಾಯಕ
ಕಂಡ ಈ ಕಣ್ಣು ಖುಷಿಯಲ್ಲಿ ಕಂಬನಿ ತುಳುಕಿಸಿದೆ.

['When skies clear']

?

ಕೀರ್ತಿಶನಿ ನಿನಗೇನೂ ತೊಡಿಸದು ಕಿರೀಟ
ಆಗಲಾರದು ಅದೆಂದೂ ಆಕಾಶಕ್ಕೇರುವ ಅಟ್ಟ.
ಸಂಗ್ರಹಾಲಯ ಬೆಳೆಸುತ್ತ ಹೆಳವನಾಗುವೆ
ಹಸ್ತಪ್ರತಿ ರಾಶಿಯಲ್ಲಿ ಕಳೆದು ಹೋಗುವೆ.

ಕಲೆಯ ಗುರಿಯೊಂದೆ : ನಿನ್ನದೆಲ್ಲ ನೀಡುವುದು
ಬೇಡ, ಚಪ್ಪಾಳೆಗೆ - ಖ್ಯಾತಿಗೆ ಕನವರಿಸುವುದು.
ಯೋಗ್ಯತೆಯಿಲ್ಲದೆ ಸಿಕ್ಕಿಸಿಕೊಂಡು ತಲೆಗೆ ಕೋಡು
ನಿನ್ನ ಡೋಲು ನೀನೇ ಬಾರಿಸುವುದು ನಾಚಿಕೆಗೇಡು.

ಕೊರತೆಗಳನ್ನೆಲ್ಲ ನೂಕಾಚೆ ಅದೃಷ್ಟದ ಬುಟ್ಟಿಗೆ
ತುಂಬಿಸದಿರು ನಿನ್ನ ಕಿರಿಕಿರಿ ಕವಿತೆಯೊಳಗೆ.
ಆಪತ್ತು ಇರಬಹುದು ನೂರಾರು ಈ ದಾರಿಯಲ್ಲಿ
ಕರುಣಾಳು ಈ ಬಾಳು ಕೈಹಿಡಿದು ನಡೆಸಲಿ.

ಎಡವದಿರು ಜಾರಿ ಇರುಳ ಕತ್ತಲೆಯಲ್ಲಿ
ಹೆಜ್ಜೆ ನುಂಗಿ ಹಾಕೀತದು ತನ್ನ ಕಂಬಳಿಯಲ್ಲಿ.
ಪ್ರಕೃತಿಯೂ ಪಾವಿತ್ರ್ಯವ ಕಾಪಾಡುವುದುಂಟು
ಗುಟ್ಟಲ್ಲಿ ಹೊಗೆ-ಮಂಜು ಮುಸುಕನ್ನು ತೊಟ್ಟು.

ಕೆರಳಿದ ಜನ ಹೆಜ್ಜೆ ಗುರುತು ಹಚ್ಚಿ
ಇಂಚಿಂಚೆ ಅಗೆದಾರು ನಿನ್ನನ್ನು ಚುಚ್ಚಿ.
ನೀನು ಮಾತ್ರ ನೆನಪಿಡು ಎಂದೂ ಮರೆಯದೆ
ಸಫಲತೆ - ವಿಫಲತೆಯ ಫಲಿತಾಂಶ ನಿನಗೊಂದೆ

ಹುಳುಹಪ್ಪಟೆ, ಹುಲುಕಡ್ಡಿ ಏನೇ ಆಗಿರಲಿ
ಎಚ್ಚರದ ಮನಸ್ಸಿನಿಂದ ಮರೆಯಾಗದಿರಲಿ.
ಬದುಕುತ್ತಿರು ಪ್ರತಿಕ್ಷಣವೂ ಕಾಯಕ ಕ್ರಿಯೆಯಲ್ಲಿ
ಬದುಕುತ್ತಿರು, ಬದುಕುತ್ತಿರು ಕೊನೆಗಳಿಗೆಯಲ್ಲೂ.

['When skies clear']

ಲೆನಿನ್

ನೆನಪಿಸಿಕೊಳ್ಳುವೆ, ನನ್ನೊಳಗನ್ನು ಸೀಳಿ, ಕಂಪಿಸಿ.
ಮಿಂಚುಸುರಿಸಿದ ಸಾಣೆಕಲ್ಲಿನ ಹರಿತದ ಅವನ ಭಾಷಣವನ್ನು.
ಕೆಂಗಣ್ಣುಗಳೆಲ್ಲ ವೇದಿಕೆಯತ್ತಲೇ, ರಂಗವೇರುವ ಮೊದಲು
ಮಸುಕಾಗಿ ಕಂಡು, ಆಮೇಲೆ ನಿಧಾನ, ಒತ್ತಾಗಿ ನಿಂತ ಜನರನ್ನು;
ಸರಿಸುತ್ತ ಬೆಂಕಿ ಚೆಂಡಿನಂತೆ ಸದ್ದಿಲ್ಲದೆ ಕೋಣೆಗೆ ಬಂದ, ಅವನನ್ನು.
ಮೆಚ್ಚುಗೆ ಮಾತು ಚಿಮ್ಮುತ್ತವೆ, ಒಡೆಯದ ಚಿಪ್ಪಿನಂತೆ, ಆಮೇಲೆ ಶಾಂತ.

★

★

ತನ್ನ ಮಾತಿಂದ ತಾನೇ ಇರಿದುಕೊಳ್ಳುವ ಎದೆಬಾಕು ಅವನು;
ತೊಟ್ಟಿರುವ ಕೋಟು ಗಾಯಕ್ಕೆ ಊದಿ ಬುಗುಟಿಯಾದಂತಿದೆ.
ಬೂಟಿನೊಳಗಿನಿಂದ ಬೆರಳು ಹೊರ ಇಣುಕಿವೆ; ತಾನು ಹಾಕಿದ ಗೆರೆ
ತಾನೇ ಕತ್ತರಿಸುವ ಥೇಟು ಅವನಂತೆ. ಮಾತು ದ್ರವದಂತೆ ನುಣುಪು, ಆದರೆ -
ತುಂಬಿ ಪ್ರತಿ ಪದಕ್ಕೂ ಉಸಿರು, ಪ್ರತಿವಾಕ್ಯವೂ ಸಾರಹೀರಿದ ಸೂಕ್ಷ್ಮ
ನೆಗೆಯುತ್ತವೆ ಆಕಾಶಕ್ಕೆ.

[As I relall his speech ನ ಭಾಗಶ: ಅನುವಾದ **]**

ನೊಬೆಲ್ ಬಹುಮಾನ

ಬಲೆಗೆ ಬಿದ್ದ ಕಾಡು ಪ್ರಾಣಿಯಂತಾಗಿದೆ ಸ್ಥಿತಿ.
ಜನ, ಬೆಳಕು, ಸ್ವಾತಂತ್ರ್ಯ ದೂರದಲ್ಲೆಲ್ಲೋ.
ಬೆನ್ನ ಹಿಂದಿದೆ ಗಲಭೆ, ಗದ್ದಲ,
ಮುಚ್ಚಿಹೋಗಿದೆ ಹೊರಹೋಗುವ ಹಾದಿ.

ಕಗ್ಗಾಡು, ಕೆರೆದಂಡೆ, ಉರುಳಿಬಿದ್ದ ಹೆಮ್ಮರ
ಎಲ್ಲೆಡೆಯೂ ಮಸುಕಾದ ದಾರಿ
ಏನು ಬಂದರೇನು, ಎಲ್ಲವೂ ಒಂದೇ.

ಮಾಡಿದ ಪಾಪವಾದರೂ ಏನು ?
ನಾನು ಖಳನೆ, ಖೂಳನೆ ?
ಎಲ್ಲರೂ ನನ್ನ ಪ್ರೀತಿಯ ನೆಲಕ್ಕಾಗಿ
ಕಣ್ಣೀರಿಡುವಂತೆ ಮಾಡಿದೆ.

ಆದರೂ ನಂಬಿಕೆಯಿಟ್ಟಿರುವೆ,
ಹಗೆತನ, ಕೇಡನ್ನು ಜಯಿಸಿ
ಮಸಣಕ್ಕೂ ಬರಬಹುದು ಮಹಾನವಮಿ ಎಂದು.

(ಡೈಲಿ ಮೆಯಿಲ್, ಲಂಡನ್)
೧೧, ಫೆಬ್ರವರಿ ೧೯೫೯

ಅರಿತಿರಬೇಕಾಗಿತ್ತು ನಾನು

ಅರಿತಿರಬೇಕಾಗಿತ್ತು ನಾನು, ಇದರ ಹಾದಿ
ಹಾಡುವ ಮೊದಲೇ ಬರವಣಿಗೆಗೆ ನಾಂದಿ ;
ಕವಿತೆ, ಕೊರಳಿಂದ ಚಿಮ್ಮುವ ನೆತ್ತರು ಝರಿ
ಕೊಲೆಗೆಡುಕ, ರಕ್ತ ಹೀರುವ ಸಂಹಾರಿ.

ಖುಷಿಯ ಎಲ್ಲ ದಾರಿಯೂ ದುರ್ಗಮ
ಆಯತಪ್ಪಿದರೆ ಮುಗಿದಂತೆ, ನೆಲಸಮ !
ರಂಗಕ್ಕೆ ಬಂದದ್ದೇನೊ ಬಲು ಹಿಂದೆಯೇ
ಆರಂಭದಾಸಕ್ತಿ ಉಳಿಯಿತು ಹಿಂದೆಯೇ.

ನಟನಿಗೆ ವಾಕ್ಯ ನುಡಿದಿದೆ ಮುಪ್ಪು -
'ಕೋಡಂಗಿ ಕೈಚಳಕ ತಪ್ಪು,
ಬೇಡ, ನುರಿತ ನಟನ ಧಿಮಾಕು
ಸತ್ತ ಕಲ್ಲಂತಿರು ನೀನು ಅಷ್ಟು ಸಾಕು !

ಮೋಹ, ಮೇಳದಿಂದ ಮುಗ್ಗರಿಸಿದಾಗ
ರಂಗಸ್ಥಳಕ್ಕೆ ಕಳಿಸುತ್ತದೆ ತನ್ನ ಗುಲಾಮನನ್ನು.
ಇದು ಎಲ್ಲ ಕಲೆಗಳೂ ಕೊನೆಗೊಳ್ಳುವ ಜಾಗ
ಇದೇ ವಿಧಿ, ನೆಲ ನಿಟ್ಟುಸಿರಿಡುವ ತಾಣ.

Second Birth :
[Had I but known the way of it]

ಕಥೆಗಳು

ಆಕಾಶದ ದಾರಿಗಳು

ಪುರಾತನ ನೇರಳೆಮರದ ಬೊಡ್ಡೆಗೆದುರಾಗಿ ಆ ದಾದಿ ಮಲಗಿದ್ದಳು. ನೋಡುತ್ತಿದ್ದಂತೆ ಬೂದುಬಣ್ಣದ ಭಾರಿ ಮೋಡ ರಸ್ತೆಯಂಚಿಗೆ ಇಳಿಯುತ್ತಿದ್ದಂತೆ ಕುರುಚಲಿನಲ್ಲಿ ಚಿಟಿ ಚಿಟಿ ಮಾಡುತ್ತಿದ್ದ ಮಿಡತೆಗಳು ಸ್ತಬ್ಧವಾದವು. ಮಿಲಿಟರಿ ಕ್ಯಾಂಪಿನಲ್ಲಿ ಬಾರಿಸುತ್ತಿದ್ದ ಡ್ರಮ್ಮಿನ ಸದ್ದು ಶೂನ್ಯ ಸೇರಿತು. ಭೂಮಿಗೆ ಕತ್ತಲಾವರಿಸತೊಡಗಿ, ನರಪಿಳ್ಳೆ ಬದುಕಿರುವ ಸೂಚನೆ ಕಾಣದಾಯಿತು.

'ಹುಷಾರು ! ಬನ್ನಿ ' ದನಕಾಯುವ ಎಳೆಪೋರಿ ಸೀಳುತುಟಿಯಿಂದ ಕಿರುಚಿದ್ದು, ಪ್ರತಿಧ್ವನಿಯಾಯಿತು. ಗಾಯದ ಕಾಲನ್ನು ಎತ್ತೆತ್ತಿ ಹಾಕುತ್ತ ಪೋರಿ ಹಿಂದಿದ್ದ ಕರುವನ್ನು ಎಳೆಯುತ್ತಿದ್ದಳು. ಮಿಂಚು ಆಗೀಗ ಫಳೀರೆಂದು ಝಳಪಿಸುತ್ತಿತ್ತು. ದಟ್ಟಕಾಡು ಆರಂಭವಾಗುವುದು ಇನ್ನೊಂದು ಮೂಲೆಯಿಂದ. ತೋಟದಲ್ಲಿ, ಬಿಸಾಡಿದ ಅಂಕುಡೊಂಕು ವೈರು, ಇಟ್ಟಿಗೆ ತುಂಡು, ದಟ್ಟಕತ್ತಲು.

ಹುಡುಗಿ, ಮೋಡದಲ್ಲಿ ಮುತ್ತಿಕೊಂಡು ಕಣ್ಣಿಗೆ ಕಾಣದಾದಳು.

ಬಿಸಿಲು ಸುಟ್ಟ ನೆಲವನ್ನು ಕ್ಷಿತಿಜದವರೆಗೆ ಮೋಡ ತುಂಬಿಕೊಂಡಿತು. ಕ್ಯಾಂಪು, ರೇಲ್ವೆ ಹಳಿ ಬಳಸಿದ ಮೋಡ ನಿಧಾನ ರಸ್ತೆಗಿಳಿಯಿತು. ಪೊದೆಗಳನ್ನು ಸುತ್ತುವರಿಯಿತು. ಗಿಡಗಳು ಮೋಡಕ್ಕೆ ಮುಜುರೆ ಹಾಕುವಂತೆ ಬಾಗಿದವು. ಉತ್ತರಿಸದ ಮೋಡ ಮತ್ತೆ ಏಕಾಂಗಿಯಾಯಿತು.

ಶಾಖಕ್ಕೆ ನೇರಳೆ ಬೀಜ ಸಿಡಿದು ಮರುಯೋಚಿಸದೆ ದಾದಿಯ ಮೇಲು ಹೊದಿಕೆ ಸೇರುತ್ತಿದ್ದವು.

ಮಗು ಸುಮಾರು ಹೊತ್ತಿನಿಂದ ಕೊಳಾಯಿಯ ಬಳಿ ತೆವಳುತ್ತ ನಡೆದಿತ್ತು.

ಕೊನೆಗೆ ಮಳೆ ಹನಿಯತೊಡಗಿದಾಗ, ಇಡೀ ರಾತ್ರಿ ಸುರಿವ ಮಳೆಯಿಂದ

ತಪ್ಪಿಸಿಕೊಳ್ಳಲು ಜೋಡಿ ಹಕ್ಕಿ ಪೊದರಿನಾಚೆಯಿರುವ ಗೂಡಿಗೆ ಹಾರುತ್ತವೆ. ಇರುಳೆಲ್ಲ ನಿಮ್ಮನ್ನ ಕರೆಯುವಂತೆ ಭರೋ ಎಂದು ಸುರಿವ ಮಳೆಗೆ ನೀವೇನೂ ಹೆದರಬೇಕಿಲ್ಲ, ಅದನ್ನು ಜಡಿ ಮಳೆ ಅಂತ ಕರೀತಾರೆ. ಪ್ರೀತಿ ಗೀತಿ ಅಂತೇನೋ ಹೇಳುತ್ತಾರಲ್ಲ. ಅದರ ಬಗ್ಗೆ ನಿಮಗೀಗ ಹೇಳ್ತೇನೆ ಕೇಳಿ :

ಹಿಂದಿನ ಸಂಜೆ, ಈ ಹಸುಳೆಯ ತಂದೆ - ತಾಯಿಗಳು ಬಿಳಿ ಬಿಳಿ ಹಿಮದಂಥ ಶುಭ್ರ ಬಟ್ಟೆ ಧರಿಸಿ ಟೆನ್ನಿಸ್ ಆಡೋದಕ್ಕೆ ಅನ್ನೋ ಥರ ತಯಾರಾಗಿದ್ದರು. ತೋಟದಲ್ಲಿ ಓಡಾಡಿದರು. ಟಪಾಲುಗಾಡಿ ಇನ್ನೇನು ಬರಬೇಕು, ನಿಲ್ದಾಣದ ಅಂಗಡಿಯಿಂದ ಕರಿದ ತಿಂಡಿ ವಾಸನೆ. ಅಂಗಡಿ ಒಂದು ಥರದ ಹಳದಿ ಹೊಗೆಯಿಂದ ತುಂಬಿಕೊಂಡು ಬಳಲಿದಂತೆ ಕಾಣುತ್ತಿತ್ತು.

ಜೋಡಿ, ಬಂದರಿನ ದಾರಿಯಲ್ಲಿದ್ದರು. ನೌಕಾ ತರಬೇತಿ ಮುಗಿಸಿ ಪರತ್ ಬರುತ್ತಿದ್ದ ಗೆಳೆಯನನ್ನು ಎದುರುಗೊಳ್ಳಲು ಹೊರಟಿದ್ದು. ಬರುವವ ಗಂಡನ ಗೆಳೆಯ, ಒಂದು ಕಾಲಕ್ಕೆ ಅವನ ಹೆಂಡತಿಯನ್ನು ಪ್ರೀತಿಸಿದವ. ಇದೀಗ ತರಬೇತಿ ಮುಗಿಸಿ, ಜಗತ್ತೆಲ್ಲ ಸುತ್ತಾಡಿ ಮರಳಿ ಬರುವವನಿದ್ದ.

ಗಂಡ ಒಂದು ಥರದ ಖುಷಿಯ ಗೊಂದಲದಲ್ಲಿದ್ದ. ಗೆಳೆಯ ಬಂದದ್ದೇ ತಾನು ಅಪ್ಪನಾದದ್ದರ ಬಗ್ಗೆ ಹೆಮ್ಮೆಯಿಂದ ಹೇಳಬೇಕೆಂಬ ತವಕದಲ್ಲಿ ಸಹನೆ ಕಳೆದುಕೊಳ್ಳತೊಡಗಿದ್ದ. ಆಗುವುದು ಇದೇ. ಒಂದು ಸಣ್ಣ ಘಟನೆಯೂ ಬದುಕಿನಲ್ಲಿ ಮೊದಲ ಸಲ ಘಟಿಸಿದಾಗ ಅತಿ ಪ್ರಾಮುಖ್ಯತೆ ಪಡೆದು ಬಿಡುತ್ತೆ. ಇದು ಎಷ್ಟೊಂದು ಹೊಸದಾಗಿರುತ್ತದೆಂದರೆ ಬರುವ ಮನುಷ್ಯ ವಿದೇಶ ಸುತ್ತಿ ಹತ್ತೆಂಟು ಅನುಭವಕ್ಕೆ ಒಳಗಾದವನು ಅನ್ನೋದು ಮರೆತು ಹೋಗಿ, ಆತ ಬಂದದ್ದೇ ಆತ ಕೇಳುಗನಾಗುತ್ತಾನೆ, ನಾನು ಮಾತಿನ ಪೆಟ್ಟಿಗೆಯಂತೆ ಆತನ ಮುಂದೆ ಬಡಬಡಿಸುತ್ತೇನೆಂತ ನೀವು ಊಹಿಸುತ್ತೀರಿ.

ಗಂಡನ ಭಾವನೆಗಳಿಗೆ ವಿರುದ್ಧವಾಗಿತ್ತು ಆಕೆಯ ಭಾವನೆಗಳು. ನಿಧಾನ ನಿಧಾನ, ಬಂದರಿನ ಗೌಜು ಗಲಗಿಂದ ಬೇರೆಯಾಗಿ, ಲಂಗರನ್ನು ಕಡಿದುಕೊಂಡು ನೀರಿಗಿಳಿಯಬೇಕೆಂಬಷ್ಟು ಅವಳು ತವಕಗೊಂಡಿದ್ದಳು. ನೌಕೆಯಲ್ಲಿನ ಕುದಿಸುವ ಧಾನ್ಯದ ವಾಸನೆ, ತುಕ್ಕು ಹಿಡಿದ ಹೊಗೆಕೊಳವೆ, ಬೆಳಗುವ ಆಕಾಶ, ನೌಕಾವಸ್ತ್ರದಲ್ಲಿರುವ ನಾವಿಕ, ನಾವೆ. ಇಬ್ಬರ ಗುರಿಯೂ ಬೇರೆ ಬೇರೆ.

ಹೊರಗೆ ಮಳೆ, ಜಡಿಮಳೆ. ನಾನು ಕೊಟ್ಟ ಮಾತಿನಂತೆ ನಡೆದುಕೊಳ್ಳುವೆ. ಗಿಡದ ಬೀಜ ಚಟಚಟ ಸಪ್ಪಳ ಮಾಡುತ್ತ ತೂರಗೆ ಸೇರುತ್ತಿವೆ. ಎರಡು ಆಕೃತಿಗಳು ಗದ್ದೆ ಬೈಲಿನಲ್ಲಿ ಓಡುತ್ತಿವೆ. ಆ ವ್ಯಕ್ತಿ ಕಪ್ಪುಗಡ್ಡ ಬಿಟ್ಟಿದ್ದಾನೆ. ಹೆಣ್ಣು ತೊಟ್ಟ ಕುಬುಸ ಗಾಳಿ ತುಂಬಿಕೊಂಡು ಉಬ್ಬಿದೆ. ವ್ಯಕ್ತಿ ಹಸಿರು ಕಫ್ತಾನು ಕೊಟ್ಟಿದ್ದಾನೆ. ಕಿವಿಯಲ್ಲಿ ಬೆಳ್ಳಿ ವಂಕಿಗಳಿವೆ. ಆತನ ತೋಳುಗಳಲ್ಲಿ ಅಪಹರಿಸಿದ ಮಗುವಿದೆ. ಮಳೆ ಮಳೆ, ಧಾರಾಕಾರ. ಜಡಿಮಳೆ.

೨

ಕಾಲಾಂತರದಲ್ಲಿ ಬಡ್ತಿ ಸಿಕ್ಕು ಆತ ನೌಕೆಯ ಅಧಿಕಾರಿಯಾದ.

ರಾತ್ರಿ ಹನ್ನೊಂದು, ಕೊನೆಯ ರೈಲು ನಿಲ್ದಾಣ ಮುಟ್ಟಿತು. ಸುರಂಗಮಾರ್ಗ ಸುತ್ತಿಬಂದ ಅದಕ್ಕೆ ವಿಚಿತ್ರ ಬಿಗುಮಾನ. ಇಡೀ ಜಿಲ್ಲೆಯ ಗಾಳಿ ಹೀರಿಕೊಂಡು, ತುಂಬಿ ತುಳುಕುವ ಕೆರೆ-ತೊರೆ, ಕಾಡು, ಮುಂಜಾವಿನಿಬ್ಬನಿ, ಎಲೆರಾಶಿ ಹಾದು, ನಿಂತು, ಚಪ್ಪಾಳೆ ಹೊಡೆದು-ಗೌಜುಗದ್ದಲದ ಉತ್ತರಕ್ಕಾಗಿ ಕಾಯುತ್ತದೆ. ಎಲ್ಲ ದಾರಿಗಳಿಂದ ಮಾರುತ್ತರ ಬರಬೇಕು. ಧ್ವನಿ ಬಂದಾಗ - ಬಿಳಿಬಟ್ಟೆ ತೊಟ್ಟ ಹೆಣ್ಣು-ಗಂಡು, ನೌಕಾ ನೌಕರ, ನಾಗರಿಕ ರಸ್ತೆಗಿಳಿಯುತ್ತಾರೆ. ಮಹಡಿಯನ್ನು ಮೆತ್ತಿದ ಸುರಿವ ಹಿಮ ಹಿಂದೆ ಹಿಂದೆ, ಸಾಲುಮರಗಳ ಸಾಲು ದಾರಿಯಲ್ಲಿ ಮುಂದೆ, ಮುಂದೆ. ಬೇಲಿದಾಟಿದ ಅವರು ಕಟ್ಟಿದ ಕೈ ಬಾಗಿಲು ನೂಕಿ, ಏರಿ, ಮನೆಮುಂದಿನ ಹಿಮದ ಗೂಡು, ರಸ್ತೆ ಬದಿ ಗಟಾರ ಹಾದು ಇಲ್ಲಿಗೆ ಬಂದಾಗ ಕಬ್ಬಿಣದ ಸಲಾಕಂಗಳು ಕೆಲಸದಲ್ಲಿ ತೊಡಗುತ್ತವೆ. ಯಾವಾಗಲೂ ನಿಶಬ್ದವಾಗಿರುತ್ತದೆನ್ನುವ ನಂಬಿಕೆ ಮುರಿದ ರೈಲು ಇದ್ದಕ್ಕಿದಂತೆ ಭರ್ತಿ ಶಬ್ದ ಮಾಡುವ ಬೀಳುವ ಧಾರಕಾರ ಮಳೆಯತ್ತ, ಕರಗುವ ಸಾಬೂನಿನಂತೆ ನುಗ್ಗುತ್ತದೆ. ರೈಲು ಹೊರಡುತ್ತಿದೆ. ಇರಲಿ, ಇದರೊಂದಿಗೇನೂ ಸಂಬಂಧವಿಲ್ಲ. ಬೇಕಾದದ್ದು ಕಡಲು ಹೆಮ್ಮೆ ಪಟ್ಟುಕೊಳ್ಳುವ ಹಡಗು. ರೈಲು ನಿಲ್ದಾಣದ ಹಿಂಭಾಗದ ತೋಪಿನಿಂದ ಚಂದ್ರ ನಿಧಾನ ಮೇಲೆ ಬಂದು ಬೀದಿಗಿಳಿದು ನಡೆಯ ತೊಡಗುತ್ತಾನೆ. ಈ ಸುಂದರ ನೋಟ ನೋಡುವ ನಿಮಗನ್ನಿಸುತ್ತದೆ, ತೀರ ಪರಿಚಿತ, ಆದರೆ, ಸದಾ ಹೆಸರು ಮರೆತು ಹೋಗುವ ಕವಿಯೊಬ್ಬ ಬರೆದ ಕಪಿತೆ ಇದೆಂದು ; ಮಗುವಿಗೆ ಮುಂದಿನ ಹಬ್ಬಕ್ಕೆ ಕೊಡುವ ಉಡುಗೊರೆ ಇದೆಂದು. ಈ

ಬೆಳದಿಂಗಳ ಬೇಲಿಯನ್ನು ಕನಸಿನಲ್ಲಿ ಕಂಡಿದ್ದೆ ಎಂದು ನೆನಪಿಸಿಕೊಳ್ಳುತ್ತೀರಿ, ಆಗ ಇದನ್ನು ಜಗತ್ತಿನ ಕೊನೆ ಎಂದು ಕರೆದಂತಿತ್ತು.

ಒಂದು ಕೊಳಗದಲ್ಲಿ ಬಿಳಿ ಬಣ್ಣ ಹಾಕಿಕೊಂಡು ಚಂದ್ರ, ಮಂಟಪ-ಮನೆಗೆ ಬಣ್ಣ ಹಚ್ಚುತ್ತಿದ್ದಾನೆ, ಮನೆಗೆ ಸುಣ್ಣ ಹೊಡೆಯುತ್ತಿದ್ದ ಸುಣ್ಣದವನ ಪೊರಕೆ ಗೋಡೆಗೆ ನಿಗುರಿ ನಿಲ್ಲುತ್ತದೆ. ಕಿಟಕಿಗೆದುರಾದ ತೋಟ ತೆರೆದುಕೊಳ್ಳುತ್ತದೆ. 'ಇವತ್ತು ಸುಣ್ಣದವರು ಬಂದಿದ್ದಾರೆ !' ಹೆಣ್ಣಿನ ಮೆತ್ತಗಿನ ದನಿ. 'ವಾಸನೆ ಬರ್ತಿದೆಯಾ ? ನಡೀ ಊಟಕ್ಕೆ ಹೊತ್ತಾಯ್ತು ! ' ಮತ್ತೆ ಮೌನ.

ಬಹಳ ಹೊತ್ತೇನಲ್ಲ. ಮನೆಯಲ್ಲಿ ದಿಢೀರನೆ ಗದ್ದಲ. 'ಏನು ? ಏನು ಹೇಳ್ತಾ ಇದೀಯ ನೀನು ? ಕಾಣಸ್ತಾ ಇಲ್ವಾ ?' ವೀಣೆ ತಂತಿ ಮುರಿದಾಗ ಬರುವಂತಿತ್ತು ಹೆಣ್ಣಿನ ಹತಾಶ ದನಿ. ಹುಚ್ಚಿಯಂತೆ. ಮರದ ಕೆಳಗಾ ? ಸುಮ್ಮನೆ ಗೋಳಾಡ ಬೇಡ, ಎಚ್ಚರ ಸ್ಥಿಮಿತದಲ್ಲಿಟ್ಟುಕೊಂಡು ಮಾತಾಡು ! ನನ್ನ ಕೈ ಸೇದಿಹೋಗಲಿ ದೇವರೆ ! ಇದು ಸಾಧ್ಯಾನೆ ಇಲ್ಲ ದೇವರೆ ! ನನ್ನ ತೋಷಾ, ತೋಷಾಂಕಾ ! ನನಗೆ ಮುಖ ಕೊಡೊಕೆ ನಾಚಿಕೆ ಆಗಲ್ವಾ, ಬಜಾರಿ ಹಡಬೆ ಹೆಣ್ಣೆ, ನಾಚಿಕೆಗೇಡು, ಎಂಥಾ ಗತಿ ಬಂದು ದೇವರೆ ! ದನಿ, ಮಾತಾಗಲಾರದ ಸದ್ದು, ನಿಶಬ್ದವಾಗಿ ಏನೂ ಕೇಳದಾಯಿತು.

ರಾತ್ರಿ ಮುಗಿಯಲು ಬಂದರೂ ಬೆಳಗಿಗಿನ್ನೂ ತಡವಿದೆ. ಭೂಮಿ ಗುಂಡಗೆ ಸುತ್ತುತ್ತ, ಹುಲ್ಲುಮೆದೆಯೊಂದಿಗೆ ಮೌನವಾಗಿತ್ತು. ಅವಕ್ಕೀಗ ವಿರಾಮ. ಮೆಣಸಿನ ಹೊಲ, ನೆನೆದ ಕುದುರೆ ಬೆನ್ನಿನ ಹೊದಿಗೆ ಬುಸುಗುಡುತ್ತ ಏದುಸಿರು ಬಿಡುತ್ತಿದ್ದವು. ಆಗೀಗ, ರಾತ್ರಿಯ ನೆರಳು ಗಿಡದಂತೆ - ಮೋಡದಂತೆ ಕಾಣುತ್ತಿತ್ತು. ಬಹುಪಾಲು, ಹೆಸರಿಲ್ಲದ, ರಾಶಿಹಾಕಿದ, ಮುಸುಕು ಮುಸುಕು ಆಕಾರ, ಕತ್ತಲು. ಖರೆ ಹೇಳುವುದಾದರೆ ಅದನ್ನು ಮಂಜು ಅಥವಾ ಸೋನೆ ಅನ್ನಬಹುದಿತ್ತು. ಅಥವಾ ಜಡಿಮಳೆ ಜಡಿ ಜಡಿದು ನಿಂತಿದೆಯೆಂದೋ, ಜಡಿಯಲಿದೆಯೆಂದೊ ಹೇಳಬಹುದಿತ್ತು.

ಬಹುದೂರ, ಕಣ್ಣೀರಿನ ಹನಿಯ ಒಂದು ಗೆರೆಯಷ್ಟು ಅಂತರದಲ್ಲಿ ಬೆಳಗು. ಇನ್ನೂ ದೂರದಲ್ಲಿ ಮೂರು ಮನುಷ್ಯ ಆಕೃತಿ, ದೇವರೆಬಲ್ಲ ಎಲ್ಲಿ ಹೋಗುತ್ತಿದ್ದಾರೋ ? ಅಸ್ಪಷ್ಟವಾಗಿ ಬೀಳು ನೆಲದ ಅಂಚಿಗೆ ಕಾಣುತ್ತಿದ್ದಾರೆ. ಅವರ

ವಿರುದ್ಧ ದಿಕ್ಕಿನ ಇನ್ನೊಂದು ಅಂಚಿಗೆ ಸಮುದ್ರದ ಮೊರೆತ ದೂರದಲ್ಲಿ ಆಲಿಸಬಹುದು. ಬಿಳಿ ಬಟ್ಟೆ ತೊಟ್ಟವರು ಮರೆಯಾಗಿ, ಮತ್ತೆ ಗೋಚರಿಸಿ ತೆಗ್ಗಿನಲ್ಲಿ ನೆಗೆಯುತ್ತಾ ಮತ್ತೆ ಕಾಣೆಯಾಗಿ ಮತ್ತೆ ತುದಿಗೆ ತೇಲುವರು, ಇದ್ದ ದಿಕ್ಕಿನಲ್ಲಿ, ಇನ್ನೊಮ್ಮೆ ವಿರುದ್ಧ ದಿಕ್ಕಿನಲ್ಲಿ. ದೂರದಿಂದ ಅವರನ್ನವರು ಗುರುತಿಸಲು ಕೈಬೀಸುವರು. ಸನ್ನೆ ಮಾಡಿದಾಗ ಅವರು ಮೊದಲಿದ್ದ ಜಾಗ ಬಿಟ್ಟು ಇನ್ನೊಂದು ಸ್ಥಳಕ್ಕೆ ಹೋಗಿ ಹುಡುಕ ತೊಡಗುವರು. ಇವರನ್ನು ಕಂಡಾಗ ರಾತ್ರಿಯಲ್ಲಿ ಯಾರೋ ಚೆಂಡಾಟವಾಡಲು ಬಂದವರು, ಚೆಂಡು ಕಳೆದುಹೋಗಿ ಅದನ್ನು ಹುಡುಕುತ್ತಿದ್ದಾರೆ ಅನ್ನಿಸುತ್ತಿತ್ತು.

ವಿರಾಮದಲ್ಲಿದ್ದ ನೆರಳಿನೊಂದಿಗೆ ಗಾಳಿ ಚೆಲ್ಲಾಟದಲ್ಲಿತ್ತು. ಈಗಾಗಲೇ ಬೆಳಗು ಬಂದೇ ಬಿಡುವುದೆಂದು ನಿಮಗೆ ಗೊತ್ತೆ ಇದೆ. ಈ ನಡುವೆ ಕಾಡನ್ನು, ಒರಟು ಗೂದಲಿನ ಸಿಕ್ಕು ಬಿಡಿಸುವಂತೆ ಹೆಚ್ಚುತ್ತಿರುವ ಈ ಜನರನ್ನು ನೋಡಿದಾಗ, ಗಾಳಿಯಿಂದ ಅಸ್ತವ್ಯಸ್ತಗೊಂಡ, ಕತ್ತಲೆಯಿಂದ ಬಳಲಿ ಬೆಂಡಾಗಿ ಸಿಕ್ಕು ಬಿಡಿಸುವುದರಲ್ಲಿ ತನ್ನ ಮೂರು ಹಲ್ಲು ಕಳಚಿಕೊಂಡ ಬಾಚಣಿಕೆಯಂತೆ ಅವರನ್ನು ನೀವು ಊಹಿಸಿಕೊಳ್ಳಬಹುದು.

*ಬೇರೆಯವರಿಗೆ ಆದದ್ದು ನಮಗೆ ಆಗಬೇಕಿಲ್ಲ*ವೆಂಬ ಒಂದು ವಾಕ್ಯವಿದೆ. ಈ ರೀತಿ - ರಿವಾಜು ಬರಹಗಾರರಿಗೆ ಒಂದಕ್ಕಿಂತ ಹತ್ತುಸಲ ಹೆಚ್ಚಾಗಿ ಹೊಂದುತ್ತದೆ. ವಾಸ್ತವದಲ್ಲಿ ನಮ್ಮನ್ನು ಆಸರೆಗೆ ತೆಗೆದುಕೊಳ್ಳಬಲ್ಲ ಗೆಳೆಯರಿದ್ದಾರೆಂದರೆ ನಮ್ಮ ಅನೇಕ ಸಂಕಷ್ಟಗಳಿಗೆ ಪರಿಹಾರ ಸಿಕ್ಕಿಬಿಡುತ್ತವೆ. ಆದರೆ ಇದು ವಿಧಿ ಲಿಖಿತ ಮೀರಿದ್ದೆಂದು ನಮಗೆ ಅರಿವಾದಾಗ, ಗೆಳೆಯರು ಆಶ್ರಯ ನೀಡುತ್ತೇವೆಂಬ ಮಾತಿಗೆ ಕಟ್ಟುಬಿದ್ದವರಂತಾಗುತ್ತಾರೆ. ನಾವು ವಾಕ್ಯವನ್ನು ನಿಜ ಮಾಡಬೇಕೆನ್ನುವಂತೆ ಬೇರೆಯ ಥರವೇ ನಡೆದುಕೊಳ್ಳತೊಡಗುತ್ತೇವೆ. ಅಂದರೆ - ಬೆಂಕಿ - ಮಳೆಗಾಳಿ, ಮಾನಸಿಕ ನೋವು, ಎಲ್ಲಬಗೆಯ ಕಷ್ಟ ಸಹಿಸಲು ಎದೆಯೊಡ್ಡುತ್ತೇವೆ.

ಸಾಮಾನ್ಯ ಜನರಂತೆ, ಕಲ್ಲಿದ್ದಲಿನ ನಡುವೆ ದಾದಿಯನ್ನು ಹುಡುಕುತ್ತಿದ್ದ ಅವರಿಗೆ ಒಂದರೆಕ್ಷಣ ಅನ್ನಿಸಿತು : ಆವೇಶಭರಿತ ಶೋಧನೆಯಲ್ಲಿ ದಾದಿ, ಮಗು, ಸಿಕ್ಕಿ ಮಗುವನ್ನು ಅವನ ಮನೆಗೆ ತಲುಪಿಸಿದರೆ ಎಲ್ಲ ಉದ್ವೇಗವೂ ಕಳೆದೀತು. ಖಾಲಿ ಹಾಸಿಗೆಯೊಂದು ಕಂಡದ್ದೇ ಅವರ ದನಿ ಒಣಗಿತು. ಆದರೆ ಅವರ ಮನಸ್ಸು

ಮೊದಲು ತೋಟವನ್ನು ಹುಡುಕಲು ಹಾತೊರೆಯಿತು. ಮನೆಯಿಂದ ದೂರ ದೂರ ಹಾಗೇ ಹುಡುಕುತ್ತ ಅವರು ನಡೆದರು. ಮೊದಮೊದಲು ಅವರೂ ನಮ್ಮಂತೇ ಬಯಸಿದ್ದನ್ನು ಹುಡುಕಲು ಹೊರಟ ಸಾಮಾನ್ಯರಂತೇ ಇದ್ದರು. ಆದರೆ ಹೊತ್ತು ಕಳೆಯತೊಡಗಿದಂತೆ ರಾತ್ರಿ ತನ್ನ ಮುಖ ಇಣುಕಿ ಇದೀಗ ಇರುಳೂ ಮುಗಿಯುತ್ತ ಬಂದಿದೆ. ಇದೀಗ ಆ ಜನ ಅಪರಿಚಿತರಂತೆ ಕಾಣುತ್ತಿದ್ದಾರೆ. ಯಾವ ಶನಿ ಪ್ರತಿ ಸ್ಥಳದಲ್ಲಿ ಅವರನ್ನು ಕಾಡುತ್ತದೆಯೋ, ಉಸಿರು ಬಿಗಿಹಿಡಿದು ಮತ್ತೆಂದೂ ಈ ಭೂಮಿಯ ಮೇಲೆ ಕಾಣಲಾರದ ತಮ್ಮ ಮಗುವನ್ನವರು ಹುಡುಕುವುದರಲ್ಲಿ ಮುಳುಗಿದಾಗ ನೌಕಾಧಿಕಾರಿಯನ್ನು ಅವರು ಸಂಪೂರ್ಣ ಮರೆತಂತಿದೆ.

ಈ ಪ್ರಶ್ನಾರ್ಹ ಗ್ರಹಿಕೆ ನೋಡಿದರೆ ಬರಹಗಾರ ತನಗೆ ತಿಳಿದಿರುವ ಯಾವುದೋ ಗಹನವಾದ ವಿಚಾರವೊಂದನ್ನು ಓದುಗನಿಂದ ಗುಟ್ಟಾಗಿ ಡುತ್ತಿದ್ದಾನೆಯೇ ? ಹಾಗೆ ನೋಡಿದರೆ, ಬೇರೆಲ್ಲರಿಗಿಂತ ಅವನಿಗೆ ಚೆನ್ನಾಗಿ ಗೊತ್ತಿದೆ - ರೈಲು ನಿಲ್ದಾಣದಲ್ಲಿ ಹೊತ್ತು ಮೂಡಿ ಬೇಕರಿ ತೆರೆದರೆ ಈ ದುರ್ಘಟನೆ ಹಳ್ಳಿಯ ಮನೆಮನೆಗೂ ಹಬ್ಬುತ್ತದೆಂದು, ಕೊನೆಗೆ ಈ ಸುದ್ದಿ ಓಲ್ಗಾ ಹೈಸ್ಕೂಲಿಗೆ ಹೋಗಿ ಮುಟ್ಟುತ್ತದೆ. ಆ ಅವಳಿ ಜವಳಿ ಓದುವ ಹಾಗೂ ತನ್ನ ಹೆಸರಿಲ್ಲದ ಗೆಳೆಯನನ್ನು ಕರೆದುಕೊಂಡು ಹೋಗುವ ಶಾಲೆ, ಹಿಂದಿನ ದಿನದ ದಿಗ್ವಿಜಯದ ಫಲಕ.

ಹಿಂಭಾಗದಿಂದ ಕುಗ್ಗಿ ಹೋಗಿದೆಯೇನೋ ಎಂಬಂತೆ ಕಾಣುತ್ತಿದ್ದ ಕಾಡಿನಿಂದ ಬೆಳಗಿನ ಮೊದಲ ಸೂಚನೆ ಕಾಣತೊಡಗಿತು. ಅಡೆತಡೆಗಳೊಂದಿಗೆ ದಿನ ಶುರುವಾಗತೊಡಗಿತ್ತು. ಅಬ್ಬರಿಸುವ ಸಮುದ್ರ ಯಾಕೋ ದಿನಕ್ಕಿಂತ ಹೆಚ್ಚು ಮೌನವಾಗಿದ್ದಂತಿತ್ತು. ಬಿಟ್ಟು ಬಿಟ್ಟು ಮಂಕು ಹುಟ್ಟಿಸುವ ನಡುಕ ಗಿಡಮರವನ್ನು ಆವರಿಸುತ್ತಿತ್ತು. ನಿದ್ದೆಗೆಟ್ಟ ಕಣ್ಣುಗಳಿಂದ, ತೊಯ್ದ ಬಟ್ಟೆಗಳಿಂದ ಬೇಲಿಯನ್ನು ನೋಡುತ್ತ ನಿಂತರವರು. ಅರೆಬರೆ ಕತ್ತಲಿನಲ್ಲಿ ಪೊದೆಯೊಳಗೆ ಎರಡು ವಜ್ರಗಳು ಹೊಳೆದವು. ತಾಯಿಹಕ್ಕಿ, ಚಿಲಿಪಿಲಿ ಉಲಿತದ ಮರಿ. ಆದರೆ ಏಕಾಂತ, ಪುಟ್ಟ ಜೀವಿಯಾದದ್ದರ ಬಗ್ಗೆ ಹೆದರಿಕೆಯೊಂದಿಗೇ ತನ್ನೆಲ್ಲಾ ಶಕ್ತಿ ಹಾಕಿ ಹೊಗೆ ಮಂಜನ್ನು, ಇಬ್ಬನಿ ಸಮುದ್ರವನ್ನು ತನ್ನ ನಿದ್ದೆಗಣ್ಣಿನ ಯೋಚನೆಯಲ್ಲೇ ಹೊಡೆದುಹಾಕುವ ಯತ್ನದಲ್ಲಿದ್ದಂತಿತ್ತು ಮರಿಹಕ್ಕಿ. ಹಕ್ಕಿ ಬಹುತೇಕ ತನ್ನ ಯತ್ನದಲ್ಲಿ ಯಶಸ್ವಿಯಾದಂತಿತ್ತು. ತನ್ನ ಕೊಕ್ಕು ಆಚೀಚೆ ತೇಲಿಬಿಟ್ಟು, ಕಣ್ಣನ್ನು ಅತ್ತಿತ್ತ ಚಲಿಸಿ, ಮೌನದಿಂದ ವ್ಯಾಕುಲಗೊಂಡಂತಿದ್ದ ಹೊಸದಾಗಿ ಹುಟ್ಟಿದ ಭೂಮಿಯನ್ನೊಮ್ಮೆ

ನೋಡಿ ಖುಷಿ ಪಟ್ಟಿತು. ತನ್ನದೇ ಅರ್ಥದಲ್ಲಿ ಮರೆಯಾಯಿತು. ಆದರೆ ಅದರ ಸ್ಥೈರ್ಯ ಸಾಲದಾಯಿತು.....

ಇದೀಗ ಎಲ್ಲೆಡೆ ಬೆಳಕೋ ಬೆಳಕು. ತೋಟವೆಲ್ಲ ಬೆಳ್ಳ ಬೆಳಗಿತು. ಗೋಡೆ, ಗಿಡಮರ, ಹಣ್ಣು ಜೋತುಬಿದ್ದ ಟೊಂಗೆ, ಕಾಯಿ ಹಾದಿಗಳೆಲ್ಲ ಫಳ ಫಳ ಹೊಳೆದವು. ಒಂದು ಥರದ ನಿಂಬೆಬಣ್ಣದ ಬೆಳಕು ! ಕಾಡು ಸುತ್ತಾಡಿ, ಮುಖದ ಮೇಲೆ ಪ್ರೇತದ ಕಳೆ ತುಂಬಿಕೊಂಡ ಮಗುವಿನ ತಾಯಿ ತೋಟದಲ್ಲಿ ಸೋತ ಹೆಜ್ಜೆ ಹಾಕಿದಳು. ಎಲ್ಲಿಯೂ ತಡೆಯದೆ ಕಾಲಿಗೇನು ಅಂಟಿದೆ, ತುಳಿಯುತ್ತಿದೆ ಎಂಬುದನ್ನೂ ಗಮನಿಸದೇ ನೇರವಾಗಿ ಹಿತ್ತಲಿಗೆ ನಡೆದಳು. ಹೂವಿನ ಮೊಗ್ಗುಗಳು ಆಕೆಯ ಕಾಲಿಗೆ ಸಿಕ್ಕು ಅಪ್ಪಚ್ಚಿಯಾದವು ; ಆಕೆಯ ಕಾಲಿಗೆ ಕಂಪನ ಬೇಕೇನೋ ಅನ್ನುವಂತೆ. ಅಡುಗೆ ಮನೆಯನ್ನು ದಾಟಿ ನೀವು ಅಲ್ಲಿಂದ ನೋಡಬಹುದಾದ ಮಿಲಿಟರಿ ಕ್ಯಾಂಪಿನ ನೋಟ ಕಾಣುವ, ಬೇಲಿಯವರೆಗೆ ಬಂದಳು. ನೌಕಾಧಿಕಾರಿ ತೋಟ ಸುತ್ತಿ ಬರುವುದೇಕೆಂದು ಬೇಲಿ ಹಾರಿ ಒಳ ಬರುವ ಯತ್ನದಲ್ಲಿದ್ದ. ಆಕೆ ಅವನಿಗಾಗಿ ಕಾದಿದ್ದಳು; ಬೇಲಿಗೆ ಕೈಕೊಟ್ಟು ನಿಂತು. ಆಕೆ ತಾನು ಹೇಳ ಬೇಕಿರುವುದನ್ನೆಲ್ಲ ಬಾಯಿಪಾಠ ಮಾಡಿ ಹೇಳಲು ಕಾದು ನಿಂತವಳಂತೆ ಕಾಣುತ್ತಿದ್ದಳು. ಸದ್ಯದಲ್ಲೇ, ತೀರದಲ್ಲಿ ಬೀಳಲಿರುವ ಅಥವಾ ಬಿದ್ದ ಮಳೆಯ ವಾಸನೆಯನ್ನು ಗ್ರಹಿಸಬಹುದಿತ್ತು. ಇನ್ನೊಂದು ಪಕ್ಕದಲ್ಲಿ ರೈಲುಹಳಿಗಳಿಂದ ಇಡೀ ರಾತ್ರಿ ಬರುತ್ತಿದ್ದ ಸಪ್ಪಳ ಎಲ್ಲಿಂದ ಬಂತು ? ಸಮುದ್ರ ಹೊಳೆವ ಕನ್ನಡಿಯಂತೆ ಬಿದ್ದುಕೊಂಡಿತು. ಒಂದು ಮೂಲೆಯಿಂದ ಮಾತ್ರ ಅಳುವ ಅಲೆಗಳ ಸದ್ದು. ದಿಗಂತದಲ್ಲಿ ರೋಗಗ್ರಸ್ತ ಹಳದಿ. ಇದೀಗ ಅವರು ಇನ್ನಷ್ಟು, ಇನ್ನಷ್ಟು ಹೊಕ್ಕಳು ಬೆಸೆದುಕೊಳ್ಳುವವರೆಗೆ ಹತ್ತಿರಬಂದು ತಬ್ಬಿಕೊಂಡು ಹಂದಿಗಳಂತೆ ತಿಕ್ಕಾಡ ತೊಡಗಿದರು.

ನೌಕಾಧಿಕಾರಿ ದಢಬಡಿಸಿ ತೀರದ ಕಡೆಗೆ ಎದುರು ಸಿಕ್ಕ ಕಲ್ಲುಗಳನ್ನು ಎಡವುತ್ತ ರಭಸದಲ್ಲಿ ನಡೆಯತೊಡಗಿದ. ಸಪಾಟು ಕಲ್ಲೊಂದನ್ನು ಕೈಗೆತ್ತಿಕೊಂಡು ನೀರಿಗೆ ಹೊಡೆದ. ಕಲ್ಲು ನೀರಿನಲೆ ಎಬ್ಬಿಸಿ ಮಾಯವಾಯಿತು. ಆದರೆ ಒಂದು ಕ್ಷಣದ ಹಿಂದೆ ಹುಡುಕಾಟ ಮುಗಿಸಿ ಮನೆ ತಲುಪಿದಾಗ, ಬೇಲಿ ಬಳಿ ನಿಂತ ಲೋಲ್ಯಾ ಹೇಳಿದ್ದು 'ನಾವು ಸುಸ್ತಾದೆವು. ನನ್ನಿಂದಾಗೊಲ್ಲ. ದಯವಿಟ್ಟು ಅವನನ್ನು ಹುಡುಕು, ಬದುಕಿಸು. ಆ ಮಗು, ನಿನ್ನ ಮಗು !' ಆಕೆಯ ಕೈಯನ್ನು ಆತ ಒತ್ತಿ

ಹಿಡಿದಿದ್ದನ್ನು ಆಕೆ ಬಿಡಿಸಿಕೊಂಡು ಓಡಿದ್ದಳು. ತೋಟದಲ್ಲಿ ಎಷ್ಟೇ ಹುಡುಕಿದರೂ ಆಕೆ ಸಿಗಲಿಲ್ಲ. ಕೈಗೆ ಸಿಕ್ಕ ಕಲ್ಲೆತ್ತಿ ಬೀಸುತ್ತ ನಡೆದ ಆತ. ಆತನ ಹಿಂದೆ ಅವನ ಹೆಜ್ಜೆ ಗುರುತುಗಳು. ವಿಶ್ರಾಂತಿ ಬಯಸಿದ, ಸುಸ್ತಾದ,ಚೀರಾಡುತ್ತಿದ್ದ, ಆರಾಮವಾಗಿ ನಿದ್ರಿಸಬಯಸಿದ್ದ ಹೆಜ್ಜೆ ಗುರುತುಗಳು.

೩

ಇದರ ಮೇಲೆ ಹದಿನೈದು ವರ್ಷ ಕಳೆದವು. ಕತ್ತಲು ಒಳಾವರಣವನ್ನೆಲ್ಲಾ ನಿಧಾನ ಆವರಿಸಿಕೊಳ್ಳುತ್ತಿತ್ತು. ಮೂರನೆಯ ಸಲಕ್ಕೆ, ಆ ಅಪರಿಚಿತ ಹೆಣ್ಣು ರಕ್ಷಣಾಪಡೆಯ ವ್ಯಕ್ತಿಯನ್ನು, ಹಿಂದೆ ನೌಕಾಧಿಕಾರಿಯಾಗಿದ್ದ ಪೊಲಿವನೋವ್ ಬಗ್ಗೆ ವಿಚಾರಿಸುತ್ತಿದ್ದಳು. ತೀರ ಬೇಸರಗೊಂಡಂತಿದ್ದ ಸೈನಿಕ ಆಕೆಯೆದುರು ನಿಂತಿದ್ದ. ಎದುರಿಗಿದ್ದ ಕಿಟಕಿಯಿಂದ ಹೊರಗಿನ ಕಲ್ಲುಗಳಿಗೆಲ್ಲ ಹಿಮ ಮೆತ್ತಿದ್ದು ನೋಡಬಹುದಿತ್ತು. ಅದಕ್ಕೂ ಅಸ್ಪಷ್ಟವಾಗಿ ಗುರುತಿಸಬಹುದಿತ್ತು. ತುಂಬಿ ತುಳುಕುವ ಕಬ್ಬಿಣದ ಚೂರು, ಡಬ್ಬ, ಕೊಳೆ ಕಸ ಗಲೀಜಿನ ಮೇಲಿದ್ದ ಆಕಾಶ ತಲೆಕೆದರಿಕೊಂಡು ಗತಕಾಲದ ಸ್ವಾತಂತ್ರ್ಯ, ಚೈತ್ರವನ್ನು ಧ್ಯಾನಿಸುವಂತಿತ್ತು.

ಫಿರಂಗಿದಳದ ಅಬ್ಬರ, ಬಂದೂಕಿನ ಸದ್ದು, ಸಮುದ್ರ ದಂಡೆ, ರೈಲು ನಿಲ್ದಾಣದ,ಇರುಳು ಎಲ್ಲ ಎಲ್ಲ ೧೯೦೫ರ ನೆನಪುಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದ್ದವು. ಇದು ಎಂಥ ಆಕಾಶ? ಹಗಲು ಹೊತ್ತಲ್ಲೂ ನೆಲದೊಂದಿಗೆ ಬಳಸಿ ತಬ್ಬಿಕೊಂಡು ತೂಕಡಿಸುತ್ತಲೇ ಕನಸುಗಾರರನ್ನು ಸೃಷ್ಟಿಸುತ್ತದೆ.

ಇವು ಆಕಾಶದ ತಂತಿಯ ದಾರಿಗಳು : ಲೆನಿನ್, ಲೆಬ್ನೆಖ್ಟ್‌ರ ಆಲೋಚನೆಗಳನ್ನು ಭುಜಕ್ಕೆ ಕಟ್ಟಿಕೊಂಡು ಗಗನಕ್ಕೆ ಹಾರಿ, ಅಲ್ಲಿ ಸರಳರೇಖೆಯಂತೆ , ರೈಲು ಹಳಿಗಳಂತೆ ದಾರಿ ಸೃಷ್ಟಿಸುತ್ತವೆ. ಪ್ರತಿದಿನವೂ. ಎಲ್ಲ ಸರಹದ್ದುಗಳನ್ನು ದಾಟಿ ಗುರಿ ಮುಟ್ಟಬಲ್ಲ ದಾರಿಗಳು. ಈ ಥರವೇ ಯುದ್ಧ ಕಾಲದಲ್ಲಿ ಸೈನ್ಯದ ಅನುಮತಿಯಂತೆ ಕಟ್ಟಡದ ಮೇಲೆ ಸೃಷ್ಟಿಸಿದ್ದ ದಾರಿಯನ್ನು ಇನ್ನೂ ಹಾಗೆ ಉಳಿಸಿಕೊಂಡಿತ್ತು. ಸೈನ್ಯದ ತುಕಡಿಯ ಈ ಹಳೆಯ ಗಡಿರೇಖೆ ಒಪ್ಪಂದ ಮೀರಿ ನೋಡುನೋಡುತ್ತಿದ್ದಂತೆ ಮೀರಿಬೆಳೆದು ಸ್ಥೈರಣೆಯನ್ನು ಕೆಣಕಿತ್ತು. ನಗರ ಈ ರೈಲು ಹಳಿಗಳಿಂದ ಹೆದರಿ ನಡುಗುತ್ತಿತ್ತು. ಇದು ಮೂರನೆಯ ಅಂತಾರಾಷ್ಟ್ರೀಯ ಆಕಾಶ ಮಾರ್ಗ, ತಂತಿಯ ದಾರಿ.

ಪೊಲಿವನೋವ್ ಇನ್ನೂ ಮರಳಿ ಬಂದಿಲ್ಲವೆಂದು ಆ ಹೆಣ್ಣಿಗೆ ಸೈನಿಕ ಹೇಳಿದ....

ಇದ್ದಕ್ಕಿದ್ದಂತೆ ಲೆವೆಷ್ಕಾ ಒಳಬಂದು, ದಾಪುಗಾಲಿಕ್ಕುತ್ತ ಹೊರಗಾಳಿಯಿಂದ ಮಹಡಿಗೆ ಬಂದ ಆತ ಮಂಜಿನ ಹೊಗೆ ತುಂಬಿಕೊಂಡಂತಿದ್ದ. ಆತ ಹೋದ ಮೇಲೆ ಮತ್ತೆ ಮೌನ. ದಾರಿಯಲ್ಲಿ ಪೆಟ್ಟಿಗೆ ತೆಗೆದುಕೊಳ್ಳಲು ಕೈ ಹಾಕಿದವನನ್ನು ಸುತ್ತುತ್ತ ಸೈನಿಕ ಹೇಳಿದ : 'ಸೆರೆಮನೆ ಹಾಗೂ ನಿರಾಶ್ರಿತರ ವಸತಿಯಿಂದ ಬಂದವರು ಕೆಲವರಿದ್ದಾರೆ, ಇಲ್ಲಿ.'

'ಮತ್ತದೆ ಹಂಗೇರಿಯನ್ನರ ಕುರಿತು, ಅಲ್ವಾ ?'

'ಹೌದು, ಯಾಕೆ ?'

'ಆದರೆ ಅವರಿಗೆ ಆಗಲೇ ಹೇಳಿಯಾಗಿದೆ. ಬರೀ ದಾಖಲೆ ಪತ್ರಗಳಿಂದ ಕ್ರಮ ತೆಗೆದುಕೊಳ್ಳೋಕೆ ಆಗೋಲ್ಲ ಅಂತ.'

'ನಾನೂ ಅದನ್ನೇ ಅವರಿಗೆ ಹೇಳ್ದೆ. ಇದೆಲ್ಲ ಹಡಗಿನ ಮೇಲೆ ಅವಲಂಬಿತ ವಾಗುತ್ತೇಂತ !'

'ಆಮೇಲೆ ಮತ್ತೇನು ?'

'ಅಷ್ಟೇ ಮತ್ತೇನಿಲ್ಲ. ಅವರೆಲ್ಲ ದಾಖಲೆ ಬಗ್ಗೆ, ವಸತಿ ಬಗ್ಗೆ ಯೋಚಿಸ್ತಿದಾರೆ!'

'ಅದಲ್ಲಯ್ಯ ಹೇಳಿದ್ದನ್ನೇ ಹೇಳಬೇಕೆ -' ಪೊಲಿವನೋವ್ ಮಧ್ಯೆ ಮಾತು ತುಂಡರಿಸಿ ಹೇಳಿದ, 'ಅದಲ್ಲ ನಾನು ಕೇಳ್ತಿರೋದು !'

'ಕನತ್ನಾಯಾದಿಂದ ಕಾಗದವೊಂದು ಬಂತು !' ಸೈನಿಕ, ಚೇಕಾ ಸಿಕ್ಕ ಬೀದಿಯ ಹೆಸರನ್ನು ಹೇಳಿದ.

'ಏನಯ್ಯಾ, ನಿನ್ನ ಮಾತಿನ ಅರ್ಥ, ಇದು ಸಾಧ್ಯವೇ ಇಲ್ಲ ! ' ಪೊಲಿವನೋವ್ ಗೊಣಗಿಕೊಂಡ, ಮನಸ್ಸು ಎಲ್ಲೋ ನೆಟ್ಟಿತ್ತು.

ಸೈನಿಕ ಅರೆಚಣಕ್ಕೆ ಒಂದು ಕಾಲ ಹಿಂದಿಟ್ಟ, ತುಸುಹೊತ್ತು ಇಬ್ಬರ ನಡುವೆಯೂ ಮೌನ.

'ರೊಟ್ಟಿಯನ್ನು ತಂದೀದಿಯಾ ?' ಪೆಟ್ಟಿಯ ಗಾತ್ರವನ್ನು ನೋಡಿ ತಿಳಿದುಕೊಳ್ಳಬಹುದಾಗಿತ್ತಾದರೂ ಸೈನಿಕ ಸುಮ್ಮನೆ ಕೇಳಿದ. ನಂತರ ಹೇಳಿದ ಈ ಹೆಣ್ಣು ನಿಮ್ಮನ್ನು ನೋಡಬೇಕೂಂತ ತುಂಬ ಹೊತ್ತಿನಿಂದ ಕಾಯ್ತಿದಾಳೆ !

'ಓ ! ಹೌದಾ ಸರಿ !' ಪೊಲಿವ್ನೋವ್ ಅರೆಮನಸ್ಸಿನಿಂದ ಹೇಳಿದ, ಪೆಟ್ಟಿಗೆಯೊಂದಿಗೆ ನಡೆಯುತ್ತ. 'ಹೀಗೆ ಬನ್ನಿ ಸಂಗಾತಿ' ಎಂದು ಹೆಂಗಸಿಗೆ ತನ್ನ ಕಛೇರಿ ತೋರಿಸುತ್ತ ಹೇಳಿದ. ಆತ, ಆಕೆಯನ್ನು ಗುರುತು ಹಿಡಿದಿರಲಿಲ್ಲ.

ಹೊರಗಿದ್ದ ಬೆಳಕಿಗೆ ಹೋಲಿಸಿದರೆ, ಒಳಗೆ ಕತ್ತಲಿತ್ತು. ಆಕೆ ಅವನನ್ನು ಹಿಂಬಾಲಿಸಿ, ಒಳಹೋದದ್ದೇ ನಿಂತಳು. ಒಳಗೆಲ್ಲ ಹಾಸುಗಂಬಳಿ ಇದ್ದಂತಿತ್ತು. ಇದೊಂದು ಕಗ್ಗಾಡು. ಜನ ಇಲ್ಲಿಗೆ ತಂದಿರುವ ಬೆಳಕಿನ ವೈರ್ ಹಾದು ಬಂದ ನಗರ ಕತ್ತಲೆಯಲ್ಲಿ ಕೂತಿದೆ ಎಂಬುದನ್ನು ಮರೆತಿರಲಿಲ್ಲ. ಬೊಲ್ಷೆವಿಕ್‌ರ ರಾಜ್ಯದಲ್ಲಿ ಆಗುತ್ತಿರುವುದು ಬರೀ ಇಂಥದೇ.

ಅತ್ಯಂತ ಖತಿಗೊಂಡ, ಬಸವಳಿದ ಉರಿಮೊಗದ ಕಣ್ಣನ್ನು ತನ್ನ ಕೈಗಳತ್ತ ನೆಟ್ಟ ಆ ಮನುಷ್ಯ ಉತ್ತರಿಸಿದ -'ಹೌದು, ಹೌದು ! ನನಗೆ ಗೊತ್ತು. ಹುರುಳಿಲ್ಲದ ಮಾತು, ಗಡಿರೇಖೆ ಹುಡುಕೋದು. ಕೇಂದ್ರ ಕಛೇರಿಯೊಂದಿಗೆ ಸಂಪರ್ಕಿಸಿದೆ. ಅರ್ಧ ಗಂಟೆ ಹಿಂದಷ್ಟೇ. ನಾನಿಲ್ಲಿ ಇರ್ತೀನೆ, ಏನೂಂತ ನಿನಗೆ ಹೇಳ್ತೀನೆ, ಅಷ್ಟೇ ತಾನೆ ? ಇದೊಂದು ಹುರುಳಿಲ್ಲದ ಲೊಡ ಲೊಡ ......'

'ಹೌದು ಸಂಗಾತಿ', ಒಂದು ಕೈಯಲ್ಲಿ ಪೆಟ್ಟಿಗೆ ಇನ್ನೊಂದು ಕೈಯಲ್ಲಿ ಬೆಳಗಿನ ಪಂಜು ಹಿಡಿವ ಭೇಟಿಯಾಗಲು ಬಂದವರತ್ತ ತಿರುಗುವುದಕ್ಕೆ ಆಕೆಯ ದನಿಯಿಂದ ತುಂಡು ತುಂಡು ನಿಶ್ಶಕ್ತ ಮಾತು ಹೊರಡುವುದಕ್ಕೆ ಜತೆಯಾಯಿತು.

'ಲೋಲ್ಯಾ ?' ಪೊಲಿನ್‌ನೆವ್ ಗೊಣಗಿದ, 'ಇಲ್ಲ ಇರಲಿಕ್ಕಿಲ್ಲ', 'ಕ್ಷಮಿಸಿ ನನ್ನನ್ನು.'

'ಹೌದು, ಹೌದು. ದೇವರಾಣೆ ಹೌದು. ನನ್ನನ್ನು ಸ್ವಲ್ಪ ಸುಧಾರಿಸಿಕೊಳ್ಳೋದಕ್ಕೆ ಬಿಡು' - ಎಂದದ್ದೇ ಕೊನೆಯಿಲ್ಲದಂತೆ ಆಕೆ ಬಿಕ್ಕತೊಡಗಿದಳು.

ದಿಢೀರನೆ ಎಲ್ಲ ಕರಗಿತು. ಕಂದೀಲಿನ ಬೆಳಕಿನಲ್ಲಿ ಇಬ್ಬರು ಎದುರು ಬದುರಾದರು : ನಿದ್ದೆಗೆಟ್ಟ ಕಣ್ಣಿನ, ಅಂಗಿಯ ಗುಂಡಿಯನ್ನೂ ಹಾಕಿಕೊಂಡಿರದ

ಅವನು; ರೈಲು ನಿಲ್ದಾಣದಿಂದ ನೇರ ಇಲ್ಲಿಗೇ ಬಂದ, ಎಣ್ಣೆ ನೀರು ಕಾಣದ ತಲೆಯ ಅವಳು. ಯೌವ್ವನ-ಸಮುದ್ರ ಎರಡನ್ನೂ ಮರೆತು ಎಷ್ಟೋ ಕಾಲವಾದಂತಿತ್ತು. ಮಂದ ಬೆಳಕಲ್ಲಿ ಆಕೆ ತನ್ನ ಪ್ರಯಾಣ, ದಿಮಿತ್ರಿ ಹಾಗೂ ಅವಳ ಮಗಳ ಸಾವು ಎಲ್ಲವನ್ನೂ ಒಂದೆರಡು ಶಬ್ದಗಳಲ್ಲಿ ಹೇಳಿದಳು. ಅವನಿಗೆ ಇದ್ಯಾವುದರ ಪರಿಚಯವೂ ಇಲ್ಲದೇ ತುಂಬು ದುಃಖದಿಂದ ನರಳಿದ. ಮೌನವಲ್ಲದೆ ಮತ್ಯಾವ ಮಾತು ಅವನ ಬಳಿಯಿರಲಿಲ್ಲ. ದೀಪ ಸತ್ಯ ಸಹಿಸದೆ ಆಗೀಗ ಕುಗ್ಗಿ ಕುಗ್ಗಿ ಉರಿಯುತ್ತಿತ್ತು. ಮಂದ ಬೆಳಕಿನಲ್ಲಿ, ಹಿಂದೊಮ್ಮೆ ಭೇಟಿಯಾದಾಗ ತಾನೇಕೆ ಅವಳನ್ನು ಮುತ್ತಿಟ್ಟಿರಲಿಲ್ಲವೆಂಬುದನ್ನು ಅವನು ನೆನಪಿಸಿಕೊಂಡ. ತಾನು ಅಂಥ ಬದಲಿಸದ ಪೂರ್ವಾಗ್ರಹಕ್ಕೆ ಅಂಟಿಕೊಂಡಿದ್ದರ ಬಗ್ಗೆ ಅವನಿಗೇ ಆಶ್ಚರ್ಯವಾಯ್ತು. ಮಂದ ಕಂದೀಲಿನ ಬೆಳಕಿನ ಕೋಣೆಯಲ್ಲಿ ಅವಳ ಆಶಯ-ಬಯಕೆಗಳು ಹರಡಿಕೊಂಡವು. ಈ ವ್ಯಕ್ತಿ ಅವಳಿಗೆ ಎಷ್ಟೊಂದು ಅಪರಿಚಿತನೆನ್ನಿಸಿದನೆಂದರೆ ತನ್ನ ಭಾವನೆಗಳನ್ನು ಬದಲಿಸಿಕೊಳ್ಳಲು ಸಾಧ್ಯವೇ ಇಲ್ಲವೆನ್ನಿಸಿತು. ಆದರೂ ತನ್ನ ಹಿಂದಿನ ದೃಢ ಸಂಕಲ್ಪದ ಧಾಟಿಯಲ್ಲಿ ಹೇಳಬೇಕೆನ್ನುವುದನ್ನು ಹೇಳಲೇಬೇಕೆಂಬಂತೆ, ತನ್ನ ಹೃದಯದ ಮಾತುಗಳನ್ನಾಡಿದಳು.

'ನಿನ್ನ ಮಗುವಿನ ಬಗ್ಗೆ ನಿನಗೆ ಅಕ್ಕರೆಯಿದ್ದರೆ '- ಆಕೆ ಹೇಳತೊಡಗಿದಳು.

'ಮತ್ತದೇ!' ಪೊಲಿವನೊವ್ ರೊಚ್ಚಿಗೆದ್ದು ಮಾತನಾಡತೊಡಗಿದ. ತುಸುವೂ ಬಿಡುವಿಲ್ಲದಂತೆ. ಬರೀ 'ಹೀಗಾಗಿ' ಮತ್ತು ಅಲ್ಪ ವಿರಾಮ ತುಂಬಿರುವ ಲೇಖನವೊಂದು ಬರೆಯುವಂತೆ ಆತ ಕೋಣೆಯಲ್ಲಿ ಅತ್ತಿತ್ತ ಓಡಾಡುತ್ತ, ನಿಲ್ಲುತ್ತ, ಕೈಗಳನ್ನು ಬೀಸುತ್ತ ಮಾತಲ್ಲಿ ತೊಡಗಿದ್ದ. ಜನರನ್ನು ನಿನಗೆ ಬೇಕಾದಂತೆ ಬದಲಿಸುವುದನ್ನು ನಿಲ್ಲಿಸು ಎಂದು ಆಕೆಯನ್ನು ಕೇಳಿಕೊಂಡ. ಮತ್ತೊಮ್ಮೆ ಇಂಥ ಬಾಲಿಶ ವಿಚಾರ ತರಬೇಡ. ಅದೂ ನನ್ನನ್ನು ಮೋಸಗೊಳಿಸಲು ನೋಡಿದ್ದೆ ಎಂದು ನೀನೇ ಹೇಳಿದ ಮೇಲೆ, ಎಂದು ಆಕೆಯನ್ನು ಬೇಡಿಕೊಂಡ. ಒಂದು ವೇಳೆ ಕಟ್ಟುಕಥೆಯೆಲ್ಲಾ ನಿಜವಾಗಿದ್ದರೂ ಫಲಿತಾಂಶ ಮಾತ್ರ ಸೊನ್ನೆನೆ ಎಂದು ಹೇಳಿದ. ಇನ್ನೊಮ್ಮೆ ಕಾಲದ ರಾಟೆ ತಿರುಗಿ, ಮತ್ತೊಮ್ಮೆ ನಾನೇನಾದರೂ ಕಳೆದುಹೋದ, ನಿನ್ನ ಮನೆಯ ಮಗುವನ್ನು ಹುಡುಕಲು ಯತ್ನಿಸಿದರೂ ಅದು ನಿನಗಾಗಿ ಮಾತ್ರ. ನನಗಾಗಿಯಾಗಲಿ ಅಥವಾ ಇನ್ಯಾರಿಗೆ ಆಗಲಿ, ಅಥವಾ ನಿನ್ನ ಈ ಕಟ್ಟುಕಥೆ ನಂಬಿಕೊಂಡು ಅಲ್ಲ.... ಅವಳನ್ನು ಅಣಕಿಸುವ ಧಾಟಿಯಲ್ಲಿ ಅವನು ಹೇಳಿದ್ದ.

ಆತ ಮಾತಾಡಿದ್ದೆಲ್ಲ ಮುಗಿಯಿತು. ಅವನ ಎದೆ ಖಾಲಿಯಾಯಿತು ಅನ್ನಿಸಿದಾಗ ಆಕೆ ಕೇಳಿದಳು - 'ನೀನು ಹೇಳೋದೆಲ್ಲ ಮುಗಿತ ?' ಅಂದು ಹೇಳಿದಳು- ನಾನು ಹೇಳಿದ್ದೆಲ್ಲ ಕಟ್ಟುಕಥೆ. ಅದು ನೀನು ಆಗಿರೋಕ್ಕೆ ಹೇಗೆ ಸಾಧ್ಯ? ನಾನೊಬ್ಬಳು ಸುಳ್ಳಿ. ನಾನು ಸಂತೋಷದ ತುಟ್ಟ ತುದಿಯಲ್ಲಿದ್ದಾಗ ಮಗು ಹುಟ್ಟಿತು. ತುಂಬ ಅದ್ಭುತವಾಗಿದೆಯಲ್ವಾ ? ನಿನಗೆ ನೆನಪಿದೆಯಾ ? ನನ್ನ ಬದುಕನ್ನು, ದಿಮಿತ್ರಿ ಬದುಕನ್ನು ನಾಶಪಡಿಸಿಕೊಳ್ಳೋದಕ್ಕೆ ಇಷ್ಟವಿರಲಿಲ್ಲ, ಹೀಗಾಗಿ ಬದುಕಿಗೆ ಹೊಂದಿಕೊಂಡೆ. ಲೋಲ್ಯಾ, ದೇವರಾಣೆ ಅವ ನಿನ್ನ ಮಗನೇ. ಅವನ ಬದುಕೀಗ ಭಾರಿ ಅಪಾಯದಲ್ಲಿದೇಂತ ನಿನಗೆ ತಿಳಿಸೋದು ಹೇಗೆ ? ಹೇಗೆ ಶುರುಮಾಡಲಿ ? ಅವತ್ತಿನಿಂದ ಒಬ್ಬರನ್ನೊಬ್ಬರು ನಾವು ನೋಡೇ ಇಲ್ಲ. ಅವನ ಬಗ್ಗೆ ನಿನಗೆ ಗೊತ್ತಿಲ್ಲ. ಆತ ತುಂಬ ನಂಬಿಕೆಯವ. ಅದೇ ಅವನನ್ನು ಬಲಿ ತೊಗೊಳುತ್ತೆ. ಅವನ ಸಹಪಾಠಿಯೊಬ್ಬನಿದ್ದಾನೆ, ಭಾರೀ ಹಲ್ಕಟ್ ನೀಚ ಅವಾ. ದೇವರೇ ಅವನನ್ನು ಕಾಪಾಡಬೇಕು. ನೆಪೋಷೆವ್ ಅವನ ಹೆಸರು, ತೋಷಾಂಕಾನ ಸಹಪಾಠಿ ಅವ, ಸೈನಿಕ ಶಾಲೇಲಿ...

ಮಾತು ಕೇಳಿಸಿಕೊಳ್ಳುತ್ತ ಖೋಲಿಯಲ್ಲಿ ಸುತ್ತಾಡುತ್ತಿದ್ದ ಪೊಲಿವೆನೊವ್ ಒಂದೆಡೆ ನಿಂತು ಅವಳ ಕೊನೆ ಮಾತುಗಳನ್ನು ಕೇಳಿಸಿಕೊಂಡ. ಕೆಲವು ದಿನಗಳ ಹಿಂದೆ ಸೈನಿಕರು ಉಸುರಿದ ಹೆಸರನ್ನಾಕೆ ಹೇಳುತ್ತಿದ್ದಳು. ಆ ಹುಡುಗನ ವರ್ತನೆ ಹದ್ದು ಮೀರಿದ್ದು.

'ಆತನಿಗೆ ಬೇರೆ ಹೆಸರೇನಾದರೂ ಇದೆಯಾ ?'

ಈ ಪ್ರಶ್ನೆ ಕೇಳಿದ್ದೇ ಆಕೆ ಬಿಳುಚಿಕೊಂಡಳು. ಈಕೆ ಹೇಳಿದ್ದಕ್ಕಿಂತ ಆತನಿಗೆ ಇದರ ಬಗ್ಗೆ ಹೆಚ್ಚು ಗೊತ್ತಿರಬೇಕೆಂದು ಅನ್ನಿಸಿತು. ಈಕೆ ಹೇಳಿದ್ದಕ್ಕಿಂತ ಪರಿಸ್ಥಿತಿ ಕೆಟ್ಟದಾಗಿತ್ತು. ಆಕೆ ಯಾರ ಕ್ಯಾಂಪಿನಲ್ಲಿದ್ದೇನೆಂಬುದನ್ನು ಮರೆತು ಬಿಟ್ಟಿದ್ದಳು. ಸುಳ್ಳು ಹೆಸರನ್ನು ಬಳಸಿದ್ದವಳು, ಇದೀಗ ತನ್ನ ಮಗುವನ್ನು ತೀರಾ ಬಾಲಿಶ ರೀತಿಯಲ್ಲಿ ವಹಿಸಿಕೊಂಡು ಮಾತನಾಡತೊಡಗಿದಳು.

'ಆದರೆ ಲೊಲ್ಯಾ, ಆತನನ್ನು ಬಹಿರಂಗವಾಗಿ ಸಮರ್ಥಿಸಲಾಗೊಲ್ಲ !'

ಆತ ಅವಳ ಮಾತಿಗೆ ಕಿವಿಗೊಟ್ಟ. ಹಾಗಾದರೆ ಆಕೆಯ ಮಗ ನಮ್ಮಲ್ಲಿರೋ

ದಾಖಲೆ ಪ್ರಕಾರ ಬೇರೆ ಬೇರೆ ಹೆಸರುಗಳಿರೋನು. ಟೇಬಲ್ಲಿನ ಬಳಿ ಹೋದವನೆ ಒಂದೆರಡು ಫೋನು ಮಾಡಿ, ಇನ್ನಷ್ಟು ಮಾಹಿತಿ ಕಲೆ ಹಾಕಿದ. ಪ್ರತಿ ವಿವರದಿಂದಲೂ ಆತ ನಗರ, ಇರುಳಾಚೆ ನಡೆದು ಕೊನೆಗೆ ಸತ್ಯ ಕಣ್ಮುಂದೆ ಬಂದಾಗ ಪ್ರಪಾತದಲ್ಲಿದ್ದ.

ಆತ ಸುತ್ತೂರು ನೋಡಿದ. ಲೋಲ್ಯಾ ಕೋಣೆಯಲ್ಲಿರಲಿಲ್ಲ. ಆತನ ಕಣ್ಣುಗಳು ಒತ್ತೊತ್ತಿ ಬಂದು ವಿಚಿತ್ರವಾಗಿ ನೋಯತೊಡಗಿದವು. ಸಣ್ಣಸಣ್ಣ ಕಣ-ಧೂಳು. ಅವನ ಕಣ್ಣೆದುರು ಸಮುದ್ರದಲೆಯಂತೆ ಸೇರಿದ್ದವು. ಮೂಗನ್ನು ತುರಿಸಬೇಕೆಂದವನ ಕೈಗಳು ಕಣ್ಣಿನ ಬಳಿ ಹೋದವು. ಕಣ್ಣುಜ್ಜಿದ. ಧೂಳು ಕಣ್ಣು ಸೇರಿದವು. ವೇದನೆ - ಸಂಕಟ ಇಷ್ಟು ಪದೇ ಪದೇ ಬರಬಾರದಿತ್ತು, ಮೂಕ ನೋವು. ನಂತರ ಆಕೆ ನಿಧಾನಕ್ಕೆ ಕಣ್ಣಿಗೆ ಬಿದ್ದಳು : ಮುರಿದು ಹೋಗದ ಗೊಂಬೆಯಂತೆ ಅವಳು ಟೇಬಲ್ - ಕುರ್ಚಿಯ, ಕಸದ ನಡುವೆ ಕಟ್ಟಿಗೆ ಹೊಟ್ಟಿನ ಮೇಲೆ ಬಿದ್ದಿದ್ದಳು. ಎಚ್ಚರವಿದ್ದಾಗ ಅದನ್ನು ನೆಲಕ್ಕೆ ಹಾಸುವ ಕಂಬಳಿ ಎಂದು ಆಕೆ ತಿಳಿದುಕೊಂಡಿದ್ದಳು.

★

೧೯೭೪

(Aerial Tracks)

ಚಿರಂತನ

ಜನ ಹೇಳುತ್ತಾರೆ : ಅಪೆಲೆಸ್, ಆತನ ವಿರೋಧಿ ಜ್ಯೂಸ್ ಮನೆಯಲ್ಲಿ ಇಲ್ಲದಿರುವಾಗ ಆತನ ಮನೆ ಗೋಡೆಯ ಮೇಲೆ ಗೆರೆಯೊಂದನ್ನು ಎಳೆದುಬಂದ. ಗೆರೆ ನೋಡಿಯೇ ತನ್ನ ಮನೆಗೆ ಬಂದಿದ್ದಾರೆಂದು ಗೊತ್ತಾಗಬೇಕೆಂಬುದು ಅವನ ಉದ್ದೇಶ. ಜ್ಯೂಸ್ ಕೂಡಾ ಸಾಮಾನ್ಯನಲ್ಲ. ತನ್ನ ಸಮಕಾಲೀನ ಕಲಾವಿದ ಇಲ್ಲದಿರುವಾಗ ಗೋಡೆ ಮೇಲೆ ತಾನೂ ಚಿಹ್ನೆಯೊಂದನ್ನು ಗೀಚಿ ಬಂದ. ಮುಂದೆ ಆ ಚಿಹ್ನೆಯೇ ಕಲೆಯಾಗಿ, ದಂತಕಥೆಯಾಯಿತು.

೧

ಸೆಪ್ಟೆಂಬರ್‌ನ ಒಂದು ಸಂಜೆ : ವಾಲುವ ಪೀಸಾ ಗೋಪುರದ ಎದುರು ಬಾಗಿದ ನೆರಳು, ವಾರೆನೋಟದ ಬಣ್ಣದ ಪಡೆ. ಬೆರಳ ನಡುವೆ ಸಿಕ್ಕ ಸುಟ್ಟ ಎಲೆಯ ವಾಸನೆಯಂಥ ಇರುಳ ಗಾಳಿಯಿಂದ ಟಸ್ಕನಿ ಕಿರಿಕಿರಿಗೊಳಗಾಗಿತ್ತು. ಇಂಥದ್ದೇ ಒಂದು ಸಂಜೆ, ಆ ದಿನ ಆಗಸ್ಟ್ ೨೩ ಎಂಬ ದಿನಾಂಕವೂ ನನಗೆ ನೆನಪಿದೆ. ಆ ಸಂಜೆ: ಎಮಿಲೋ ರಲೆನ್ನಿ ಹೊಟೇಲಿನಲ್ಲಿ ಹೈನೆಯನ್ನು ಕಾಣದೆ, ಅತಿವಿನಯದ ನಮ್ರ ಸೇವಕನಾದ ಲ್ಯಾಕಿಗೆ ಕಾಗದವನ್ನು, ಮೇಣದಬತ್ತಿಯನ್ನು ತರಲು ಹೇಳಿದ. ಲ್ಯಾಕಿ ಕೇಳಿದ್ದನ್ನು ತಂದು ಕೊಟ್ಟ ಮೇಲೆ, ಮಸಿ ದವುತಿ ಒಂದು ಸಿಕ್ಕಿ, ಪೆನ್ನು ಕೇಳಿದ. ಅದೂ ಸಿಕ್ಕ ಮೇಲೆ ಲ್ಯಾಕಿಯತ್ತ ನಿರ್ಲಕ್ಷ ನೋಟ ಬೀರಿ ; ಟೈಗೆ ಸಿಕ್ಕಿಸಿದ್ದ ಗುಂಡುಸೂಜಿ ತೆಗೆದು ಮೇಣದಬತ್ತಿಗೆ ಹಿಡಿದು ಕಾಯುವವರೆಗೆ ಕಾದು, ಬೆರಳಿಗೆ ಚುಚ್ಚಿಕೊಂಡ. ಬೆರಳಿನ ರಕ್ತ ಹನಿಯಲು ಬೆರಳನ್ನು ಕಾಗದಕ್ಕೆ ಬಗ್ಗಿಸಿದ. ನಂತರ ಶಾಂತವಾಗಿ ಲ್ಯಾಕಿಗೆ ಹೇಳಿದ: 'ಹರ್ ಹೈನೆಗೆ ಈ ಗುರುತಿನ ಚೀಟಿ ಕೊಡು, ನಾಳೆ ಸಂಜೆ ಇದೇ ಸಮಯಕ್ಕೆ ಅವನನ್ನು ನೋಡಬೇಕು !'

ಮಧ್ಯಯುಗದ ಕೊಂಡಿ, ಈ ಕೋಟೆ, ವಾಲುವ ಪೀಸಾ, ವಾಲುತ್ತಲೇ ಇತ್ತು.

ಸೇತುವೆಯ ಮೇಲೆ ನಿಂತು ಗೋಪುರ ನೋಡುವವರ ಸಂಖ್ಯೆ ಚಣಚಣಕ್ಕೂ ಹೆಚ್ಚುತ್ತಿತ್ತು. ಕೆಂಪು ಮೋಡದ ದಂಡು ವೃತ್ತದತ್ತ ದೌಡುತ್ತಿದ್ದವು. ಬೀದಿಗಳು ನೆರಳಿನಿಂದ ತುಂಬಿದವು. ಒಂದಿಷ್ಟು ಮೋಡ ಇಕ್ಕಟ್ಟಾದ ಓಣಿಗೆ ಡಿಕ್ಕಿ ಹೊಡೆದವು. ಗೋಪುರ ತನ್ನ ಕವಾಯಿತು ನಡೆಸಿಯೇ ಇತ್ತು; ಬಾಗುತ್ತ, ಬಾಗುತ್ತ. ಕೊನೆಗೊಮ್ಮೆ ದೈತ್ಯ ಮೋಡ ಸೂರ್ಯನನ್ನು ಮುತ್ತಿಕೊಂಡಿತು. ಸೂರ್ಯ ಮುಚ್ಚಿಹೋಗುವ ಕೆಲವು ಗಳಿಗೆ ಮೊದಲು ಲ್ಯಾಕಿ, ಮುಖ ಕಪ್ಪುಮಾಡಿಕೊಂಡು, ಕಂಗಾಲಾಗಿ, ತೊದಲುತ್ತ, ಹೈನೆಗೆ, ಆ ವ್ಯಕ್ತಿಯ ಇತ್ತೀಚಿನ ಭೇಟಿ ಬಗ್ಗೆ ಹೇಳಿದ.

'ಆಹಾ ! ಎಂಥಾ ಗುಣ !' ಎಂದ ಹೈನೆ, ತಕ್ಷಣ ಬಂದ ಅತಿಥಿಯ ಹೆಸರನ್ನು ಗುಉತಿಸಿದ : 'ಒಂದು ಹಾಡು' ಎಂಬ ಪ್ರಸಿದ್ಧ ಪದ್ಯ ಬರೆದ ಕವಿ ! ರೆಲೆನ್ಸ್ಕಿವ ಫೆರಾದಿಂದ ಪೀಸಾಕ್ಕೆ ಬಂದಿದ್ದು, ಹೈನೆ ಕೂಡಾ ಅದೇ ದಿನ ವೆಸ್ಟ್ ಫೆಲಿಯಾದಿಂದ ಪೀಸಾಕ್ಕೆ ಬಂದದ್ದು ಕೇವಲ ಯೋಗಾಯೋಗವಷ್ಟೇ. ಚಂಚಲ ಮನಸ್ಸಿನ ಕವಿಯೊಬ್ಬ ರಜಾದಿನಗಳಲ್ಲಿ ತಿರುಗಾಟಕ್ಕೆ ಬಂದಂತೆ ಹೈನೆ ಬಂದಿದ್ದ. ಆತನಿಗೆ ಈ ಆಕಸ್ಮಿಕವೇನೂ ಸೋಜಿಗವೆನ್ನಿಸಲಿಲ್ಲ. ಕೆಲವು ದಿನದ ಹಿಂದಷ್ಟೇ ಇದೇ ಅಪರಿಚಿತ, ಹೆರ್ ಹೈನೆಗೆ ಅಡ್ಡಾದಿಡ್ಡಿಯಾಗಿ - ನಿರ್ಲಕ್ಷ್ಯದಿಂದ, ಅವಸರದಲ್ಲಿ ಕಾಗದವೊಂದನ್ನು ಬರೆದಿದ್ದ. ಅಪರಿಚಿತನ ಸಿದ್ಧಾಂತ ಗಡಿದಾಟಿ ಬಂದಿತ್ತು. ಕಾಗದದಲ್ಲಿ ಅಸ್ಪಷ್ಟವಾಗಿ ಕಾವ್ಯಕ್ಕೆ ರಕ್ತದ ಕರೆ ನೀಡಿದ್ದ. ಅಪರಿಚಿತ ಹೈನೆಯಿಂದ ಅಪೆಲೆಸ್‌ನಂತೆ 'ಶಾಶ್ವತ ಚಿಹ್ನೆ' ಬಯಸಿದ್ದ. ಆತ ಬರೆದಿದ್ದ - 'ಪ್ರೀತಿಯ ಮೋಡ ರಕ್ತದಿಂದ ತುಂಬಿ, ನಮ್ಮ ಮೇಲೆ ಹಾರಾಡುತ್ತಿರುವ ಈಗಿನ ಖಾಲಿಮೋಡದ ಮೇಲೆ ಹಾರಾಡುತ್ತಿದೆ..... ನೀನು ಅದರ ಬಗ್ಗೆ ಎಷ್ಟೊಂದು ಸೂಕ್ಷ್ಮವಾಗಿ -ಸೂಚ್ಯವಾಗಿ ಹೇಳಬೇಕೆಂದರೆ ಅದು ಅಪೆಲೆಸ್‌ನ ಸಹಿಯಂತಿರಬೇಕು. ನೀನು ಕೇವಲ ಉನ್ನತ ಚೇತನಕ್ಕೆ - ನೆತ್ತರಿನ ಕರೆಗೆ ಸೇರಿದವನೆಂಬುದು ನೆನಪಿಡು (ಹಾಗೆ ನೋಡಿದರೆ ಇವೆರಡೂ ಬೇರೆಬೇರೆಯಲ್ಲ) ಜ್ಯೂಸ್‌ನಿಗೆ ಸಹ ಆಸಕ್ತಿ ಇದ್ದದ್ದು ಕೇವಲ ಇದರ ಬಗ್ಗೆ ಮಾತ್ರ.'

ಮರೆತದ್ದು : ನೀನು ಪೀಸಾಕ್ಕೆ ಬಂದದ್ದು ನನಗೆ ಲಾಭವೇ ಆಯಿತು. ನಾನಾಗಲೇ ನನ್ನ ಪ್ರಕಾಶಕ ಕೊಂಟಗೆ ಹೇಳಿದ್ದೇನೆ, ನನ್ನ ಪ್ರಜ್ಞೆಯ ತಳಮಳ, ತಲೆಭಾರಕ್ಕೊಂದು ಮುಕ್ತಿ ತೋರಿಸೆಂದು. ನಾನು ಇನ್ನು ಮೂರು ದಿನಗಳಲ್ಲಿ ನಿನ್ನಲ್ಲಿಗೆ ಬರುವೆ - ಅಪೆಲೆಸ್‌ನ 'ಗುರುತ'ನ್ನು ನೋಡಲು.

ಹೈಸೆಯ ಅಪ್ಪಣೆಯಂತೆ ಪ್ರತ್ಯಕ್ಷನಾದ ಸೇವಕ ಈ ಸುದ್ದಿಯನ್ನು ಪಡೆದ : 'ನಾನು ಹತ್ತು ಗಂಟೆಗೆ ಫೆರೆರಾ ರೈಲು ನಿಲ್ದಾಣ ಬಿಡುತ್ತಿರುವೆ. ನೀನಾಗಲೇ ಬಲ್ಲ, ಈ ಪತ್ರ ತಂದವ, ನನ್ನನ್ನು ಭೇಟಿಯಾಗುವಂತೆ ನಿನಗೆ ತಿಳಿಸುತ್ತಾನೆ. ಈ ಪೊಟ್ಟಣವನ್ನು ನೀನು ಅವನಿಗೇ ಕೊಟ್ಟು ಬಿಡು. ಹೊರಲು ಕೂಲಿಯನ್ನು ಕರೆ. ಜತೆಗೆ, ಅದರ ಬಿಲ್ ಅನ್ನು ನನಗೆ ಕಳಿಸು.'

ಅತಿ ಭಾರದ ಕಂತೆ ಹೊರನೋಟಕ್ಕೆ ಪೊಳ್ಳಾಗಿ ಕಾಣಿಸುತ್ತಿತ್ತು. ಕಾಗದದ ಕಂತೆ. ಹಸ್ತಪ್ರತಿ ಎಂಬುದು ಎದ್ದು ಕಾಣುತ್ತಿತ್ತು. ಕಾಗದದಲ್ಲಿ ಕೊನೆ-ಮೊದಲಿಲ್ಲದ ಅಸಂಬದ್ಧ ತುಣುಕು

''ಹೀಗಾಗಿ ಅವರು ಮೊದಲಿದ್ದ ಹೆಸರು
ಕಿತ್ತು ಬಿಸಾಕಿ, ಹೊಚ್ಚ ಹೊಸ, ಅಭೂತಪೂರ್ವ
ಹೆಸರು ಇಟ್ಟುಕೊಂಡರು.

ಆತ ಉದ್ವೇಗದಿಂದ ಕಿರುಚಿದ 'ರೆನ್ಡೋಲ್ಫಿನಾ !'
ಆಕೆ ನಡುಗುತ್ತ ನುಡಿದಳು 'ಎನ್ರಿಕೋ !' ''

೨

ಹಾಸು ಗಲ್ಲಿನ ಬೀದಿ, ತಗಡು ಹೊದಿಕೆಯ ಮಾರುಕಟ್ಟೆ, ಪೀಸಾದ ಉಪ್ಪರಿಗೆ, ಆರ್ನೋ ನದಿ ದಂಡೆಯ ಮೇಲಿನ ಒಕ್ಕಲು ಟಸ್ಕನಿ ಇರುಳಿನ ವಾಸನೆ ಹೀರಿದವು. ಉರಿವ ಇರುಳನ್ನು ಬಿಟ್ಟಂತೆ, ಈ ಪರಿಮಳ ಇಕ್ಕಟ್ಟುಗಲ್ಲಿ, ಧೂಳು ತುಂಬಿದ ಎತ್ತರದ ಮರ, ಮಸುಕು, ಮಸುಕು ಆಕಾಶದಲ್ಲಿ ಚೆಲ್ಲಿದ ಚುಕ್ಕೆಗಳನ್ನೆಲ್ಲ ವ್ಯಾಪಿಸಿತು. ಈ ಬೆಳಕಿನ ಹೊಳಪು ಇಟಲಿ ರೋಗಿಗಳು ಮಸಾಲೆ ವಾಸನೆ ತಟ್ಟುವ ಮೊದಲೇ ಹಿಡಿಶಾಪ ಹಾಕಿ ಉರಿ ಹಾಕುವ ಅವರ ಬೋಗುಣಿಯ ಮೇಲೆ ಚಿಮ್ಮಿತು. ಒದ್ದೆ ಕರವಸ್ತ್ರಗಳು ಶಾಖಮಾಪಕಗಳಾದವು. ಕಮಾನಿನಂತೆ ಬಾಗಿದ ಮಾಪಕಗಳು ಬೀದಿಬೀದಿ ಹರಡಿ, ಗಾಳಿಸುದ್ದಿಯನ್ನು ಕೆಂಡಾಮಂಡಲ ಕಮಾನಿನಂತೆ ಬಾಗಿದ ಮಾಪಕಗಳು ಬೀದಿ ಬೀದಿ ಜ್ವರವನ್ನು ಓಡಿಸುವಂತೆ ಶಾಖವನ್ನು ಹಬೆಯನ್ನು ಚೆಲ್ಲಾಪಿಲ್ಲಿ ಮಾಡಿದವು. ಯಾವ ಶರತ್ತೂಯಿಲ್ಲದೆ ಕುಗ್ಗಿದ ದನಿಯಂತೆ ; ಕಿಸಕಿಸ ನಗುವಂತೆ, ಹಿತ್ತಲು-ಮನೆಮಾರು, ನೆತ್ತರಿನ ತಟಸ್ಥ ನಗರವನ್ನು ಬಾಚಿಕೊಂಡವು. ಆ ವಿಚಿತ್ರ ಧ್ವನಿ - ನಡುನಡುವೆ ಹಣಕುವ, ಧೂಳುತುಂಬಿ

ಕುಗ್ಗಿದೆಡೆಯಿನ್ನೂ ಪ್ರತಿಧ್ವನಿಸುತ್ತಿತ್ತು. ಬೀದಿಗುಂಟ ಬೆಳೆದ ಸಾಲು ಸಾಲು ಮರದಂತೆ ಸರತಿಯಲ್ಲಿ ನಿಂತಿದ್ದವು - ಆ ಧ್ವನಿಯ ಅನುರಣನ. ಪೀಸಾದ ಈ ಇರುಳು ಮನುಷ್ಯನ ಎಲ್ಲ ಅನುಭವಗಳ ಮಿತಿಯನ್ನು ಎತ್ತಿ ಸಾರುವಂತೆ ಮೀರಿ ಬೆಳೆದಿತ್ತು. ಈ ಎಲ್ಲ ಗಡಿಗಳಾಚೆ ಎಲ್ಲ ಅಸ್ತವ್ಯಸ್ತ. ಅಂಥ ಅಸ್ತವ್ಯಸ್ತತೆ, ಗುಲ್ಲು, ಹುಯಿಲು ರೇಲ್ವೆ ನಿಲ್ದಾಣದಲ್ಲಿ. ಇಲ್ಲಿ ಹಿಡಿಶಾಪ, ಕರವಸ್ತ್ರಗಳು ದೃಶ್ಯದಿಂದ ಪಲಾಯನ ಹೇಳಿದ್ದವು.

ಒಂದು ನಿಮಿಷದ ಹಿಂದಿನ ಸರಳ - ಸಹಜವಾದ ಚಟುವಟಿಕೆ ಜನರಿಗೆ ಇದೀಗ ಕಿರಿಕಿರಿಯಾಗಿರಬಹುದು. ಇಲ್ಲಿ, ಜನ, ತಮ್ಮ ಸರಕು, ಚೀಲ ಹಿಡಿದು ಹುಚ್ಚರಂತೆ ಟಿಕೀಟು ಕೊಡುವಲ್ಲಿ ನುಗ್ಗುತ್ತಿದ್ದರು. ಆಮೇಲೆ ಬೋಗಿಯನ್ನು ಹತ್ತಲು ಮೆಟ್ಟಿಲು ಏರುತ್ತಿದ್ದರು. ಅವರೆಲ್ಲ ಆಗ ಹೊಗೆ ಕಾರುವ ಚಿಮಣಿಯಂತೆ ಕಾಣುತ್ತಿದ್ದರು. ಬಿಸಿಲಿನ ಝಳದಿಂದ ಕಾದ, ತೆಳು ಹಲಗೆಯ ಬೋಗಿ ಇವರೆಲ್ಲ ಡಬಡಬ ಹತ್ತುವಾಗ ಅಲುಗುತ್ತಿತ್ತು. ಬೋಗಿ ಬಿಸಿಲಿನ ಜಳದಿಂದ ತುಂಬಿ ಸುಡುತ್ತಿತ್ತು. ಮಲಗು- ಹಲಗೆ ಸುಡುತ್ತಿತ್ತು. ಸಿಗ್ನಲ್ ಸುಡುತ್ತಿತ್ತು. ಇಂಜಿನುಗಳು ಹೊಗೆ ಕಾರುತ್ತಿದ್ದವು. ದೇಕುತ್ತ ಸಾಗುವ ಅವುಗಳ ಬೆಂಕಿ ಗುಹೆಯಿಂದ ಕಿಡಿಗಳೆದ್ದು, ಕಿಡಿಗಳು ಸೊಳ್ಳೆಯಂತೆ ಇಂಜೀನು ಡ್ರೈವರ್‌ನ ಮುಖ, ಮೈ, ಅಂಗಿ, ತಲೆಗೂದಲಿಗೆ ಅಮರಿಕೊಳ್ಳುತ್ತಿದ್ದವು. ಡ್ರೈವರ್ ಬೇಯುತ್ತ ಸುಡುತ್ತಿದ್ದ. ಗಡಿಯಾರದ ಮುಳ್ಳು ಸುಡುತ್ತಿತ್ತು. ರೈಲು ಹಳಿ, ಚಪರಾಸಿ ಸುಡುತ್ತಿದ್ದರು. ಇದೆಲ್ಲ ಮನುಷ್ಯನ ಎಲ್ಲ ಅನುಭವದ ಮಿತಿಯನ್ನು ಒತ್ತಿ ಹೇಳುವಂತೆ ಇತ್ತು.

ಕಿಟಕಿ ಬಳಿಯ ಒಂದು ಸೀಟು. ಒಂದು ನಿಮಿಷದ ನಂತರ ನಿರ್ಜನ ಪ್ಲಾಟ್‌ಫಾರಂನಲ್ಲಿ ಗಾರ್ಡನ್ ಎಚ್ಚರಿಕೆ ಕೂಗು. ಬೇಗ! ಬೇಗ! ಗಾರ್ಡ್ ತನ್ನ ಎಚ್ಚರಿಕೆಯ ದನಿ ಹಿಂದೆಯೇ ಓಡುತ್ತಾನೆ. ಪ್ಲಾಟ್‌ಫಾರಂನ ಅಂಚು ನಿಧಾನಕ್ಕೆ ಇಲ್ಲವಾಗತೊಡಗಿತು. ಬೆಳಕು ಕಸೂತಿ ಹಾಕುವಾಗಿನ ಸೂಜಿಯಂತೆ ಜತೆಜತೆಯೇ ಬೆನ್ನು ಹತ್ತಿತ್ತು. ಕಿಟಕಿಯೊಳಗಿನ ಬೆಳಕು ಎದುರಿಗೆ ಚುಕುಬುಕು ಮಾಡುತ್ತ ಓಡಾಡುವ ರೈಲನ್ನು ಕಾಣಿಸುತ್ತೆ. ನಿರ್ಜನ ಬೀದಿಗಳು, ಕಳೆತೆಗೆಯದ ಜಮೀನು, ಅರೆಬರೆ ಬೆಳೆದುನಿಂತ ಹೊಲ, ಕೂಗು ಹಾಕುವ ಯಾವುದೋ ಹಕ್ಕಿ, ಅದರಾಚೆಯ ಕತ್ತಲಿನ ಜಗತ್ತು ಮಸುಕು ಮಸುಕು. ಬರೀ ನೆಲ.

ಹೈನೆ ಯಾವಾಗಲೂ ಭಗವಾನ್ ದಾಸನಂತೆ ಬೇಫಿಕೀರತೆಯಿಂದ ಪ್ರಯಾಣಿಸುತ್ತಾನೆ. ಆತ ಯೋಚಿಸುವುದು ಏನೂ ಇರಲಿಲ್ಲ, ಹೀಗಾಗಿ ಕಣ್ಣುಮುಚ್ಚಿಕೊಂಡ.

ಭವಿಷ್ಯದ ಬಗ್ಗೆ ವೃಥಾ ಯೋಚಿಸುವುದು, ಕಾಲ್ಪನಿಕ ಸಮಸ್ಯೆಗೆ ಸಮಾಧಾನ ಕಂಡು ಹಿಡಿಯೋದು ವ್ಯರ್ಥ. ಭವಿಷ್ಯ ಯಾವಾಗಲೂ ನಿಗೂಢತೆ ತುಂಬಿಕೊಂಡ ಖುಷಿಯ ಅನುಭವ. ಒಟ್ಟಿನಲ್ಲಿ ಏನಾದರೊಂದು ಆಗೇ ಆಗುತ್ತದೆ.

ಪರಿಮಳ ತುಂಬಿಕೊಂಡ ತೋಟ ಹಾದಿರಬೇಕು. ಅಡವಿಯ ಮೊಗ್ಗುಗಳು ಅರಳುತ್ತಿರಬೇಕು. ಸುಮ್ಮನೆ ಕಣ್ಮುಚ್ಚಿ ಮಲಗಿದ ಪ್ರಯಾಣಿಕರ ಕಣ್ಣಿನ ಮೇಲಿಂದ ಗಾಳಿ ಹಾದು ಹೋಗುತ್ತದೆ.

ಇದೊಂದು ರಕ್ಷಣೆಗಾಗಿ ಆಡುವ ಆಟ-ಏನಾದರೊಂದು ಆಗೇ ಆಗುತ್ತದೆ. ಇದಕ್ಕೆ ತನ್ನದೇ ಕಾರಣವಿರುತ್ತದೆ. ಹೈನೆ ಮನಸ್ಸಿನಲ್ಲೇ ಅಂದುಕೊಂಡ, ರೆಲಿನ್ಕ್ವಿಯ ಎಲ್ಲ ಪ್ರೇಮ ಕವಿತೆಯಲ್ಲೂ ಬದಲಾಯಿಸಲಾರದ ಫೆರೆರಾ ಟಿಪ್ಪಣಿಗಳು.

ಕಲ್ಲು, ಕಡಿದಾದ ಪ್ರಪಾತ, ಪಕ್ಕದವರು ಮಲಗಿದ್ದಾರೆ, ಬೋಗಿಯ ದುರ್ವಾಸನೆ, ಗ್ಯಾಸು ಬತ್ತಿಯ ನಾಲಗೆ. ಮೇಲಕ್ಕೆ ಸಿಕ್ಕಿಸಿದ್ದ ಗ್ಯಾಸುಬತ್ತಿ ಶಬ್ದ ಮಾಡುತ್ತ ಸುತ್ತಲೂ ನೆರಳು ಹರಡಿದೆ.

ರೈಲು ಸುರಂಗದೊಳಕ್ಕೆ ಹಾದು ಹೋಗುವಾಗ ಬೆಳಕು ಪ್ರಖರವಾಗುತ್ತದೆ. ಸುರಂಗ - ಕಣಿವೆ, ಗಡಗಡ ಸದ್ದು ಮಾಡುತ್ತ, ಹೊಗೆ ಕಾರುತ್ತ ಹೋಗುವ ಉಗಿಬಂಡಿ.

ಅಪೆಲೆಸ್‌ನ 'ಸಹಿ' ರೊನ್ಡೊಲ್ಫಿನಾ.... ಬಹುಶಃ ಒಂದು ದಿನ ಸಾಕಾಗಲಾರದು. ಆದರೆ ಟೈಮಿಲ್ಲದೆ. ನಾಳೆ, ಗುರುತಿರದ ಜಾಗದಲ್ಲಿ ಭೂಗತನಾಗಬೇಕು. ಲ್ಯಾಕಿ ಅವನಿಗೆ ನನ್ನ ಪ್ರಯಾಣದ ವಿಷಯ ತಿಳಿಸಿದ ಕೂಡಲೇ ಆತ ಹೇಗೆ ರೈಲು ನಿಲ್ದಾಣಕ್ಕೆ ಓಡುತ್ತಾನೆ...

ಫೆರೆರಾ ! ಸೀಲಿ - ಕಪ್ಪಿನ ಬೆಳಗು ಹೊಳೆದುವು. ಸಿಹಿ ತುಂಬಿದ ತಂಗಾಳಿ ತಟಸ್ಥವಾಗಿರುತ್ತದೆ. ಓಹ್ ! ಅದ್ಭುತ, ರಾಗಮಯ ಲ್ಯಾಟಿನ್ ಬೆಳಗು !

೩

''ಸಾಧ್ಯವೆ ಇಲ್ಲ, 'ಓಸ್' ಸಂಚಿಕೆಯ ಎಲ್ಲ ಪುಟಗಳೂ ಈಗಾಗಲೇ ಸಿದ್ಧವಾಗಿ ಬಿಟ್ಟಿವೆ.''

''ನಿಜ, ಆದರೆ ನನ್ನ ಸಾಧನೆಯನ್ನು ದುಡ್ಡಿಗಾಗಿಯಾಗಲಿ; ಅಥವಾ ಇನ್ನಾವುದೇ ಕಾರಣಕ್ಕಾಗಿಯಾಗಲಿ ತಿಳಿಸಲು ಇಷ್ಟವಿಲ್ಲ. ಜತೆಗೆ ಫೆರೆರಾದಲ್ಲಿ ಒಂದು ದಿನಕ್ಕಿಂತ ಹೆಚ್ಚಿಗೆ ನಿಲ್ಲಲು ನನಗೆ ಸಾಧ್ಯವೂ ಇಲ್ಲ. ''

''ನೀನು ಹೇಳೋದು ಈ ನೋಟುಪುಸ್ತಕ ಬೋಗಿಯ ಸೀಟಿನಡಿ ಇತ್ತು ಅಂತ?''

''ಖಂಡಿತವಾಗ್ಲೂ, ಎಮಿಲೋ ರೆಲೆನ್ಸ್ಕಿಯ ನೋಟು ಪುಸ್ತಕ. ಅಪ್ರಕಟಿತ ಕವಿತೆ, ಅರೆಬರೆ ಬರೆದ ಕವಿತೆ, ಬಿಡಿಬಿಡಿ ಬರಹ, ಇದರಲ್ಲಿವೆ. ಇದೆಲ್ಲ ಫೆರಾರಾದಲ್ಲಿದ್ದಾಗ ಒಂದು ವರ್ಷಕಾಲ ಬರೆದದ್ದು, ಬಹುಶಃ ಕೆಳಗಡೆ ದಿನಾಂಕ ಕೂಡಾ ಇದೆ.''

''ಎಲ್ಲಿದೆ, ನಿನ್ನ ಬಳಿ ಈಗಿದೆಯಾ ?''

''ಇಲ್ಲ, ನನ್ನೆಲ್ಲ ಸರಕು ಸ್ಟೇಶನ್‌ನಲ್ಲಿದೆ. ನನ್ನ ಬ್ಯಾಗಿನಲ್ಲಿ ಆ ಪುಸ್ತಕವಿದೆ !''

''ಪಾಪ ಅನ್ನಿಸುತ್ತೆ ! ಪುಸ್ತಕ ಪ್ರಕಟಿಸಬಹುದಿತ್ತು. ಪ್ರಕಾಶಕರು ರೆಲೆನ್ಸ್ಕಿಗೆ ಪರಿಚಯದವರೆ. ಆದರೆ ಅವರು ಫೆರೆರಾದ ವಿಳಾಸದಲ್ಲಿಲ್ಲ, ಆಗಲೇ ತಿಂಗಳ ಮೇಲಾಯಿತಂತೆ ಅಲ್ಲಿಂದ ಬಿಟ್ಟು.''

''ಆದರೆ ರೆಲೆನ್ಸ್ಕಿ ಫೆರೆರಾದಲ್ಲಿಲ್ಲದಿದ್ದರೆ ಏನಾಯ್ತು ?''

''ತೊಂದರೆ ಇರೋದು ಅಲ್ಲೇ. ಜಾಹೀರಾತೊಂದನ್ನು ಕೊಡೋದರ ಮೂಲಕ ನೀವು ಹ್ಯಾಗೆ ಸಫಲರಾಗ್ತಿರಂತ ?''

''ಹೀಗೆ - ನಿಮ್ಮ ಪತ್ರಿಕೆಯಲ್ಲಿ ರೆಲೆನ್ಸ್ಕಿ ಹಸ್ತಪ್ರತಿ ಸಿಕ್ಕಿದೇಂತ ಜಾಹಿರಾತು ಪ್ರಕಟಿಸೋದು. ಓಸ್ ಪತ್ರಿಕೆಯಿಂದ ಆತನಿಗೆ ಪ್ರಯೋಜನವಾದಂತಾಗ ಲಿಲ್ಲವೇ?''

''ಸರಿ, ನಿಮ್ಮನ್ನು ಸಮಾಧಾನಪಡಿಸೋದು ನನ್ನ ಕೈಲಾಗದ ಮಾತು. ಕುತ್ಕೊಳ್ಳಿ, ಜಾಹಿರಾತು ಬರೆದುಕೊಡಿ.''

''ತೊಂದರೆಗೆ ದಯವಿಟ್ಟು ಕ್ಷಮಿಸಿ. ನಿಮ್ಮ ಟೆಲಿಫೋನು ಉಪಯೋಗಿಸಬಹುದೆ ?''

''ಏನು ಬೇಕಾದರೂ ಮಾಡಿ''

''ಹೊಟೇಲ್ ಟರ್ಕ್‌ಟೋ ? ನಿಮ್ಮಲ್ಲಿ ಕೋಣೆ ಸಿಕ್ಕುತ್ತದೆಯೆ ? ಇದೆಯೆ? ಹಾಗಾದರ ನಂಬರ್ ಎಂಟನ್ನು ನನಗಾಗಿ ಕಾಯ್ದಿರಿಸಿ.''

''ರಿಟ್ರೋವೆಂಟೋ !'' ಇತ್ತೀಚೆಗಷ್ಟೇ ಪ್ರಕಟಣೆಗಾಗಿ ಸಿದ್ಧಪಡಿಸಿದ ಎಮಿಲೊ ರೆಲೆನ್ಸ್ಕಿಯವರ ಹಸ್ತಪ್ರತಿ ದೊರೆಕಿದೆ. ಟರ್ಕ್‌ಟೊ ಹೊಟೇಲಿನ ಕೋಣೆ ನಂಬರ್ ಎಂಟರಲ್ಲಿರುವ ವ್ಯಕ್ತಿಯನ್ನು ಖುದ್ದಾಗಿ ಬರಹಗಾರನಾಗಲಿ ; ಅವರ ಪ್ರತಿನಿಧಿಗಳಾಗಲಿ ಈ ರಾತ್ರಿ ಹನ್ನೊಂದು ಗಂಟೆಯೊಳಗೆ ಬಂದು ಕಾಣಬಹುದು. ಇಂದಿನಿಂದ 'ಓಸ್' ಪತ್ರಿಕೆಯು ಪ್ರಕಾಶಕರು, ಹೊಟೇಲಿನ ಮಾಲಿಕರು ಮೇಲೆ ಹೇಳಿದ ವ್ಯಕ್ತಿಯ ಬದಲಾಗುವ ವಿಳಾಸವನ್ನು ತಿಳಿಸಬಲ್ಲವರಾಗಿರುತ್ತಾರೆ.''

ಪ್ರಯಾಣದಿಂದ ದಣಿದಿದ್ದ ಹೈನೆ ಆಳವಾದ ನಿದ್ದೆಗಿಳಿದ. ಪಟ್ಟಿಪಟ್ಟಿಯ ಕಿಟಕಿಯ ಕೋಣೆ ಬೆಚ್ಚಗಿತ್ತು. ಸರಳಿನ ಮೂಲಕ ನೆಲಕ್ಕೆ ಚೆಲ್ಲುತ್ತಿದ್ದ ಬೆಳಕು ಚೌಕುಗಳನ್ನು ಸೃಷ್ಟಿಸುತ್ತಿತ್ತು. ರಸ್ತೆಯಿಂದ ಕೇಳುವ ಅಸ್ಪಷ್ಟ ಮಾತು, ಒಂದು ಗಂಟೆ ಕಳೆಯಿತು. ರಸ್ತೆಯಲ್ಲಿರುವ ಜನ ಕೆಲಸಕ್ಕೆ ಬಾರದ ವಿಷಯ ಹರಟುತ್ತಿದ್ದರು. ಗೋಣಿನ ಲಟಿಕೆ ತೆಗೆದರು. ಅವರ ಮಾತು ಹೈನೆಗೆ ಜೋಗುಳದಂತೆ, ಆತ ನಿದ್ದೆಗೆ ಜಾರುತ್ತಾನೆ. ಬೀದಿ ಬದಿಯ ಮಾತು. ಮತ್ತೊಂದು ಗಂಟೆ ಉರುಳಿತು. ಕೋಣೆಯ ಬೆಳಕು ಕಮ್ಮಿಯಾಗಿತ್ತು. ಬೀದಿಬದಿ ಮಾತು. ಹೈನೆ ನಿದ್ರಿಸುತ್ತಲೇ ಇದ್ದಾನೆ.

ಇನ್ನೊಂದು ಗಳಿಗೆಯಲ್ಲಿ ಹೈನೆ ಎದ್ದು, ಹಾಸಿಗೆ ಬಿಡುತ್ತಾನೆ. ನನ್ನ ಮಾತು ನೆನಪಿಟ್ಟುಕೊಳ್ಳಿ. ನಿದ್ದೆಯಲ್ಲಿ ಕಂಡ ಕನಸಿನ ಕೊನೆಯ ಅಧ್ಯಾಯವನ್ನು ಅವನು ಮೆಲಕು ಹಾಕಲಿ ...

ಬಿಸಿಲಿನಿಂದ ಜಂಗಾದ ಚಕ್ರದ ನಡು ಕಿರ್ರೆನ್ನುತ್ತದೆ. ತಂತಿಗಳು ಸೊಟ್ಟ ಸುತ್ತಿಕೊಂಡು ಕುಸಿಯುತ್ತದೆ. ನ್ಯೂಸ್‌ಪೇಪರ್‌ಗಳೆಲ್ಲ ನೆಲಕ್ಕೆ ಚೆಲ್ಲಾಪಿಲ್ಲಿ ಬೀಳುತ್ತವೆ. ಅಂಗಡಿ, ಸೂರ್ಯನ ನೆರಳು, ಸಂದಣಿ. ಪೇಪರ್ ಹುಡುಗನನ್ನು ಜನ ಹತ್ತಿರದ ದವಾಖಾನೆಗೆ ಕರೆದೊಯ್ಯುತ್ತಾರೆ.

ನೋಡಿ, ಇದೀಗ ನಾನು ಹೇಳಿರಲಿಲ್ಲವೇ ? ಹೈನೆ ಫಕ್ಕನೆ ಏಳುತ್ತಿದ್ದಾನೆ.

"ತಕ್ಷಣ !" ಯಾರೋ ಬಾಗಿಲನ್ನು ಅಸಹನೆಯಿಂದ ಬಡಿಯುತ್ತಿದ್ದಾರೆ. ಒಂದು ನಿಮಿಷ ತಾಳಿ ! ಎಂದವನೇ ಬಲಗಾಲು ನೆಲಕ್ಕೂರಿ "ಬಂದೆ," ಎಂದು ಬಾಗಿಲ ಬಳಿ ನಡೆದ.

"ಯಾರು ?"

ಲ್ಯಾಕಿಯ ಧ್ವನಿ !

"ಹೌದು, ಹೌದು ಹಸ್ತಪ್ರತಿ ನನ್ನ ಬಳಿ ಇದೆ. ಶ್ರೀಮತಿಯವರಿಗೆ ನನ್ನ ತಪ್ಪೊಪ್ಪಿಗೆ ತಿಳಿಸಿ, ಅವರು ಪಡಸಾಲೆಯಲ್ಲಿದ್ದಾರೆಯೇ ?"

ಲ್ಯಾಕಿಯ ಧ್ವನಿ

"ಶ್ರೀಮತಿಯವರಿಗೆ ಹತ್ತು ನಿಮಿಷ ಕಾಯಲು ಹೇಳಿ. ಹತ್ತು ನಿಮಿಷದಲ್ಲಿ ಅವರಲ್ಲಿಗೆ ಬರುವೆ. ಕೇಳಿಸುತ್ತಿದೆಯೇ ? "

ಲ್ಯಾಕಿಯ ಧ್ವನಿ

"ಒಂದು ನಿಮಿಷ ಕಾಯ್ತಿರ ?"

ಲ್ಯಾಕಿಯ ಧ್ವನಿ

"ಹಾಗೆಯೇ ಶ್ರೀಯುತರು ಅವರನ್ನು ನೋಡೋಕೆ ಆಗೋಲ್ಲ ಅಂತಿದಾರೆ. ಅದಕ್ಕಾಗಿ ವಿಷಾದಿಸುತ್ತಿದ್ದಾರೆ. ಆದರೂ ಪ್ರಯತ್ನಿಸುತ್ತಾರಂತೆ.... ಕೇಳುತ್ತಿದೆಯಾ ?"

ಲ್ಯಾಕಿಯ ಧ್ವನಿ,

"..... ಹತ್ತು ನಿಮಿಷದಲ್ಲಿ ಅವರ ಕ್ಷಮಿಸಲಾರದ ಅಪರಾಧಕ್ಕೆ ಕ್ಷಮೆ ಕೇಳ್ತಾರಂತೆ... " ಹಾಗೇನೆ ಮೆತ್ತಗೆ ಹೇಳು, ಲ್ಯಾಕಿ ಏಕೆಂದರೆ ನಾನು ಫಿರೆರಾದವನಲ್ಲ..."

ಲ್ಯಾಕಿಯ ಧ್ವನಿ

"ಒಳ್ಳೆ ಕೆಲಸ ಮಾಡಿದೆ ಲ್ಯಾಕಿ, ಹೆಣ್ಣು ಮಗಳು ಪಡಸಾಲೆಯಲ್ಲಿದ್ದಾಳೆಯೆ?"

ಹೌದು ಯಜಮಾನರೆ !

"ಒಬ್ಬಳೇ ಇರುವಳೆ ?"

"ಹೌದು ಯಜಮಾನರೆ. ನಿಮಗೆ ಕಾಣಿಸುವುದಾದರೆ ಎಡ ಭಾಗದಲ್ಲಿದ್ದಾರೆ."

''ನಮಸ್ಕಾರ ಶ್ರೀಮತಿ ಇವರೆ, ನಿಮಗಾಗಿ ನಾನು ಏನು ಮಾಡಬಲ್ಲೆ ?''

''ಕ್ಷಮಿಸಿ. ನೀವು ಕೋಣೆ ನಂಬರ್ ಎಂಟರವರ ?''

''ಹೌದು, ಅದು ನನ್ನ ಕೋಣೆಯೆ''

''ನಾನು ಎಮಿಲೊ ರೆಲೆನ್ಸ್ಕಿ ಹಸ್ತಪ್ರತಿಗಾಗಿ ಬಂದಿರುವೆ.''

''ನನ್ನ ಪರಿಚಯ ಮಾಡಿಕೊಳ್ಳುವೆ - ನಾನು ಹೆನ್ರಿಶ್ ಹೈನೆ !

''ಕ್ಷಮಿಸಿ, ನೀವು ಅವರಿಗೆ .... ಸಂಬಂಧಿ''

''ಇಲ್ಲ, ಯಾವ ಅರ್ಥದಲ್ಲೂ ಇಲ್ಲ. ಇದು ಆಕಸ್ಮಿಕವಾಗಿ ಆದದ್ದು. ಜತೆಗೆ ಮುಜುಗರ ಪಡಿಸುವಂಥದು ..... ನನಗೂ ಖುಷಿಯಿರುತ್ತಿತ್ತು .....''

''ನೀವು ಕವಿತೆ ಬರೆಯುತ್ತೀರ ?''

''ನಾನೂ ಏನೂ ಬರೆದಿಲ್ಲ !''

''ನನಗೆ ಜರ್ಮನ್ ಬರುತ್ತದೆ. ಬಿಡುವಿನ ವೇಳೆಯಲ್ಲಿ ಕವಿತೆ ಓದ್ತೀನಿ, ಆದರೆ....''

''ಕವಿ ಬದುಕಿದ್ದಾಗ ಒಂದೂ ಕವಿತೆ ಪ್ರಕಟವಾಗದಿರುವ ಘಟನೆ ನಿಮಗೆ ಗೊತ್ತೆ?''

''ಓಹೋ ! ಈಗ ಗೊತ್ತಾಯ್ತು, ನೀವು ಯಾರೆಂದು !''

''ಕ್ಷಮಿಸಿ, ನಿಮ್ಮ ಹೆಸರು ತಿಳಿದುಕೊಳ್ಳುವ ತುಂಬ ಕುತೂಹಲವಿದೆ. ''

''ಕಮಿಲಾ ಅಂದ್ರೆನ್ಜ್''

''ತುಂಬಾ ಸಂತೋಷ, ಈಗ, ಶ್ರೀಮತಿ ಕಮಿಲಾ, ನೀವು ''ಓಸ್''ನಲ್ಲಿ ನನ್ನ ಪ್ರಕಟಣೆ ನೋಡಿದಿರ ?''

''ಹೌದು. ಅದೇ ನಿಮಗೆ ದೊರೆತ ಹಸ್ತಪ್ರತಿ. ಎಲ್ಲಿದೆ , ನನಗೆ ಕೊಡಿ.''

''ಶ್ರೀಮತಿ, ಶ್ರೀಮತಿ ಕಮಿಲಾ ಅವರೆ ಬಹುಶಃ ರೆಲೆನ್ಸ್ಕಿಯವರನ್ನು ಹೃದಯದಲ್ಲಿ ತುಂಬಿಕೊಂಡಿದೀರೀಂತ ಕಾಣುತ್ತೆ !''

ಹಾಗೆಲ್ಲ ಹೇಳಬೇಡಿ, ನಾವೇನೂ ನಾಟಕ ಮಾಡುತ್ತಿಲ್ಲ !

''ನೀವು ತಪ್ಪು ತಿಳಿದುಕೊಂಡಿದ್ದೀರಿ ಕಮಿಲಾ ಅವರೆ. ನಾವೆಲ್ಲ ಇಡೀ

ಜೀವನ ರಂಗಸ್ಥಳದಲ್ಲೇ ಕಳೆಯುತ್ತೇವೆ. ಆದರೆ ಬಹಳ ಕಷ್ಟದಿಂದ ಸಹಜತೆಯನ್ನು ನಮ್ಮಲ್ಲಿ ಕೆಲವರು ಗಳಿಸುತ್ತೇವೆ. ಅದು ಪ್ರಕಾಶವಾಗುತ್ತೆ ಅಷ್ಟೇ, ಹುಟ್ಟಿನಿಂದಲೇ ನಮ್ಮ ನಟನೆ, ಪಾತ್ರ ನಿರ್ಧಾರವಾಗಿರುತ್ತೆ.''

ಕಮಿಲಾ ಅವರೆ, ನಿಮ್ಮ ಹುಟ್ಟು ನೆಲವನ್ನು ಫೆರೆರಾ ಅನ್ನು ನೀವು ಪ್ರೀತಿಸುತ್ತೀರಿ. ಆದರೆ, ನಾನಿದನ್ನು ನಿಮಗೆ ಹೇಳಲೇಬೇಕು, ನನ್ನನ್ನು ತಿರಸ್ಕರಿಸುವ ಇಂಥ ನಗರವನ್ನು ಈ ಮೊದಲು ನಾನೆಂದೂ ಹಾದುಬಂದಿಲ್ಲ. ಕಮಿಲಾ ಅವರೇ ನೀವು ಸುಂದರಿ, ನೀವು ಹಾಗೂ ಈ ನಗರ ನನ್ನ ವಿರುದ್ಧ ಕೆಟ್ಟ ಅಭಿಪ್ರಾಯ ಹೊಂದಿದ್ದೀರೆಂದು ತಿಳಿದು ನನ್ನ ಮನಸ್ಸಿಗೆ ನೋವಾಗುತ್ತದೆ ''

'' ನಿಮ್ಮನ್ನು ಅರ್ಥಮಾಡಿಕೊಳ್ಳಲು ನನ್ನಿಂದ ಸಾಧ್ಯವಾಗ್ತಿಲ್ಲ.''

''ನನ್ನನ್ನು ತಡೀಬೇಡಿ ಕಮಿಲಾ ಅವರೇ, ನಾನೇನು ಹೇಳುತ್ತಿದ್ದೆ ..... ಈ ನಗರ ನನ್ನ ಅಮೂಲ್ಯ ಸಂಗಾತಿ ವಿಧಿಯಂತೆ ಪಕ್ಕದಲ್ಲೇ ಇದ್ದಾಗ ಎಲ್ಲ ಮರೆಸಿ ಮತ್ತಿನಲ್ಲಿ ಮೈಮರೆತು ನಿದ್ರಿಸುವಂತೆ ಜೋಗುಳ ಹಾಡಿತು. ಇದೆಲ್ಲ ವ್ಯವಸ್ಥಿತವಾಗಿ ಮಾಡಿತ್ತು... ವಿಷ ಪ್ರಾಶನ ಮಾಡಿಸಿತ್ತು. ನಿದಿರೆಯ ಮದಿರೆ, ಆಕೆ ಹೆಣ್ಣು ಒಳಗೆ ಬಂದದ್ದೇ ಒರಗಲು ಒಂದು ಹಾಸಿಗೆ ಕಂಡಳು. ಅಲ್ಲಿ ನಿಮ್ಮ ಪ್ರಿಯಕರ, ಆತ ಗಂಟೆಗಟ್ಟಲೆ ನಿಮ್ಮ ಕಥೆಗಳಿಗಾಗಿ ಕಾದು ಮಂಕುಬೂದಿ ಎರಚಿಸಿಕೊಂಡಿದ್ದ. ಅವು ನನ್ನ ಕಲ್ಪನೆಗೆ ಮುಳ್ಳು ಚುಚ್ಚಿದಂತಿದ್ದವು. ನೀವು ಅದರ ಬೆನ್ನಮೇಲೆ ನಾಗಾಲೋಟ ಸವಾರಿ ಮಾಡಿಲ್ಲವೇ ? ಅಷ್ಟೊಂದು ನಿರ್ದಯವಾಗಿ ಪಕ್ಕನೆ ನುಗ್ಗಿ ಗಾಳಿಯಲ್ಲೇಕೆ ನೀವು ವಿಹರಿಸಿದ್ದಿರಿ ? ಅದು ಜಳದಲ್ಲಿ ತೊಯ್ದಿದೆ, ಅದು ಸುಡುತ್ತಿದೆ !

''ಓಹ್ ! ಈ ಕಥೆಗಳು ! ನೀವಾಗೆ ಅವನತ್ತ ನೋಡಿ, ಮದಿರಾಕ್ಷಿ ಆತ ನಿಮ್ಮ ಬಗೆಗಿನ ಆತನದೇ ಕಥೆಗಳಿಂದ ಲಾಲಿ ಹೋದ, ಕೇಳಿ, ನಿಮ್ಮ ಪ್ರಿಯಕರನ ವಿರಹ ಜೋಗುಳದ ಪರಿಣಾಮದಿಂದಾದದ್ದು. ಏನೇ ಆಗಲಿ, ಆತನನ್ನು ಎಚ್ಚರಿಸಬಹುದು. ಅದರ ಅಗತ್ಯವಿಲ್ಲ ಎನ್ನುತ್ತಾನೆ ವಶೀಕರಣಕ್ಕೊಳಗಾದ ವ್ಯಕ್ತಿಯ ಪರವಾಗಿ ನಿಶೆ. ಆತನನ್ನು ಎಚ್ಚರಿಸುವುದು ಬೇಡ. ಆತ ಎಷ್ಟು ಸವಿನಿದ್ರೆಯಲ್ಲಿದ್ದಾನೆಂದರೆ ಕನಸಲ್ಲೂ ಕಾಣುತ್ತಾನೆ ನನ್ನನ್ನು. ಇದೀಗ ಬೇಕಿರುವುದು ಚುರುಕು ಮುಟ್ಟಿಸುವುದು. ಜೀದಿಗೆಲ್ಲ ಮಂಕು ಆವರಿಸಿದೆ. ನಾನು ಜೋಮು ಹಿಡಿದಿರುವೆ, ನನ್ನ ಕೈಗಳನ್ನು ಸ್ವಲ್ಪ ಉಜ್ಜುತ್ತೀರ....''

''ನೀವು ಪೂರ್ತಿ ನನಗೆ ಅಪರಿಚಿತರು ಮಿಸ್ಟರ್ ಹೆರ್ ಹೈನೆ. ಆದರೂ ದಯವಿಟ್ಟು ಹೇಳೋದನ್ನು ಹೇಳಿ. ನಿಮ್ಮ ಉದ್ವೇಗಪೂರಿತ ಮಾತು ನನ್ನನ್ನು ರಂಜಿಸುತ್ತಿದೆ. ''

''ನಾನು ಎಮಿಲೋ ರೆಲಿನ್ಸ್ಕಿಯ ನೋಟುಪುಸ್ತಕದ ವಿಚಾರ ಮರೆತಿದ್ದರೆ ದಯವಿಟ್ಟು ಕ್ಷಮಿಸಿ. ನಾನು ನನ್ನ ಕೋಣೆಗೆ ಹೋಗಬೇಕು.... ''

ತೊಂದರೆ ತಗೋಬೇಡಿ, ನಾನೇನೂ ಮರೆಯೊಲ್ಲ. ದಯವಿಟ್ಟು ಮುಂದುವರಿಸಿ. ಎಂಥ ಅದ್ಭುತ ವ್ಯಕ್ತಿ. ಮುಂದುವರಿಸಿ. 'ನನ್ನ ಕೈಗಳನ್ನು ತೀಡಿ 'ಎಂದಿತು ವಿಧಿ. ಅದೇ ಅಲ್ಲವೇ ಅವಳು ಹೇಳುತ್ತಿದ್ದುದು ?

''ಹೌದು ಕಮಿಲಾರವರೇ, ಸಹನೆಯಿಂದ ಕೇಳುತ್ತಿರವುದಕ್ಕೆ ಕೃತಜ್ಞತೆ ನಿಮಗೆ...''

''ಹೌದೆ ?''

''ಸರಿ, ಹಾಗಾದರೆ - ಈ ನಗರ, ನಿಶಾ ಮನುಷ್ಯ ನನ್ನ ಅಮೂಲ್ಯ ಗೆಳೆಯನನ್ನು; ನನ್ನನ್ನು ತಿರಸ್ಕಾರದಿಂದ ಕಂಡಿದೆ. ಮತ್ತೆ ನೀವು ನಗರದ ಜತೆಗೆ ಇದೀರಿ. ಈ ನಗರ ನನ್ನ ಯೋಚನೆಗೆಳನ್ನೆಲ್ಲಾ ಕದ್ದು ಆಲಿಸಿ, ನನ್ನನ್ನು ಮತ್ತಿಗೆ ತಳ್ಳಿ ದುರುಪಯೋಗ ಪಡಿಸಿ ಕೊಂಡಿತು. ಅದು ನನ್ನನ್ನು, ನನ್ನ ಕಲ್ಪನೆಯ ತೋಟಕ್ಕೆ ಕನಸಿನ ಕೆಂಪು ಕೋಟೆಯ ಪ್ರಯಾಣಕ್ಕೆ, ಸಂಜೆ-ಇರುಳಿನ ಕೆಂಪು, ಕಡುನೀಲಿಗೆ ಹೋಗಲು ಬಿಟ್ಟಿತು. ಅದು ನನ್ನನ್ನು ಎಚ್ಚರಿಸಬೇಕಿತ್ತೆಂಬುದನ್ನು ನೀವು ಒಪ್ಪುವುದಿಲ್ಲವೆಂದು ನನಗೆ ಗೊತ್ತು .... ''

''ನನ್ನ ಗೆಳೆಯ, ಈ ಕಥೆಯಲ್ಲಿ ನನ್ನ ಸ್ಥಾನವೆಲ್ಲಿ ಹೇಳು. ಲ್ಯಾಕಿ, ನಿನ್ನನ್ನು ಎಚ್ಚರಿಸಿದ್ದ ಅಂತ ನನ್ನ ಭಾವನೆ !''

''ಓಹ್ ! ಅಂದರೆ ಇರುಳು ಬರುತ್ತದೆ, ಪ್ರತಿಯೊಬ್ಬ ಅವಸರದಲ್ಲಿರಬೇಕು. ಪ್ರವಾಹ ಬರುವುದು, ಆದರೂ ಅವನನ್ನು ಎಬ್ಬಿಸಬೇಡ ಎಂದು ನೀವು ಹೇಳುತ್ತೀರ?''

''ಓಹ್ ! ಹೈನೆ, ಏನೆಲ್ಲ ಭ್ರಮೆಗಳಿವೆ ನಿಮಗೆ ! ನಾನು ಹೇಳ್ತೇನೆ : ಹೌದು, ಹೌದು ಫೆರೆರಾ. ಆತ ಇನ್ನೂ ಮಲಗಿದ್ದರೆ ಅವನ ಕೂದಲು ಚೆಲ್ಲಾಪಿಲ್ಲಿ ಮಾಡುತ್ತೆ;

ನನಗೆ ಸಮಯವಿಲ್ಲ; ಅವನನ್ನು ತಟ್ಟಿ ಎಬ್ಬಿಸು ; ಸಂದಣಿಯನ್ನು ನಗರದ ವೃತ್ತದಲ್ಲಿ ಸೇರಿಸು, ಆ ವ್ಯಕ್ತಿ ಎಚ್ಚರವಾಗುವವರೆಗೂ ಅರಚಿಸು ''

''ಓಹ್ ಅಂದಹಾಗೆ, ನೋಟು ಪುಸ್ತಕ''

''ಅದರ ಬಗ್ಗೆ ಆಮೇಲೆ ಮಾತಾಡುವ...''

''ಓ ! ಪ್ರಿಯ ಕೆಮಿಲಾ, ಫೆರೆರಾ ಅದರ ಲೆಕ್ಕಾಚಾರದಲ್ಲಿ ತಪ್ಪಿತು. ನಾನು ಎಚ್ಚರಗೊಂಡೆ. ನಾನು ನಿನ್ನ ಪಾದಗಳ ಬಳಿಯಿದ್ದೇನೆ, ನನ್ನ ಪ್ರಿಯೆ.''

ಕೆಮಿಲಾ ಚಕಿತಳಾದಳು.

''ಸಾಕು, ಸಾಕು ! ಇನ್ನು ಕೇಳಲಾರೆ. ನೀನೊಬ್ಬ ಅಲೆಮಾರಿ ನಕಲಿ ಶ್ಯಾಮನಂತೆ ಕಾಣ್ತೀಯ ! ನಾವಿಬ್ಬರೂ ಒಬ್ಬರಿಗೊಬ್ಬರು ಸಂಪೂರ್ಣ ಅಪರಿಚಿತರು. ಈ ಥರ ವಾದ ವಿವಾದ ಅರ್ಧ ಗಂಟೆಯ ಹಿಂದೆ ಹಾಸ್ಯಾಸ್ಪದವಾಗಿರುತ್ತಿತ್ತು. ಆದರೂ ನಿನ್ನೊಂದಿಗೆ ಮಾತಾಡ್ತಿದೇನೆ ನಾನು ! ನಿನ್ನಂಥ ಇನ್ನೊಬ್ಬ ಮೂರ್ಖನನ್ನು ನೋಡಿಲ್ಲ. ನಾನು ನನ್ನ ಬದುಕಲ್ಲಿ ! ಇದು ನೀರಿನಲ್ಲಿ ದಿಢೀರನೆ ಅರಳುವ ಜಪಾನಿ ಹೂವಿನ ಕಥೆಯಂತಿದೆ. ಆದರೆ, ಅವು ತುಚ್ಛ ಕಾಗದದ ಹೂಗಳು !''

''ನಾನಿನ್ನೂ ನೀವು ಹೇಳೊದನ್ನು ಕೇಳ್ತಿದೀನಿ....''

''ನಾನು ಕೂಡ ಸಹನೆಯಿಂದ ನೀವು ಹೇಳೋದನ್ನು ಕೇಳಿರಬಹುದು. ನೀನೊಬ್ಬ ಜಾಣ, ಜತೆಗೆ ಕಂತ್ರಿ ! ಒಂದನ್ನೊಂದು ಹೋಲುವ ಸ್ಥಳಗಳ ಬಗ್ಗೆ ನಿನ್ನ ಭಿನ್ನಾಭಿಪ್ರಾಯವೇನು ಇಲ್ಲವಲ್ಲ. ಚಕಿತಗೊಳಿಸಬಹುದು ಆದರೆ ವಿರೋಧಾಭಾಸ ವೇನೂ ಇಲ್ಲ. ನಿನ್ನ ಸೈದ್ಧಾಂತಿಕ ಕರುಣಾರಸ ''!

''ನಾನು ಹೇಳೋದು ಕೇಳಿ ಕೆಮಿಲಾ, ಕರುಣೆಗೆ ಗ್ರೀಕ್‌ನಲ್ಲಿ ಅನುರಾಗ ಅನ್ನೋ ಅರ್ಥವಿದೆ. ಆದರೆ ಇಟಾಲಿಯನ್‌ನಲ್ಲಿ ಅದು ಕೇವಲ ಚುಂಬನ. ಅಲ್ಲದೆ ಚುಂಬನವೊಂದು ಕಡ್ಡಾಯ ಕ್ರಿಯೆ !''

''ಮತ್ತೆ ನಿನ್ನ ನೋವನ್ನು ಬಿಟ್ಟುಕೊಡು ! ಅದು ಅಸಹನೀಯ ! ನನ್ನಿಂದ ಏನನ್ನೋ ಮುಚ್ಚಿಡುತ್ತಿದ್ದೀಯ. ಏನೂಂತ ವಿವರಿಸು. ಕೇಳು, ನನ್ನ ಮೇಲೆ ಕೋಪಿಸಿಕೊಳ್ಳಬೇಡ, ಹೈನೆ. ನನ್ನನ್ನು ಹೋಲಿಕೆಗಾಗಿ ದೂರುತ್ತಿದ್ದೀಯಾ.

ನೀನೊಬ್ಬ ವಿಚಿತ್ರ ಮಗುವಿನ ಹಾಗಿದ್ದೀಯ. ಅಲ್ಲಿ ಇದು ಸರಿಯಾದ ಶಬ್ದವಲ್ಲ. ನೀನೊಬ್ಬ ಕವಿ ಎನ್ನುವುದು ಸರಿಯಾದ ಪದ. ಇದನ್ನು ಕಂಡು ಹಿಡಿಯೋಕೆ ನಿನ್ನ ಮುಖ ನೋಡಿದರೆ ಸಾಕು. ನೀನು, ದೇವರು ಆರಿಸಿಕೊಂಡ 'ಸೋಮಾರಿ 'ಜತೆಗೆ 'ವಿಧಿ' ಯಿಂದ ಕೆಟ್ಟುಹೋದ ಹುಡುಗ!''

''ಅಯ್ಯೋ! ವಿಧಿಯೇ! ಎನ್ನುತ್ತಾ ಹೈನೆ ಕಿಟಕಿಯ ಸರಳಿಗೆ ಕೈಕೊಟ್ಟು ಮೈ ಪೂರ್ತಿ ಬಾಗಿಸಿದ!

''ಹುಷಾರು, ಹೈನೆ, ನೀನು ನನ್ನನ್ನು ಹೆದರಿಸುತ್ತಿದ್ದೀಯ'' ಕೆಮಿಲಾ ಕೂಗಿಕೊಂಡಳು.

''ಅಷ್ಟೊಂದು ಆತಂಕ ಪಟ್ಟುಕೊಳ್ಳಬೇಡ ಪ್ರಿಯೆ!''

''ಹಿಡಿಯಿರಿ, ಆ ಲಫಂಗನನ್ನು!'' ಹಾಡಿನ ತುಣುಕು ಸುತ್ತೆಲ್ಲ ತುಂಬಿತು. - ''ಒಂದೇ ಚಣ ನಿಲ್ಲು, ಫೆರೆರಾದಲ್ಲಿ ಹನ್ನೆರಡು ತೋಟ ಕದ್ದರೆ, ಕೇವಲ ಹತ್ತು ಸಲ ಪಡೆಯುತ್ತಿ. ನಿನ್ನ ಹರಿದ ಚೊಣ್ಣದ ಒಂದೊಂದು ತೂತಿಗೂ ಪಾವಲಿ! ಬೇಗನೆ! ಬೇಗನೆ! ಪರಿಮಳವ ಹೀರಬೇಡ. ಹಿಡಿತುಂಬ ನೀನೇ ಒಯ್ಯುವಾಗ ಹೂವನ್ನು. ರಾಣಿ - ಮುಟ್ಟಿದರೆ ಮುನಿಯಂತೆ ಸೂಕ್ಷ್ಮ. ಬೇಗ! ಲೋ! ಮುದಿ ಮೂರ್ಖನೆ! ''

'' ಕೇಳಿದಿಯ ಆ ಹಾಡಿನ ತುಣುಕು. ಆ ಹರಕು ಚಿಂದಿಯ ಭಿಕ್ಷುಕ ಮನ್ಮಥನ ವೇಷ ತೊಟ್ಟು ಚೆಲುವ ಚೆನ್ನಿಗನಾಗ್ತಾನೆ! ಆದರೆ ನಾವು ಗಂಭೀರವಾಗಿಯೇ ಮಾತಾಡೋಣ, ಬಾ. ಎಂಥಾ ಸೂಕ್ಷ್ಮ - ತೀಕ್ಷ್ಣ ತಿಳುವಳಿಕೆ. ಬರೀ ಒಂದು ಸಾಲಿನಲ್ಲಿ, ಗೆರೆಯಲ್ಲಿ ಅಪೆಲೆಸ್‌ನಂತೆ ನನ್ನನ್ನೇ ಮೂರ್ತೀಕರಿಸುತ್ತೇನೆ, ನನ್ನ ಅಸ್ತಿತ್ವಕ್ಕೆ ಅಗತ್ಯವಾದುದೆಲ್ಲವನ್ನೂ ಅಭಿವ್ಯಕ್ತಿಸುತ್ತೇನೆ!''

''ನನಗೆ ಒಂದು ಚೂರು ಅರ್ಥವಾಗುತ್ತಿಲ್ಲ ನಿನ್ನ ಬಗೆ. ಇದು ಕೂಡ ಒಂದು ನಾಟಕಾಂಕವೆ ? ನಿನಗೆ ನಿಜಕ್ಕೂ ಬೇಕಾಗಿರೋದೇನು ? ''

'' ಹೌದು ಒಂದು ನಾಟಕಾಂಕದ ಸಂಭಾಷಣೆ. ಆದರೆ ಆ ಆತ್ಮಜ್ಯೋತಿಯ ಕಿರಣದ ಮೇಲೆ ನಿಂತುಕೊಳ್ಳುವ ನನಗೇಕೆ ಅವಕಾಶವಿಲ್ಲ? ನನ್ನ ತಪ್ಪೇನು? ಬದುಕಿನ ಅತ್ಯಂತ ಸಂಕೀರ್ಣವಾದ ಸೇತುವೆ, ತಿರುವುದಾರಿಗಳೆಲ್ಲ ಬೇರೆಲ್ಲ ವಸ್ತುವಿಗಿಂತ

ಕಠಿಣವಾದುವೆ ? ಬೆಳಕು ಎಂಥ ಕ್ರೂರಿ ! ಎಲ್ಲ, ಬೇರೆಲ್ಲವೂ ಕತ್ತಲೆಯೊಂದಿಗೆ ಕೂಡಿ ಹೋಗಿ ಬಿಡುತ್ತದೆ. ! ''

''ಧಗಧಗ ಉರಿಯಿಂದ ಕದಡುತ್ತಿರುವ ವೇದಿಕೆಯ ಮೇಲೆ ಒಬ್ಬ ಮನುಷ್ಯನನ್ನು ಊಹಿಸಿಕೋ. ಆತ ಪ್ರದರ್ಶನಕ್ಕಿದ್ದಾನೆ, ಹೂಜಿಗಂಬ ಕಟ್ಟಿಕೊಂಡು ತೇಲುತ್ತ, ನಗರದ ಅಖಂಡ ನೋಟ ನೋಡುತ್ತ, ಇಳಿದಾಣದ ಮೇಲೆ ಕಿರಣಗಳನ್ನು, ಸಿಗ್ನಲ್ ದೀಪಗಳನ್ನು ಗಮನಿಸುತ್ತ ತೇಲುತ್ತಿದ್ದಾನೆ .... ಅಂಥವನನ್ನು ಕಲ್ಪಿಸಿಕೋ ! ''

''ಶ್ರೀಮತಿಯವರೇ ಇಂಥ ಅಪಾಯಕಾರಿ ಸ್ಥಳ ಬಿಟ್ಟು ಬೇರೆಯೆಲ್ಲಾದರೂ ಭೇಟಿಯಾಗಿದ್ದರೆ ಈಗ ಹೇಳಿದ್ದರಲ್ಲಿ ಅರ್ಧದಷ್ಟನ್ನು ಕೇಳಿಸಿಕೊಳ್ಳುತ್ತಿರಲಿಲ್ಲ. ನೀವು ನಾನು ಅಂಥ ಅಪಾಯಕಾರಿ ಸನ್ನಿವೇಶ ಊಹಿಸಿಕೊಳ್ಳಲು ಸಿದ್ಧನಾದರೂ ನಾನು ಅಂಥ ಅಪಾಯದಲ್ಲಿರುವ ಅರಿವು ನನಗಿಲ್ಲ. ಆದರೂ ಊಹಿಸಿಕೊಬೇಕು ಯಾಕೆಂದರೆ ಜನ ಇಂಥದ್ದನ್ನು ಊಹಿಸಿಕೊಂಡು ಇಂಥ ಊಹೆಯ ಸಾಗರದ ಬೆಂಕಿಯಲೆಗಳು ಪೂರ್ತಿ ಖಾಲಿಯಾಗಿವೆ ! ಇಂಥ ಒರಟಾದ - ಕ್ಲೀಷೆಯ ಕಲ್ಪನೆ ನನಗೂ ಅನಿವಾರ್ಯ ಅಷ್ಟೇ ! ''

''ಸರಿ, ಹೇಳಿದ್ದು ಮುಗಿಯಿತೆ ! ಇದೆಲ್ಲ ನಿಜವೇ, ಆದರೆ ಕೇಳಿಸಿಕೊಳ್ಳದ ಕಾಡು ಹರಟೆ ! ಆದರೂ ನಿನ್ನನ್ನು ನಂಬುವೆ, ಹಾಗಂತ ಖಯಾಲಿಗೆಂದು ಅಲ್ಲ, ನಿಜವಾಗಿಯೂ, ಅದು ನನ್ನ ಅಗತ್ಯ ಕೂಡ. ಸುಳ್ಳಾಡುತ್ತಿಲ್ಲ. ಕಣ್ಣು ನೋಡಿದರೆ ಗೊತ್ತಾಗುತ್ತೆ. ಸುಳ್ಳೇನಲ್ಲ. ಹೌದು, ನಾನು ಏನು ಹೇಳಬೇಕೆಂದಿದ್ದೆ ? ಮರೆತ್ಬಿಟ್ಟೆ. ಒಂದು ನಿಮಿಷ ತಡಿ, ಓ, ಕೇಳು, ನನ್ನ ಗೆಳೆಯ ಕೇವಲ ಒಂದು ಗಂಟೆಯ ಹಿಂದಷ್ಟೇ..''

'' ತಡೀ ಇವು ಕೇವಲ ನನ್ನ ಮಾತುಗಳು. ಗಂಟೆ ಹೇಗಿರುತ್ತೋ ಹಾಗೆ ಚಿರಂತನತೆಯೂ ಉಳಿಯುತ್ತೆ. ಅಸಂಖ್ಯ ಅವು - ಆದರೆ ಒಂದಕ್ಕೂ ಆದಿ ಎಂಬುದಿಲ್ಲ. ಮೊದಲ ಅವಕಾಶದಲ್ಲೇ ಅವು ಚೆದುರಿಬಿಡುತ್ತವೆ. ಇಧೀಗ ಒಳ್ಳೆಯ ಅವಕಾಶ. ನಂತರ ಶಬ್ದಗಳೊಂದಿಗೆ ಹೊರಟು ಬಿಡು ! ನಿನಗೆ ಗೊತ್ತೆ ಶ್ರೀಮತಿ - ಯಾವಾಗ, ಯಾರಿಂದ ಅವು ಬಾಗಿದವೆಂದು ? ಪದಗಳಿಂದ ಬೇರೆ ! ಇಂಥ ಕ್ರಾಂತಿ ಬಗೆಗೆ ನಿನಗೆ ಗೊತ್ತೆ ? ಕೆಮಿಲಾ ನನ್ನೆಲ್ಲಾ ಎಳೆಗಳು ನನ್ನೊಳಗೆ ಹುಟ್ಟುತ್ತವೆ,

ನಾನವಕ್ಕೆ ಬಾಗುತ್ತೇನೆ, ಕೆಲವರು ಸಂದಣಿಗೆ ಮಣಿವ ಹಾಗೆ - ಆಹ್ ! ಇನ್ನೊಂದು ವಿಷಯ ಇದೀಗ ನನ್ನನ್ನು ಏನೆಂದು ಕರೆದೆ ನೀನೂಂತ ನೆನಪಿದೆಯಾ ?

''ಗೊತ್ತಿದೆ , ಬೇಕಾದರೆ ಮತ್ತೊಮ್ಮೆ ಹೇಳ್ತೀನಿ !''

''ಏನೂ ಬೇಕಿಲ್ಲ ! ತಾಜಾತನದಿಂದ ಹೇಗೆ ಕಾಣಿಸಿಕೊಳ್ಳಬಹುದೆಂದು ನಿನಗೆ ಗೊತ್ತೆ ? ನೀನಾಗಲೇ ಆ ಸಾಲಿನಲ್ಲಿದಿಯ. ಅನುಪಮವಾದುದು ಹೇಗೆಂದರೆ ಅದಕ್ಕದೇ ಸಾಟಿ. ಅದನ್ನು ಬಿಸುಟಬೇಡ, ಕಳೆದುಕೊಳ್ಳಬೇಡ. ನಿನಗೆ ಸಾಧ್ಯವಾದಷ್ಟು ಬಳಿ ಇಟ್ಟುಕೋ. ಆ ಮೇಲೆ ಆ ಗೆರೆಯ ಮುಂದಿನದನ್ನು ಹುಡುಕು - ಏನು ಸಿಕ್ಕಿತು ಗೆಳತಿ, ಫಲಿತಾಂಶವೇನು ? ಪೂರ್ತಿ ಚಿತ್ರ ದೊರಕಿತೆ, ಅಥವಾ ಅರ್ಧ ಅಥವಾ ಬೇರೆ ಥರ ? ''

''ನನಗೆ ತಿಳಿಯಿತು,'' ಕಮಿಲಾ ತನ್ನ ಕೈಗಳನ್ನು ಹೇನೆಯುತ್ತ ಚಾಚಿದಳು. ''ಆದರೆ, ನಾನೇನು ಚಿಕ್ಕ ಪೋರಿಯಲ್ಲ. ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಅಂಥ ಕರ್ಷಣ- ''

''ಕಮಿಲಾ '' - ಹೈನೆ ಕಮಿಲಾಳ ಪಾದದಡಿ ಅಕ್ಷರಶಃ ಕುಳಿತ. ''ಕಮಿಲಾ'' - ಆರ್ದ್ರ ದನಿಯಲ್ಲಿ ಕರೆದು, ತನ್ನ ಮುಖವನ್ನು ಕೈಗಳಿಂದ ಮುಚ್ಚಿಕೊಂಡ - ನೀನಾಗಲೇ ಗೆರೆಯನ್ನು ಎಳೆದು ಬಿಟ್ಟೆಯ ? ಎಂಥ ಘೋರ ! ಆತ ಪಿಸುನುಡಿದು ತನ್ನ ತಲೆ ಎತ್ತಿದ, ನಿತ್ರಾಣನಾಗಿದ್ದ ..... ಕ್ಷೋಭೆಗೊಳಿಸಿದ ಕಮಿಲಾ ಕಣ್ಣುಗಳನ್ನೇ ನೋಡುತ್ತ... ಮಾತಿಗೆ ನಿಲುಕದ್ದೇನನ್ನೋ ನಿಟ್ಟಿಸುತ್ತ .....''

೪

..... ಆಕೆ ಚೆಲುವೆ, ಎಂಥ ಚೆಲುವೆ : ದಂಗುಬಡಿಸಿ, ಹುಚ್ಚೆಬ್ಬಿಸುವ ಕೋಮಲೆ, ಆತನ ಮನಸ್ಸು ಚಿಕ್ಕದೋಣಿಯೊಂದು ಪ್ರವಾಹ - ಚಂಡಮಾರುತದ ಹೊಡೆತಕ್ಕೆ ಮೈ - ಬಟ್ಟೆ ನೇವರಿಸಿ, ಭುಜ ಬಾಚುತ್ತದೆ. ಅವಳ ಗಲ್ಲ ಸವರುತ್ತದೆ ! ಮಾಂತ್ರಿಕತೆ ! ತುಸುತುಸುವೇ ಎದ್ದು ಆ ಅಲೆ, ಕಮಿಲಾಳ ಎದೆಗೆ ಬರುತ್ತದೆ, ಕೊರಳಿಗೆ ಬರುತ್ತದೆ, ಅವನೆದೆಯನ್ನು ಅವಳೆದೆಗೆ ಬೆಸೆದು ಅವಳನ್ನು ಕೊಚ್ಚಿ ಒಯ್ಯುತ್ತದೆ. ಹೈನೆ ಪ್ರವಾಹದ ಆ ಹೆಣ್ಣನ್ನು ಚುಂಬನ ಚಕ್ರತೀರ್ಥದಂತೆ ಮೇಲಕ್ಕೆ, ಕೆಳಕ್ಕೆ ಎತ್ತಿದ : ದೇವರೇ ಬಲ್ಲ, ಯಾವ ಮಾರ್ಗದಲ್ಲಿ ಹೊರಟಿದ್ದನೋ : ಅವಳೂ ಚಕಾರವೆತ್ತದೆ ಸಮ್ಮತಿ

ಪೂರ್ವಕವಾಗಿದ್ದಳು ! ನೀನು ಅವಳನ್ನು ಬಯಸಿದೆಯ, ಅವಳ ದೇಹ ಹಾಡುತ್ತದೆ, ಚುಂಬನದಿಂದ ಸಾಲನ್ನು ಸೃಷ್ಟಿಸುತ್ತಿದೆ, ಬಯಕೆಗಳಿಗೆ ನಾನು ಚುಂಬನಗಳ ದೋಣಿಯಾಗುತ್ತೇನೆ. ನನ್ನನ್ನು ಕರೆದೊಯ್ಯಿ, ಕರೆದೊಯ್ಯುತ್ತಿರು.... ಮಾತುಗಳು .... ಮಾತುಗಳು ಕಮಿಲಾಳ ಮೊಲೆ ತೊಟ್ಟಿನಿಂದ ಚಿಮ್ಮಿದವು. ಬಾಗಿಲಿನಿಂದ ಏನೋ ಸದ್ದು, ಯಾರೋ ಬಾಗಿಲು ಬಡಿಯುತ್ತಿದ್ದಾರೆ ! ಆಕೆ ಅವಳ ಬಿಗಿ ಬಂಧನದಿಂದ ಬಿಡಿಸಿಕೊಂಡಳು.

ಆನಂತರ :

"ಯಾರದು ? ಅನಿಷ್ಟ"

" ಶ್ರೀಯುತರು ಪಡಸಾಲೆಯ ಬೀಗ ಹಾಕಿದ್ದಾರೆ, ಯಾಕೋ ಗೊತ್ತಿಲ್ಲ. ಅದು ಇಲ್ಲಿನ ಪದ್ಧತಿಯಲ್ಲ. ಸುಮ್ಮನಿರು ! ನನಗೆ ಹೇಗೆ ಬೇಕೋ ಹಾಗೆ ಮಾಡುವೆ !"

" ನಿಮಗೆ ಆರೋಗ್ಯ ಸರಿಯಿರಲಿಕ್ಕಿಲ್ಲ ಸರ್ !"

ಅಲ್ಲಿಂದ ಇಟಾಲಿಯನ್‌ನಲ್ಲಿ ಆಣೆ - ಪ್ರಮಾಣ ನಡೆಯಿತು - ಪ್ರಾರ್ಥನೆಯಂತೆ. ಹೈನೆ ಬೀಗ ತೆಗೆದ. ಲ್ಯಾಕಿ ಆಗಲೇ ಕಾರಿಡಾರಿನಲ್ಲಿ ಆಣೆ ಪ್ರಮಾಣದ ಒಂದು ಕೊನೆ ಮುಟ್ಟಿದ್ದ. ಹತ್ತಿರದಲ್ಲೇ ಚಿಂದಿಬಟ್ಟೆಯ ವ್ಯಕ್ತಿಯ ತಲೆಯಮೇಲೆ ತರಹೇವಾರಿ ಹೂವು. "ಇದು ಉಪಯೋಗಕ್ಕೆ ಬಾರದ ಒಳ್ಳೆಯ ವಸ್ತು !"

" ಈ ಒಳ್ಳೇದು - ಉಪಯೋಗಕ್ಕೆ ಬರದ್ದು, ಕೋಣೆಗೆ ಬಂದ ಕೋಣೆಯಿಂದ ಹೊರಗಿನ ವೃತ್ತ ನೋಡಬಹುದು. ಆಮೇಲೆ ಪಡಸಾಲೆಯಿಂಥ ಕೋಣೆ ಇರೋದು ಇದೊಂದೆ !"

" ಹೌದು, ಹೌದು, ಪಡಸಾಲೆ ! " ಹುಡುಗ ಗೊಣಗಿದ.

" ಹೌದು ಸಹಜವಾದ ಪಡಸಾಲೆ ! " ನಾನೇ ಖುದ್ದಾಗಿ ಅವನಿಗದನ್ನು ಹೇಳಿದ್ದೆ ! " ಹೈನೆ ಒಪ್ಪಿಕೊಂಡ.

"ಯಾಕೆಂದ್ರೆ", ಲ್ಯಾಕಿ, ಅಸಹನೆಯಲ್ಲಿ ಹೇಳಿದ - ಅವನಿಗೊಂದು ರೀಡಿಂಗ್ ರೂಂ, ಬಚ್ಚಲುಮನೆ, ಆಫೀಸು ಕೊಡಲಾಗೋಲ್ಲ, ಏನೆ ಇರಲಿ, ಆತನ ಅನಾಗರಿಕ ತೊಡುಗೆಯಿಂದ.... "

ಓಹ್ ! ಹೌದು, ಹೈನೆ ಇದೀಗ ತಾನೇ ಎದ್ದಿದ್ದೇನೆ ಎಂಬಂತೆ ತಲೆಹಾಕಿದ.

''ರೊನ್ಡಾಲ್ಫಿನೋ, ಅವನ ಟ್ರೌಸರ್ ನೋಡಿ ! .....''

''ಆತನ ಅನಾಗರಿಕ ಉಡುಪಿನಿಂದಾಗಿ, ಲ್ಯಾಕಿ ಅಸಹನೆಯಿಂದ ಮುಂದು ವರೆಸಿದ, ಆತ ತನ್ನ ಮಾತಿನಮೇಲೆ ಒತ್ತುಹಾಕಿ ಹೇಳುತ್ತಿದ್ದುದ್ದಕ್ಕೆ ಕಾರಣ : ಕೆಮಿಲಾಳ ಕೆನ್ನೆ ಹೊಳೆಯುತ್ತಿದ್ದುದ್ದು ಕಣ್ಣು ಕಾಂತಿಯಿಂದ ತುಂಬಿದ್ದುದು ಏನೋ ನಡೆದಂತಿದೆ ಎನ್ನಿಸುತ್ತಿತ್ತು. ಆತ ಹೇಳಿದ ಆತನ ಅನಾಗರಿಕ ಉಡುಪಿನಿಂದಾಗಿ, ಈ ಹುಡುಗನಿಗೆ ಮುಂಚೆಯೇ ಸೂಚನೆ ಕೊಟ್ಟದ್ದೆವು. ಆದರೆ ಈ ಹುಡುಗನ ಪೆದ್ದುತನದಿಂದಾಗಿ.''

'' ಹೌದು, ನಿಜ ನಿಜ ! '' ಆ ಮಾತುಗಾರನಿಗೆ ಕಡಿವಾಣ ಹಾಕಲು ಹೈನೆ ಹೇಳಿದ.

''ನಾನು ಶ್ರೀಮತಿಯವರ ಮುಂದೆ ಖುದ್ದಾಗಿ ಬರಲು ಹೇಳಿದ್ದೆ.''

''ಆದರೆ ಈ ಠಕ್ಕ ನಮ್ಮನ್ನು ಹೆದರಿಸೋಕು ಪ್ರಾರಂಭಿಸಿ ಬಿಟ್ಟ.''

''ಇದೊಂದು ಭಾರೀ ಪಾತ್ರದಂತಿದ್ದ ಹಾಗಿಲ್ಲವೆ ಕಮಲಾ '', ಹೈನೆ ಕೇಳಿದ-

''ಈ ಸಣ್ಣ ಪಿಳ್ಳೆ ನಿನಗೆ ಹೇಳಿದನಲ್ಲವೆ ಹೈನೆ ?''

''ಹೌದು ! ಎಂಥ ತಮಾಶೆ ಮನುಷ್ಯ ! ನೀನು ಒಪ್ಪುದಿಲ್ಲವೆ ಕಮಿಲಾ ? ಈ ತಮಾಶೆಯನ್ನು ನೀನು ತಗೊಂಡು ಹೋಗಲ್ಲ ಎಂದು ಕೋಣೆ ನಂಬರ್ ಎಂಟು ಎಂದು ಹೇಳಿದ. ''

''ನಿನ್ನ ಕೋಣೆಗೆ ? ಒಂದೇ ನಿಮಿಷ ?'' - ಕೆನ್ನೆ ಕೆಂಪೇರಿಸಿ ಕಮಿಲಾ ಕೇಳಿದಳು.

'' ಸರಿ, ಆದರೆ ಆ ಹುಡುಗ ....''

'' ನೀನೊಬ್ಬ ಕೋತಿ, ನಿನ್ನ ಚೊಣ್ಣ ಭಾರೀ ಬೆಲೆಯದು ಅಂತಾನಾ ?''

''ಜ್ಯೂಲಿಯೋ ಚಿಂದಿ ತೊಟ್ಟಿದ್ದಾನೆ, ಜ್ಯೂಲಿಯೋಗೆ ಬೇರೆ ಬಟ್ಟೆ ಇಲ್ಲ. ಬೇರೆ ದಾರಿಯಿಲ್ಲ, ತಂದೆ-ತಾಯಿ ಇಲ್ಲ - ಚಿಂದಿ ಬಟ್ಟೆಯ ಹುಡುಗ ಹೇಳಿದ. ಕಣ್ಣೀರು ಹಾಕಿ ಆಣೆ ಮಾಡುತ್ತ. ಹೇಳು, ಎಷ್ಟು ?''

''ರೂಪಾಯಿ ಯಜಮಾನರೆ. '' ಹುಡುಗ ಹೇಳಿದ.

ಎಲ್ಲರೂ ನಕ್ಕರು.

ಆ ಹುಡುಗ ಮಿಂಚಿನಂತೆ ಕಿಸೆಪುಸ್ತಕಕ್ಕೆ ಕೈಹಾಕಿದ.

''ನಿಲ್ಲು '' ಎಂದ ಹೈನೆ.

'' ಹೌದು, ಇರಲಿ, ಫೆರೆರಾದಲ್ಲಿ ಎಷ್ಟು ದಿನ ಇರುತ್ತೀರಿ ಯಜಮಾನರೆ ?'' ಅಮ್ಮನವರು ಕೇಳಿದರು.

ಇನ್ನು ಎರಡು ಗಂಟೆಯಲ್ಲಿ ಫೆರೆರಾ ಬಿಟ್ಟಿರುತ್ತೇನೆ.

''ಎನ್ರಿಕೋ !''

''ಹೌದು, ಅಮ್ಮಾ ಅವರೇ''

''ಬೀದಿಗೆ ಹೋಗೋಣ ಬಾ. ಈ ಪಡಸಾಲೆಗಿಂತ ಬೀದಿ ಎಷ್ಟೋ ವಾಸಿ.''

'' ಒಳ್ಳೆಯದು - ರೋಜಾ, ಹೂವು, ಈ ಹೂವು ಕೋಣೆ ಎಂಟಕ್ಕೆ. ಒಂದು ನಿಮಿಷ ನಿಲ್ಲು, ಈ ಗುಲಾಬಿ ಇನ್ನೂ ಅರಳಬೇಕು, ಇದನ್ನು ನೀನೇ ಇಟ್ಟುಕೋ ....

''ಕರುಣೆ, ಎನ್ರಿಕೊ .... ಈ ಪುಟ್ಟ ಹೂವು ಎಲ್ಲವನ್ನೂ ಅಡಗಿಸಿಕೊಂಡ ಮಿತಭಾಷಿ ಫೆರೆರಾದ ತೋಟ ಈ ಹೂವಿನಿಂದ ನಿನ್ನನ್ನು ಸಂತುಷ್ಟಗೊಳಿಸುತ್ತವೆ.''

''ನಿನ್ನ ಕೈ..... ಇದನ್ನು ಕೋಣೆ ಎಂಟಕ್ಕೆ ತಗೊಂಡು ಹೋಗಿ, ಹಾಗೆ ನನ್ನ ಟೊಪ್ಪಿಗೆ ತಗೊಂಡು ಬಾ ಅಲ್ಲೇ ಇದೆ ''- ಲ್ಯಾಕಿ ಹೊರಟ.

''ನೀವಿದನ್ನು ಮಾಡುತ್ತಿಲ್ಲವೇ ? ಎನ್ರಿಕೋ ?''

''ಕಮಿಲಾ ನನಗರ್ಥವಾಗುತ್ತಿಲ್ಲ !''

''ನೀನಿಲ್ಲೇ ಇರ್ತೀಯ. ನನಗೇನೂ ಹೇಳಬೇಡ. ಕಡೇ ಪಕ್ಷ ಒಂದು ದಿನವಾದರೂ ಫೆರೆರಾದಲ್ಲಿರ್ತೀಯ.... - ಎನ್ರಿಕೋ, ಎನ್ರಿಕೋ..... ನಿನ್ನ ಮುಖ ಕಂದಿಹೋಗಿದೆ., ಅದನ್ನು ಹೊಳಪಾಗಿಸಲು ನೀನಿಲ್ಲಿರಲೇ ಬೇಕು ...''

''ಕಮಿಲಾ, ನಾನು ನನ್ನ ಮನೆಗೆ ಟೆಲಿಗ್ರಾಂ ಕಳಿಸಲೇ ? ನೀನು ಹೋಗು ಅನ್ನೊವರ್ಗೂ ದಿನವೂ ನನ್ನ ಮನೆಗೆ ಟೆಲಿಗ್ರಾಂ ಕಳಿಸುತ್ತಲೇ ಇರುವೆ.''

''ಎನ್ರಿಕೋ ನಿನ್ನ ಬೆರಳಲ್ಲಿ ಯಾವ ನಿಶ್ಚಿತಾರ್ಥದ ಉಂಗುರವೂ ಕಾಣುತ್ತಿಲ್ಲ

ವಲ್ಲ? ಯಾವತ್ತಾದರೂ ಅಂಥ ಉಂಗುರ ತೊಟ್ಟಿದ್ದೆಯಾ ?''

''ಬಹಳ ಹಿಂದೇನೇ ನಿನ್ನ ಬೆರಳಲ್ಲಿ ಅಂಥ ಉಂಗುರ ಗಮನಿಸಿದೇನೆ. ಓಹ್ ! ನನ್ನ ಟೊಪ್ಪಿಗೆ - ಥ್ಯಾಂಕ್ಸ್ !''

೫

ಪರಿಮಳ ತುಂಬಿದ ಗಾಳಿ ಫೆರೆರಾದ ಮೂಲೆ ಮೂಲೆಗಳನ್ನು ಸಮುದ್ರದಲೆಗಳಂತೆ ಸುತ್ತಿ ಸುತ್ತಿ ಸಂಚರಿಸಿತು. ಕಿವಿಗಳನ್ನು ಕಿವುಡಾಗುವವರೆಗೆ ಕೊರೆಯಿತು.

ಕಾಫಿ ಹೌಸ್‌ನಲ್ಲಿ ಗುಲ್ಲು, ಗಲಗು, ಗದ್ದಲ, ನಗರದ ಒಂದೇ ರಸ್ತೆ ಕಾಫಿ ಹೌಸಿನೆಡೆ ಬರುತ್ತದೆ. ನಗರದ ಬೇರೆಲ್ಲ ಮೂಲೆಗಳೂ ಕಿವುಡಾಗಿ ಕಾಫಿ ಹೌಸಿನಲ್ಲಿ ಮಾತ್ರ ಮಾತುಗಳಿವೆಯೋ ಎಂಬಂತಿತ್ತು. ಯಾಕೆ, ಜಗತ್ತಿನ ಈ ಕಾಫಿ ಹೌಸಿನಲ್ಲಿ ಟೆಲಿಗ್ರಾಂ ಬರೆದು ಅದನ್ನು ತನ್ನೂರಿಗೆ ಕಳಿಸಲು ಅವನಿಗಾಗುತ್ತಿರಲಿಲ್ಲವೇ ? ಅದವನಿಗೆ ಇಷ್ಟವಿಲ್ಲವೆ ? ಒಂದು ಕಳಿಸಿದ್ದು ಸಾಕೆಂಬ ತೃಪ್ತಿ ಅವನಿಗಿರಬಹುದೆ ? ಅಲ್ಲಿ ಅತ್ಯಂತ ಕರ್ಷಣೀಯ, ಬಲವಾದ ಭಾವನೆಗಳಿದ್ದವೆ ? ಆದರೆ ಅವಳು ಆತನಿಗೆ ನೆನಪಿಸಿರದಿದ್ದರೆ ಆತ ಟೆಲಿಗ್ರಾಂ ಬಗ್ಗೆ ಮರೆತೇ ಹೋಗಿರುತ್ತಿದ್ದ. ಈ ರೊನ್ಡೋಫಿನೊ ಯಾರು? ಆಕೆ ಅವಳ ಬಗ್ಗೆ ಕೇಳಬೇಕೆಂದಿದ್ದಳು. ಆದರೆ ಕೇಳಿಯಾಳೆ ? ಇವು ಅತ್ಯಂತ ಅಂತರಂಗದ ವಿಷಯಗಳು. ದೇವರೆ, ನಾನೇನು ಚಿಕ್ಕಹುಡುಗಿಯಲ್ಲ. ಆಗಬಲ್ಲೆ, ಆಗುವೆ. ಇವತ್ತು ನಾನು ಎಲ್ಲದರ ಬಗ್ಗೆ ಕೇಳುವ ಹಕ್ಕು ಪಡೆದಿದ್ದೇನೆ, ಇವತ್ತು ಎಲ್ಲವನ್ನ ಕೇಳುವ ಹಕ್ಕನ್ನು ಕಳೆದುಕೊಳ್ಳಬೇಕು. ಅವರು, ಆ ಕಲಾವಿದರು, ನಿನ್ನನ್ನು ಹಾಳು ಮಾಡುತ್ತಾರೆ, ಗೆಳೆಯ. ಆದರೆ .... ಇದು .... ಆ ರೆಲಿನ್ಸ್ಕಿ..... ? ಚೈತ್ರದಲ್ಲೂ ! ಎಂಥ ಏಕಾಂಗಿ? ಹೊಸ ವರ್ಷದ ಆ ಖುಷಿಯಲ್ಲಿ ? ಇಲ್ಲ ಆತ ಯಾವತ್ತೂ ನನಗೆ ಹತ್ತಿರದವನಾಗಿರಲಿಲ್ಲ.... ಈಗ ....

''ನಿನ್ನಷ್ಟಕ್ಕೆ ಯಾವುದರ ಬಗ್ಗೆ ಮಾತಾಡ್ತಾ ಇದೀಯ ಕಮಿಲಾ ?''

''ನೀನ್ಯಾಕೆ ಅಷ್ಟೊಂದು ಯಾವುದರಲ್ಲೋ ವಿಷಾದದಿಂದ ಮುಳುಗಿ ಬಿಟ್ಟಿದಿಯಾ ಎನ್ರಿಕೊ ? ದುಃಖಿಸಬೇಡ. ನಿನ್ನನ್ನು ಬಿಟ್ಟುಬಿಡುವೆ. ನೀನು ಲ್ಯಾಕಿಗೆ ಹೇಳಿ ಟೆಲಿಗ್ರಾಂ ಕೊಡಬಹುದ್ದು. ಮನೆಗೆ ಹಾಗೆ ಸುಮ್ಮನೆ ಟೆಲಿಗ್ರಾಂ ಕಳಿಸು.

ಫೆರೆರಾದಿಂದ ವೆನಿಸ್‌ಗೆ, ಮಿಲಾನ್‌ಗೆ ಹೋಗುವ ರೈಲಿದೆ, ರಾತ್ರಿ. ಅಷ್ಟೇನೂ ತಡವಾಗಿಲ್ಲ. ಇನ್ನೂ...''

''ನೀನೇನು ಮಾತಾಡುತ್ತಿರುವೆ ಕಮಿಲ ?''

''ನೀನ್ಯಾಕೋ ಎಲ್ಲೋ ಮುಳುಗಿಹೋಗಿದ್ದೀಯಲ್ಲ ಎನ್ರಿಕೊ ? ರೊನ್ಡೊಲ್ಫಿನೋ ಬಗ್ಗೆ ನನಗೂ ಸ್ವಲ್ಪ ತಿಳಿಸು ....''

ಹೈನೆ, ಬೆಚ್ಚಿ ತನ್ನ ಖುರ್ಚಿಯಿಂದ ಎದ್ದ.

''ಆತ ಇಲ್ಲಿದಾನೇಂತ ನೀನಗಾರು ಹೇಳಿದರು ? ನನ್ನ ಗೈರು ಹಾಜರಿಯಲ್ಲಿ, ಎಲ್ಲಿ ಅವನೆಲ್ಲಿ ಕಮಿಲಾ ?''

''ನೀನು ನಿತ್ರಾಣನಾಗಿದ್ದೀಯ ಎನ್ರಿಕೊ. ಯಾರ ಬಗ್ಗೆ ಮಾತಾಡ್ತಿದ್ದೀಯ ನೀನು ? ನಾನು ಕೇಳಿದ್ದು ಹೆಣ್ಣಿನ ಬಗ್ಗೆ, ಹೆಣ್ಣಲ್ಲವೆ ? ಅಥವಾ ನಾನೇ ಸರಿಯಾಗಿ ಉಚ್ಚರಿಸಲಿಲ್ಲವೆ ? ರೊನ್ಡೊಲ್ಫಿನೊಯಾ ಇರಬೇಕು ಬಹುಶಃ. ಎಲ್ಲ ಉಚ್ಚಾರಣೆಯಲ್ಲಿದೆ ಕುತ್ಕೋ. ಜನ ಎಲ್ಲ ನಮ್ಮನ್ನೇ ನೋಡ್ತಿದಾರೆ.''

''ಅವಳ ಬಗ್ಗೆ ನಿನಗ್ಯಾರು ಹೇಳಿದರು ? ಆತ ನಿನಗೇನಾದರೂ ಹೇಳಿದನೆ? ಆದರೆ ಇದೆಲ್ಲ ಇಲ್ಲಿ ಹೇಗೆ ಬಂತು? ಅದು ಆಕಸ್ಮಿಕವೆಂಬಂತೆ ನಾವು ಇಲ್ಲಿರುವಾಗ ?''

''ಅಂಥದ್ದೇನೂ ಆಗಿಲ್ಲ ಎನ್ರಿಕೊ ? ನಾನೇ ಯೋಚಿಸಿದೆ. ಅದು ಕ್ಷಣ ಕ್ಷಣಕ್ಕೂ ಬೆಳೆಯುತ್ತಿದೆ. ಅಂಥವರು ಇಬ್ಬರಿದ್ದಾರೆಯೆ ?''

''ಅದೊಂದು ಮಾಯ ! ನನ್ನ ಮೆದುಳಿಗೆ ನಿಲುಕದೆ, ಸ್ತಿಮಿತವನ್ನೇ ಕಳೆದು ಕೊಳ್ಳುತ್ತಿರುವೆ . ಈ ಹೆಸರು ನೀನೆಲ್ಲಿ ನೋಡಿದೆ, ಯಾರು ಹೇಳಿದರು ?''

''ಇದು ಇರುಳು, ನನ್ನ ಕನಸಿನಲ್ಲಿ ಕಂಡೆ! ಇದೊಂದು ತೀರ ಸಾಮಾನ್ಯ ಹೆಸರು ! ಅಲ್ಲದೆ ರೊನ್ಡೊಲ್ಪಿನೋ ಯಾರೂಂತ ನೀನಿನ್ನೂ ನನಗೆ ಹೇಳಿಲ್ಲ. ಯಾರು ಹೇಳು ಆ ಮಾಂತ್ರಿಕಳು. ಎನ್ರಿಕೊ ?''

''ಓಹ್ ! ಕಮಿಲಾ, ಆ ರೊನ್ಡೊಲ್ಪಿನೋ - ನೀನೆ !''

''ಓಹ್ ! ನೀನೊಬ್ಬ ಭಾರಿ ಚತುರ ನಟ. ಇಲ್ಲ, ಇಲ್ಲ, ನನ್ನ ಬಿಡು. ಮುಟ್ಟಬೇಡ, ಹೋಗಲು ಬಿಡು !''

ಇಬ್ಬರೂ ಜಿಗಿದರು. ಇಬ್ಬರನ್ನೂ ಬೇರ್ಪಡಿಸಿದ್ದು ಚಿಕ್ಕ ಟೇಬಲ್. ಕಮಿಲಾ, ಚಿಕ್ಕ ಕುರ್ಚಿಯ ಹಿಂಭಾಗ ಹಿಡಿದುಕೊಂಡಳು. ಅವಳಿಗೇನೋ ಆಯಿತು ... ಅವಳ ಯೋಚನೆ, ನಿರ್ಧಾರ ಬಲವಾಗಿ ಹಿಡಿದು ಅಲ್ಲಾಡಿಸಿದರು.... ಎಲ್ಲ ವೃತ್ತದಂತೆ ಗರಗರ ತಿರುಗಿದವು.... ಕಾಫಿ ಬಟ್ಟಲು ಮೇಲೆ-ಕೆಳಗೆ, ಅಕ್ಕ-ಪಕ್ಕ... ಆಕೆ ಕಳೆದು - ಹೋಗಿದ್ದಳು. ಕಣ್ಣೀರು ಅವಳ ಕೊರಳಿನ ಮಾಲೆ.... ಎಲ್ಲ ಟೇಬಲ್ಲುಗಳು ಈ ಅಸಮಾಧಾನಿಯತ್ತ ನೋಡಿದವು. ಆರ್ಕೆಸ್ಟ್ರಾ ಹಾಡು ನಿಲ್ಲಿಸಿತು, ಆಕೆಯೂ ನೋಡ್ಡಿದಳು. ''ಓ ಅರ್ಚಕನೇ ನೀರು ! ''

೬

ಆಕೆ ತುಸು ಜ್ವರದಿಂದ ಬಳಲಿದಳು.

''ತುಂಬ ಪುಟಾಣಿ ಕೋಣೆ ನಿನ್ನದು.... ಆಹ್ ! ಸರಿ, ತುಂಬಾ ಥ್ಯಾಂಕ್ಸ್ ನಿನಗೆ. ಸ್ವಲ್ಪ ಹೊತ್ತು ಮಲಕ್ಕೋಬೇಕು ನಾನು. ಮಲೇರಿಯಾ, ಆದರೆ ... ನನ್ನದೇ ಸ್ವಂತ ಮನೆಯೊಂದಿದೆ. ನನ್ನನ್ನು ಬಿಟ್ಟು ಹೋಗಬೇಡ. ಮತ್ತೆ ಜ್ವರ ಅಮರಿ ಕೊಂಡು ಬಿಡಬಹುಹು. ಎನ್ರಿಕೋ...''

''ಆಗಲಿ, ಪ್ರಿಯೇ !''

''ನೀನ್ಯಾಕೆ ಮೌನವಾಗಿದ್ದೀಯ ? ಬೇಡ, ಬೇಡ, ಅದೆಲ್ಲ ಬೇಡ, ಮೊದಲಿದ್ದ ಹಾಗೇ ಇರಲಿ. ಓಹ್ ! ಎನ್ರಿಕೋ ಇಂದು ಬೆಳಿಗ್ಗೆ ಇತ್ತೆ ? ಎಂಬುದೂ ಮರೆತು ಹೋಗಿದೆ ನನಗೆ. ಅವಿನ್ನೂ ಇವೆಯ ? ''

''ಏನು ಕಮಿಲಾ?''

''ಅದೇ ಹೂವು !''

''ಈ ಇರುಳು ಕೂಡ ಅವನ್ನು ತಗೊಂಡು ಹೋಗಬೇಕು. ಅಷ್ಟಿದೆ ಅವುಗಳ ಪರಿಮಳ. ಆ ಸುವಾಸನೆಯ ತೂಕ ಎಷ್ಟಿದ್ದೀತು ? ಅದನ್ನು ತಗೊಂಡು ಹೋಗ್ತೀನಿ ನಾನು. ಏನು ಮಾಡ್ತಿದ್ದೀಯಾ ಕಮಿಲಾ ?''

''ಏಳೋದಕ್ಕೆ ಪ್ರಯತ್ನಿಸುತ್ತಿದೇನೆ. ಎಲ್ಲ ಮುಗಿಯಿತು. ನನ್ನ ಕಾಲಮೇಲೆ

ನಾನು ನಿಲ್ಲಬಹುದೀಗ... ಹೌದು, ಅವನ್ನು ತಗೊಂಡು ಹೋಗಬೇಕು.... ಆದರೆ ಯಾವ ಜಾಗಕ್ಕೆ ? ಒಂದು ನಿಮಿಷ ತಡಿ. ಎರೋಸ್ ಸರ್ಕಲ್‌ನಲ್ಲಿ ನನ್ನ ಸ್ವಂತ ಮನೆಯಿದೆ. ಇಲ್ಲಿಂದಲೂ ನಿನಗದು ಕಾಣಸಬಹುದು ! ''

''ಆಗಲೇ ಕತ್ತಲಾಯ್ತು, ಚಳಿಯೂ ಇದೆ ಬಹುಶಃ !''

''ಬೀದಿಯಲ್ಲಿ ಜನ ಗುಂಪಾಗಿ ನಿಂತಿದಾರಲ್ಲ, ಯಾಕೆ ?''

''ಉಶ್ ! ಪ್ರತಿಶಬ್ದವೂ ಅವರಿಗೆ ಕೇಳಿಸುತ್ತೆ.''

''ಅವರೆಲ್ಲ ಯಾವುದರ ಬಗ್ಗೆ ಮಾತಾಡ್ತಿದ್ದಾರೆ ?''

''ನನಗೆ ಗೊತ್ತಿಲ್ಲ ಕಮಿಲಾ. ಬಹುಶಃ ಯುವಕರು, ತಮ್ಮ ಬಗ್ಗೆ ತಾವೇ ಕೊಚ್ಚಿಕೊಳ್ಳುತ್ತ.... ... ನಾವು ಮಾತಾಡ್ತಿದ್ದಿವಲ್ಲ ಅದರ ಬಗ್ಗನೇ ಅವರೂ ......''

''ಎಲ್ಲಿ, ನಾನೂ ನೋಡಬೇಕು ಅವರನ್ನ. ಮೂಲೆಯಲ್ಲಿ ನಿಂತಿದ್ದಾರಲ್ವ ಈಗ. ದೇವರೆ, ಆ ಹುಡುಗ ತಲೆಯಿಂದ ಹೇಗೆ ಡಿಕ್ಕಿ ಹೊಡಿತಿದಾನೆ. ಈಗ ಸುಮ್ಮನಾದ. ಬೆಳಕು ಕೊಂಬೆ ಮೇಲೆ ಬೀಳ್ತಯಿದೆ. ಆದರೆ ಒಂದೂ ಬೀದಿ ದೀಪ ಕಾಣ್ತಿಲ್ವಲ್ಲ. ನಾವೂ ಕಳೆದು ಹೋಗಿದೆವಾ ?''

''ಕಳೆದು ಹೋಗಿರೋದು ಏನು ಕಮಿಲಾ.''

''ನಮ್ಮ ಮೇಲೆ ಇನ್ನೊಂದು ಮಹಡಿ ಇದೆಯ ?''

''ಇರಬೇಕು ಕಮಿಲಾ.''

ಕಮಿಲಾ ಕಿಟಕಿಯಿಂದ ಮೈ ಬಾಗಿಸಿ, ಬೀದಿಯ ಮೂಲೆಯನ್ನು ನೋಡಿದಳು.

''ಇಲ್ಲ.... -'' ಆದರೆ ಹೈನೆ ಅವಳ ಮಾತನ್ನು ಪೂರ್ತಿಯಾಗಿಸಲು ಬಿಡಲಿಲ್ಲ. ''ಅಲ್ಲಿ ಯಾರೂ ಇಲ್ಲ -'' ಎಂದು ಮತ್ತೊಮ್ಮೆ ಹೇಳಿ, ಬಾಗುವ ಪ್ರಯತ್ನದಿಂದ ಈಚೆ ಬಂದಳು.

''ಏನು, ಏನಾಯಿತು ?''

''ನಾನು ಅಂದುಕೊಂಡದ್ದು ಅಲ್ಲೊಬ್ಬ ಮನುಷ್ಯ ಇದಾನೆ. ಕಿಟಕಿಯಲ್ಲಿ ದೀಪ ಇಟ್ಕೊಂಡಿದಾನೆ. ಆ ಕಿಟಕಿ ಮೂಲಕ ಬೆಳಕನ್ನು ಬೀದಿಗೆ ಚೆಲ್ತಿದಾನೆ. ನನ್ನ ಮುಖ ಅತ್ತ ತಿರುಗಿಸಬೇಕೂಂತ ಇದ್ದೆ. ಆದರೆ ಅಲ್ಲಿ ಯಾರೂ ಇಲ್ಲ. ''

''ಇದು ಕವಿತೆಯಂತಿದೆ, ಕಮಿಲಾ...''

''ಹೌದೆ ? ನನಗೆ ಗೊತ್ತಿಲ್ಲ. ಅಲ್ಲಿದೆ, ಆ ಥಿಯೇಟರ್ ಬಳಿ. ಅಲ್ಲಿ ಆ ಊದಾ ಬಣ್ಣದ ಹೂವಿನ ಪರಿಮಳವಿದೆಯಲ್ಲ, ಅಲ್ಲಿ.''

''ಅಲ್ಲೇನಿದೆ, ಕಮಿಲಾ ?''

''ನೀನೊಬ್ಬ ದಡ್ಡ ಹುಡುಗ. ಅಲ್ಲಿರೋದು ನನ್ನ ಮನೆ.''

''ಹೌದು, ನನಗರ್ಥವಾಗುತ್ತೆ. ಆದರೆ ಇದು ನಿತ್ರಾಣದಿಂದಾದ ಉದ್ರೇಕ.''

''ಒಂದು ಕೋಣೆಯ ನಿನಗಾಗಿ ಆಗಲೇ ಮೀಸಲಿಟ್ಟಿದೆ ಅಲ್ಲಿ.''

''ಎಂಥ ದೂರಾಲೋಚನೆ ನಿನ್ನದು ! ಟೈಮೆಷ್ಟಾಯಿತು ಈಗ ? ನಾವು ಹೊರಡಬೇಕು. ಹೋಗಿ ನನ್ನ ಕೋಣೆಯನ್ನೊಮ್ಮೆ ನೋಡಬೇಕು - ಕುತೂಹಲಕರ ವಾಗಿದೆ ಎಲ್ಲ. ''

ಅವರು ಕೋಣೆ ನಂಬರ್ ಎಂಟನ್ನು ಬಿಟ್ಟು ನಗುತ್ತ, ಕುಲುಕುತ್ತ ಶಾಲೆ ಹುಡುಗರು ರೈಲನ್ನು ಕಂಡಾಗ ಮಾಡುವಂತೆ ಮಾಡುತ್ತ ಹೊರಟರು.

೭

ಬೆಳಗಾಗುವುದಕ್ಕಿಂತ ಎಷ್ಟೋ ಮುಂಚೆ, ಚರ್ಚಿನ ಗಂಟೆಗಳು ಮೊಳಗುತ್ತಿದ್ದವು. ಉಜ್ವಲ ಬೆಳಗನ್ನು ಎದುರುಗೊಳ್ಳಲು ಕಾತರಗೊಂಡಂತಿತ್ತು ಗಂಟೆಯ ನಿನಾದ. ಹೊಟೇಲಿನ ಒಂದೇ ಒಂದು ದೀಪ ಉರಿಯುತ್ತಿತ್ತು. ಆ ದೀಪ ಹತ್ತಿದ್ದು ಟೆಲಿಫೋನ್ ಕಿಣಿಕಿಣಿಸಿದಾಗ, ಆದರೆ ಆ ಮೇಲೆ ಆ ದೀಪ ನಂದಿರಲಿಲ್ಲ. ಟೆಲಿಫೋನ್ ಆಪರೇಟರ್ ಆ ಕಡೆಯವನೊಡನೆ ಸ್ವಲ್ಪ ಹೊತ್ತು ಜಗಳವಾಡಿದ್ದ. ಹೊಟೇಲಿನ ಅರೆಬರೆ ಕತ್ತಲೆಯಲ್ಲಿ ತೂಕಡಿಕೆ ಬೇರೆ. ಕೊನೆಗೆ ಕೇಳಿದ್ದ ''ಹೌದು, ಯಜಮಾನರು ಬೆಳಿಗ್ಗೆ ಹೊರಡ್ತಿದಾರೆ. ನಿನಗೆ ತುಂಬ ಅರ್ಜೆಂಟ್ ಇದ್ದರೆ ಇನ್ನರ್ಧ ಗಂಟೆಯಲ್ಲಿ ಫೋನ್ ಮಾಡ್ತಾರೆ. ನಿಮ್ಮ ನಂಬರ್ ಕೊಡ್ತೀರ ? ಅವರು ಯಾರನ್ನು ಕರೆಯಬೇಕೂಂತನೂ ಹೇಳ್ತೀರ ?''

ಕೋಣೆ ನಂಬರ್ ಎಂಟರ ವ್ಯಕ್ತಿಯನ್ನು ಫೋನಿನ ಬಳಿ ಹೇಳಿ ಕಳಿಸಿದ ಮೇಲೆ ಕೋಣೆ ದೀಪ ಹಾಗೇ ಉಳಿಯಿತು. ಆಪರೇಟರ್‌ನೊಂದಿಗೆ ಒಂದೆರಡು

ಮಾತನಾಡಿದ ಮೇಲೆ ಮಜುಗರವಾಗಿ, ನಿತ್ರಾಣ ಆವರಿಸಿತು. ಆಮೇಲೆ ಗಟ್ಟಿ ಧೈರ್ಯದಿಂದ ಫೋನ್ ತೆಗೆದುಕೊಂಡು ಲೈನ್‌ನ ಆ ಕಡೆಯಿದ್ದ 'ಓಸ್' ಪತ್ರಿಕೆಯ ಸಂಪಾದಕನೊಂದಿಗೆ ಮಾತಾಡತೊಡಗಿದ.

''ಓಹ್ ನಾನು ನಿದ್ರಾಹೀನತೆಯಿಂದ ಬಳಲುತ್ತಿದ್ದೇನೆಂದು ನಿಮಗಾರು ಹೇಳಿದರು, ಭಯಂಕರ ಇದು!''

''ನನಗೆ ಗೊತ್ತು ಮೆಟ್ಟಿಲಿಳಿಯುವಾಗ ತಪ್ಪಿ ಟೆಲಿಫೋನ್ ಕಡೆ ಬಂದೇ ನೀನು. ಸುಮಾರು ಹೊತ್ತು ಯುವಕರು ಬೆಲ್ ಮಾಡುತ್ತಲೇ ಇದ್ದರು?''

''ಹೌದು, ನಾನು ಒಂದು ದಿನ ಹೆಚ್ಚಿಗೆ ಉಳಿದೆ!''

''ಲ್ಯಾಕಿ ಹೇಳಿದ್ದು ಸರಿ ಹಾಗಾದರೆ. ನಾನವರಿಗೆ ಮನೆಯ ವಿಳಾಸ ಕೊಡಲಿಲ್ಲ. ಕೊಡಬೇಕೆಂದೂ ಇರಲಿಲ್ಲ.''

''ನಿಮಗೆ? ಖಂಡಿತ ಇಲ್ಲ ನಾನದನ್ನು, ನೀವಂದು ಕೊಂಡಂತೆ ಖಂಡಿತ ಇವತ್ತು ಪ್ರಕಟಿಸುವ ಇರಾದೆ ಇರಲಿಲ್ಲ.''

''ಈಗ ನಿನಗದು ಬೇಕೂ ಇಲ್ಲ.''

''ಕೋಪ ಮಾಡ್ಕೋ ಬೇಡಿ ಸಂಪಾದಕರೆ. ದಯವಿಟ್ಟು ಶಾಂತರಾಗಿ.''

''ರೆಲಿನ್ಸ್ಕಿ ನಿನಗೆ ಮಧ್ಯವರ್ತಿಯಾಗಬೇಕಿರಲಿಲ್ಲಿ.''

''ನೀವು ಶಾಂತರಾಗೀಂತ ಇನ್ನೊಮ್ಮೆ ನಿಮ್ಮನ್ನು ಬೇಡಿಕೊಳ್ಳಲೇ. ರೆಲಿನ್ಸ್ಕಿ ತನ್ನ ಜೀವಮಾನದಲ್ಲಿ ಯಾವ ಹಸ್ತಪ್ರತಿಯನ್ನೂ ಕಳೆದುಕೊಳ್ಳಲಿಲ್ಲ!''

''ಕ್ಷಮಿಸಿ. ಇದು ನಿಮ್ಮ ಮೊದಲ ಸ್ಪಷ್ಟ ಅಭಿಪ್ರಾಯ? ಇಲ್ಲ ಖಂಡಿತ ಸಾಧ್ಯವೇ ಇಲ್ಲ.''

''ಇನ್ನೂ ಅದರ ಬಗ್ಗೇನೆ ಮಾತಾಡ್ತಾ ಇದ್ದೀರ? ಹಾಗಾದರೆ ನಾನು ಒಪ್ಪಿಕೊಂಡು ಬಿಡಬೇಕು. ನಿನ್ನೆಯ 'ಓಸ್' ಪತ್ರಿಕೆಗೆ ಸಂಬಂಧಿಸಿದಂತೆ, ಅದೊಂದು ಬೆದರಿಕೆ ಅಷ್ಟೆ! ಆದರೆ, ಈ ಬೆದರಿಕೆ ಹೊರಗೆ ಜನ ಮಾಡ್ತಾರಲ್ಲ ಆ ಅರ್ಥದಲ್ಲಲ್ಲ.''

''ನಿನ್ನೆ ಸಂಜೆ ಆರುಗಂಟೆಗೆ....''

''ಇದರಿಂದೆಲ್ಲ ಏನಾಯ್ತೂಂತ ನೀವು ಊಹಿಸಿದ್ದರೆ, ಅಥವಾ ಕೆಟ್ಟ ಮಾತಲ್ಲಿ

ಬೈಯ್ಯುತ್ತಿದ್ದರೆ, ಈಗ ನಾನು ಹೇಳಿದ ಸತ್ಯಕ್ಕಿಂತ ಬಹುದೂರ ಅಲ್ಲದೆ ಬೇರೇನೂ ಅಲ್ಲ.''

''ಹೌದು . ಇವತ್ತು ಹಾಗೇ ಹೇಳೋದಕ್ಕೆ ಯಾವ ಅಭ್ಯಂತರ ಇಲ್ಲ ಹೆನ್ರಿಶ್ ಹೈನೆ. ''

''ಅಷ್ಟೇ.''

''ತುಂಬ ಸಂತೋಷವಾಯ್ತು ನೀವು ಹೇಳಿದ್ದು ಕೇಳಿ.''

''ಏನು ನೀವು ಹೇಳ್ತಿರೋದು ?''

......

.....

''ಒಂಬತ್ತು ಮೂವತ್ತೈದು ಅಥವಾ ವೇಳೆ ಯಾವುದೇ ಆಗಿರಲಿ. ಆಶ್ಚರ್ಯದ ಸರಪಳಿನೇ ಇರುತ್ತೆ. ಬರದಿದ್ದರೆ ಒಳ್ಳೆಯದು !''

.....

''ಬೆಳಿಗ್ಗೆ ಬೇಕಾದರೆ ಹೊಟೇಲಿಗೆ ಬನ್ನಿ, ಅದೇ ಒಳ್ಳೆಯದು ಅನ್ನಿಸುತ್ತೆ. ಅಥವ ನನ್ನ ಮನೆಗೆ, ಸಂಜೆ ಬೇಕಾದರೆ ಬನ್ನಿ. ಜತೆಗೆ ಹೂವ ತರೋದಕ್ಕೆ ಮರೆಯ ಬೇಡಿ.''

''ಹೌದು ಸಂಪಾದಕರೆ, ನೀವೊಬ್ಬ ಅಪರೋಕ್ಷ ಜ್ಞಾನಿಗಳು !''

....

''ಅಥವಾ ನಾಳೆ ನಗರದ ಹೊರಗಿನ ಸರ್ಕಲ್ ಬಳಿ....''

.....

''ನನಗೆ ಗೊತ್ತಿಲ್ಲವಾದರೂ ಗಂಭೀರ ವಿಷಯವೇ .....''

......

''ಅಥವಾ ಇನ್ನೆರಡು ದಿನ ನೀವು ತುಂಬ ಬ್ಯುಸಿಯಾಗಿದ್ದರೆ ಎರಡು ದಿನದ ನಂತರ ಕ್ಯಾಂಪೊ ಸೆಂಟೋಕ್ಕೆ ಬನ್ನಿ.''

....

''ನಿಮಗೆ ಹಾಗನ್ನಿಸುತ್ತ ?''

.....

''ಹೌದೆ, ನಿಜಕ್ಕೂ ಹಾಗನ್ನಿಸುತ್ತದೆಯಾ ?''

.....

''ಹಗಲು ಆರಂಭವಾಗೋ ಮುಂಚೇನೆ ಎಂಥ ವಿಚಿತ್ರ ಸಂಭಾಷಣೆ - ದಯವಿಟ್ಟು ನನ್ನನ್ನು ಕ್ಷಮಿಸಿ, ತುಂಬ ದಣಿದ್ದಿದ್ದೇನೆ, ಕೋಣೆಗೆ ವಾಪಸ್ ಹೋಗಬೇಕು ನಾನು.''

.....

''ನೀವು ಮಾತಾಡೋದು ಕೇಳಸ್ತ ಇಲ್ಲ. ಏನಂದ್ರಿ ? ನಂಬರ್ ಎಂಟೆ ? ಹೌದು, ಹೌದು ತುಂಬ ಸೊಗಸಾದ ಕೋಣೆ ಸಂಪಾದಕರೆ - ತನ್ನದೇ ಹವಾಮಾನವಿರುವ ಕೋಣೆ .... ಹೌದು, ಅಲ್ಲಿ ಐದುಗಂಟೆಗಳ ಕಾಲ ಸತತವಾಗಿ ಚಿರ್ರಂತನವಾದ ವಸಂತಋತುವಿತ್ತು. ನಮಸ್ಕಾರ, ಮತ್ತೆ ಭೇಟಿಯಾಗುವೆ, ಸಂಪಾದಕರೆ,''

ಹೈನೆ ಯಾಂತ್ರಿಕವಾಗಿ ಫೋನನ್ನು ಇಟ್ಟ.

''ಇಟ್ಟುಬಿಡಬೇಡ ಎನ್ರಿಕೋ !'' ವರಾಂಡ ಮೂಲೆಯ ಕತ್ತಲೆಯಿಂದ ಧ್ವನಿ ತೂರಿಬಂತು.

''ಕಮಿಲಾ !''

೧೯೧೫ / ೧೯೧೮

[I l Tratto de appele]

ಕಾದಂಬರಿ

ಪಯಣ

(ಡಾಕ್ಟರ್ ಝಿವಾಗೋ ಕಾದಂಬರಿಯ ಮೊದಲ ಭಾಗದ ಕೊನೆ ಅಧ್ಯಾಯ)

ಮಾರ್ಚ್‌ನ ಕೊನೆ, ಎಂದಿನಂತೆ ಈ ತಿಂಗಳ ಕೊನೆಯ ಕೆಲವು ದಿನಗಳು, ವರ್ಷದ ಬೆಚ್ಚಗಿನ ದಿನಗಳಲ್ಲಿ ಮೊದಲನೆಯವು. ಚೈತ್ರಮಾಸ ಆನಂತರ ಇನ್ನಷ್ಟು ಚಳಿಯನ್ನು ತರುತ್ತದೆ.

ಝಿವಾಗೋ ಕುಟುಂಬ ಪ್ರಯಾಣಕ್ಕೆ ಸಿದ್ಧತೆ ನಡೆಸಿತ್ತು. ಗೊಂದಲ-ಗಲಿಬಿಲಿ, ನಿವಾರಿಸಲು, ಹಕ್ಕಿ ಹಿಂಡಿನ ಹಾಗೆ ಮನೆಗೆ ಮುಕುರುವ ಅಕ್ಕಪಕ್ಕದವರಿಗೆ - ಮನೆ, ಈಸ್ಟರ್ ಹಬ್ಬಕ್ಕೆ ಅಣಿಗೊಳಿಸಲು ತಾತ್ಕಾಲಿಕವಾಗಿ ಖಾಲಿ ಮಾಡುತ್ತಿರುವುದಾಗಿ ಹೇಳಿದರು.

ಯೂರಿ ಈ ಪ್ರಯಾಣಕ್ಕೆ ಅಸಮ್ಮತಿ ಸೂಚಿಸಿದ್ದ. ವಿಷಯ ಇಲ್ಲಿಯವರೆಗೂ ಬರಲಿಕ್ಕಿಲ್ಲವೆಂದು ಆತ ಈ ವರೆಗೆ ಬರೀ ತತ್‌ಕ್ಷಣಕ್ಕೆ ಕೆಲವು ತಕರಾರು ಎತ್ತಿದ್ದ. ಆದರೆ ಇದೀಗ ಅವನು ಅಂದುಕೊಂಡಿದ್ದನ್ನೆಲ್ಲ ಹೇಳುವ ಕಾಲ ಬಂದಿತ್ತು.

ತಾನಾಗಿಯೇ ಕುಟುಂಬದ ಸಭೆಯನ್ನು ಕರೆದ. ತೋನ್ಯಾ ಹಾಗೂ ಆಕೆಯ ತಂದೆ. 'ನಾನು ಹೇಳೋದು ತಪ್ಪು ಅಂತ ನಿಮಗೆ ಅನ್ನಿಸುತ್ತಾ ?' - ಕೊನೆಯಲ್ಲಿ ಆತ ಕೇಳಿದ್ದ. 'ಈಗಲೂ ಹೋಗಲೇಬೇಕೆಂದು ನಿಮ್ಮ ಸೂಚನೆಯೇ ?'

'ನೀನು ಹೇಳೋದು, ಎಲ್ಲಿವರೆಗೆ ಸಾಧ್ಯವೋ ಅಲ್ಲಿವರೆಗೆ, ಇನ್ನೆರಡು ವರ್ಷ ಸಹಿಸಬೇಕೂಂತ ಅಲ್ವ ?' ತೋನ್ಯಾ ಕೇಳಿದಳು, 'ಹೊಸ ಗೇಣಿ ಪದ್ಧತಿ ಬರೋವರ್ಗೂ? ಆ ಮೇಲೆ ಮಾಸ್ಕೋದಿಂದ ತುಸು ದೂರ ಜಮೀನು ತಗೊಂಡು ತರಕಾರಿ ಬೆಳೆ ಬಹುದೂಂತ . ಆದರೆ ಅಲ್ಲಿವರೆಗೆ ನಾವು ಉಳಿಯೋದು ಹ್ಯಾಗೆ ?

ತುಂಬಾ ಮುಖ್ಯವಾದ ಈ ವಿಚಾರದ ಬಗ್ಗೆ ನೀನು ಹೇಳಲೇ ಇಲ್ಲ !'

'ಇದೊಂದು ಶುದ್ಧ ಅವಿವೇಕ !' ಆಕೆಯ ತಂದೆ ಅವಳನ್ನು ಬೆಂಬಲಿಸಿ ಹೇಳಿದರು.

'ಸರಿ, ಹಾಗಾದರೆ !' ಯೂರಿ ಎಲ್ಲ ಬಿಟ್ಟುಕೊಟ್ಟು ಹೇಳಿದ -' ನನ್ನ ಚಿಂತೆಯೆಂದರೆ, ಸಂಪೂರ್ಣ ಅಸ್ಥಿರತೆಯದು. ನಾವು ಹೋಗ್ತಾ ಇರೋದು ನಮಗೆ ಏನೂ ಗೊತ್ತಿಲ್ಲದ ಜಾಗಕ್ಕೆ. ನೀಲಿಯೊಳಗೆ ಕುರುಡು ಕುರುಡಾಗಿ. ವೆರಿಕಿನೋದಲ್ಲಿ ಬದುಕಿದ್ದ ಮೂವರಲ್ಲಿ ಅಮ್ಮ - ಅಜ್ಜಿ ತೀರಿಹೋಗಿದ್ದಾರೆ. ಇನ್ನು ಅಜ್ಜ ಯಾರ ಮನೆಯಲ್ಲೋ ಅತಿಥಿಯಾಗಿದಾನೆ, ಅದೂ ಬದುಕಿ ಉಳಿದಿದ್ದರೆ .....'

'ಯುದ್ಧದ ಕೊನೆ ವರ್ಷದಲ್ಲಿ ಇನ್ನೇನೋ ವ್ಯವಹಾರ ಅಜ್ಜ ಮಾಡಿದಂತಿದೆ. ಕಾಡ್ನು, ಕಾರ್ಖಾನೆ ಎಲ್ಲ ಮಾರಿದ್ದಾನಂತ ಕಾಣುತ್ತೆ, ಅಥವಾ ಆಸ್ತೀನ ಬೇರೆ ಯಾರ ಖಾತೆಗಾದ್ರೂ ವರ್ಗಾಯ್ಸಿರಬಹುದು - ಯಾವುದೋ ಬ್ಯಾಂಕಿಗೋ, ಅಥವಾ ಇನ್ಯಾರಿಗೋ - ನನಗೆ ಗೊತ್ತಿಲ್ಲ. ತೋಟ ಈಗ ಯಾರ ಅಧೀನದಲ್ಲಿದೆ ? ಇದು ಯಾರ ಆಸ್ತಿ ಅನ್ನೋ ಪ್ರಶ್ನೆಯಲ್ಲ ನನ್ನದು. ಅದಕ್ಕೆಲ್ಲ ಸೊಪ್ಪಿನಷ್ಟೂ ಬೆಲೆ ಕೊಡೋನಲ್ಲ ನಾನು. ಆದರೆ ಇದಕ್ಕೆಲ್ಲ ಜವಾಬ್ದಾರಿ ಯಾರೂಂತ? ಅದನ್ನ ಯಾರು ನೋಡಿಕೊಳ್ತಿದಾರೆ ? ಕಟ್ಟಿಗೆ ಅಡ್ಡಾ ಇನ್ನೂ ಇದೆಯಾ, ತೋಟ ? ಎಲ್ಲಕ್ಕೂ ಮುಖ್ಯವಾದದ್ದು ಆ ಭಾಗದಲ್ಲಿ ಯಾರು ಅಧಿಕಾರ ನಡೆಸ್ತ ಇದಾರೆ, ನಾವು ಹೋಗೋ ವೇಳೆ ಇನ್ಯಾರು ಗದ್ದುಗೆ ಏರಿರ್ತಾರೊ ?

'ನೀನು ಆ ಮಿಕುಲಿಸ್ತಿನ್, ಅದೇ ಆ ಮುದಿ ಮ್ಯಾನೇಜರ್, ಮಾತು ನಂಬಿದಂತಿದೆ - ಆದರೆ ಇನ್ನೂ ಅಲ್ಲಿದ್ದಾನೊ ಇಲ್ಲವೊ ಅಂತ ನಮಗೆ ಹೇಳೋದ್ಯಾರು? ಅವನು ಬದುಕಿದ್ದಾನೋ ಇಲ್ಲವೋ ? ಆತನ ಹೆಸರು ಬಿಟ್ಟರೆ ನಿಮಗೇನು ಗೊತ್ತಿದೆ ? ಅದೂ ಕೂಡ ಗೊತ್ತಿರೋದು ಅಜ್ಜ ಅವನ ಹೆಸರನ್ನು ಉಚ್ಚರಿಸಲು ಭಾರೀ ಪ್ರಯತ್ನ ಪಡ್ತಿದ್ದ ಅಂತನ್ನೋ ಕಾರಣಕ್ಕೆ.'

'ಏನೇ ಇರಲಿ, ಇನ್ನಷ್ಟು ತಕರಾರು ನಾನು ಎತ್ತೊಲ್ಲ. ನೀವೂ ನಿರ್ಧರಿಸಿ ಬಿಟ್ಟಿದಿರಿ. ನಿಮ್ಮ ನಿರ್ಧಾರವನ್ನು ನಾನು ಒಪ್ಪಿಕೊಳ್ತೇನೆ, ಕೈ ಬಿಡೋದರಲ್ಲಿ ಏನೂ ಅರ್ಥವಿಲ್ಲಾಂತ. ಈಗ ಮಾಡಬೇಕಾಗಿರೋದು ಪ್ರಯಾಣದ ವ್ಯವಸ್ಥೆ, ಇತ್ತೀಚೆ ಹೇಗಿದೆಯೋ ಗೊತ್ತಿಲ್ವಲ್ಲ.'

೨

ಯೂರಿ ಮುಂದಿನ ವ್ಯವಸ್ಥೆ ಬಗ್ಗೆ ವಿಚಾರಿಸಲು ಯೂರೋಸ್ಲವಸ್ಕಿ ನಿಲ್ದಾಣಕ್ಕೆ ಹೊರಟ. ಸಾಲಾಗಿ ಕಟ್ಟಿದ್ದ ಕಟ್ಟಿಗೆ ತಡಿಕೆಯುದ್ದಕ್ಕೂ ಭಾರೀ ಉದ್ದನೆಯ ಪ್ರಯಾಣಿಕರ ಸಾಲು. ಸಾಲಿನ ಅಕ್ಕಪಕ್ಕ ಕಲ್ಲಿನ ಪ್ಲಾಟ್‌ಫಾರಂನಲ್ಲಿ ಸೈನ್ಯದ ಬಿಳಿ ಕೋಟುಗಳನ್ನು ಹಾಕಿಕೊಂಡು ಕ್ಯಾಕರಿಸಿ ಕೆಮ್ಮುತ್ತ, ಉಗುಳುತ್ತ ಅತಿ ಎತ್ತರದ ದನಿಯಲ್ಲಿ, ನೆಲಮಾಳಿಗೆಯಲ್ಲಿ ಧ್ವನಿ ಪ್ರತಿಧ್ವನಿಸುತ್ತದೆಂಬುದನ್ನು ಮರೆತು ಮಾತಾಡುತ್ತ ಕುಳಿತವರು.

ಅವರೆಲ್ಲ ವಿಷಮಜ್ವರದಿಂದ ಬಳಲಿರುವವರಿರಬೇಕು, ಆಸ್ಪತ್ರೆ ತುಂಬಿ ತುಳುಕುವಾಗ ಈ ರೀತಿ ಅವರನ್ನು ಹೊರಬಿಡುವುದುಂಟು. ಒಬ್ಬ ವೈದ್ಯನಾಗಿ ಯೂರಿ ಕೂಡ ಎಷ್ಟೋ ಸಲ ಹೀಗೆ ಮಾಡಿದ್ದುಂಟು. ಆದರೆ ಈ ನಿರಾಶ್ರಿತ ರೋಗಿಗಳು ಇಷ್ಟೊಂದು ನತದೃಷ್ಟರು, ಆಸ್ಪತ್ರೆಯಿಂದ ಹೊರ ಹಾಕಿದಾಗ, ಹೀಗೆ ರೈಲು ನಿಲ್ದಾಣದಲ್ಲಿ ಆಶ್ರಯ ಪಡೆಯುತ್ತಾರೆಂದು ಅವನಿಗೆ ಗೊತ್ತಾಗಲಿಲ್ಲ.

'ನಿಮಗೆ ಪ್ರಾಶಸ್ತ್ಯದಲ್ಲಿ ತಿಕೀಟು ಸಿಗಬೇಕು', ಬಿಳಿಯ ಕೋಟು ಹಾಕಿಕೊಂಡಿದ್ದ ಪೋರ್ಟರ್ ಹೇಳಿದ್ದ - ಹಾಗಾದ್ರೆ ನೀವು ಪ್ರತಿದಿನ ಬರಬೇಕಾಗುತ್ತೆ, ರೈಲು ಬಂದಿದೆಯೊ ನೋಡಬೇಕಾಗುತ್ತೆ. ಇತ್ತೀಚಿನ ದಿನಗಳಲ್ಲಿ ರೈಲು ಬರೋದು, ಸಿಕ್ಕೋದು ಎಲ್ಲಾ ಅದೃಷ್ಟ. ಜತೆಗೆ .... ' ಕೈ ಬೆರಳನ್ನು ಹೆಬ್ಬೆರಳಿನೊಂದಿಗೆ ಹೊಸೆಯುತ್ತ ಹೇಳಿದ- 'ಸಣ್ಣ ಹಿಟ್ಟಿನ ಗಿರಣಿಯಾಗ್ಲಿ, ರೈಲಾಗಲಿ ಎಣ್ಣೆ ಇಲ್ದೆ ಓಡೋದಿಲ್ಲ, ಅಲ್ವಾ ಗಂಟಲು ಒತ್ತಿಕೊಳ್ಳುತ್ತ ಹೇಳಿದ -ಒಂದಿಷ್ಟು ಹೆಂಡಕ್ಕೆ ದುಡ್ಡು ಕೊಡದಿದ್ದರೆ ರೈಲು, ತಿಕೀಟು ಸಿಗೊಲ್ಲ...'

೩

ಗಂಡಸರು, ಪ್ರಯಾಣದ ದಾಖಲೆ ಹೊಂದಿಸಲು, ಮಾಸ್ಕೋಕ್ಕೆ ಮತ್ತೆ ವಾಪಸ್ಸು ಬಂದಾಗ ವಾಸಿಸಲು ಬೇಕಾಗುವ ಮನೆಗಾಗಿ ನೋಂದಾಯಿಸಲು ಸರ್ಕಾರಿ ಕಚೇರಿಯನ್ನು ಹಗಲು ಹೊತ್ತಲ್ಲಿ ಸುತ್ತು ಹಾಕುವಾಗ, ತೋನ್ಯಾ ಮನೆಯಲ್ಲಿ ಸಾಮಾನು ಜೋಡಿಸಿಕೊಳ್ಳುವಳು.

ಇದೀಗ ಝಿವಾಗೋ ಕುಟುಂಬಕ್ಕೆ ಅಧಿಕೃತವಾಗಿ ಸೇರಿದ್ದ ಮೂರು ಕೋಣೆಗಳನ್ನು ಮಹಡಿ ಮೇಲೆ ಕೆಳಗೆ ಓಡಾಡುತ್ತಾ, ಅತಿ ಚಿಕ್ಕವಸ್ತುವನ್ನೂ ಕೈಯಲ್ಲಿ ಹಿಡಿದು,

ಗಾಳಿಯಲ್ಲಿ ಅದರ ಭಾರ ನೋಡಿ, ಇದನ್ನು ತಗೊಂಡು ಹೋಗುವುದೋ ಬೇಡವೋ ಎಂದು ಈಗಾಗಲೇ ಬೆಟ್ಟದ ರಾಶಿಯಷ್ಟಾದ ಒಯ್ಯುವ ವಸ್ತುಗಳತ್ತ ನೋಡುವಳು. ಅವರಿಗೆ ಅಗತ್ಯವಾಗಿದ್ದ ವಸ್ತು ತುಂಬ ಕಡಿಮೆ. ಉಳಿದದ್ದು ದಾರಿಯಲ್ಲಿ, ಅಲ್ಲಿ ಹೋದ ಮೊದಲ ದಿನಗಳಲ್ಲಿ ದುಡ್ಡಿನಂತೆ ಉಪಯೋಗಕ್ಕೆ ಬರಲಿತ್ತು.

ತೆರೆದ ಕಿಟಕಿ ಮೂಲಕ, ಕತ್ತರಿಸಿಟ್ಟ ಬ್ರೆಡ್‌ನ ರುಚಿ ನೋಡುವಂತೆ, ಚೈತ್ರದ ಗಾಳಿ ತೂರಿ ಬಂತು. ಹೊರಗೆ ಅಂಗಳದಲ್ಲಿ ಮಕ್ಕಳ ಗಲಾಟೆ, ಕಾಗೆಯ ಕೂಗು. ಕೋಣೆಯಲ್ಲಿ ಗಾಳಿ ತುಂಬಿದಂತೆಲ್ಲಾ, ಪೆಟ್ಟಿಗೆಯಲ್ಲಿದ್ದ ಚಳಿಗಾಲದ ಉಣ್ಣೆಯ ಬಟ್ಟೆ ವಾಸನೆ ಹೆಚ್ಚಾಗುತ್ತಿತ್ತು.

ಯಾವುದನ್ನು ತೆಗೆದುಕೊಂಡು ಹೋಗಬೇಕು- ಬೇಡ ಎನ್ನುವುದನ್ನು ಒಂದು ವಿರಳವಾದ ಸೂತ್ರದ ಮೇಲೆ ನಿರ್ಧರಿಸಲಾಗಿತ್ತು. ಅಂದರೆ ಈ ಮೊದಲು ಊರು ಬಿಟ್ಟವರು ಅವರ ಸಂಬಂಧಿಕರಿಗೋ, ಗೆಳೆಯರಿಗೋ ಬರೆದ ಪತ್ರದ ವಿವರಗಳನ್ನು ಆಧರಿಸಿ, ಸೂತ್ರಗಳಲ್ಲಿ ಕೆಲವು ಮುಖ್ಯವಾದ ವಿಚಾರ ತೆಗೆದುಕೊಂಡು - ತೋನ್ಯಾಳಿಗೆ ಯಾರಿಗೂ ಗೊತ್ತಾಗದಂತೆ, ಮಕ್ಕಳ ಕೂಗು ಅಥವಾ ಗುಬ್ಬಿಯ ಚಿಲಿಪಿಲಿ, ಗುಟ್ಟಾಗಿ ಅವಳ ಕಿವಿಯಲ್ಲಿ ಉಸುರುತ್ತಿದ್ದವೋ ಎಂಬಂತೆ ತೋನ್ಯಾ, ಸಾಮಾನು ಹೊಂದಿಸಿದ್ದಳು.

'ಇಷ್ಟೊಂದು ಬಟ್ಟೆ ಬೇಡ,' ದಾರಿಯಲ್ಲಿ ಸರಂಜಾಮ ತಪಾಸಣೆ ಹಚ್ತಾರೆ, ಇದು ಬೇಡ. ಎಲ್ಲ ಬಗೆಯ ವಸ್ತು, ಬಟ್ಟೆ, ಮುಖ್ಯವಾಗಿ ಕೋಟುಗಳಿರಲಿ. ದೊಡ್ಡ ಕಬ್ಬಿಣದ ಪೆಟ್ಟಿಗೆ ಬೇಡ, ಕೂಲಿಗಳು ಸಿಗೊಲ್ಲ, ಉಪಯೋಗವಿಲ್ಲದ ಯಾವ ವಸ್ತುವೂ ಬೇಡ. ಹುಷಾರಾಗಿ ಚಿಕ್ಕ ಮಕ್ಕಳು ಮುದುಕಿಯರಿಗೆ ಕೂಡ ಹೊರಲು ಸುಲಭವಾಗುವಂತೆ ಗಂಟು ಕಟ್ಟು. ಉಪ್ಪು -ತಂಬಾಕು ಉಪಯೋಗಕ್ಕೆ ಬಂದರೂ ರಿಸ್ಕ್. ದಾಖಲೆಗಳನ್ನು ಅತಿ ಎಚ್ಚರದಲ್ಲಿಟ್ಟುಕೊಳ್ಳಬೇಕು.... ಹೀಗೆ ಧ್ವನಿಗಳು ನಿರ್ದೇಶನ ನೀಡುತ್ತಿದ್ದವು.

೪

ಅವರು ಹೊರಡುವ ಒಂದು ದಿನ ಮುಂಚೆ ಹಿಮಪಾತ. ಆಕಾಶದಲ್ಲಿ ಮಡುಗಟ್ಟಿದ್ದ ಬಿಳಿಮೋಡಗಳು ನೆಲಕ್ಕೆ ಮರಳುವಂತೆ, ಗಾಳಿಯುಂಡೆಯಂತೆ, ಬೀದಿಯುದ್ದಕ್ಕೂ ಮಂಜು, ಬಿಳಿ ಹಾಸಿತ್ತು.

ಎಲ್ಲ ಸರಂಜಾಮು ಸಿದ್ಧವಾಯಿತು. ಮನೆಯಲ್ಲಿನ ಕೆಲವು ಸಾಮಾನುಗಳನ್ನು ಪಕ್ಕದ ಮನೆಯ ಮುದಿಯ ದಂಪತಿಗಳಿಗೆ ನೋಡಿಕೊಳ್ಳಲು ಹೇಳಿಯಾಯ್ತು. ತೋನ್ಯಾ, ದಂಪತಿಗಳನ್ನು, ಕೊನೆ ಗಳಿಗೆಯ ಸಲಹೆಗಳನ್ನು ನೀಡಲು ಮನೆಗೆ ಕರೆತಂದು ಡ್ರಾಅರ್, ಅಲಮಾರು, ಬಾಗಿಲುಗಳ ಬೀಗ ಹಾಕಿ ಜಗ್ಗಿ ಜಗ್ಗಿ ನೋಡಿದಳು.

ಕುರ್ಚಿ- ಟೇಬಲ್ಲುಗಳನ್ನು ಗೋಡೆಗೆ ಸರಿಸಿ, ಕರ್ಟನನ್ನು ಎತ್ತಿಡಲಾಯಿತು. ಮೂಲೆಯಲ್ಲಿ ಗಂಟು ಕಟ್ಟಿದ ಸಾಮಾನಿನ ಗುಡ್ಡೆ. ಕೋಣೆ ಇದೀಗ ಖಾಲಿಯಾಗಿ ಚಳಿಗಾಲಕ್ಕೆ ಪ್ರಶಸ್ತವಾದಂತಾಗಿ, ಕಿಟಕಿಯಿಂದ ತೂರಿಬರುವ ಗಾಳಿಯನ್ನು ಆಲಿಸುತ್ತ ಗತಕಾಲದ ನೋವನ್ನು ನೆನೆಯುವಂತೆ ಕಾಣುತ್ತಿತ್ತು. ಯೂರಿಗೆ ತನ್ನ ತಾಯಿಯ ಸಾವಿನ ನೆನಪು ಬಂದರೆ, ತೋನ್ಯಾ, ಅಲೆಗ್ಸಾಂಡರ್ ಅಲೆಗ್ಸಾಂದ್ರೋವಿಚ್‌ರಿಗೆ ಅಂತಿಮ ಸಂಸ್ಕಾರದ ನೆನಪು - ಆನಾಳ ನೆನಪು. ಆಕಾರಣವಾಗಿ ಅವರಿಗೆಲ್ಲ ಈ ಮನೆಯಲ್ಲಿ ತಾವು ಕಳೆಯುತ್ತಿರುವುದು ಕೊನೆಯ ರಾತ್ರಿ ಎಂದೆನ್ನಿಸಿತು. ಮತ್ತೆಂದೂ ಈ ಮನೆಗೆ ಬರಲಾರೆವೆನ್ನಿಸಿ, ಕಣ್ಣಂಚಲ್ಲಿ ತುಳುಕುತ್ತಿದ್ದ ಹನಿಯನ್ನು ಒಬ್ಬರಿಗೊಬ್ಬರು ಮುಚ್ಚಿಟ್ಟರು. ತಮ್ಮ ಭವಿಷ್ಯದ ಬಗ್ಗೆ ಮಾತಾಡಲೂ ಅಳುಕು. ಈ ಸೂರಿನ ಕೆಳಗೆ ಕಳೆದ ಬದುಕನ್ನು ನೆನೆಪಿಸಿಕೊಂಡು ಇನ್ನಷ್ಟು ಅಳು.

ಇದೆಲ್ಲವನ್ನು ಬದಿಗಿಟ್ಟು ಮನೆಯ ಉಸ್ತುವಾರಿ ನೋಡಿಕೊಳ್ಳಲಿದ್ದ ಮುದುಕಿಯೊಂದಿಗ, ತೋನ್ಯಾ ಮಾತಾಡಲು ಯತ್ನಿಸಿದಳು. ತಮ್ಮ ಮನೆಯನ್ನು ನೋಡಿಕೊಳ್ಳುವವರ ಮುಂದೆ ಅಸಮಾಧಾನ ವ್ಯಕ್ತಪಡಿಸಬಾರದೆಂದು ಕ್ಷಣ ಕ್ಷಣಕ್ಕೂ ಕೃತಜ್ಞತೆ ಸೂಚಿಸಿದಳು. ಆ ಕೋಣೆಗೆ - ಈ ಕೋಣೆಗೆ ಹೋಗಿ ಕುಪ್ಪಸಗಳನ್ನು, ರೇಷ್ಮೆ ಬಟ್ಟೆ, ಹುಡುಕಿತಂದು ಮುದುಕಿಯ ಕೈಗಿಡುವಳು. ಕೊಟ್ಟ ಬಟ್ಟೆಗಳೆಲ್ಲ ಕಡುಬಣ್ಣದ, ಪೋಲಾಕಾ ಚುಕ್ಕೆಗಳದ್ದು. ಬೆತ್ತಲೆ ಕಿಟಕಿಯಿಂದ ಬೀದಿಗಳನ್ನು ನೋಡಿದಾಗ, ಬೀದಿ ಕೂಡಾ ಕಡುವಾಗಿ ಮಂಜಿನ ಪೋಲಕಾ ಚುಕ್ಕೆಗಳನ್ನು ತುಂಬಿಕೊಂಡಂತೆ ಕಾಣುತ್ತಿತ್ತು.

೫

ಬೆಳಗಿನ ಜಾವ ಅವರೆಲ್ಲ ಮನೆ ಬಿಟ್ಟಾಗ, ಅಕ್ಕಪಕ್ಕದವರೆಲ್ಲ ನಿದ್ದೆಯಲ್ಲಿದ್ದಂತಿತ್ತು.

ಆದರೆ ಅವರಲ್ಲೊಬ್ಬ ಝೋವರೋತಿನಾ ಎಲ್ಲರನ್ನೂ ಕೂಗಿ ಕೂಗಿ ಎಬ್ಬಿಸಿ, ಅದನ್ನು ಸಾಮೂಹಿಕ ಕ್ರಿಯೆಯಾಗಲು ಯತ್ನಿಸುತ್ತಿದ್ದ. 'ಎದ್ದೇಳಿ ! ಸಂಗಾತಿ ! ಎದ್ದೇಳಿ! ಬೇಗ ಬೇಗ ! ಬನ್ನಿ,' ಬಂದು ಗ್ರೋಮಿಕೋ ಕುಟುಂಬದವರಿಗೆ ವಿದಾಯ ಹೇಳಿ !'

ಇತ್ತೀಚೆಗೆ ಚಾಳಿನ ಮುಂಬಾಗಿಲು ಬೀಗ ಜಡಿದಿದ್ದರಿಂದ ಮನೆಯವರೆಲ್ಲ ಹಿಂಬಾಗಿಲಿನಿಂದ ಬಂದು ಫೋಟೋಕ್ಕಾಗಿ ಎಂಬಂತೆ ಸುತ್ತೂ ಸೇರಿದರು...

ಇನ್ನೂ ಕತ್ತಲಿತ್ತು. ಬೀಸುವ ಗಾಳಿಯಲ್ಲಿ ನಿನ್ನೆ ರಾತ್ರಿಗಿಂತ ಹೆಚ್ಚಿನ ಹಿಮ ಸುರಿಯುತ್ತಿತ್ತು. ಉದ್ದನೆಯ ಎಳೆಗಳಂತೆ ಮಂಜಿನ ತುಣುಕುಗಳು, ಹಿಂದೆ ಮುಂದೆ ನೋಡುತ್ತ ನೆಲಕ್ಕೆ ಬೀಳುತ್ತಿದ್ದವು.

ಪ್ರಯಾಣಿಕರನ್ನು ಬಿಟ್ಟರೆ ನಿಲ್ದಾಣದಲ್ಲಿ ಒಂದು ನರಪಿಳ್ಳೆಯ ಸುಳಿವೂ ಇರಲಿಲ್ಲ.... ಯೂರಿ ಮಾತ್ರ ಖುಷಿಯಿಂದ ನಡೆಯುತ್ತಲೇ ನಿಲ್ದಾಣಕ್ಕೆ ನಡೆದ.

೬

ತೋನ್ಯಾ, ಅವಳ ತಂದೆ ಕೊನೆಯಿಲ್ಲದ ಸರತಿಯಲ್ಲಿ ನಿಂತಿದ್ದನ್ನು ಯೂರಿ ಗಮನಿಸಿದ.... ಸಾಲು ಪ್ಲಾಟ್‌ಫಾರಂನ ಬಾಗಿಲವರೆಗೂ ಬೆಳೆದಿತ್ತು. ನಿಜವೆಂದರೆ ರೈಲನ್ನು ಹತ್ತಲು ಪ್ರಯಾಣಿಕರು ಇನ್ನರ್ಧ ವೈಲಿಯಾದರೂ ನಡೆಯ ಬೇಕಾಗುತ್ತಿತ್ತು. ಸರಿಯಾಗಿ ಉಸ್ತುವಾರಿಯಿಲ್ಲದೆ ನಿಲ್ದಾಣ ಗಲೀಜಿನಿಂದ ತುಂಬಿತ್ತು. ಪ್ಲಾಟ್‌ಫಾರಂ ಮುಂದಿದ್ದ ಹಳಿಗಳಲ್ಲಿ ಕೊಳೆ-ಮಂಜು ತುಳುಕುತ್ತಿದ್ದರಿಂದ ರೈಲು ಮುಂದೆ ಹೋಗಿ ನಿಲ್ಲುತ್ತಿತ್ತು.

ದೂರದಿಂದ ಯೂರಿಯನ್ನು ಗುರುತಿಸಿದ ತೋನ್ಯಾ ಕೈಬೀಸಿ, ಪ್ರಯಾಣಿಕರ ದಾಖಲೆ ಪತ್ರದ ಮೇಲೆ ಸಿಕ್ಕೆ ಹಾಕಿಸಲು ಎಲ್ಲಿ ಹೋಗಬೇಕೆಂದು ಕೂಗಿ ಹೇಳಿದಳು.

'ತೋರಿಸು, ಏನನ್ನು ಹಾಕಿದರೊ !' ಯೂರಿ ವಾಪಸ್ಸು ಬಂದಾದ ಮೇಲೆ ತೋನ್ಯಾ ಕೇಳಿದಳು - ಯೂರಿ ಎದೆಗೆ ಕತ್ತರಿಯಂತೆ ಹಿಡಿದ ಕೈಗಳ ಮಧ್ಯೆ ಸುಮಾರು ಕಾಗದದ ಪೆಂಡಿ ತುರುಕಿಕೊಂಡಿದ್ದ.

ಆಕೆಯ ಎದುರಿಗಿದ್ದವ ಅವಳಿಗಿಂತ ನುರಿತವ. ಎಲ್ಲ ಕಾನೂನು ಗೊತ್ತಿದ್ದವ. ಆದರೂ ಹೇಳಿದ - 'ಈಕಾ ಈ ಮುದ್ರೆ, ಇದು ಈ ರೈಲಿನಲ್ಲಿರೋ ಪ್ರಯಾಣಿಕರ

ಡಬ್ಬದಲ್ಲಿ ಪ್ರಯಾಣಿಸಬಹುದಾದ ಹಕ್ಕು ದೊರಕಿಸುತ್ತದೆ. '

ಇಡೀ ಸಾಲು ಒಂದೆಡೆ ಸೇರಿತು.

'ಪ್ರಯಾಣಿಕರ ರೈಲು ! ಕೂತುಕೊಳ್ಳಲು ತುಸು ಜಾಗ ಸಿಕ್ಕರೆ, ನೀವು ಪುಣ್ಯವಂತರು. '

'ಅವರ ಮಾತು ನಂಬಬೇಡಿ'- ಸಂಪ್ರದಾಯವಾದಿಯೊಬ್ಬ ಹೇಳತೊಡಗಿದ - 'ಇದು ಭಾಳ ಸರಳ, ಹ್ಯಾಗೆಂತ ಹೇಳ್ತಿನಿ ಕೇಳಿ. ಈಗ ಎಲ್ಲಾ ವಿಶೇಷ ರೈಲು ತೆಗೆದು ಹಾಕಿದಾರೆ. ಇರೋದು ಒಂದೇ ಪ್ರಯಾಣಿಕರ ರೈಲು. ಸೈನಿಕರಿಗೆ, ಜನರಿಗೆ, ಪ್ರಾಣಿಗಳಿಗೆ ಎಲ್ಲರಿಗೂ ಒಂದೇ. ಜನಾ ಯಾಕೆ ಹಾದಿ ತಪ್ಪಿಸ್ತಾರೋ ?' ಎಂದು ಜನರೆಡೆ ತಿರುಗಿ - 'ಮಾತಾಡೋಕ್ಕೆ ದುಡ್ಡು ಕಾಸು ಬೇಕಾಗೊಲ್ಲ. ಆದರೆ ಏನು ಹೇಳಿದರೂ ಅರ್ಥವಾಗೋ ಹಾಗೆ ಸ್ಪಷ್ಟವಾಗಿ ಹೇಳ್ಬೇಕು' ಎಂದ.

'ಕಿಟಕಿ ಬಾಗಿಲು ತೆಗಿರಿ ....' ಸಾಲಾಗಿ ನಿಂತ ಜನ ಕೂಗಿದರು. ಜನ ತಾವೇ ಬಾಗಿಲು ತೆಗೆಯಲು ನುಗ್ಗಿದರು...

೭

ರೈಲು ಹೊರಟು ಮೂರು ದಿವಸವಾಗಿದ್ದರೂ ಮಾಸ್ಕೋದಿಂದ ಬಹಳ ದೂರವೇನೂ ಸಾಗಿರಲಿಲ್ಲ. ಚಳಿಯ ವಾತಾವರಣ ಹಾಗೇ ಇತ್ತು. ಹೊರಗೆ-ಹೊಲಗದ್ದೆ, ರೈಲು ಹಳಿ, ಹಳ್ಳಿಯ ಮನೆಗಳು, ಕಾಡು ಎಲ್ಲ ದಟ್ಟ ಮಂಜಿನಿಂದ ಮುತ್ತಿಕೊಂಡಿದ್ದವು.

ಅದೃಷ್ಟವೆಂಬಂತೆ ಝಿವಾಗೋ ಕುಟುಂಬಕ್ಕೆ ಎರಡನೆಯ ಸಾಳಿಯಮೇಲೆ ಮೂಲೆಯಲ್ಲಿ ಜಾಗಸಿಕ್ಕು, ಇನ್ನೊಂದು ಕುಟುಂಬದೊಂದಿಗೆ ಹೊಂದಿಕೊಂಡರು.

ತೋನ್ಯಾ ಸರಕು ರೈಲಿನಲ್ಲಿ ಪ್ರಯಾಣಿಸುತ್ತಿರುವುದು ಇದೇ ಮೊದಲು. ಮಾಮೂಲಿ ರೈಲಿಗಿಂತ ಎತ್ತರವಾಗಿದ್ದು, ತಳ ಹಾಗೂ ಬಾಗಿಲನ್ನು ಭರ್ಜರಿ ಕಬ್ಬಿಣದಿಂದ ಮಾಡಿದ್ದರು. ಮೊದಲ ಸಲ ಯೂರಿ ಹೆಂಗಸರನ್ನು ಕೈಗಳಿಂದ ಎತ್ತಿ ಮೇಲೆ ಸಾಗಿಸಿದ್ದ, ಆಮೇಲೆ ತಾವೇ ಹತ್ತಿ-ಇಳಿಯುವುದು ಅಭ್ಯಾಸವಾಗಿತ್ತು....

ರೈಲಿಗೆ ಒಟ್ಟು ಇಪ್ಪತ್ಮೂರು ಬೋಗಿಗಳಿದ್ದವು. ಇವರಿದ್ದದ್ದು ಹದಿನಾಲ್ಕರಲ್ಲಿ. ಅಲ್ಲಲ್ಲಿ ಊರಿನ ನಿಲ್ದಾಣಗಳಲ್ಲಿ ನಿಲ್ಲಿಸಿದಾಗ ಮೊದಲನೆಯ, ನಡುವಿನ, ಅಥವಾ

ಕೊನೆಯ ಡಬ್ಬಿಗಳು ಮಾತ್ರ ಪ್ಲಾಟ್‌ಫಾರಂಗೆ ಹತ್ತುತ್ತಿದ್ದವು.

ನಾವಿಕರು ಮುಂದೆ, ತಿಕೀಟಿಲ್ಲದವರು ಮಧ್ಯದಲ್ಲಿ, ಕಾರ್ಮಿಕ ಜನ ಹಿಂಭಾಗದಲ್ಲಿ ಹೀಗೆ ಅವರವರ ವೃತ್ತಿ, ಪರಿಸ್ಥಿತಿಯಂತೆ ಒಟ್ಟು ಐನೂರರಷ್ಟು ಪ್ರಯಾಣಿಕರು.

೮

ರೈಲು ನಿಂತಾಗಲೆಲ್ಲ, ಮೇಲೆ ತಲೆಬಡಿಯದಂತೆ, ಹುಷಾರಾಗಿ ತೋನ್ಯಾ ಎದ್ದು ಕೂಡುವಳು. ಸೀಳಿದ ಬಾಗಿಲಿನಿಂದ , ಕೆಳಗಿಳಿಯಬಲ್ಲಷ್ಟು ದೊಡ್ಡ ನಿಲ್ದಾಣವೇ ಎಂದು ನೋಡುವಳು.

ಇದೀಗ ಅಂಥ ನಿಲ್ದಾಣ. ರೈಲು ಕ್ರಿರೆಂದು ನಾನಾ ಬಗೆಯ ಶಬ್ದ ಮಾಡುತ್ತ ನಿಧಾನವಾದಾಗಲೇ ಇದೊಂದು ದೊಡ್ಡ ಊರಿರಬೇಕು ಅನ್ನಿಸಿತ್ತು.

ತನ್ನ ಕಣ್ಣುಗಳನ್ನು ತಿಕ್ಕಿಕೊಂಡು, ಕೂದಲನ್ನು ಒಪ್ಪಮಾಡಿ, ಚೀಲದಿಂದ ಕಸೂತಿ ಹಾಕಿದ ವಸ್ತ್ರ ತೆಗೆದು ಕೊರಳಿಗೆ ಹಾಕಿಕೊಂಡಳು.

ಕೆಳಗೆ ಎಚ್ಚರವಾಗಿಯೇ ಇದ್ದ ಯೂರಿ ಆಕೆಗೆ ಕೆಳಗಿಳಿಯಲು ಸಹಾಯ ಮಾಡಿದ. ಸಿಗ್ನಲ್ ಮನೆ, ದೀಪದ ಮನೆ ರೈಲನ್ನು ಹಾದುಹೋದವು.... ನಾವಿಕರು ಮಂಜಿನ ನೆಲಕ್ಕೆ ಕೆನೆದರು. ಕದ್ದು ಮುಚ್ಚಿ ಆಹಾರವನ್ನು ಮೂಲೆಗಳಲ್ಲಿ ಮಾರಾಟ ಮಾಡುತ್ತಿದ್ದ ಹಳ್ಳಿಯ ಹೆಂಗಸರಿಗಾಗಿ ಕಣ್ಣು ಹಾಯಿಸಿದರು.

ನಾವಿಕರದ್ದು ಕಪ್ಪು ಸಮವಸ್ತ್ರ. ಬೆಲ್‌ಬಾಟಮ್ ಪ್ಯಾಂಟು, ತುದಿಯಿಲ್ಲದ ಟೋಪಿಗೆ ಸಿಕ್ಕಿಸಿದ್ದ ರಿಬ್ಬನ್ನು. ಜತೆಗೆ ಅತಿ ಅವಸರದಿಂದ ಜನ ಅವರನ್ನು ಕಂಡೊಡನೆ, ಆಕಾಶ ಹಾರಾಟದ ಪಂದ್ಯದಲ್ಲಿರುವವರು ಎಂಬಂತೆ ಜಾಗ ಬಿಡುತ್ತಿದ್ದರು.

ಮೂಲೆಯಲ್ಲಿ, ಹತ್ತಿರದ ಹಳ್ಳಿಗಳ ಹುಡುಗಿಯರು - ಹೆಂಗಸರು ಕಣಿ ಹೇಳುವವರಂತೆ, ಅಡಗಿಕೊಂಡು, ನಿಲ್ದಾಣದ ಗೋಡೆಯ ಮೇಲೆ ಸೌತೆಕಾಯಿ, ಹುರಿದ ದನದ ಮಾಂಸ, ಬೆಣ್ಣೆ ಮುಂತಾದುವನ್ನು ಬಟ್ಟೆಯಲ್ಲಿ ಸುತ್ತಿಟ್ಟಿದ್ದರು.

ಶಾಲು ಹೊದ್ದುಕೊಂಡು ವ್ಯಾಪಾರ ಮಾಡುವ ಹೆಂಗಸರು - ನಾವಿಕರ ಪೋಲಿಜೋಕಿಗೆ ಮುಖ ಕೆಂಪಗೆ ಮಾಡಿಕೊಳ್ಳುವರು. ಸತ್ಯವೆಂದರೆ ಅವರು ನಾವಿಕರಿಗೆ ಹೆದರುತ್ತಿದ್ದರು. ಯಾಕೆಂದರೆ ಇದೇ ಜನ 'ಮುಕ್ತಮಾರುಕಟ್ಟೆ'ಯ ವಿರೋಧಿ ಚಳವಳಿ

ಯನ್ನು ಸಂಘಟಿಸಿದ್ದರು. ರೈಲು ಸಂಪೂರ್ಣ ನಿಂತು ನಾಗರಿಕ ಪ್ರಯಾಣಿಕರು ಇಳಿಯತೊಡಗಿದಂತೆ ಆ ಹೆಂಗಸರ ಆತಂಕ ಕಡಿಮೆಯಾದಂತಾಯ್ತು.

ತೋನ್ಯಾ ಕೆಳಗಿಳಿದು ಬಟ್ಟೆ ಸರಿಪಡಿಸಿಕೊಂಡಳು. ತಾನು ಹೊರಟಿರುವುದು ಮಂಜಿನಲ್ಲಿ ಸ್ನಾನಮಾಡಲು ಎಂಬಂತೆ ಅವಳ ಹೆಗಲ ಮೇಲೆ ಟವೆಲ್ಲು. ಕೆಲವು ಹೆಣ್ಣು ಮಕ್ಕಳಂತೂ ಕೂಗಿ ಕೇಳಿದರು : 'ಏಯ್ ! ಆ ಟವೆಲ್ಲು ತಗೊಂಡು ಏನು ಮಾಡ್ತೀಯಾ?' ಯಾರ ಮಾತಿಗೂ ಕಿವಿಗೊಡದೆ ತನ್ನ ಗಂಡನ ರಕ್ಷಣೆಯಲ್ಲಿ ಆಕೆ ಹೊರಟಳು. ಸಾಲಿನ ಕೊನೆಯಲ್ಲಿ ಕಪ್ಪು ಶಾಲು ಹೊದ್ದುಕೊಂಡ ಹೆಣ್ಣು ಮಗಳೊಬ್ಬಳಿದ್ದಳು. ಕಸೂತಿ ಮಾಡಿದ ಟವೆಲ್ಲನ್ನು ನೋಡಿದ್ದೇ ಅವಳ ಕಣ್ಣು ಹೊಳೆದವು. ಸುತ್ತಮುತ್ತ ಹುಷಾರಾಗಿ ನೋಡಿ ತೋನ್ಯಾಳ ಕಿವಿಯಲ್ಲಿ ಉಸುರಿದಳು 'ನೋಡಿಲ್ಲಿ, ಎಷ್ಟೋಕಾಲದಿಂದ ಇಂಥದ್ದನ್ನು ನೋಡಿಲ್ಲ, ಅಂತ ಬೇಕಾದರೆ ಪಂದ್ಯ ಕಟ್ತೇನೆ. ಭಾಳ ಯೋಚಿಸ್ತಾ ಕೂಡಬೇಡ, ಹೋಗಿಬಿಡುತ್ತೆ. ನಿನ್ನ ಟವೆಲ್ಲು ಕೊಟ್ಟು ಅರ್ಧ ತೆಗೆದುಕೊಂಡು ಬಿಡು !'

ಕೊನೆಯ ಮಾತುಗಳು ತೋನ್ಯಾಳಿಗೆ ಸರಿಯಾಗಿ ಅರ್ಥವಾಗಲಿಲ್ಲ.

'ಏನಮ್ಮಾ ನಿನ್ನ ಮಾತಿನ ಅರ್ಥ ?'

ಹೆಂಗಸು ತಲೆಯಿಂದ ಬಾಲದವರೆಗೆ ಸುಟ್ಟು ಅರ್ಧಭಾಗ ಮಾಡಿದ್ದ ಮೊಲದ ಬಗ್ಗೆ ಹೇಳಿದ್ದಳು. ತೋರಿಸುತ್ತ ಆಕೆ ಹೇಳಿದಳು - 'ನಿನ್ನ ಟವೆಲ್ಲು ಕೊಡು ಅರ್ಧ ಭಾಗ ಕೊಟ್ಟು ಬಿಡ್ತೇನೆ ! ಏನು ಯೋಚಿಸ್ತಿಯ, ಇದೇನು ನಾಯಿ ಮಾಂಸ ಅಲ್ಲ, ನನ್ನ ಗಂಡ ಬೇಟೆಗಾರ , ದೇವರಾಣೆ ಇದು ಮೊಲ !'

ಇಬ್ಬರೂ ತಮ್ಮ ಪದಾರ್ಥ ಅದಲು - ಬದಲು ಮಾಡಿಕೊಂಡರು. ಇಬ್ಬರೂ ಚೌಕಾಶಿಯಲ್ಲಿ ತಮಗೆ ಅತ್ಯುತ್ತಮವಾದು ಸಿಕ್ಕಿತೆಂದುಕೊಂಡರು.

ಇದೇ ಸಮಯಕ್ಕೆ ಗುಂಪಿನಲ್ಲೇನೋ ಕೂಗಾಟ. ಮುದುಕಿಯೊಂದು ಕಿರುಚಾಡುತ್ತಿತ್ತು : 'ಏಯ್ ! ನೀನು ಎಲ್ಲಿ ಹೋದೆ, ನನ್ನ ದುಡ್ಡೆಲ್ಲಿ ? ನನಗ್ಯಾವಾಗ ದುಡ್ಡುಕೊಟ್ಟ್ಯೋ ಕಳ್ಳ ನನ್ನ ಮಗನೆ, ಹಂದಿ. ನೋಡಿ ಕರೆದ್ರೂನು ಹಾಗೆ ಹೋಗೋದನ್ನ - ಇಲ್ಲಿ ನೋಡಿ ಸಂಗಾತಿಗಳೇ ! ನನ್ನನ್ನು ದೋಚಿಬಿಟ್ಟ ಅವ. ಹಿಡಕೊಳ್ಳಿ ಅವನನ್ನು.'

'ಯಾರವನು ?'

'ಅದೇ ಅವನು ನೀಟಾಗಿ ಗಡ್ಡ ಮೀಸೆ ಬೋಳಿಸಿಕೊಂಡಿದ್ದಾನಲ್ಲ.'

'ಯಾರು ಅದೇ ಬಗಲಲ್ಲಿ ಅಂಗಿ ಹರಿದಿತ್ತಲ್ಲ ಅವನಾ ?'

'ಹೌದು, ಹಿಡಿರೀ ಅವನನ್ನು. ಅದೇ ಆ ಅರಬರವನು.'

'ಅದೇ ಮೊಳಕೈಗೆ ಪಟ್ಟಿ ಕಟ್ಟಿದ್ದನಲ್ಲಾ ಅವನಾ ?'

'ಹೌದು, ಹೌದು ! ಅಯ್ಯೋ ದೇವರೇ ನನ್ನ ದೋಚಿಬಿಟ್ಟ ?'

'ಏನು ನಡೀತಾ ಇದೆ ಇಲ್ಲಿ ?'

'ಅದ್ಯಾವನೋ ಹಾಲು - ಮಾಂಸ ಎಲ್ಲಾ ತಿಂದು ಹೊಟ್ಟೆ ತುಂಬಿಸಿಕೊಂಡು ದುಡ್ಡು ಕೊಡದೇ ಓಡಿಹೋದ. ಮುದುಕಿ ಗೋಳಾಡ್ತಾಯಿದೆ.'

'ಛೇ ! ಇದೆಲ್ಲಾ ನಡೀಬಾರದು. ಯಾರಾದರೂ ಹೋಗಿ ಯುವಕನನ್ನು ಯಾಕೆ ಹಿಡೀತಿಲ್ಲ ?'

'ಹಿಡೀಬೇಕಂತೆ, ಅವನ ಕೈತುಂಬಾ ಕತ್ತಿ ಗುರಾಣಿ, ಚರ್ಮದ ಪಟ್ಟಾ ಇದೆ... ನಿನ್ನನ್ನೇ ಅಟ್ಟಿಸಿಕೊಂಡು ಬರ್ತಾನೆ ಅವ್ನು ಹೆಚ್ಚು ಮಾತಾಡಿದರೆ.'

೬

ಹದಿನಾಲ್ಕನೆಯ ಡಬ್ಬಿಯಲ್ಲಿ ಬಲವಂತಕ್ಕೆ ಸೈನ್ಯ ಸೇರಿದ್ದ ಕೆಲವರಿದ್ದರು. ಅವರ ಜತೆ ಅವರ ಅಧಿಕಾರಿ-ವೆರೊನೆಕ್. ಮೂರು ಜನ ಮಾತ್ರ ಎಲ್ಲರಿಂದ ದೂರವಿದ್ದರು. ಅವರಲ್ಲಿ - ಪ್ರೊಖೊರ್ ಪ್ರೆತ್ಲೇವ್ ಸರಕಾರಿ ಸರಾಬು ಅಂಗಡಿಯಲ್ಲಿ 'ಕ್ಯಾಷಿಯರ್' ಆಗಿದ್ದ, ವ್ಯಾಸ್ಸ್ಯಾ ಬ್ರೆಕಿನ್ ಎಂಬ ಹದಿನಾರು ವರ್ಷದ ಹುಡುಗ ಗುಜರಿ ವ್ಯಾಪಾರಿಯೊಬ್ಬನ ಬಳಿಯಿದ್ದ, ಕೊನೆಯವ, ಖೊಸ್ತೋಯ್ದ ಅಮರ್‌ಸ್ಕಿ ಕೆಂಗೂದಲಿನವ, ಕ್ರಾಂತಿಕಾರಿ, ಕಾರ್ಮಿಕ ಪಕ್ಷದಲ್ಲಿದ್ದು ಎಲ್ಲ ವಿವಾದಗಳನ್ನು ಪರಿಹರಿಸಲು ಮಧ್ಯಸ್ಥಿಕೆ ವಹಿಸುತ್ತಿದ್ದವ.

ಬಲವಂತದಿಂದ ಸೈನ್ಯ ಸೇರಿದ್ದ ಜನ ಮೊದಮೊದಲು ಅಪರಿಚಿತತೆಯಿಂದ ಮುಗುಮ್ಮಾಗಿದ್ದವರು ನಿಧಾನವಾಗಿ ಒಬ್ಬರನ್ನೊಬ್ಬರು ಪರಿಚಯಿಸಿಕೊಂಡರು. ಇವರ, ಈ ಮೂವರ ಸರದಿಯೂ ಬಂತು. ರೈಲು ಇದೀಗ ಅವರ ಜಿಲ್ಲೆಯನ್ನೇ ಹಾದು ಹೊರಟಿತ್ತು.

ಈ ಮೂವರದೂ ಒಂದೊಂದು ದೊಡ್ಡ ಕಥೆ.

೧೦

ಝಿವಾಗೋ ಕುಟುಂಬದವರು ಸಹಕಾರಿ ಚಳವಳಿಯ ಕಾರ್ಯಕರ್ತ ಕೊಸ್ತೊಯ್ಡ್‌ನನ್ನು ಊಟಕ್ಕೆ ಕರೆದಿದ್ದರು. ಮೂಲೆಯಲ್ಲಿ ಕೂತಿದ್ದ ಅವನು ಸೊರಸೊರ ಶಬ್ದ ಮಾಡುತ್ತ ಮೊಲದ ಕಾಲನ್ನು ಚೀಪುತ್ತಿದ್ದ. ಭಾರದ ಕೆಲಸದ ಬಗ್ಗೆ ಅತಿ ಭಯಗೊಂಡಿದ್ದವನು ಅನೇಕ ಕೆಲಸಗಳನ್ನು ಬದಲಿಸಿ, ಇದೀಗ ತನಗೆ ಸರಿಹೊಂದುವುದನ್ನು ಹುಡುಕಿಕೊಂಡಿದ್ದ. 'ಇದು ಪರವಾಯಿಲ್ಲ'- ಹೇಳಿದ. ಮೂಳೆಗಳನ್ನು ಮುಗಿಸಿ, ಕೈಬೆರಳು ಚೀಪಿ, ಕರವಸ್ತ್ರದಿಂದ ಒರೆಸಿಕೊಂಡು ತನ್ನ ಅತಿಥೇಯರಿಗೆ ಕೃತಜ್ಞತೆ ಸೂಚಿಸಿ ಹೇಳಿದ : 'ನಿಮ್ಮ ಕಿಟಕಿಗಳು ಸರಿಯಾಗಿ ಕಾಣ್ತಾಯಿಲ್ಲ. ಅವನ್ನು ಸರಿಯಾಗಿ ಕೂಡಿಸಿ, ಹೊಳೆಯುವ ಲಪ್ಪ ಹಚ್ಚಬೇಕು. ಹಳೆ ವಿಷಯಕ್ಕೆ ಬರೋದಾದರೆ ನಿಮ್ಮ ಮೊಲದ ಊಟ ಅದ್ಭುತವಾಗಿತ್ತು. ಆದರೆ ಮಾತು ಮುಗಿಸುವ ಮೊದಲು, ರೈತರು ಹುಚ್ಚುಗೂಳಿಯಂತೆ ವರ್ತಿಸುತ್ತಿದ್ದಾರೆ. ಹೀಗೆ ಹೇಳ್ತಿರೋದಕ್ಕೆ ಕ್ಷಮಿಸಿ .... '

'ಓ ಬಾ ಇಲ್ಲಿ ! ', ಯೂರಿ ಹೇಳಿದ, ನಾವು ನಿಂತಿದ್ದ ನಿಲ್ದಾಣಗಳನ್ನು ನೋಡು. 'ಬೇಲಿ - ಮರ ಎಲ್ಲ ಹಾಗೇ ನಿಂತೇ ಇವೆ. ಅವನ್ನು ಯಾರೂ ಉರುವಲಿಗಾಗಿ ಕಡಿದು ಹಾಕಿಲ್ಲ. ಆ ಸಂತೆಗಳು ! ಹೆಂಗಸರು ! ಎಲ್ಲ ಎಷ್ಟು ಅದ್ಭುತ ! ಕಡೇ ಪಕ್ಷ ಒಂದೊಂದು ಕಡೆಯಾದರೂ ಜನರನ್ನು ನಂಬಿ ಬದುಕು ಸಾಗ್ತಾಯಿದೆ. ಜನ ಕೂಡಾ ಖುಷಿಯಿಂದಿದ್ದಾರೆ. ಎಲ್ಲರೂ ಬಿಕನಾಶಿ ಗಳಾಗಿರೊಲ್ಲ ಇದೇ ಎಲ್ಲದಕ್ಕೂ ಸಮರ್ಥನೆಯಲ್ಲವೇ ? '

'ಅದು ಹಾಗಿದ್ರೆ ಅಡ್ಡಿ ಇರಲಿಲ್ಲ, ಆದ್ರೆ ಹಾಗಿಲ್ಲ. ಹೀಗೆಲ್ಲಾ ನೀನು ಹೇಗೆ ಯೋಚಿಸೋಕೆ ಸಾಧ್ಯ ? ಒಳಗಡೆ ಏನು ನಡೀತಿದೆ ಅಂತ ನೀನು ನೋಡಬೇಕು. ಎಲ್ಲಾದರೂ ಸರಿ, ನಿಲ್ದಾಣದಿಂದ ಐವತ್ತು-ಅರವತ್ತು ಮೈಲಿ ದೂರದಾಚೆ. ಅಲ್ಲೆಲ್ಲ ಕೊನೆಯಿಲ್ಲದಂತೆ ಬೆಲೆ ಏರ್ತಿವೆ, ರೈತರೆಲ್ಲ ಬಂಡೆದ್ದಿದ್ದಾರೆ. ನೀನು ಹೇಳಬಹುದು 'ಅವರೆಲ್ಲ ವಿವೇಚನೆಯಿಲ್ಲದೆ ಕೆಂಪು-ಬಿಳಿ ಅಂತ ಹೊಡದಾಡ್ತಿದಾರೆ. ಅಧಿಕಾರದಲ್ಲಿ ಯಾರೇ ಇರಲಿ, ಅವರ ವಿರುದ್ಧ ಬಂಡೇಳೋದು ಇವರ ಕೆಲಸ, ಯಾಕಂದ್ರೆ ಅವರಿಗೆ ಏನು ಬೇಕೂಂತ ಅವರಿಗೇ ಗೊತ್ತಿಲ್ಲಾಂತ' ನಿನ್ನ ಮಾತು ನಾನು ಒಪ್ಪೊಲ್ಲ ಅಂತೀನಿ. ಯಾಕಂದ್ರೆ ನಿನಗಿಂತ-ನನಗಿಂತ ರೈತರಿಗೆ ಚೆನ್ನಾಗಿ

ಗೊತ್ತಿದೆ ಅವರಿಗೇನು ಬೇಕೂಂತ. ಅವರಿಗೆ ಇದೆಲ್ಲದ್ದಕ್ಕಿಂತ ಪೂರ್ತಿ ಭಿನ್ನವಾಗಿರೋದು ಬೇಕು.'

'ಕ್ರಾಂತಿ ಬಂದು ಅವನನ್ನು ಎಬ್ಬಿಸಿದಾಗ ಇದು ತನ್ನ ಕನಸನ್ನು ಪೂರ್ತಿಗೊಳಿಸುತ್ತೇಂತ ಅವ ಅಂದುಕೊಂಡ. ಪೂರ್ತಿ ಸ್ವಾತಂತ್ರ್ಯದಿಂದ, ಯಾರ ಕೈಕೆಳಗೂ ಜೀತ ಮಾಡ್ದೆ, ತನ್ನ ನೆಲವನ್ನು ತಾನೇ ಉತ್ತು ಚೆನ್ನಾಗಿ ಬದುಕಬೇಕೆನ್ನೋ ಅವನ ಪುರಾತನ ಬಯಕೆ ಕೈಗೂಡಿತು ಅಂತಂದುಕೊಂಡ. ಆದರೆ ಭಾಳ ಬೇಗ ಗೊತ್ತಾಯ್ತು : ಹಳೆಯ ತ್ಸಾರ್ ದಬ್ಬಾಳಿಕೆ ಹೋಗಿ ಈಗ ಅದಕ್ಕಿಂತ ಬಲವಾದ ಹೊರೆ ಕ್ರಾಂತಿಕಾರಿ ರಾಜ್ಯ ಬಂದಿದೆ ಅಂತ. ನಿನಗೆ ಗೊತ್ತಾ ? ಹಳ್ಳಿಗಳಲ್ಲಿ ಜನ ಹುಚ್ಚೆದ್ದು ಹೋಗಿದಾರೆ, ಇಲ್ಲಿವರೆಗೂ ಸೂರೂ ಗತಿಯಿಲ್ಲ ಅವರಿಗೆ! ನೀನು ಹೇಳೋದೇನು, ಅವರು ಖುಷಿಯಾಗಿದ್ದಾರೆಂತ ! ನಿನಗೆ ಗೊತ್ತಿಲ್ಲದ ಎಷ್ಟೋ ವಿಷಯಗಳಿವೆ, ನನ್ನ ಭಯಾ ಏನೂಂದ್ರೆ , ನಿನಗವೆಲ್ಲ ಗೊತ್ತಾಗಬಾರದೂಂತ ಇದೆಯಾ ? ಅಂತ.'

'ಓ, ಸರಿ , ನಾನು ಹೇಳ್ತಿನಿ. ನಂಗೊತ್ತಿಲ್ಲ . ಯಾಕೆ, ನನ್ನ ಒಳ್ಳೇದಕ್ಕೆ. ಎಲ್ಲವನ್ನು ತಿಳಿದು ನನ್ನ ಮನಸ್ಯಾಕೆ ಕೆಡಿಸಿಕೋಬೇಕು ? ಇತಿಹಾಸ ನನ್ನನ್ನೆಂದೂ ಕೇಳಿಲ್ಲ. ಏನೇ ಆದರೂ ನಾನೇ ಹೊಂದಿಕೊಳ್ಳಬೇಕು. ಹೀಗಾಗಿ ಎಲ್ಲ ವಿಷಯವನ್ನು ನಾನೇಕೆ ಕಡೆಗಣಿಸಬಾರದು ? ನೀನು ಹೇಳ್ತಿಯ - ಅವಾಸ್ತವ ಅಂತ. ಆದರೆ ಇವತ್ತು ರಷ್ಯಾದಲ್ಲಿ ವಾಸ್ತವ ಎಲ್ಲಿದೆ ಹೇಳು ? ನನ್ನ ನಂಬಿಕೆಯೆಂದರೆ ಪರಿಸ್ಥಿತಿಯನ್ನು ಮೀರಿದ ಕರಾಳತೆ ಇದು. ರೈತರೆಲ್ಲ ಸುಸ್ಥಿತಿಯಲ್ಲಿದ್ದಾರೆ, ಹಳ್ಳಿಗಳು ಸಮೃದ್ಧವಾಗಿವೆ ಅಂತ ನಂಬಬೇಕೂಂತ ನನಗೂ ಅನ್ನಿಸುತ್ತೆ. ಆದರೆ ಅದನ್ನು ನಂಬೋದಕ್ಕೆ ಆಗುವುದಿಲ್ಲವೆಂದರೆ ನಾನೇನು ಮಾಡಬೇಕು ? ಇದನ್ನೆಲ್ಲ ನಂಬಲು ನಾನು ಯಾರು ? ಯಾವ ನಂಬಿಕೆ ಮೇಲಿಂದ ನನ್ನ ಬದುಕು ನಡೆದಿದೆ ? ನನಗೂ ಬದುಕಿದೆ, ಸಂಸಾರ ಇದೆ....'

ಮುಖದ ಮೇಲೆ ಹತಾಶೆಯ ಚಹರೆ ಕವಿತು ಆತ ತನ್ನ ವಾದವನ್ನು ತನ್ನ ಮಾವನ ಕೈಗೆ ಕೊಟ್ಟು ಎದ್ದು ನಡೆದ, ಕೆಳಗೇನು ನಡೀತಿದೆ ಎಂದು ಗೋಣು ಹಾಕಿದ...

೧೧

ಕೇಂದ್ರ ರಷಿಯಾ ಬಿಟ್ಟು ಪೂರ್ವಕ್ಕೆ ನಡೆಯುತೊಡಗಿದಂತೆ ಕುತೂಹಲಕಾರಿ ಘಟನೆಗಳು ನಡೆಯತೊಡಗಿತು. ಗಲಭೆ ಪೀಡಿತ ಜಿಲ್ಲೆಗಳನ್ನು ಹಾದು ಅವರು ಹೊರಟದ್ದರು. ಇದೀಗ ಸೇನೆಯ ತುಕಡಿ ಅಲ್ಲಿ ಬೀಡುಬಿಟ್ಟು ಬಂಡಾಯ ಹತ್ತಿಕ್ಕಿತ್ತು.

ಮಧ್ಯದಲ್ಲಿ ರೈಲು ನಿಲ್ಲಬಹುದು. ರಕ್ಷಣಾ ಪಡೆಯವರು ಪ್ರಯಾಣಿಕರ ದಾಖಲೆ ಪತ್ರ - ಸರಂಜಾಮು ಪರಿಶೀಲಿಸಬಹುದು. ಮಧ್ಯರಾತ್ರಿಯಲ್ಲೊಮ್ಮೆ ನಿಲ್ಲಿಸಿದರೂ ಯಾರೂ ಬರಲಿಲ್ಲ, ಯಾರೂ ಏಳಲೂ ಇಲ್ಲ. ಯೂರಿ ಯೋಚಿಸಿದ - ಒಂದು ಅಪಘಾತವಾದರೂ ಆಗಿದ್ದರೆ ಹೋಗಿ ನೋಡಬಹುದಿತ್ತು !

ಕತ್ತಲು. ರೈಲು ಯಾವ ಕಾರಣವೂ ಇಲ್ಲದೆ ನಿಂತಂತಿತ್ತು. ಹಳಿಯ ಎರಡೂ ಬದಿ ಫರ್ ಮರಗಳಿದ್ದವು. ಮಂಜಿನಲ್ಲಿ ಕಾಲೂರಿ ನಿಂತಿದ್ದ ಪ್ರಯಾಣಿಕರು ಯೂರಿಗೆ ಹೇಳಿದರು -ರೈಲಿಗೇನೂ ತೊಂದರೆಯಿಲ್ಲ. ಆದರೆ ಈ ಭಾಗ ಅಪಾಯಕಾರಿಯಾಗಿ ರೋದರಿಂದ , ಟ್ರಾಲಿಯವರು ಪರೀಕ್ಷಿಸದೇ ಮುಂದೆ ಹೋಗೋದಿಲ್ಲ, ಅಂತ ಡ್ರೈವರ್ ಪಟ್ಟು ಹಿಡಿದಿದ್ದಾನೆ.' ಪ್ರಯಾಣಿಕರ ವಾರ್ತಾ ವಕ್ತಾರ ಕಾರಣ ಹುಡುಕಲು ಸಾಧ್ಯವಾದರೆ ಇಂಜಿನ್ನಿನ ಹಬೆಯಲ್ಲಿ ಕೈ ಬಿಸಿಮಾಡಿಕೊಳ್ಳಲು ಹೋದವನು ಈ ಸುದ್ದಿ ತಂದಿದ್ದ....

ರೈಲಿನ ತಲೆಯ ಮೇಲೆ ಬಿದ್ದಿದ್ದ ಹಿಮ ಬೆಂಕಿಗೆ ಆಗೀಗ ಹೊಳೆಯುತ್ತಿತ್ತು. ಕಲ್ಲಿದ್ದಲಿನ ಇಂಜಿನ್ನಿನ ಬೆಂಕಿ. ಆ ಬೆಂಕಿ ಬೆಳಕಿನಲ್ಲಿ ಇಂಜಿನ್ನಿನ ಮುಂದೆ ಕೆಲವರು ಓಡುತ್ತಿದ್ದುದು ಕಾಣುತ್ತಿತ್ತು.

ಮೊದಲಿದ್ದವನು ಯಾವ ಅನುಮಾನವೂ ಇಲ್ಲದೆ ಎಂಜಿನ್ ಚಾಲಕ, ಓಡಿ ಹಲಗೆಯ ಕೊನೆ ಮುಟ್ಟಿ, ಕಾಪು ತಡೆಯ ಮೇಲೆ ಜಿಗಿದು, ಭೂಮಿ ಅವನನ್ನು ನುಂಗಿತೊ ಎಂಬಂತೆ ಮಾಯವಾದ. ಅವನನ್ನು ಬೆನ್ನಟ್ಟಿದ್ದ ನೌಕಾ ಪಡೆಯವರೂ ಅಷ್ಟೇ - ಧುಮುಕಿ ಮಾಯವಾದರು. ಈ ಘಟನೆ ಯೂರಿಯನ್ನು ಮೊದಲು ಮಾಡಿ ಎಲ್ಲರಲ್ಲೂ ಆಶ್ಚರ್ಯ ಹುಟ್ಟಿಸಿತು. ಜರುಗಿದ್ದೇನೆಂದು ನೋಡಲು ಅವರೂ ಹೊರಟರು.

ಕಾಪು ತಡೆಯಾಚೆ ತೆರೆದುಕೊಂಡ ಹಳಿಗಳು ಅವರೆದುರು. ಆಶ್ಚರ್ಯಕರ ಸಂಗತಿಯೊಂದು ಅವರೆದುರು. ಮಾಮೂಲಿ ಮಾರ್ಗದ ಪಕ್ಕದಲ್ಲಿ ಎಂಜಿನ್

ಚಾಲಕನ ಅರ್ಧದೇಹ ಹಿಮದಲ್ಲಿ ಹೂತು ಹೋಗಿತ್ತು. ಆತನನ್ನು ಹುಡುಕಿ ಹೊರಟವರು ಬೇಟೆಗಾರ ಮಿಕ ಹಿಡಿಯಲು ನಿಲ್ಲುವಂತೆ ಅರೆ ವೃತ್ತಾಕಾರ ನಿಂತು ಅವರೂ ಹಿಮದಲ್ಲಿ ಸಿಕ್ಕುಹಾಕಿಕೊಂಡಿದ್ದರು.

'ಕೃತಜ್ಞತೆ ಕಡಲ ಹಕ್ಕಿಗಳೇ ! ಸಂಗಾತಿಗಳೇ !' ಚಾಲಕ ಕೂಗುತ್ತಿದ್ದ. ಒಳ್ಳೆ ನೋಟ, ತಮ್ಮ ಜತೆ ಕೆಲಸಗಾರರನ್ನು ಬಂದೂಕಿನೊಂದಿಗೆ ಅಟ್ಟಿಸಿಕೊಂಡು ಬರುವ ನೌಕಾ ಪಡೆಯವರು ! ಯಾಕೆ ರೈಲು ಇಲ್ಲೇ ನಿಂತು ಹೋಗುತ್ತೇಂತ ಕೇಳಿದ್ದಕ್ಕೆ ! ಸಹ ಪ್ರಯಾಣಿಕರೆ ನೀವೆಲ್ಲಾ ನನ್ನ ಸಾಕ್ಷಿಗಳಾಗಿರಿ, ನೀವೇ ನೋಡಿದ್ರಲ್ಲಾ, ಎಂಥ ಅಪಾಯಕಾರಿ ಸ್ಥಳಾ ಇದೂಂತ ? ಯಾರೋ ಬೋಲ್ಟು -ನಟ್ಟು ಸಡಿಲ ಮಾಡುತ್ತಾ ಓಡಾಡ್ತಾ ಇರಭೌದು. ನರಕಕ್ಕೆ ಹೋಗಿ ಹಲ್ಕಾಗಳಾ. ಸೂಳೆಮಕ್ಕಳಾ ! ನಿಮ್ಮ ತಾಯಿ - ಅಜ್ಜಿಯರ ಬಗ್ಗೆ ಅಷ್ಟೇ ನನ್ನ ಕಾಳಜಿ ! ಇದೆಲ್ಲಾ ಮಾಡಿದ್ದು ನಿಮಗಾಗೇ ! ನಿಮಗೆಲ್ಲಾ ಏನೂ ತೊಂದರೆಯಾಗಬಾರದೂಂತ. ಆದರೆ ನಾನು ಮಾಡಿದ್ದಕ್ಕೆ ಬಂದದ್ದೇನು ? ಈ ಅವಸ್ಥೆ ! ಬನ್ನಿ, ಸುಟ್ಟು ಬಿಡ್ರೋ ನನ್ನನ್ನ ! ನೋಡಿ ಇಲ್ಲಿದೇನೆ. ಪ್ರಯಾಣಿಕ ಸಂಗಾತಿಗಳೇ , ನೀವೆಲ್ಲ ಸಾಕ್ಷಿಯಾಗಿರಿ. ನಾನೇನೂ ಓಡಿಹೋಗ್ತಾಯಿಲ್ಲ. '

ಗುಂಪಿನಿಂದ ತಲೆಗೊಂದು ಮಾತು - 'ನಿಜವಾಗಿಯೂ ಅವರು ಹಾಗೆ ಮಾಡಬೇಕೂಂತ ಇರಲಿಲ್ಲ.... ಸಮಾಧಾನ ಮಾಡಿಕೋ.... ಬರೀ ನಿನ್ನ ಹೆದರಿಸಬೇಕೂಂತ ಇದ್ದರಷ್ಟೇ... ನಾವ್ಯಾರೂ ಅದಕ್ಕೆ ಅವಕಾಶ ಕೊಡ್ತಿರಲಿಲ್ಲ.....'

ಮಂಜಿನಿಂದ ಮೊದಲು ಹೊರಬಂದ ನೌಕೆಯವನದು, ಕೆಂಗೂದಲು, ಭಾರಿ ತಲೆ, ಹೀಗಾಗಿ ಅವನ ಮುಖ ಚಪ್ಪಟೆಯಾಗಿ ಕಾಣುತ್ತಿತ್ತು. ಹೊರಬಂದದ್ದೇ ನಿಧಾನಕ್ಕೆ, ಆಳದಿಂದ, ಶಾಂತನಾಗಿ ಉಕ್ರೇನಿಯನ್ ಉಚ್ಚಾರಣಾ ಶೈಲಿಯಲ್ಲಿ ಮಾತನಾಡತೊಡಗಿದ. ಆತನ ಅಸ್ತಿತ್ವವೇ ಆ ಪರಿಸರಕ್ಕೆ ಹೊರಗಿನದಾಗಿ ಕಾಣುತ್ತಿತ್ತು.

'ದಯವಿಟ್ಟು ಕ್ಷಮಿಸಿ, ಈ ಹೊಡೆದಾಟವೆಲ್ಲ ಯಾತಕ್ಕಾಗಿ ? ಈ ಭಯಂಕರ ಛಳಿಯಲ್ಲಿ ಶೀತ ಹಿಡಿಯೊಲ್ಲ ಗೆಳೆಯರೆ. ಹೊರಗಡೆ ಭಾರಿ ಗಾಳಿ, ನೀವೆಲ್ಲ ಯಾಕೆ ಒಳಗೆ ಹೋಗಿ, ನಿಮ್ಮ ಸೀಟನಲ್ಲಿ ಕೂತು ಬೆಚ್ಚಗಾಗಬಾರದು ?'

ಗುಂಪು ಕ್ರಮೇಣ ಕರಗಿತು. ಧಡಿಯ ಮತ್ತೆ ಚಾಲಕನ ಬಳಿ ನಡೆದು

ಹೇಳಿದ: 'ನಿನ್ನ ಹುಚ್ಚುತನ ಸಾಕು ಸಂಗಾತಿ ! ಮಂಜಿನಿಂದ ಹೊರಗೆ ಬಾ.... ಚಾಲಕ ಇನ್ನೂ ಬಿಗಿದೇಯಿದ್ದ.'

೧೨

ಮರುದಿನ ಗಾಳಿತಂದು ಹಾಕಿದ ಮಂಜಿನ ಹಳಿಗಳ ಮೇಲೆ ರೈಲು ಸೋಮಾರಿಯಂತೆ ತೆವಳುತ್ತಿತ್ತು. ಮಂಜನ್ನು ಯಾರೂ ತೆಗೆದುಹಾಕಿರಲಿಲ್ಲ. ಮಗ್ಗುಲಿಗೇ ಜೀವವಿಲ್ಲದ, ಸುಟ್ಟ ಊರು. ಹಿಂದೆ ಸರಿದುಹೋದ ಲೋಅರ್ ಕೆಲ್ಮೆಸ್ ಎನ್ನುವ ಆ ಊರಿನ ಹೆಸರು ಮಸುಕಾಗಿ ಬೋರ್ಡಿನ ಮೇಲೆ ಕಾಣಿಸಿತ್ತು.

ಮುಂದೆ ಸ್ಮಶಾನವಾಗಿದ್ದ ಮಂಜು ಹೊದ್ದ ಹಳ್ಳಿ. ಈ ಹಳ್ಳಿ ಕೂಡ ಬೆಂಕಿಗಾಹುತಿಯಾಗಿತ್ತು. ಕೊನೆಯ ಮನೆ ಪೂರ್ತಿ ಸುಟ್ಟಿದ್ದರೆ, ಅದರ ಪಕ್ಕದ ಮನೆಯ ತೊಲೆಗಳು ಬಿದ್ದಿದ್ದವು. ಸುಟ್ಟ ತುಂಡು ಹರಡಿದ್ದವು. ಬೀದಿ ತುಂಬ ಸುಟ್ಟ ವಸ್ತುಗಳು.

ಊರು ನೋಡಿದಷ್ಟೇನೂ ನಿರ್ಜೀವವಾಗಿರಲಿಲ್ಲ. ಇನ್ನೂ ಒಂದಿಷ್ಟು ಜನರಿದ್ದರು. ರೇಲ್ವೆ ಮಾಸ್ಟರ್ ಕಾಣಿಸಿದೊಡನೆ, ಗಾರ್ಡ್ ರೈಲಿನಿಂದ ಧುಮುಕಿ ಅವನೊಂದಿಗೆ ಮಾತಿಗಿಳಿದ-ಹಳ್ಳಿಗೆ ಬೆಂಕಿಬಿದ್ದು ರೈಲು ನಿಲ್ದಾಣವೂ ಸುಟ್ಟಿರಬೇಕಲ್ಲವೆ?

'ನಮಸ್ಕಾರ ,ದಯವಿಟ್ಟು ಬನ್ನಿ. ಹೌದು ನಿಜವಾಗಿಯೂ ನಾವು ಬೆಂಕಿಗಾಹುತಿಯಾದೆವು. ಆದರೆ ಅದೇನೂ ಕೆಟ್ಟದ್ದಾಗಿರಲಿಲ್ಲ !'

'ನನಗೆ ಅರ್ಥವಾಗಲಿಲ್ಲ .'

'ಅದಕ್ಕಾಗಿ ಪ್ರಯತ್ನಿಸದಿರೋದು ಒಳ್ಳೆದು.'

'ನಿಜವಾಗಿಯೂ ಹೇಳ್ತಿದಿರಾ ?'

'ಹೌದು, ನಿಜವಾಗಿಯೂ.'

'ಯಾಕೆ ? ನೀವೇನು ಮಾಡಿದಿರಿ ?'

'ನಾವೇನೂ ಮಾಡಿಲ್ಲ. ನಮ್ಮ ನೆರೆಯವರು, ಆದರೆ ಅನುಭವಿಸಿದ್ದು ನಾವು. ಒಳ್ಳೇ ಪಾಠ. ಅಲ್ಲಿ ನೋಡಿ, 'ಲೋಅರ್ ಕೆಲ್ಮೆಸ್ ' ಹಳ್ಳಿ ಇದೆಯಲ್ಲ, ಎಲ್ಲಾ ಅವರಿಂದ ಆದದ್ದು.'

'ಅಂಥ ಅಪರಾಧ ಅವರೇನು ಮಾಡಿದ್ರು ?'

ಎಲ್ಲ ಏಳು ಅಪರಾಧಗಳೂ. ತಮ್ಮ ರೈತ ಸಂಘ ವಿಸರ್ಜಿಸಿದ್ದು ಒಂದು. ಕೆಂಪು ಸೇನೆಗೆ ಕುದುರೆಗಳನ್ನು ಕೊಡಲು ನಿರಾಕರಿಸಿದ್ದು ಎರಡು, (ಅವರೆಲ್ಲ ಕುಡುಕರು, ನೆನಪಿರಲಿ, ಸವಾರರು) ಸರಂಜಾಮು ಹೊಂದಿಸೊದರಲ್ಲಿ ಹಿಂದೆ ಬಿದ್ದದ್ದು, ಎಲ್ಲ ರೀತಿಯಿಂದಲೂ ಇದು ಮೂರನೇದ್ದು.

'ಹೌದು, ಹೌದ್ಹೌದು. ಹೀಗಾಗಿ ದಾಳಿಗೊಳಗಾದರು ?'

'ಸಹಜವಾಗಿಯೇ'

'ಯುದ್ಧದ ರೈಲಿನಿಂದ ?'

'ಹೌದೇ ಹೌದು'

'ಇದೇನು ನಮಗೆ ಸಂಬಂಧಿಸಿದ್ದಲ್ಲ. ಆದರೂ ಬೇಸರವಾಗ್ತದೆ.'

'ಏನೇ ಆಗಲಿ, ಎಲ್ಲ ಮುಗೀತು. ಆದರೆ ನಿನಗಾಗಿ ಇರೋ ಸುದ್ದೀನೂ ಅಷ್ಟೇನೂ ಒಳ್ಳೆದಲ್ಲ. ನೀವೆಲ್ಲ ಇನ್ನೂ ಎರಡು ದಿನವಾದ್ರೂ ಇಲ್ಲಿರಬೇಕಾಗುತ್ತೆಂತ ನನಗನ್ನಿಸುತ್ತೆ.'

'ತಮಾಷೆ ಮಾಡ್ತಿದಿರಾ ? ಸೇನಾಪಡೆಗೆ ತಂಡ ತಗೊಂಡು ಹೋಗ್ತಿದೇನೆ ನಾನು.'

ನಾನೇನೂ ತಮಾಷೆ ಮಾಡ್ತಿಲ್ಲ. ಕಳೆದವಾರ ಭಾರೀ ಹಿಮಪಾತವಿತ್ತು. ಹಳಿಯುದ್ದಕ್ಕೂ ಮಂಜು ಸುರಿದು ಕೂತಿದೆ, ಬಳಿದು ಹಾಕೋಕೆ ಯಾರೂ ಇಲ್ಲ, ಹಳ್ಳಿಗರೆಲ್ಲ ಓಡಿ ಹೋಗಿದಾರೆ. ಇರೋರನ್ನ ಆ ಕೆಲಸಕ್ಕೇನೊ ನಾನು ಹಚ್ಚುವೆ, ಆದರೆ ಅದು ಸಾಲದು !

'ಪ್ರಾರಬ್ಧ - ಶಾಪ. ಈಗೇನು ಮಾಡಲಿ ನಾನು ?'

'ಸ್ವಲ್ಪ ಸಮಯ ಕೊಟ್ಟರೆ ಸಾಫು ಮಾಡಿ ಕೊಡ್ತೇವೆ.'

'ಹಿಮ ಎಷ್ಟು ಆಳವಾಗಿದೆ?'

ಅಷ್ಟೇನೂ ಆಳವಿಲ್ಲ. ಆದರೆ ಎಲ್ಲ ಕಡೆಯೂ ಒಂದೇ ಥರವಿಲ್ಲ. ಭಾರಿ ಅಧ್ವಾನವೆಂದರೆ ಮಧ್ಯದ ದಾರಿ. ಸುಮಾರು ಎರಡು ವೈಲಿ. ಅಲ್ಲಿ

ನಿಜವಾಗಲೂ ತೊಂದರೆ ನಮಗೆ. ಅದರಾಚೆ ಕಾಡು ಮಂಜನ್ನು ದೂರವಿಟ್ಟಿದೆ. ಇದೆಲ್ಲ ಬಟಾ ಬಯಲಾಗಿದ್ದರಿಂದ ಗಾಳಿ ತರುವ ಮಂಜು ಇಲ್ಲಿ ಬೀಳೋದೇ ಹೆಚ್ಚು.

'ಒಳ್ಳೆಯ ನರಕದ ಸಹವಾಸ. ಪ್ರಯಾಣಿಕರನ್ನು ಈ ಕೆಲಸಕ್ಕೆ ಹಚ್ಚುವೆ.'

'ನಾನೂ ಅದನ್ನೇ ಯೋಚಿಸ್ತಿದ್ದೆ !'

'ನಾವು ನೌಕಾಪಡೆಯವರನ್ನ ಮುಟ್ಟಕೂಡದು. ಆದರೆ ತರಬೇತಿಯ ಪೇದೆಗಳು, ಪುಗಸಟ್ಟೆ ಪ್ರಯಾಣಿಕರೇ ಇದಾರೆ, ಸುಮಾರು ಏಳುನೂರು ಜನ !'

'ಬೇಕಾದಷ್ಟಾಯ್ತು. ಸಲಿಕೆಗಳು ಬಂದದ್ದೇ ಕೆಲಸ ಪ್ರಾರಂಭಿಸೋಣ. ನಮ್ಮ ಬಳಿ ಅಷ್ಟೊಂದಿಲ್ಲ . ಇನ್ನೊಂದಿಷ್ಟಕ್ಕೆ ಪಕ್ಕದ ಹಳ್ಳಿಗೆ ಕಳಿಸಿದ್ದೇನೆ. ಇನ್ನೇನು ಬಂದರೂ ಬಂದರೆ '

'ದೇವರೇ, ಎಂಥಾ ದುರ್ದೈವ, ನಿಭಾಯಿಸಬಹುದೂಂತೀಯಾ ?'

'ಧಾರಾಳವಾಗಿ, ಅವರೆಲ್ಲ ಹೇಳ್ತಾರೆ - ನಗರಗಳನ್ನೆಲ್ಲ ಜನರ ಸಮೇತ ವಶಪಡಿಸಿಕೊಳ್ಳಬಹುದು ಅಂತ. ಇದೇನು ಮಹಾ ? ಬರೀ ರೇಲ್ವೆ ಹಳಿ, ಯೋಚಿಸ ಬೇಡ'

೧೩

ಹಳಿಗಳನ್ನು ಸ್ವಚ್ಛ ಮಾಡುವ ಕೆಲಸ ಮೂರುದಿನ ಹಿಡಿಯಿತು. ಪ್ರಯಾಣದಲ್ಲೇ ಅತ್ಯಂತ ಸುಖಕರವಾದ ಈ ಮೂರು ದಿನಗಳಲ್ಲಿ ಝಿವಾಗೋ ಕುಟುಂಬದ ಎಲ್ಲರೂ ಮಂಜು ತೆಗೆಯುವ ಕೆಲಸದಲ್ಲಿ ತೊಡಗಿದ್ದರು.

ದೇಶ ಮುಚ್ಚಿಕೊಂಡು ಗುಟ್ಟಿನಂತೆ ಕಾಣುತ್ತಿತ್ತು.... ನಾಶ ನಿಗೂಢತೆಗೆ ಇನ್ನಷ್ಟು ಕಸವು ತುಂಬಿತ್ತು. ಹೀಗಾಗಿ ಪ್ರಯಾಣಿಕರೆಂದರೆ ಭಯಗೊಂಡ ಅಳಿದುಳಿದ ಹಳ್ಳಿಗರು ದೂರವಿದ್ದರು. ಅವರವರೊಳಗೆ ಮಾತಾಡುವುದನ್ನು ಅವರು ನಿಲ್ಲಿಸಿದಂತಿತ್ತು.

ಕೆಲಸಗಾರರನ್ನೆಲ್ಲ ಭಾಗಮಾಡಲಾಗಿತ್ತು. ತರಬೇತಿ ಕಾರ್ಮಿಕರನ್ನು ನಾಗರಿಕ ರಿಂದ ಬೇರೆ ಮಾಡಲಾಗಿತ್ತು. ಜನವೆಲ್ಲ ಹಗಲಿಡಿ ಬಯಲಲ್ಲಿ ಕಳೆದು ಮಲಗಲಷ್ಟೇ ಮರಳುತ್ತಿದ್ದರು. ಚಿಕ್ಕ ಚಿಕ್ಕ ಪಾಳಿಗಳಿದ್ದು ಕೆಲಸಮಾಡುವುದು ಹಿತಕರವಾಗಿತ್ತು.

ಜತೆಗೆ ಸಲಿಕೆಗಳೂ ಹೆಚ್ಚಿಗೆಯಿರದಿದ್ದರಿಂದ ಕೆಲಸವೂ ಕಷ್ಟದ್ದಾಗಿರಲಿಲ್ಲ.

ಯೂರಿ ಇದ್ದ ತಂಡಕ್ಕೆ ಹಿತಕರವಾದ ದೃಶ್ಯ. ಪೂರ್ವದ ಕಡೆಗಿನ ದೇಶ ತಗ್ಗಿನಲ್ಲಿದ್ದು, ದಿಗಂತದಿಂದ ಬರುವ ಅಲೆಗಳನ್ನು ಕಾಣಬಹುದಿತ್ತು.

ಗುಡ್ಡದ ಮೇಲೊಂದು ಗಾಳಿಗೆದೆ ತೆರೆದು ನಿಂತ ಮನೆ : ಬೇಸಿಗೆಯಲ್ಲಿ ಅಲ್ಲಿದ್ದ ಮರಗಳು ಅದನ್ನು ರಕ್ಷಿಸಿದ್ದಿರಬಹುದು. ಮನೆಯಲ್ಲಿ ಯಾರಾದರೂ ಇಳಬಹುದೇ? ಯೂರಿಗೆ ಆಶ್ಚರ್ಯ. ಅಥವಾ ನಾಶಕ್ಕೆ ಮೈತೆರೆದು ನಿಂತ ಅದು ಖಾಲಿಯಿರಬೇಕು, ಯಾವುದಾದರೂ ಸಂಸ್ಥೆಯ ಕಛೇರಿಯಾಗಿರಬಹುದು. ಒಮ್ಮೆ ಅಲ್ಲಿ ಬದುಕಿದ್ದ ಜನರಿಗೆಲ್ಲಾ ಏನಾಯಿತು ? ವಿದೇಶಕ್ಕೆ ಹಾರಿಹೋದರೆ ? ಅಥವಾ ರೈತರ ಕೈಗೆ ಸಿಕ್ಕು ನುಚ್ಚಾದರೆ ? ಅಥವಾ ಜನಪ್ರಿಯರಾಗಿದ್ದ ಅವರನ್ನು ಜಿಲ್ಲಾ ಕೇಂದ್ರದಲ್ಲಿ ತಾಂತ್ರಿಕ ಸಹಾಯಕರೆಂದು ನೇಮಕಮಾಡಿರಬಹುದೇ ? ಅಥವಾ ಕುಲಕ್‌ರಿಗಾದ ಗತಿ ಇವರಿಗೂ ಆಯಿತೆ ?

ಮನೆ ಆತನ ಕುತೂಹಲ ಕೆರಳಿಸಿತು. ಈ ಪ್ರಶ್ನೆಗೆ ಉತ್ತರ ಹೇಳುವವರಾರೂ ಈ ದಿನಗಳಲ್ಲಿರಲಿಲ್ಲ. ಮನೆ ತನ್ನ ನೋವಿನ ಮೌನವನ್ನು ಹಾಗೇ ಉಳಿಸಿತು.

ಸೂರ್ಯ ಹೊಳೆದ. ಯೂರಿ ಬರ್ಫಿನ ತುಂಡು ತೆಗೆದುಕೊಂಡು ನೆಲಕ್ಕೆ ಹಾಕಿದ್ದೆ ವಜ್ರದ ಬೆಂಕಿಯ ತುಣುಕಿನಂತಾದವು. ಇದು ಅವನ ಬಾಲ್ಯವನ್ನು ನೆನಪಿಗೆ ತಂದಿತು. ಆತ ತನ್ನಷ್ಟಕ್ಕೆ ತಾನೇ ತಮ್ಮ ಮನೆಯಂಗಳದಲ್ಲಿ ತನ್ನನ್ನು ಕಂಡ. ಜಡೆ ಹಾಕಿಕೊಂಡ ಕಪ್ಪು ಉಣ್ಣೆ ಬಟ್ಟೆ ತೊಟ್ಟ ಕಪ್ಪುಕಂಗಳ ಬಾಲಕ. ಬರ್ಫನ್ನು ಕತ್ತರಿಸಿ ನಗರ, ಕಾಡು, ಪಿರಮಿಡ್ ಮಾಡುವುದು. ಅಂದಿನ ಬದುಕು ವಿಚಿತ್ರ - ಖುಷಿ ಕೊಡುವ, ಬಯಕೆಯ ಬದುಕು. ಕಣ್ಣಿಗೆ ಕಂಡದ್ದೆಲ್ಲ ಹಬ್ಬ, ಹೊಟ್ಟೆಗೂ !

ಇದೀಗ ಇಲ್ಲಿ, ಮೂರು ದಿನದ ಕೆಲಸದಲ್ಲಿ, ಬಯಲಿನಲ್ಲಿ ಕೆಲಸಮಾಡಿದ ಕೆಲಸಗಾರರು ಹೊಟ್ಟೆ ತುಂಬಿದ ಅನುಭವದಲ್ಲಿದ್ದರು. ಆಶ್ಚರ್ಯವೇನೂ ಇಲ್ಲ. ರಾತ್ರಿ ಬಿಸಿಬಿಸಿ ಬ್ರೆಡ್ಡಿನ ರಾಶಿ. ಆದರೆ ಯಾರಿಗೂ ಇದು ಎಲ್ಲಿಂದ ಬಂತು, ಯಾರು ಹೇಳಿದರೂ ಎಂದು ಗೊತ್ತಾಗುತ್ತಿರಲಿಲ್ಲ. ಮೇಲೆ ಬೆಣ್ಣೆ, ಹೊಳೆವ ತಲೆ, ಇದ್ದಲಿನಿಂದ ಸುಟ್ಟ ತಳ.

೧೪

ಅವರೆಲ್ಲ ನಾಶವಾದ ನಿಲ್ದಾಣದ ಬಗ್ಗೆ ಹೆಮ್ಮೆಯಿಂದಿದ್ದರು - ರಜಾದಿನಗಳಲ್ಲಿ ಬೆಟ್ಟದ ತಾಣವಾಗವುದೆಂಬ ಕಾರಣಕ್ಕೆ ಅದರ ಆಕಾರ, ಸ್ಥಳ, ವಿವರಗಳು ಯೂರಿಯ ನೆನಪಿನಲ್ಲಿ ಅಚ್ಚೊತ್ತಿದ್ದವು.

ಪ್ರತಿ ಸಂಜೆ ಸೂರ್ಯ ವಾಡಿಕೆಯಂತೆ, ನಿಷ್ಠೆಯಿಂದ ಬರ್ಚ್ ಮರದ ಹಿಂಭಾಗಕ್ಕೆ, ಟೆಲಿಗ್ರಾಫ್ ಕಿಟಕಿಯ ಮುಂದೆ ಮುಳುಗುತ್ತಿದ್ದ.

ಹೊರಭಾಗದ ಒಂದು ಬದಿಯ ಗೋಡೆಬಿದ್ದು, ಕೋಣೆ ಕಸ ತುಂಬಿಕೊಂಡಿತ್ತು. ಆದರೆ ಕಿಟಕಿ ಮಾತ್ರ ಕಾಫಿ ಬಣ್ಣದಲ್ಲಿ ಶುಭ್ರವಾಗಿತ್ತು. ಕಟ್ಟಡದ ಹಿಂಭಾಗದಲ್ಲಿದ್ದ ವೆಯಿಟಿಂಗ್ ರೂಮು ನಾಶವಾಗಿತ್ತು. ಹೊರಗಡೆ ಬೀಗ ಜಡಿದ ಬಾಗಿಲಿಗೆ ಫೆಬ್ರವರಿ ಕ್ರಾಂತಿಯಲ್ಲೋ ಅಥವಾ ಇತ್ತೀಚೆಗೋ ಅಂಟಿಸಿದ ಒಂದು ಚೀಟಿ.

'ಔಷಧ ಹಾಗೂ ಬ್ಯಾಂಡೇಜು ಅಗತ್ಯವಿರುವ ಪ್ರಯಾಣಿಕರು ತಾತ್ಕಾಲಿಕವಾಗಿ ಯೋಚಿಸಬೇಕಿಲ್ಲ. ಅನಿವಾರ್ಯ ಕಾರಣದಿಂದ ಬಾಗಿಲು ಹಾಕಿರುವೆ. ಅದರ ಮೇಲೆಯೇ ಈ ಚೀಟಿಯನ್ನು ಅಂಟಿಸಿರುವೆ.'

ಸಹಿ : ವೈದ್ಯಕೀಯ ಸಹಾಯಕ
ಯೂಸ್ಟ್-ನಮದಿನ್ಸ್ಕ್ - ಜಿಲ್ಲೆ

ಹಳಿಗಳ ಮೇಲೆ ಮುದ್ದೆಯಾಗಿದ್ದ ಮಂಜನ್ನು ಸಾಫು ಮಾಡಿದ ಮೇಲೆ ಹಳಿಗಳು ಬಾಣದಂತೆ ನೇರವಾಗಿ ಕಾಣತೊಡಗಿದವು. ಹಳಿಗಳ ಎರಡೂ ಬದಿಗೆ ಹಿಮ ಕರಗಿದ ಹಸಿರು ಕಾಡು, ಕಂಗೊಳಿಸಿದವು.

ಸಲಿಕೆ ಹಿಡಿದುಕೊಂಡ ಗಂಡಸರು, ವಿರಾಮವೇಳೆಯಲ್ಲಿ ಉದ್ದಕ್ಕೂ ನಿಂತಿದ್ದನ್ನು ಕಾಣಬಹುದಿತ್ತು. ಒಬ್ಬರನ್ನೊಬ್ಬರು ಮೊದಲ ಸಲ ನೋಡಿದಾಗ, ಎಷ್ಟು ಜನರಿದ್ದಾರೆ ಎಂದವರು ಚಕಿತಗೊಳ್ಳುತ್ತಿದ್ದರು.

೧೫

ಈಗಾಗಲೇ ತಡವಾಗಿತ್ತು, ಕತ್ತಲೆಯೂ ಆವರಿಸುವುದರಲ್ಲಿತ್ತು. ಆದರೂ ರೈಲು

ಕೆಲವೇ ಗಂಟೆಗಳಲ್ಲಿ ಬಿಡಲಿದೆ ಎಂದು ಹೇಳುತ್ತಿದ್ದರು. ಯೂರಿ - ತೋನ್ಯಾ ಸ್ವಚ್ಛ ಮಾಡಿದ ಹಳಿಗಳನ್ನು ಇನ್ನೊಮ್ಮೆ ನೋಡುವ ಸಲುವಾಗಿ ಇಳಿದು ಹೋದರು. ಸುಮಾರು ದೂರದವರೆಗೆ ನೋಡಿದರೂ ಯಾರೊಬ್ಬರೂ ಕಾಣದೆ ತಮ್ಮಲ್ಲೇ ಒಂದೆರಡು ಮಾತಾಡಿಕೊಂಡು ಮರಳಿ ಬಂದರು....

೧೬

ಇದ್ದಕ್ಕಿದ್ದಂತೆ ವಾತಾವರಣ, ಹೊರಗಿನ ನೋಟ ಬದಲಾದವು. ಬಯಲು ಮರೆಯಾಗಿ ಬೆಟ್ಟದ ದಾರಿಯನ್ನು ಸುತ್ತಿ ಸುತ್ತಿ ರೈಲು ಬೆಟ್ಟಗಳ ನಾಡಿಗೆ ಬಂದಿತ್ತು. ನಿರಂತರ ಬೀಸಿದ ಉತ್ತರ ಗಾಳಿ ಮರೆಯಾಗಿ ಬೆಚ್ಚಗಿನ ಹಬೆಯಂಥ ದಕ್ಷಿಣದ ಗಾಳಿ ಬೀಸತೊಡಗಿತು.

ಇಲ್ಲಿನ ಕಾಡೆಲ್ಲ ಬೆಳೆಯುತ್ತಿರುವುದು ಗುಡ್ಡದ ಇಳಿಜಾರಿನಲ್ಲಿ, ರೈಲು, ಕಾಡಿನ ಹತ್ತಿರ ಬಂದಾಗಲೆಲ್ಲ ಹುಷಾರಾಗಿ ಮೇಲೆ ಹತ್ತುತ್ತ ಹೋಗಬೇಕಾಗುತ್ತಿತ್ತು. ಮಧ್ಯೆ ಬಂದಾದಮೇಲೆ ಮತ್ತೆ ಕೆಳಕ್ಕಿಳಿಯುವುದು.... ಆದರೆ ಇಲ್ಲಿಯವರೆಗೂ ನೋಡುವಂಥ ದಟ್ಟ ಕಾಡು ಕಂಡಿರಲಿಲ್ಲ. ಕಾಡು ತನ್ನ ಚಳಿಗಾಲದ ಆಳದ ನಿದ್ದೆಯಲ್ಲಿ ಶಾಂತವಾಗಿತ್ತು.

ಯೂರಿ ತನ್ನ ಆಲಸಿತನದಿಂದ ಈಚೆ ಬಂದ. ಈ ಎಲ್ಲ ದಿನಗಳಲ್ಲೂ ತನ್ನ ಜಾಗದಲ್ಲಿ ನಿದ್ದೆ ಮಾಡುವುದು, ಯೋಚಿಸುವುದು, ಕೇಳುವುದು ಇಷ್ಟೇ ಅವನು ಮಾಡಿದ್ದು. ಆದರೆ ಈಗ ಕೇಳಿಸಿಕೊಳ್ಳುವಂಥದ್ದೇನೂ ಇರಲಿಲ್ಲ.

೧೭

ಯೂರಿ ಮಲಗಿ ನಿದ್ರಿಸುತ್ತಿದ್ದಾಗ: ಚೈತ್ರ, ರಷಿಯಾದಲ್ಲೆಲ್ಲ ಬಿದ್ದ ಭಾರಿ ಪ್ರಮಾಣದ ಹಿಮಪಾತವನ್ನು ಕಾಯಿಸಿ ಕರಗಿಸುತ್ತಿತ್ತು. ಮಾಸ್ಕೋ ಬಿಟ್ಟಾಗ ಹನಿದ ಹಿಮಪಾತ, ದಾರಿಯುದ್ದಕ್ಕೂ ಬಿದ್ದ ಹಿಮಪಾತ, ಮೂರು ದಿನಗಳ ಕಾಲ ಹಳಿಯಿಂದ ಹಡ್ಡಿಹಾಕಿದ ಹಿಮಪಾತ ; ಕಣ್ಣಿನ ಕ್ಷಿತಿಜದವರೆಗೂ ಮನೆಮಾರು ಕಾಡಡವಿ ಬಯಲುಗಳನ್ನು ವ್ಯಾಪಿಸಿದ್ದ ಆಳವಾದ, ಘನ ಹಿಮಪಾತ, ಇದೀಗ ಕರಗತೊಡಗಿತ್ತು.

ಮೊಟ್ಟಮೊದಲಿಗೆ ಒಳಗೇ ಗುಟ್ಟಾಗಿ ಮಂಜು ಕರಗತೊಡಗಿತು. ಆದರೆ ಈ ವೇಳೆಗಾಗಲೇ ಭಾರೀ ಗಾತ್ರದ ಅರ್ಧದಷ್ಟು ಹಿಮ ನೀರಾಗಿದ್ದರಿಂದ ಈ ಚಮತ್ಕಾರ

ಪವಾಡವನ್ನು ಮುಚ್ಚಿಡುವುದಾಗಲಿಲ್ಲ. ನೀರು ತಳದಿಂದ ಘೋರ್ಗರೆಯುತ್ತ ನುಗ್ಗಿ ಬಂತು. ಕಾಡು ಜೋರಾಗಿ ಗರ್ಜಿಸಿತು, ಕಾಡೊಳಗಿದ್ದ ಎಲ್ಲವೂ ಎಚ್ಚರಗೊಂಡವು.

ನೀರಿಗೆ ಆಟವಾಡಲು ಬೇಕಾದಷ್ಟು ಜಾಗವಿತ್ತು: ತನ್ನಷ್ಟಕ್ಕೇ ನುಗ್ಗಿದ ಅದು ಕಲ್ಲುಗಳ ಮೇಲೆಲ್ಲ ಹರಿದು ಹೊಂಡಗಳನ್ನು ತುಂಬಿ ತುಳುಕಿಸಿತು. ಕಾಡಿನಿಂದ ಹೊರಟ ನೀರು , ಮಂಜು ಕಂಡಲ್ಲೆಲ್ಲ ಅದನ್ನು ತೂರಿಕೊಂಡು ಹೊರಟಿತು. ನೆಲ ಪೂರ್ತಿ ತೊಪ್ಪಡಿಯಾಯ್ತು.

ವಸಂತದಿಂದ ಉನ್ಮತ್ತವಾದ ಆಕಾಶಕ್ಕೆ ಬುದ್ಧಿ ಭ್ರಮಣೆಯಾದಂತಿತ್ತು. ದಟ್ಟ ಹಬೆ, ಮೋಡ ಮೈಯೆಲ್ಲಾ ತುಂಬಿಕೊಂಡಿತ್ತದು. ಚಿಕ್ಕ ಮೋಡದ ಹಿಂಡು ತುದಿಯಲ್ಲಿ ಪಯಣಿಸುವಾಗ ಅವು ನಾವಿಕನೊಬ್ಬ ಅಡವಿಯ ಗುಂಟ ಹೊರಟು, ಮಳೆಯನ್ನು ಅಲ್ಲಿಂದ ನುಗಿಸಿ, ಬೆಚ್ಚಗೆ - ವಾಸನೆಯಿಂದ ಬೆವರುವ ನೆಲವನ್ನು ನೆಲದ ಮೇಲೆ ಕೊನೆಯ ಯುದ್ಧ ಕವಚವೆನ್ನುವಂತಿದ್ದ ಹಿಮವನ್ನು ಕರಗಿಸುವಂತೆ ಕಾಣುತ್ತಿತ್ತು.

ಯೂರಿ ಎಚ್ಚರಗೊಂಡ, ಹಿಗ್ಗಿದ, ಮೊಳಕೈಯೂರುತ್ತ ಎದ್ದ ನೋಡತೊಡಗಿದ, ಆಲಿಸತೊಡಗಿದ.

೧೮

ಗಣಿಪ್ರದೇಶಕ್ಕೆ ರೈಲು ಬಂದದ್ದೇ ಹೆಜ್ಜೆ ಹೆಜ್ಜೆಗೂ ವಿಘಾತು. ರೈಲು ಹೋಗುತ್ತಿದ್ದುದಕ್ಕಿಂತ, ನಿಲ್ಲುತ್ತಿದ್ದುದೇ ಹೆಚ್ಚು. ಚಿಕ್ಕ ನಿಲ್ದಾಣಗಳಲ್ಲಿ ಜನ ಇಳಿಯುತ್ತಿದ್ದರು, ಹತ್ತುತ್ತಿದ್ದರು. ಹತ್ತಿರ ಸುತ್ತಮುತ್ತ ಪ್ರದೇಶಗಳಿಗೆ ಹೋಗ ಬೇಕಾದವರು , ಮಲಗಲು ಅಥವಾ ಕೂರಲು ಸ್ಥಳ ಹುಡುಕಿಕೊಂಡು ಹೋಗದೆ ಡಬ್ಬಿಯ ಮಧ್ಯದ ಬಾಗಿಲಿನ ಬಳಿ ತುದಿಗುಂಡಿಯಲ್ಲಿ ಕುಳಿತು ತಮಗೆ ಮಾತ್ರ ಕೇಳಿಸುವಂತೆ ಸ್ಥಳೀಯ ರಾಜಕೀಯವನ್ನು ಗುಸುಗುಸು ಮಾಡುತ್ತಿದ್ದರು.

ಈ ಮೂರು ದಿನಗಳಿಂದ ಇಂಥ ಸ್ಥಳೀಯ ಜನರ ಮಾತಿನಿಂದ ಈ ಪ್ರದೇಶದಲ್ಲಿ 'ಬಿಳಿಯರು' ಶಕ್ತಿಶಾಲಿಗಳಾಗಿದ್ದಾರೆಂದು, ಪ್ರದೇಶ ಅವರ ಹಿಡಿತದಲ್ಲಿದೆ ಎಂದು ತಿಳಿದುಕೊಂಡ. ಅಥವಾ ಯೂರಿಯಾತ್ನ್ ಪ್ರದೇಶವನ್ನು ಸದ್ಯದಲ್ಲೆ ಆಕ್ರಮಿಸಲಿದ್ದಾರೆಂದೂ ತಿಳಿದುಕೊಂಡ. ಜತೆಗೆ ತಪ್ಪಾಗಿ ಕೇಳಿಸಿಕೊಂಡನೋ

ಏನೋ, ಅಥವಾ ಅದೇ ಹೆಸರು ಹೊಂದಿದ್ದ ಸ್ನೇಹಿತನೊಬ್ಬನಿದ್ದ. ಬಿಳಿಯ ಪಡೆಗಳು ಗುಲ್ಯುಲೀನ್ ಎಂಬಾತನ ಮುಂದಾಳತ್ವದಲ್ಲಿದ್ದವು. ಈ ಹೆಸರಿನ ಗೆಳೆಯನನ್ನು ಯೂರಿ ಕಡೆಯಬಾರಿ ಮೆಲ್ಯುಝೆವೊದಲ್ಲಿ ನೋಡಿದ್ದ.

ಏನೂ ಖಾತ್ರಿಯಿಲ್ಲದ ಈ ವಿಷಯ ಸದ್ಯಕ್ಕೆ ಹೇಳುವುದು ಬೇಡವೆಂದು ತನ್ನ ಕುಟುಂಬದವರಿಗೆ ಈ ವಿಷಯ ತಿಳಿಸಲಿಲ್ಲ.

೧೯

ಯೂರಿ ರಾತ್ರಿ ಯಾವುದೋ ವೇಳೆಯಲ್ಲಿ ತುಂಬ ಖುಷಿಯಲ್ಲಿ ಎಚ್ಚರಗೊಂಡ. ಖುಷಿ ಎಷ್ಟಿತ್ತೆಂದರೆ ಅದನ್ನು ತಡೆಯದೆ ಆತ ಎದ್ದು ಕೂತಿದ್ದ. ರೈಲು ಇನ್ನೂ ನಿಂತಿತ್ತು. ನಿಲ್ದಾಣ ತೆಳುಗಾಜಿನಂತಿದ್ದ ಬಿಳಿಯ ರಾತ್ರಿಯಲ್ಲಿ ತೋಯುತ್ತಿತ್ತು. ನಿಲ್ದಾಣ ಬೆಟ್ಟದ ಮೇಲಿದ್ದರೂ - ತುಂಬ ಶಕ್ತಿಯುತವಾದ ಈ ಇರುಳು ಸುಂದರ ಭೂಪ್ರದೇಶವನ್ನು ಕಾಣಿಸುತ್ತಿತ್ತು.

ಜನ ಪ್ಲಾಟ್‌ಫಾರಂನಲ್ಲಿ ನಿಧಾನಕ್ಕೆ ಮಾತಾಡುತ್ತ ತುಸುವೂ ಶಬ್ದಮಾಡದೆ ನೆರಳಿನಂತೆ ಓಡಾಡುತ್ತಿದ್ದರು. ಮಲಗಿದ್ದ ಪ್ರಯಾಣಿಕರನ್ನು ನೋಡಿ, ಇದೊಂದು ಯುದ್ಧಪೂರ್ವ ಸಿದ್ಧತೆಯೆಂದು ಯೂರಿಗೆ ಅನ್ನಿಸಿತು.

ವಾಸ್ತವವಾಗಿ ಅವನ ಎಣಿಕೆ ತಪ್ಪಾಗಿತ್ತು. ಈಗಲೂ ನಿಲ್ದಾಣದಲ್ಲಿ ಕೂಗಾಟ, ಬೂಟಿನ ಸಪ್ಪಳವಿತ್ತು. ಬೇರೆ ಎಂದಿನಂತೆ. ಆದರೆ ಹತ್ತಿರದಲ್ಲೊಂದು ಜಲಪಾತ. ಅದರ ಶುಭ್ರತೆ - ಸ್ವಾತಂತ್ರ್ಯ ರಾತ್ರಿಯನ್ನು ಹಿಗ್ಗಿಸಿ, ಯೂರಿಗೆ ಸಂತಸವನ್ನು ಹೆಚ್ಚಿಸುವಂತೆ ಮಾಡಿ, ಅವನನ್ನು ನಿದ್ದೆಯಿಂದ ಎಚ್ಚರಿಸಿತ್ತು. ಸುವಾಸನೆ ತುಂಬಿದ್ದ ನೀರನ ಪಾತ ಬೇರೆಲ್ಲ ಸದ್ದನ್ನೂ ಅಡಗಿಸಿ ಮೌನದ ಬೇರೊಂದು ಬಗೆಯ ಜಗತ್ತನ್ನು ಸೃಷ್ಟಿಸಿತ್ತು.

ಅದರ ಇರುವಿಕೆ ಬಗ್ಗೆ ಏನೂ ತಿಳಿಯದೆ ಅದರ ಸೆಳೆತಕ್ಕೆ ಒಳಗಾಗಿದ್ದ ಯೂರಿ ನಂತರ ಆಳವಾದ ನಿದ್ದೆಗೆ ಜಾರಿದ್ದ.

ಯಾರೋ ಇಬ್ಬರು ಆತನ ಕೆಳಗಿನ ಫಳಿಯಲ್ಲಿ ಓಡಾಡುತ್ತಿದ್ದರು.

'ಮತ್ತೆ ಅವರೇನಾದ್ರೂ ಬಾಲ ಬಿಚ್ಚಿದಾರೊ, ಅಥವಾ ಬಾಯಿ ಮುಚ್ಚಿಕೊಂಡಿದಾರೊ ?'

'ಯಾರು , ಆ ಅಂಗಡಿ ಮುಂಗಟ್ಟಿನವರು ತಾನೆ ?'

'ಹೌದು ಆ ಜೋಳದ ಅಂಗಡಿಯವರು.'

'ಎಲ್ಲ ನಿನ್ನ ಕೈ ಚಳಕ ! ಕೆಲವರಿಗೆ ಉದಾಹರಣೆಗೆ ರುಚಿ ತೋರಿಸಿದ ಮೇಲೆ ಮಿಕ್ಕವರು ಬಂಗಾರದಂಥವರಾಗಿದಾರೆ. ಇಡೀ ಜಿಲ್ಲೆಗೆ ದಂಡ ಹೇರಿದೆ.'

'ಎಷ್ಟು ?'

'ನಲವತ್ತು ಸಾವಿರ !'

'ಕಥೆ ಕಟ್ತಾ ಇದೀಯ ?'

'ನಾನೇಕೆ ಸುಳ್ಳು ಹೇಳಲಿ ?'

'ನಲ್ವತ್ತು ಸಾವಿರ ಕೊಳೆತ ಕುಂಬಳ ಕಾಯಿ !'

'ನಲ್ವತ್ತು ಸಾವಿರ ಜೋಳದ ಚೀಲ !'

'ಒಳ್ಳೆ ಸಂಗ್ರಹ !'

'ಅತ್ಯುತ್ತಮ ಜೋಳ, ನಲ್ವತ್ತು ಸಾವಿರ ಚೀಲ !'

'ಸರಿಬಿಡು, ಅದೇನು ಮಹಾ, ಈ ಮಣ್ಣು , ಜೋಳದ ದಂಥೆಗೆ ಹೇಳಿದಂಥದ್ದು. ಇಲ್ಲಿಂದ ನೀನು ಯೂರ್‍ಯಾತೀನ್ ಮುಟ್ಟೋವರ್ಗೂ, ಹಳ್ಳಿ ಆದ್ಮೇಲೆ ಹಳ್ಳಿ, ಅಡತಿ ಅಂಗಡಿ, ನೌಕಾ ನೆಲೆ ಎಲ್ಲ ಎಲ್ಲ ದೋಚೋದು !'

'ಕೂಗಬೇಡ, ಜನರನ್ನು ಎಬ್ಬಿಸ್ತೀಯ ನೀನು '

'ಸರಿ ಬಿಡು' - ಆತ ಗೊಣಗಿದ.

'ರೈಲು ಹೊರಡ್ತ ಇರೋ ಹಾಗಿದೆ, ಮಲಗೋಣವ ?'

ರೈಲು ಎಲ್ಲಿತ್ತೋ ಅಲ್ಲೇ ನಿಂತಿತ್ತು. ಆದರೆ ಹಿಂದಿನಿಂದ ಇನ್ನೊಂದು ರೈಲಿನ ಕಿವಿ ಕಿವುಡು ಮಾಡುವ ಶಬ್ದ ತೂರಿಬಂತು, ಹಳೆಕಾಲದ ವೇಗದ ರೈಲು - ಸಮಾನಾಂತರ ಹಳಿಯಲ್ಲಿ ಸದ್ದು ಮಾಡುತ್ತ ಬೆಳಕುತೂರಿ, ಬಾಲತೋರಿಸುತ್ತ - ದೂರದಲ್ಲಿ ಮರೆಯಾಗಿ ಹೋಯಿತು.

'ಥೂತ್ ! ಯಾವಾಗ ಇಲ್ಲಿಂದ ಹೊರಡ್ತಿವೊ ದೇವರೆ ಬಲ್ಲ !

'ನೋಡಿದ್ರೆ , ತಕ್ಷಣ ಹೊರಡೋ ಲಕ್ಷಣ ಇಲ್ಲ.'

'ಇದು ವಿಶೇಷ ಸೇನಾಪಡೆ ರೈಲು, ಬಹುಶಃ ಸ್ಟ್ರೆಲಿಂಕೋವ್‌ನದಿರಬೇಕು'

'ಹೌದು ಅವನದೇ ಇರಬೇಕು.'

'ಪ್ರತಿ ಕ್ರಾಂತಿಗಳಿಗೆ ಅವನೊಬ್ಬ ದೈತ್ಯ ಕಾಡುಪ್ರಾಣಿಯಂತೆ'

'ಅವನಿಗೆ ಗುಲ್ಯೇವ್ ಎಂದರೆ ಪ್ರಾಣ; ಅವನ ಬೆನ್ನು ಹತ್ತಿದಾನೆ ಇವಾ'

'ಯಾರವನು?'

'ಹೆಟ್ಮೆನ್ ಗುಲ್ಯೇವ್. ಅವರು ಹೇಳೋದು - ಗುಲ್ಯೇವ್ ರ್ಝುಕ್ ಪಡೆಯೊಂದಿಗೆ ಯೂರ್ಯ್ಯಾತೀನ್ ಆಚೆ ಕಡೆ ಇದ್ದಾನಂತೆ. ನೌಕಾನೆಲೆಯನ್ನೆಲ್ಲ ಕೊಳೆತ ಮೂಲಂಗಿಯೊಡನೆ ಹಿಡಿದಿಟ್ಟುಕೊಂಡಿದ್ದಾನೆ. ಹೆಟ್ಮೆನ್ ಗುಲ್ಯೇವ್.'

'ಅವನ ಬಗ್ಗೆ ಕೇಳಿಯೇ ಇಲ್ಲ'

'ಅಥವಾ ಅವನು ರಾಜಕುಮಾರ ಗೆಲಿಲೇವ್ ಆಗಿರಬಹುದ್ದು. ಅವನ ಹೆಸರು ಸರಿಯಾಗಿ ನೆನಪಿಲ್ಲ. '

'ಆ ಥರದ ಯಾವ ರಾಜಕುಮಾರನೂ ಇಲ್ಲ. ಆತ ಬಹುಶಃ ಆಲೀ ಖುರ್ಬಾನ್ ಇರಬೇಕು. ಇಬ್ಬರನ್ನೂ ಬೆದರಿಸಿ ಹೇಳ್ತಿದಿಯಾ ನೀನು !'

'ಇರಬಹುದು, ಖುರ್ಬಾನ್'

'ಹೌದು, ಹಾಗೇ ಇರಬೇಕು.'

೨೦

ಬೆಳಗಿನ ಜಾವಕ್ಕೆ ಮತ್ತೆ ಅಂಥದ್ದೇ, ಮನಸ್ಸನ್ನೂ ಉಲ್ಲಾಸಗೊಳಿಸಿ, ಖುಷಿ -ಬಿಡುಗಡೆಯ ಭಾವ ತುಂಬುವ, ಕನಸು ಬಿದ್ದು ಯೂರಿ ಎಚ್ಚರಗೊಂಡ.

ರೈಲು ಇನ್ನು ನಿಂತೇ ಇತ್ತು. ಹಳೆಯ ನಿಲ್ದಾಣವೇ ಇರಬೇಕು; ಇಲ್ಲದಿರಲೂ ಬಹುದು. ಮತ್ತೆ ಜಲಪಾತದ ಭೋರ್ಗರೆವ ಸದ್ದು. ಅದೇ ಜಲಪಾತವಿರಬೇಕು. ಅಥವಾ ಅಲ್ಲದಿರಬಹುದು.

ಯೂರಿ ಮತ್ತೆ ನಿದ್ದೆಗೆ ಮರಳಿ, ತೂಕಡಿಕೆಯಲ್ಲಿದ್ದಾಗ ಅಸ್ಪಷ್ಟವಾಗಿ ಓಟದ, ಮಾತುಕತೆಯ ಸದ್ದು ಕೇಳಿಸಿತು. ಗಾಳಿ ಮೊದಲಿಗಿಂತ ಆಹ್ಲಾದಕರವಾಗಿತ್ತು. ಅದರ ಉಸಿರಾಟದಲ್ಲಿ ಇಲ್ಲಿಯವರೆಗೂ ಉಸಿರಿಲ್ಲದ ಹೊಸತನ, ಕಥೆಯಂಥದು, ಚೈತ್ರ

ಋತುವಿಗೆ ಸಂಬಂಧಿಸಿದ್ದು, ಬಿಳಿ-ಕಪ್ಪು, ಚೆಲ್ಲಾಪಿಲ್ಲಿಯಾಗಿರುವಂಥದು, ಮೇ ತಿಂಗಳಿನಲ್ಲಿ ಹಿಮದರಾಶಿ ಮುಗಿಲಿಂದ ನೆಲಕ್ಕೆ ಬೀಳುವಾಗ ಬಿಳಿ ಬಣ್ಣದ ಬದಲು ಮಂಜು ಕಪ್ಪಾಗಿ ಮಾರ್ಪಟ್ಟಂತೆ. ಯೂರಿ ನಿದ್ದೆಯಲ್ಲೇ ಹೀಗೆ ಊಹಿಸಿದ: 'ಪಾರದರ್ಶಕ, ಸಿಹಿ ಸುವಾಸನೆಯ, ಹಕ್ಕಿಗೆಂಪಿನ ಹಾಗೆ, ಬಿಳಿ - ಕಪ್ಪು. '

೨೧

ಮರುದಿನ ಮುಂಜಾನೆ ತೋನ್ಯಾ ಹೇಳಿದಳು :

'ಯೂರಿ, ನಿಜವಾಗ್ಲೂ ನೀನೊಬ್ಬ ಅಸಮಾನ್ಯ. ವೈರುದ್ಧಗಳ ಗುಡ್ಡೆ. ಕೆಲವು ಸಲ ಸಣ್ಣ ಸೊಳ್ಳೆಯೂ ನಿನ್ನನ್ನು ನಿದ್ದೆಯಿಂದ ಎಬ್ಬಿಸಿಬಿಡುತ್ತೆ, ಮತ್ತೆ ನಿದ್ದೆನೇ ಸಾಧ್ಯವಾಗಲ್ಲ. ಆದರೆ ಇಲ್ಲಿ ? ಇಷ್ಟೆಲ್ಲ ಗಲಾಟೆ, ದಢಕಿಯ ನಡುವೆಯೂ ಗಾಢವಾಗಿ ಉದ್ದಕ್ಕೂ ನಿದ್ರಿಸಿದ್ದೆ. ಎಬ್ಬಿಸಲು ಪ್ರಯತ್ನಿಸಿ ಸೋತೆ ನಾನು. ಪಿತ್ರುಲೇವ್, ವಾಸ್ಯಾ, ತಪ್ಪಿಸಿಕೊಂಡಿದ್ದಾರೆ. ಸ್ವಲ್ಪ ಯೋಚಿಸು. ಹಾಗೇನೆ ತ್ಯಾಗುನೋವಾ, ಓಗ್ರೈಸ್ಕೋವಾ ಕೂಡಾ ಕಾಣ್ತಾಯಿಲ್ಲ. ಹೀಗಾಗೋದನ್ನ ಸ್ವಲ್ಪ ಊಹಿಸಿಕೋ ! ಸ್ವಲ್ಪ ತಾಳು, ವೆರೋನಿಕ್ ಸಹಾ ! ನಾನು ಹೇಳ್ತಾ ಇರೋದು ನಿಜ. ಅವನು ಓಡಿ ಹೋದ. ಇನ್ನೂ ಹೇಳು - ಹ್ಯಾಗೆ ಓಡಿಹೋದ್ರು ? ಬೇರೆ ಬೇರೆಯಾಗೋ ? ಒಬ್ಬೊಬ್ಬರೊ ಅನ್ನೋದು ನಿಗೂಢವಾಗಿದೆ. '

'ವೆರೊನಿಕ್‌ನದು ನನಗರ್ಥವಾಗುತ್ತೆ, ಎಲ್ಲರೂ ತಪ್ಪಿಸಿಕೊಂಡಿದ್ದಾರೇಂತ ಗೊತ್ತಾದ ಮೇಲೆ ಮಾನ ಉಳಿಸಿಕೊಳ್ಳೋದಕ್ಕೆ ಹಾಗೆ ಮಾಡಿರಬಹುದು. ಅವರೆಲ್ಲಾ ಅವರಾಗೇ ಓಡಿಹೋದ್ರೊ ಅಥವಾ' ... ಕಾರ್ಮಿಕರ ತಂಡದ ಕಮಾಂಡರ್ ಹುಚ್ಚನಂತೆ ಅತ್ತಿಂದಿತ್ತ ಓಡಾಡುತ್ತಿದ್ದ. 'ನೀನು ರೈಲನ್ನು ಬಿಡೋಹಾಗಿಲ್ಲ. ಕಾನೂನಿನ ಪ್ರಕಾರ ನಿನಗೆ ಆದೇಶ ನೀಡ್ತಾ ಇದೀನಿ. ಎಲ್ಲಿವರೆಗೆ ಓಡಿಹೋದೋರ್ನ ಹಿಡಿಯೋದಿಲ್ವೋ, ಅಲ್ಲಿವರೆಗೂ ರೈಲು ಕದಲೋ ಹಾಗಿಲ್ಲ. ಎಂದು ಕೂಗು ಹಾಕಿದ. ರೈಲಿನ ಕಮಾಂಡರ್ ತಿರುಗಿಬಿದ್ದು ಒದರಾಡಿದ - ನಾನು ದಳವನ್ನು ಕೇಂದ್ರಕ್ಕೆ ಒಯ್ದೆ ಒಯ್ತೀನೆ. ನಿಮ್ಮ ನೌಕಾಪಡೆಗೆ ಕಾಯೋನಲ್ಲ ನಾನು ! ಇಂಥದ್ದನ್ನು ಕನಸಲ್ಲೂ ಕಾಣೋಕೆ ಸಾಧ್ಯವಿಲ್ಲ, ನಾನು !' - ಆಮೇಲೆ ಇಬ್ಬರೂ ಸೇರಿ ಕೊಸ್ತೋಯ್ದ್ ಬಳಿ ನಡೆದರು. 'ನೀನೊಬ್ಬ ವಿದ್ಯಾವಂತ, ಒಕ್ಕೂಟದವನು, ನೀನು ಸುಮ್ಮನೆ ಕೂತ್ಕೋಳಕ್ಕೆ ಹೇಗೆ ಸಾಧ್ಯ ? ಜನರೊಂದಿಗೆ ಕೆಲಸ ಮಾಡಬೇಕು ಅಂತ

ಬುದ್ದೂನ ಥರ, ಮೂರ್ಖ ಹುಡುಗನ ಥರ ಇರೋದು ಹೇಗೆ ಸಾಧ್ಯ ?' ಕೊಸ್ತ್ಯೋಯ್ದ್ ಕೂಡ ತಿರುಗಿ ಅಂಥದೇ ಮಾತಿನ ಬಾಣ ಬಿಟ್ಟ - 'ಬಹಳ ಚೆನ್ನಾಗಿದೆ'- ಆತ ಹೇಳುತ್ತಿದ್ದಾನೆ, ಜೈಲು ಅಧಿಕಾರಿ, ತನ್ನ ಖೈದಿಗಳನ್ನು ನೋಡ್ಕೋಬೇಕು, ಹೌದ? ನೀವು ಹೇಳೋದು ನೋಡಿದ್ರೆ ಕೋಳಿ, ಕಾಗೆ ಆಗೋ ದಿನ ದೂರವಿಲ್ಲ ಅನ್ಸುತ್ತೆ. ನಾನು ನಿನ್ನನ್ನು ಬಡಿದು ಎಬ್ಬಿಸ್ತಾನೆ ಇದ್ದೆ, 'ಯೂರಾ ಏಳು, ಯಾರೋ ತಪ್ಪಿಸಿಕೊಂಡಿದ್ದಾರೇಂತ.... ಖಂಡಿತ ಪರಾರಿ. ಆದರೆ ನಿನ್ನ ಕಿವಿಯಲ್ಲಿ ಬಂದೂಕು ಗುಂಡು ಹೋಗಿದ್ರೂ ನಿನಗೆ ಕೇಳಿಸ್ತಾ ಇರಲಿಲ್ಲ..... ಉಳಿದದ್ದು ಆಮೇಲೆ ಹೇಳುತ್ತೀನಿ..... ಅಪ್ಪಾಜಿ, ಇಲ್ಲಿ ನೋಡಿ, ಯೂರಾ ಎಷ್ಟು ಚೆಂದ ಕಾಣ್ತಿದಾನೆ. !'

ಕಿಟಕಿಯಿಂದಾಚೆ ಚೈತ್ರದ ಮಹಾಪೂರ ಆ ಕೊನೆಯಿಂದ ಈ ಕೊನೆಯ ವರೆಗೂ ನೋಡಬಹುದಿತ್ತು. ಎಲ್ಲೋ ನದಿ ಪಾತ್ರ ಬದಲಿಸಿ ಕೋಡಿ ಹರಿದಿರಬೇಕು, ರೈಲು ಹಳಿಗಳವರೆಗೂ ನೀರು ಬಂದಿತ್ತು. ನೋಡಿದರೆ ರೈಲು ನೀರಿನಮೇಲೆ ತೇಲುತ್ತಿದೆ ಅನ್ನಿಸುತ್ತಿತ್ತು......

೨೨

ಉತ್ತರದ ಶ್ವೇತರಾತ್ರಿಗಳು ಕೊನೆಮುಟ್ಟತೊಡಗಿದವು. ಪ್ರತಿಯೊಂದು ಸ್ಪಷ್ಟವಾಗಿ ಗೋಚರಿಸತೊಡಗಿದವು - ಬೆಟ್ಟ, ದಟ್ಟವಾದ ಕಮರಿಗಳು, ಆದರೆ ಅವಕ್ಕೇ ತಾವು ವಾಸ್ತವದಲ್ಲಿದ್ದೇವೆ, ಕೇವಲ ಕಿನ್ನರ ಕಥೆಗಳಲ್ಲಿ ಮಾತ್ರವಲ್ಲ, ಎಂದು ನಂಬಿಕೆಯಿರಲಿಲ್ಲ ಎನ್ನುವಷ್ಟು ಸುಂದರವಾಗಿತ್ತು ನಿಸರ್ಗ.

ತನ್ನೊಳಗೆ ಎಷ್ಟೋ ಚಿಗುರುವ ಕೆಂಪು ಹಕ್ಕಿಗಳನ್ನು ಇಟ್ಟುಕೊಂಡಿದ್ದ ಕಾಡು ಇದೀಗ ಎಲೆ ತುಂಬಿಕೊಳ್ಳತೊಡಗಿತ್ತು.

ಬಹಳವೇನೂ ದೂರದಲ್ಲಲ್ಲ, ಕಂದರ ನಡುವೆ ಹರಿಯುತ್ತಿದ್ದ ಜಲಪಾತವನ್ನು ಕಾಣಬಹುದಿತ್ತು. ಈ ಜಲಪಾತಕ್ಕೆ ಹೋಲಿಸುವಂಥದು ಅಕ್ಕಪಕ್ಕದಲ್ಲೇನೂ ಇರಲಿಲ್ಲ. ಅದು ಅತ್ಯಂತ ಆಕರ್ಷಣೆಯವಾಗಿತ್ತು. ಆಕರ್ಷಣೆ ಅದರ ಕಡು ಚೆಲುವನ್ನು ಹೆಚ್ಚಿಸಿತ್ತು. ಅರ್ಧದಾರಿಯಲ್ಲಿ ಕೊರಕಲ್ಲು ಕಲ್ಲಿಗೆ ಬಡಿದು ಇಬ್ಭಾಗವಾಗಿತ್ತದು. ಮೇಲಿನ ಭಾಗ ನಿಧಾನ ಹರಿದರೆ, ಕೆಳಗಿನ ಭಾಗಗಳು ತೂಕ ತಪ್ಪುತ್ತಿರುವಂತೆ, ತಮ್ಮನ್ನು ತಾವೇ ಹಿಡಿತದಲ್ಲಿಟ್ಟುಕೊಂಡಂತೆ ರಭಸದಿಂದ ಧುಮುಕುತ್ತಿತ್ತು....

೨೩

ಸ್ವಚ್ಛ ಮಾಡಲು ಸುಮಾರು ಮೇಜು ತಯಾರಾಗಿ ನಿಂತಿದ್ದವು. ಯೂರಿ ಹಾಗೂ ಅಲೆಗ್ಸಾಂಡರ್ ಅಲೆಗ್ಸಾಂದ್ರೋವಿಚ್ ಒಂದು ಮೇಜಿನ ಬಳಿ ಹೋಗಿ ಗರಗಸ ತೀಡತೊಡಗಿದರು.

ಇದೀಗ ಭೂಮಿ ತನ್ನ ನ್ನು ತೆರೆದುಕೊಳ್ಳುವ ಸಮಯ. ಆರು ತಿಂಗಳ ಹಿಂದೆ ಹಿಮಪಾತದಲ್ಲಿ ಮುಚ್ಚಿದಾಗಿಂತ ಹೆಚ್ಚು ಚೆನ್ನಾಗಿ ಕಾಣುತ್ತಿತ್ತು. ಕಾಡಿಗೆ ತೇವದ ವಾಸನೆ, ಕಳೆದ ವರ್ಷದ ಎಲೆಗಳನ್ನು (ಕಸ ಗುಡಿಸಿದ ಕೋಣೆ ತುಂಬ ಹರವಿದ ಕಾಗದ - ಪತ್ರ, ರಸೀದಿಗಳೆಲ್ಲ ವರ್ಷಗಟ್ಟಲೇ ಸೇರಿಸಿದಂತೆ) ತುಂಬಿಕೊಂಡಿತ್ತು.

'ಅಷ್ಟು ಜೋರಾಗಿ ಮಾಡಬೇಡಿ, ಸುಸ್ತಾಗಿ ಬಿಡ್ತೀರ!' ಯೂರಿ ನಿಧಾನ ರಂಪ ಎಳೆಯುತ್ತ ಕೇಳಿದ - 'ವಿರಾಮದ ಕಥೆಯೇನು ?'

ಕಾಡಿನೊಳಗಿಂದ ಬೇರೆ ಗರಗಸದ ಧ್ವನಿ, ದೂರ ತುಂಬ ದೂರದಿಂದ ಬುಲ್ ಬುಲ್ ಹಕ್ಕಿ ದನಿತೆಗೆಯಲು ಯತ್ನಿಸುತ್ತಿರುವಂತಿತ್ತು. ಎಷ್ಟೋ ಹೊತ್ತು ಬಿಟ್ಟು ಗಾಳಿ ಸುಯ್ಯೆಂದಾಗ ಕೊಳಲು ನುಡಿಸಿದಂತೆ. ....

'ನನ್ನ ಹತ್ತಿರ ಮಾತಾಡಬೇಕೂಂತ ಇದ್ಯಲ್ಲ ಏನದು ? 'ನಿನಗೆ ನೆನಪಿದೆಯಾ ಮಂಜಿನ ಪ್ರದೇಶದ ಮುಸುಕು ದಾಟಿ ಬರುವಾಗ ನೀನು ಹೇಳಿದ್ದೆ : 'ನಿಮ್ಮ ಬಳಿ ಮಾತಾಡಬೇಕು. ಮುಂದೆಂದಾದರೂ ಮಾತಾಡ್ತೇನೆ. ಅಂತ. ಅಂಥದ್ದೇನದು ?' ಅಲೆಗ್ಸಾಂಡರ್ ಅಲೆಗ್ಸಾಂದ್ರೋವಿಚ್ ಯೂರಿಯನ್ನು ಕೇಳಿದರು.

'ಓಹೋ ! ಧಾರಾಳವಾಗಿ, ಆದರೆ, ಸ್ವಲ್ಪದ್ದರಲ್ಲಿ ಹೇಗೆ ಹೇಳಬೇಕೊ ನನಗೆ ಗೊತ್ತಿಲ್ಲ. ನಾನು ಯೋಚಿಸ್ತಾ ಇದ್ದೆ. ನಾವು ಆಳಕ್ಕೆ, ಆಳಕ್ಕೆ ಹೋಗ್ತಾ ಇದೀವಿ ಅಂತ. ಈ ಇಡೀ ಪ್ರದೇಶ ಉದ್ವಿಗ್ನವಾಗಿದೆ. ನಮಗಂತೂ ಗೊತ್ತಿಲ್ಲ, ಅಲ್ಲಿ ಹೋದ ಮೇಲೆ ನಮಗೇನು ಎದುರಾಗಲಿದೆ ಅನ್ನೋದು . ನಾವು ಎಲ್ಲ ವಿಷಯದ ಬಗ್ಗೆ ಬರೀ ಐದು ನಿಮಿಷದಲ್ಲಿ ಈ ಚೈತ್ರದ ಕಾಡಿನಲ್ಲಿ ಹೇಳೋಕ್ಕೆ ಆಗೋಲ್ಲ. ನಾವಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರೂ ಸೈತ. ನಾನು, ನೀವು, ತೋನ್ಯಾ, ನಮ್ಮಂಥವರು ನಮ್ಮ ನಮ್ಮ ಜಗತ್ತನ್ನು ನಾವೇ ಸೃಷ್ಟಿಸಿಕೊಳ್ತಾ ಇದ್ದೇವೆ, ಇತ್ತೀಚೆಗೆ. ಬೇರೆಯವರಿಗೂ ನಮಗೂ ಇರೋ ವ್ಯತ್ಯಾಸ - ಅದರ ಬಗ್ಗೆ ನಮಗೆ ಹೆಚ್ಚಿನ ತಿಳುವಳಿಕೆ ಇದೆ ಅನ್ನೋದು. ನನ್ನ ಮಾತಿನರ್ಥ ಏನೆಂದ್ರೆ - ನಾವು ಹೇಗೆ

ನಡೆದುಕೊಳ್ಳಬೇಕು, ಅನ್ನೋದನ್ನ ಮೊದಲೇ ತಿಳಿದುಕೊಂಡುಬಿಟ್ಟು ಒಬ್ಬರು ಇನ್ನೊಬ್ಬರಿಗೆ ಮುಜುಗರ ಮಾಡಬಾರದು ಅಥವಾ ಅವಮಾನವಾಗಬಾರದು ಅನ್ನೊಥರ ನಮ್ಮ ನಡವಳಿಕೆಯಿರುತ್ತೆ.'

'ನಿನಗೇನನ್ನಿಸುತ್ತೆ ಅಂತ ನನಗರ್ಥವಾಯ್ತು. ನೀವು ಹೇಳಿದ ರೀತಿನೂ ಹಿಡಿಸಿತು. ಒಂದು ಮಾತು ಹೇಳಲಾ, ನಿನಗೆ ನೆನಪಿದೆಯಾ ? ಚಳಿಗಾಲದ ಆ ಹಿಮಪಾತದ ರಾತ್ರಿ ? ನೀನು ಅವತ್ತು ಸರಕಾರದಿಂದ ಶಾಸನದ ಪ್ರತಿಗಳನ್ನು ತಂದಿದ್ದೆ. ನಿನಗೆ ನೆನಪಿರಬಹುದು ಎಷ್ಟೊಂದು ಅಪನಂಬಿಕೆ, ಒಗ್ಗಲಾರದ ಮನಸ್ಸು ಅವನಿಗಿತ್ತು ಅನ್ನೋದು. ನಮಗೆಲ್ಲರಿಗೂ ಅನ್ನಿಸಿದ್ದು ಅದೇ. ಆದರೆ ಅಂಥ ವಿಷಯಗಳೇ ಅವರ ಪ್ರಾಮಾಣಿಕತನ, ಯಾರು ಅದನ್ನು ರೂಪಿಸಿದರೋ ಅವರ ನಿಷ್ಠೆ, ಅವರು ಮೊದಲು ಶಾಸನ ಪ್ರಕಟಿಸಿದಾಗ ತೋರಿಸಿತ್ತು. ನಾನೇನು ಹೇಳೋದಿದೆ ನಿನಗೆ. ಆಡಳಿತ ನಮ್ಮ ಬಗ್ಗೆ ಸಹಾನುಭೂತಿಯಿಂದಿತ್ತು. ಅವರ ಸಿದ್ಧಾಂತ ನನಗೆ ಹೊಸತು, ನಾನು ಈ ಬದಲಾವಣೆಗೆ ಒಪ್ಪಿದ್ದೇನಾ ಎಂದು ಯಾರೂ ನನ್ನನ್ನು ಕೇಳಲಿಲ್ಲ. ಆದರೆ ನನ್ನನ್ನು ನಂಬಿದ್ದರು, ನಾನೇ ಆಯ್ದುಕೊಳ್ಳದಿದ್ದರೂ ನನ್ನ ಕ್ರಿಯೆಗಳು, ಅಂಥ ಮುಲಾಜಿಗೆ ಸಿಕ್ಕಿಸಿದವು. '

'ತೋನ್ಯಾ ಕೇಳುತ್ತಲೇ ಇರ್ತಾಳೆ, ನಾವು ಕಾಲಾಂತರದಲ್ಲಿ ನಮ್ಮದೇ ನೆಲದಲ್ಲಿ ತರಕಾರಿಯಾದ್ರೂ ಬೆಳೀಬಹುದಾಂತ. ನನಗೆ ಗೊತ್ತಿಲ್ಲ. ನನಗೆ ಉರಾಲ್ಸ್‌ನ ವಾತಾವರಣ, ಮಣ್ಣು ಏನೂ ಗೊತ್ತಿಲ್ಲ. ಬೇಸಿಗೆ ತುಂಬ ಹತ್ತಿರವಿದೆ, ಏನಾದ್ರೂ ಚಿಗುರೊಡೆಯುತ್ತಾ, ಇಷ್ಟು ಕಡಿಮೆ ಕಾಲದಲ್ಲಿ ಅನ್ನೋದು ಕೂಡ ಅನುಮಾನ.'

'ಆದರೆ ಎಲ್ಲ ಮೀರಿ ಇಷ್ಟು ದೂರ ಬಂದು ನಾವು ಮಾಡೋಕ್ಕೆ ಹೊರಟಿರುವುದೇನು ಮಾರುಕಟ್ಟೆ ತೋಟಗಾರಿಕೆಯಲ್ಲ. ಇಲ್ಲ, ಎಲ್ಲವನ್ನೂ ನಾವು ಚೆನ್ನಾಗಿಯೇ ನಿಭಾಯಿಸಿದೆವು. ನಮ್ಮ ಆಶಯವೇ ಬೇರೆಯಿತ್ತು. ಹಳೆಯ ಕಾಲದ ಕಾರ್ಖಾನೆಯನ್ನು ಹೊಸ ರೀತಿ ಮಾಡಲು ಹೊರಟಿದ್ದೇವೆ. ನಾವೇನೂ ಅಜ್ಜನ ಭವಿಷ್ಯ ಬದಲಿಸೋದಕ್ಕೆ ಹೋಗ್ತಿಲ್ಲ. ಆದರೆ ಎಲ್ಲರಂತೆ ನಾವೂ ಸಾವಿರಾರು ಕೈಗಳೊಂದಿಗೆ ನಮ್ಮ ಕೈಯನ್ನೂ ಸೇರಿಸಿ ಒಂದಿಷ್ಟು ಒಳ್ಳೇ ಬದುಕು ಬದುಕೋದಕ್ಕೆ ಪ್ರಯತ್ನಿಸ್ತೀವಿ. ತೋಟವನ್ನು ಹಳೆ ಕರಾರಿನಂತೆ ವಾನೇ ಪಡೆಯೋದು ಅಂತ ಅಲ್ಲ; ನೀನು ನನ್ನ ತೂಕದ ಬಂಗಾರ ಕೊಟ್ಟರೂ ಪಡೆಯೋನಲ್ಲ ನಾನು. ಅದು ಬೆತ್ತಲೆ ಓಡಿದಷ್ಟೇ ಮೂರ್ಖ ಕೆಲಸ, ಅಥವಾ ಓನಾಮವನ್ನೇ ಮರೆತ ಮೂಢತನ.

- ಇಲ್ಲ, ರಷಿಯಾದಲ್ಲಿ ಖಾಸಗಿ ಆಸ್ತಿಯ ಕಾಲ ಮುಗೀತು. ಜತೆಗೆ ಗ್ರೊಮಿಕೊ ಮನೆತನಕ್ಕೆ ಆಸ್ತಿ ಮಾಡಿ ಕೂಡಿಡೋ ಹುಚ್ಚು ತಲೆಮಾರುಗಳ ಹಿಂದೇನೆ ಹೊರಟುಹೋಯ್ತು.'

೨೪

ಧಗೆ, ಮಲಗಲು ಹೋದರೆ ಬೆಂದು ಹೋದಂತಾಗುತ್ತಿತ್ತು. ಯೂರಿಯ ತಲೆದಿಂಬು ಬೆವರಿನಿಂದ ತೊಯ್ದಿತ್ತು. ಯೂರಿ ಯಾರಿಗೂ ತೊಂದರೆಯಾಗದಂತೆ ಎದ್ದು, ಇರುಕಲು ಜಾಗದಿಂದ ಕೆಳಗಿಳಿದು ಕ್ಯಾರೇಜಿನ ಬಾಗಿಲು ಹಾಕಿದ. ಮುಖವೆಲ್ಲ, ಕೆಳಮನೆಯಲ್ಲಿ ಓಡಾಡಿದಾಗ ಆಗುವಂತೆ, ಅಂಟಂಟು. ಆತ ಅಂದುಕೊಂಡ - 'ಧೂಳು' ನಾಳೆ ಕಿತ್ತುತಿನ್ನೋ ಬಿಸಿಲಿರುತ್ತೆ. ಅದಕ್ಕೆ ಇವತ್ತು ಭಾರವಾಗಿ, ವಾತಾವರಣದಲ್ಲಿ ಗಾಳೀನೇ ಇಲ್ಲ.

ಅದೊಂದು ದೊಡ್ಡ ನಿಲ್ದಾಣ, ಜಂಕ್ಷನ್ ಇರಬಹುದು. ಧೂಳು, ಸ್ತಬ್ಧತೆಯೊಂದಿಗೆ ಒಂದು ಥರದ ಖಾಲಿತನ, ಕೇಳುವವರಿಲ್ಲದೆ ರೈಲು ಕಳೆದು ಹೋಗಿರೋ ಹಾಗೆ, ಮರೆತು ಹೋಗಿರೋ ಹಾಗೆ. ಸೇನೆಯ ಕವಾಯಿತು ಅಡ್ಡೆಯ ಪಕ್ಕಕ್ಕೆ ರೈಲು ನಿಂತಿರಬೇಕು. ಹಿಂಭಾಗಕ್ಕೆ ಬಹುಶಃ ತೊಡಕು-ತೊಡಕಾಗಿ ಚಾಚಿಕೊಂಡ ಹಳಿಗಳನ್ನು ದಾಟಿ, ನಿಲ್ದಾಣದ ಕಟ್ಟಡವನ್ನು ಸೇರುವ ಮಾರ್ಗ. ರೈಲಿನಲ್ಲಿರುವ ಯಾರಿಗೂ ಗೊತ್ತಿರಲಾರದು.

ಎರಡು ಅಸ್ಪಷ್ಟವಾದ ಶಬ್ದ ಕೇಳುತ್ತಿದ್ದವು.

ಅವರು ಹಾದುಬಂದ ಹಿಂದಿನ ಮಾರ್ಗದಲ್ಲಿ ಲಯಬದ್ಧವಾದ ಹೊಡೆತ ಬಟ್ಟೆ ಒಗೆಯುವ ಸದ್ದಿನಂತಿತ್ತು ; ಅಥವಾ ಒದ್ದೆ ಬಾವುಟಗಳು ಜೋರಾಗಿ ಕಂಬಗಳಿಗೆ ಬಡಿದಂತೆ.

ಯುದ್ಧದ ಅನುಭವವಿದ್ದ ಯೂರಿಗೆ ಮುಂಭಾಗದಿಂದ ಬರುತ್ತಿದ್ದ ಶಬ್ದ ಕಿವಿಗಪ್ಪಳಿಸಿತು. 'ಫಿರಂಗಿ ದಳ' ಅದರ ನಿಧಾನ ಪ್ರತಿಧ್ವನಿಯನ್ನು ಆಲಿಸಿ ಆತ ನಿರ್ಧರಿಸಿದ.

'ಅದೇ ಸರಿ, ನಾವು ಮುಂಭಾಗದ ಬಲಕ್ಕೆ ಇದ್ದೇವೆ.' ತನ್ನಷ್ಟಕ್ಕೆ. ಅಂದುಕೊಂಡು ಕ್ಯಾರೇಜಿನಿಂದ ಜಿಗಿದ. ಕೆಲವು ಹೆಜ್ಜೆ ಮುಂದಿಟ್ಟ. ಮುಂದಿನ

ಎರಡು ಡಬ್ಬಿಗಳನ್ನು ಬೇರೆ ಮಾಡಿ ಎಂಜಿನ್ನಿನೊಂದಿಗೆ ಕರೆದೊಯ್ಯಲಾಗಿತ್ತು.

'ಹೀಗಾಗಿಯೇ ನಿನ್ನೆ ಅವಕ್ಕೆ ಬೀಗ ಹಾಕಿರಬೇಕು. ಇಲ್ಲಿ ಬಂದ ತಕ್ಷಣ ಬೇರೆ ಮಾಡಿ ಕೈತೊಳೆದುಕೊಂಡರು.' ಇನ್ನೂ ಮುಂದಿದ್ದ ಬೋಗಿ ದಾಟಿ ರೈಲು ನಿಲ್ದಾಣದ ಕಡೆಗೆ ಹೋಗುವ ಹಳಿಗಳತ್ತ ನಡೆಯಲಿದ್ದ. ಅಷ್ಟರಲ್ಲಿ, ಬಂದೂಕು ಹಿಡಿದಿದ್ದ ಪಹರೆ ಪೇದೆ ದಾರಿಗಡ್ಡಬಂದ.

'ಎಲ್ಲಿ ಹೋಗ್ತಾ ಇದೀಯ ? ಪಾಸ್ ಇದೆಯಾ ?' ಮೆತ್ತಗೆ ಕೇಳಿದ.

'ಯಾವ ನಿಲ್ದಾಣ ಇದು ?'

'ಯಾವುದೇ ಇರಲಿ, ನೀನು ಯಾರು ?'

'ನಾನೊಬ್ಬ ಡಾಕ್ಟರ್, ಮಾಸ್ಕೋದವನು. ನಾನು - ನನ್ನ ಕುಟುಂಬದವರು ಈ ರೈಲಿನಲ್ಲಿ ಪ್ರಯಾಣಿಸುತ್ತಿದ್ದೇವೆ. ಇವು ನನ್ನ ದಾಖಲೆ ಪತ್ರಗಳು'.

'ನೀನೇ ಇಟ್ಕೋ ಅವನ್ನು. ಈ ಕತ್ತಲಲ್ಲಿ ಅವನ್ನು ಓದೋಷ್ಟು ಮೂರ್ಖ ಅಲ್ಲ ನಾನು. ಧೂಳು ಬೇರೆ, ಕಾಣ್ತಾಯಿಲ್ಲ ನಿನಗೆ ? ನೀನು ಯಾವ ಥರದ ಡಾಕ್ಟರ್ ಅಂತ ತಿಳಿಯೋಕ್ಕೆ, ನಿನ್ನ ದಾಖಲೆ ಪತ್ರ ಬೇಕಿಲ್ಲ ನನಗೆ. ನಿನ್ನಂಥ ನೂರಾರು ಡಾಕ್ಟರ್‌ಗಳು ಹನ್ನೆರಡಂಚಿನ ಇಂಥ ಬಂದೂಕನ್ನ ನಮ್ಕಡೆ ಗುರಿ ಇಟ್ಟಿದಾರೆ. ಸುಮ್ನೆ ನಡೀ ನೀನಿನ್ನೂ ಮಾಮೂಲಿ ಬಟ್ಟೇಲಿ ಇದಿಯಾ.'

'ಎಲ್ಲೋ ಕರೆದೊಯ್ಯುತ್ತಿದ್ದಾನೆ.' ಯೂರಿ ಅಂದುಕೊಂಡ. ವಾದಿಸೋದರಲ್ಲಿ ಯಾವ ಪ್ರಯೋಜನವೂ ಇಲ್ಲ. ಸೂರ್ಯ ಧೂಳಿನ ನಡುವಿಂದ, ನೆರಳಿನ ನಡುವೆ ಪೇಲವವಾಗಿ ಏರುತ್ತಿದ್ದ. ಇವನು ಹೇಳಿದ್ದು ಕೇಳೋದು ಒಳ್ಳೆಯದೆಂದು ಹಿಂದೆ ಹೊರಟ - ಎದುರಿಗೆ ಪೂರ್ವ.

ರೈಲಿನ ಉದ್ದಕ್ಕೂ ಯೂರಿ ನಡೆಯುತ್ತ ಹೊರಟ. ಅವನ ಕಾಲುಗಳು ಮೆತ್ತನೆ ಮಣ್ಣಲ್ಲಿ ಪುಸಕ್ಕನೆ ಸಿಕ್ಕಿಹಾಕಿಕೊಳ್ಳುತ್ತಿದ್ದವು.

ಲಯಬದ್ಧವಾದ ಶಬ್ದ ಹತ್ತಿರ ಬಂದಂತಾಯ್ತು. ನೆಲ ಇಳಿಜಾರಾಗಿತ್ತು. ನಿಂತು, ಎದುರಿಗಿದ್ದ ಆಕಾಶಗಳನ್ನು ನೋಡಲು ಯತ್ನಿಸಿದ. ಧೂಳು ಅವನ್ನು ಹಿಗ್ಗಿಸಿದಂತಿತ್ತು. ಇನ್ನೊಂದು ಹೆಜ್ಜೆ ಇಟ್ಟಾಗ ತೀರದಲ್ಲಿ ಹೊಟ್ಟೆ ತೆರೆದು ಬಿದ್ದುಕೊಂಡಿದ್ದ ದೋಣಿಗಳು .....

ತೀರದಿಂದ ಆಕೃತಿಯೊಂದು ಕಂಡುಬಂತು.

'ಯಾರು ಇಲ್ಲೆಲ್ಲ ತಿರುಗೋದಕ್ಕೆ ಅಪ್ಪಣೆ ಕೊಟ್ಟರು ?,' ಬಂದೂಕು ಹಿಡಿದಿದ್ದ ಇನ್ನೊಬ್ಬ ಪಹರೆಯವ. ಈ ನದಿಯ ಹೆಸರೇನು ? ಅವನಿಗೆ ಮತ್ತೇನನ್ನೂ ಕೇಳಬಾರದೆಂದು ಗಟ್ಟಿ ನಿರ್ಧಾರ ಮಾಡಿದ್ದ ಯೂರಿ ಕೂಗಿ ಕೇಳಿದ.

ಇವನ ಉತ್ತರದ ಧಾಟಿ ನೋಡಿದ್ದೇ ಪೇದೆ ಏನೂ ಮಾತಾಡದೆ ಪೀಪಿಯೂದಲು ಪೀಪಿ ಬಾಯಿಗಿಟ್ಟ. ಆದರೆ ಯೂರಿಯನ್ನು ಗೊತ್ತಾಗದಂತೆ ಬೆನ್ನು ಹತ್ತಿದ ಮೊದಲ ಪೇದೆ ಅವನ ಶ್ರಮ ಕಡಿಮೆ ಮಾಡಲೆಂಬಂತೆ ತಾನೇ ಸಿಳ್ಳೆಯೂದಿ ತನ್ನ ಸಹ ಪೇದೆಯನ್ನು ಕೂಡಿಕೊಂಡ.

'ಅನುಮಾನವೇ ಇಲ್ಲ'. ಇಂಥ ಹಕ್ಕಿಗಳನ್ನು ಒಂದೇ ನೋಟಕ್ಕೆ ಗುರ್ತಿಸಿಬಿಡಬಹುದು. ''ಇದು ಯಾವ ನಿಲ್ದಾಣ ? ಈ ನದಿಯ ಹೆಸರೇನು ?'' ನಿನ್ನ ಕಣ್ಣಲ್ಲಿ ಧೂಳಿದೆ. ಏನು ಹೇಳ್ತಿಯಾ ನೀನು ? ಅವನನ್ನು ಮೊದಲು ಅಧಿಕಾರಿಗಳ ಬಳಿ ಕರೆದೊಯ್ಯೋಣವೊ, ಅಥವಾ ರೈಲಿನ ಬಳಿಯೊ ?

'ರೈಲಿನ ಹತ್ರ. ಸಾಹೇಬ್ರು ಏನು ಹೇಳ್ತಾರೋ ನೋಡೋಣ.' - ಎಲ್ಲಿ ನಿನ್ನ ದಾಖಲೆಗಳು ಎಂದು ಯೂರಿಯತ್ತ ಹರಿಹಾಯ್ದು, ಯಾವನನ್ನೋ ಕರೆದು - 'ಇವನ ಮೇಲೆ ಒಂದು ಕಣ್ಣಿಟ್ಟಿರು ' ಎಂದು ಹೇಳಿ ಇಬ್ಬರೂ ಪೇದೆಗಳು ನಿಲ್ದಾಣದತ್ತ ನಡೆದರು.

ಮೂರನೇ ವ್ಯಕ್ತಿಯನ್ನು ನೋಡಿದ್ದೇ ಇವನೊಬ್ಬ ಬೆಸ್ತ ಎಂದು ಯೂರಿ ಅಂದುಕೊಂಡ. ತೀರದಲ್ಲಿ ಬಿದ್ದುಕೊಂಡಿದ್ದ. ಇದೀಗ ಯೂರಿಗೆ ಅವನ ಪರಿಸ್ಥಿತಿಯನ್ನು ವಿವರಿಸಿ ಹೇಳಿದ.

'ನಿನ್ನನ್ನು ಸಾಹೇಬ್ರ ಹತ್ರ ಕರಕೊಂಡು ಹೋಗ್ತಿರೋದು ಅದೃಷ್ಟ ಅಂದುಕೋ. ಆದರೆ ಅವರನ್ನೂ ದೂರೋದಕ್ಕೆ ಆಗೋದಿಲ್ಲ. ತಮ್ಮ ಕೆಲಸ ತಾವು ಮಾಡ್ತಿದಾರೆ... ಅದ್ಯಾವನಿಗೋ ಎಷ್ಟೋ ದಿನದಿಂದ ಹುಡುಕ್ತಾನೆ ಇದಾರೆ. ನಿನ್ನನ್ನೇ ಆ ವ್ಯಕ್ತಿ ಅಂದ್ಕೋಡಿರಬೇಕು. ನೀನು ಏನು ಮಾಡಬೇಕೇಂದ್ರೆ ಎಂಥಾ ಪರಿಸ್ಥಿತಿಯಲ್ಲೂ ಇವರ ಮಾತು ಕೇಳದೆ ಸಾಹೇಬ್ರನ್ನು ನೋಡೋದಕ್ಕೆ ಪಟ್ಟು ಹಿಡಿ. 'ಜೊತೆ ಬಾ' ಅಂದ್ರೆ ಹೋಗ್ಬೇಡ.'

ಬೇಸ್ತನಿಂದ ಈ ನದಿ ರೈನ್ಸ್ವಾ ಎಂದು, ನದಿ ಬಳಿಯ ನಿಲ್ದಾಣ ರಝಿವ್ಲೆ ಎಂದು ಇದು ಯೂರೈತ್ಸೈನ್ ನಗರದ ಕೈಗಾರಿಕಾ ಹೊರವಲಯವೆಂದು ಗೊತ್ತಾಯಿತು. ಇಲ್ಲಿನ ಕೆಲವು ರೈಲು ಡಬ್ಬಿಗಳನ್ನೇ ಸೇನಾದಳದವರು ಕಛೇರಿ ಇತ್ಯಾದಿಗಳಿಗಾಗಿ ಉಪಯೋಗಿಸುತ್ತಾರೆಂದು ತಿಳಿಯಿತು. ಅಲ್ಲೇ ಇದ್ದ ವಿಶೇಷ ರೈಲು ಸ್ಟ್ರೇಲಿಂಕೊವ್‌ನದೆಂದು, ಈ ಪೇದೆಗಳು ಅವನಲ್ಲಿಗೇ ಹೋಗಿದ್ದಾರೆಂದು ತಿಳಿಯಿತು. ಮೂರನೆಯ ಪೇದೆಯೊಬ್ಬ, ಮೊದಲಿನ ಪೇದೆಗಳು ಹೋದ ದಿಕ್ಕಿನಿಂದ ಬಂದು ಯೂರಿಯನ್ನು ಅಧಿಕಾರಿಗಳ ಬಳಿ ಕರೆದೊಯ್ದ.

೨೫

ಗಾರ್ಡ್, ಕಿರಿದಾದ ಸಂದಿಯೊಳಗಿಂದ ಮಧ್ಯದ ಡಬ್ಬಿಗೆ ಯೂರಿಯನ್ನು ಕರೆದೊಯ್ದ. ತುಂಬ ಶುಚಿಯಾಗಿದ್ದ ವಾತಾವರಣದಲ್ಲಿ ಅಚ್ಚುಕಟ್ಟಾಗಿದ್ದ ಜನ ಮಾತಾಡದೇ ಕೆಲಸದಲ್ಲಿ ತೊಡಗಿದ್ದರು. ಯೂರಿಗೆ ಸ್ಟ್ರೆಲಿನ್‌ಕೊವ್ ಬಗ್ಗೆ ಬೇರೆಯದೇ ಅಭಿಪ್ರಾಯ - ಅವನೊಬ್ಬ ಸೈನ್ಯದ ವ್ಯಕ್ತಿ. ಪಕ್ಷಕ್ಕೆ ಸೇರಿದವನಲ್ಲ. ಇಡೀ ಪ್ರದೇಶದಲ್ಲೇ ಭಾರಿ ಕುಪ್ರಸಿದ್ಧ.

'ಒಂದು ನಿಮಿಷ '- ಬಾಗಿಲಬಳಿ ಕುಳಿತಿದ್ದ ಯುವ ಅಧಿಕಾರಿ ಹೇಳಿದ. ಇಲ್ಲಿಂದಲೇ ದೂರದಲ್ಲಿ ಕೋಣೆಯೊಂದರ ಟೇಬಲ್ ಮೇಲೆ ತನ್ನ ದಾಖಲೆಗಳು ಬಿದ್ದಿರುವುದನ್ನು ಯೂರಿ ಕಂಡ. ಕುರ್ಚಿಯಲ್ಲಿ ಹಳೆಯ ಕಾಲದ ಸೈನ್ಯಾಧಿಕಾರಿಯಂತಿದ್ದನೊಬ್ಬ ಕೂತಿದ್ದ. ಸುಮಾರು ಹೊತ್ತು ದಾಖಲೆ ಪರಿಶೀಲಿಸಿ, ನಕ್ಷೆಗಳನ್ನು ತಾಳೆಹಾಕಿ, ಪುಸ್ತಕಗಳನ್ನು ಜಾಲಾಡಿ ಕೊನೆಗೆ - ಇದು ಭಾರಿ ತಲೆ ಬಿಸಿಯಾಗಲಿದೆ ಎಂದು ಕೂತುಬಿಟ್ಟ.

ಯೂರಿ ಯೋಚಿಸಿದ. 'ಇವರೇಕೆ ಯಾವುದರ ಬಗ್ಗೆಯೂ ಕಾಳಜಿ ಹೊಂದಿಲ್ಲ?' ಬಂದೂಕು ಮೇಲೆದ್ದು ಜನ ಸಾಯ್ತಾರೆ, ಇವರು ತಣ್ಣಗೆ ಹವಾಮಾನವನ್ನು ಮುನ್ಸೂಚಿಸುತ್ತಾರೆ, ಯುದ್ಧದ ಹವಾಮಾನವಲ್ಲ, ವಾತಾವರಣದ ಹವಾಮಾನ. ಬಹುಶಃ ಎಷ್ಟೊಂದು ನೋಡಿಬಿಟ್ಟಿದ್ದಾರೆಂದರೆ ಯಾವುದರ ಬಗ್ಗೆಯೂ ಇವರಿಗೆ ಸಂವೇದನೆ ಇಲ್ಲ.

ಏನಾದರೂ ನೋಡಬೇಕೆಂಬ ಉದ್ದೇಶದಿಂದ ಕಿಟಕಿಯಿಂದ ಹೊರನೋಡ ತೊಡಗಿದ

೨೬

ಇಲ್ಲಿಂದ ಹಳಿಗಳ ಕೊನೆಯನ್ನು, ಎತ್ತರದಲ್ಲಿದ್ದ ರೈಲು ನಿಲ್ದಾಣವನ್ನು, ರಝಿವ್ಲೆಯನ್ನು ನೋಡತೊಡಗಿದ.

ಬಣ್ಣ ಕಾಣದ ಕಟ್ಟಗೆಯ ಸಂಕ ರೈಲು ನಿಲ್ದಾಣದತ್ತ ವಾಲಿತ್ತು. ಹಳಿಗಳು ಕೊನೆಗೊಂಡಲ್ಲಿ ಜಂಗು ತಿಂದ ಹಳೆ ಎಂಜಿನ್ನುಗಳಿಗಾಗಿ ಸ್ಮಶಾನದಂತಿದ್ದ ಲೋಕೊಮೋಟಿವ್.

ಧೂಳು ಪಶ್ಚಿಮದಿಂದ ಇದೀಗ ಪೂರ್ವಕ್ಕೆ ತಿರುಗಿ ಕರ್ಟನ್ ಬಟ್ಟೆ ಹಾಕಿದ ವೇದಿಕೆಯಂತೆ ಕಾಣುತ್ತಿತ್ತು.

'ಯೂರಿತ್ಯೈನ್' ಯೂರಿ ನೆನಪಿಸಿಕೊಂಡ. ಈ ನಗರದ ಬಗ್ಗೆ ಯಾವಾಗಲೂ ಆನಾ ಹಾಗೂ ದಾದಿ ಅಂತಿಪೋವಾ ಹೇಳುತ್ತಲೇ ಇರುತ್ತಿದ್ದರು. ಈಗ ಇಂಥ ಪರಿಸ್ಥಿತಿಯಲ್ಲಿ ಈ ನಗರ ನೋಡ್ತಿರೋದು ಎಂಥ ವಿಚಿತ್ರ !

ಯೂರಿ ಈಚೆ ತಿರುಗಿದ್ದೆ : 'ಸ್ಟ್ರೇಲಿನ್‌ಕೊವ್' ದಾಪುಗಾಲು ಹಾಕುತ್ತ ಕೋಣೆಯ ಮಧ್ಯೆ ಬಂದು ನಿಂತ. ಈ ವ್ಯಕ್ತಿ ತನ್ನ ಇಚ್ಛಾಶಕ್ತಿಯಿಂದ ಉದ್ಭವಿಸಿದಂತಿದ್ದ. ಆಕರ್ಷಕ ನಿಲುವು, ನೇರ ತಲೆ, ಉದ್ದನೆಯ ಕಾಲುಗಳು, ಚೂಪು ಬೂಟು, ಕೆಸರು ಅಂಟಿದ್ದರೂ ಹೊಳೆಯುತ್ತಿದ್ದವು. ಆತನ ಇರುವಿಕೆ ಗಮನ ಸೆಳೆವಂತಿತ್ತು. ಆತ ಒಂದು ದೈವದತ್ತವಾದದ್ದೇನನ್ನೋ, ಆದರೆ ಖಂಡಿತವಾಗಿಯೂ ಹೊಸ ಕಲ್ಪನೆಯ ಕಾಣಿಕೆಯಲ್ಲ, ಪಡೆದಂತಿತ್ತು.

ಸ್ಟ್ರೇಲಿನ್‌ಕೊವ್, ಯೂರಿಯ ಅಸ್ತಿತ್ವದಿಂದ ತೊಂದರೆಯಾಗಲಾರದೆಂಬಂತೆ ತನ್ನ ಸಹೋದ್ಯೋಗಿಗಳನ್ನು ಕುರಿತು ನಿಧಾನವಾಗಿ ಹೇಳಿದ : 'ಶುಭಾಶಯಗಳು, ನಾವು ಅವನನ್ನು ಹಿಮ್ಮೆಟ್ಟಿಸಿದ್ದೇವೆ. ಇದು ಗಂಭೀರವಾದ ವ್ಯವಹಾರ ಅನ್ನೋದಕ್ಕಿಂತ ಯುದ್ಧ ಅನ್ನೋ ಹಾಗೆ ಆಗಿದೆ. ಯಾಕಂದ್ರೆ - ಅವರೂ ರಷ್ಯನ್ನರೆ. ನಾವೂ ಕೂಡ. ಆದರೆ ತಲೆಯಲ್ಲಿ ಕಸತುಂಬಿಕೊಂಡ ಅವರು ಸುಲಭದಲ್ಲಿ ಬಿಟ್ಟುಕೊಡೋದಿಲ್ಲ. ಹೊಡೆದು ಕಸಿದುಕೊಳ್ಳಬೇಕಾಗುತ್ತೆ.... ' ಆತ ದಿಢೀರನೆ ಯೂರಿ ಕಡೆ ತಿರುಗಿದ. ಈ ಮನುಷ್ಯನೊಂದಿಗೆ ಕೆಲಸಕ್ಕೆ ಬಾರದ ಯಾವುದೋ ಒಂದು ವಿಚಾರ ಮಾತಾಡಬೇಕು ಎಂದು ನೆನಪಿಸಿಕೊಳ್ಳುವಂತೆ.

'ಈ ಮನುಷ್ಯ !' ಯೂರಿಯನ್ನು ಚೂಪಾಗಿ ನೋಡಿ, 'ಮೂರ್ಖತನ !'

ಇದು ಅವನಂತೆ ಸ್ವಲ್ಪವೂ ಇಲ್ಲ, ದಡ್ಡರಾ ! ನಗುತ್ತ ಯೂರಿಗೆ ಹೇಳಿದ. 'ಕ್ಷಮೆ ಕೇಳ್ತೀನಿ ಸಂಗಾತಿ. ಬೇರೆ ಯಾರನ್ನೋ ನಿನ್ನೊಂದಿಗೆ ಹೊಲಿಸಿ ತಪ್ಪು ತಿಳಿದುಕೊಂಡಿದ್ದಾರೆ. ನೀನು ಹೋಗಬಹುದು. ಈ ಸಂಗಾತಿಯ ದಾಖಲೆ ಪುಸ್ತಕ ಎಲ್ಲಿ ? ಒಂದು ನಿಮಿಷ ಕಣ್ಣಾಡಿಸಿಬಿಡುವೆ.... ಝಿವಾಗೋ .... ಡಾಕ್ಟರ್ ಝಿವಾಗೋ.... ಮಾಸ್ಕೋ. ಎಲ್ಲ ಅದೇ. ಒಂದು ಕ್ಷಣ ನಮ್ಮ 'ಕೋಣೆಗೆ ಹೋಗೋಣವೇ?' ಇದು ಕಛೇರಿ. ನನ್ನ ಕೋಣೆ ಮುಂದಿನ ಬೋಗಿಯಲ್ಲಿದೆ. ನಿನ್ನನ್ನು ಹೆಚ್ಚು ಹೊತ್ತು ಕಾಯಿಸೋಲ್ಲ ನಾನು.'

೨೭

ಸ್ಟ್ರೇಲಿನ್‌ಕೊವ್ ವಾಸ್ತವದಲ್ಲಿ ಯಾರು ?

ಮಾಸ್ಕೋದಲ್ಲಿ ಹುಟ್ಟಿ, ಪಕ್ಷದ ಮನುಷ್ಯನಲ್ಲದಿದ್ದರೂ ಆತ ಮುಟ್ಟಿದ ಎತ್ತರ ಆಶ್ಚರ್ಯ ಪಡುವಂಥದು. ಮಾಸ್ಕೋದವರಾದರೂ ಅಪರಿಚಿತ. ವಿಶ್ವ ವಿದ್ಯಾಲಯದಿಂದ ನೇರವಾಗಿ ಸೈನಿಕ ಶಾಲೆಯಲ್ಲಿ ಪಾಠ ಹೇಳಲು ಹೋದ ಇವನನ್ನು ಸೆರೆಹಿಡಿದು, ಕೊನೆಗೆ ಕೊಂದು ಹಾಕಿದರು ಎಂಬ ಸುದ್ದಿಯೂ ಇತ್ತು. ಇತ್ತೀಚೆಗಷ್ಟೇ ಜರ್ಮನಿಯ ಸೆರೆಮನೆಯಿಂದ ಬಂದಿದ್ದಾನಂತೆ. ಇವನನ್ನು ಮುಂದೆ ತಂದವನು, ಇವನ ಬಾಲ್ಯದಿಂದ ಅವರ ಮನೆಯಲ್ಲೇ ಇದ್ದ, ರಾಜಕೀಯ ಪ್ರಜ್ಞೆಯಿದ್ದ ತಿವೆರ್‌ಝಿನ್ ಎಂಬ ರೈಲ್ವೆ ಕಾರ್ಮಿಕ, ಕೆಲಸಕೊಡುವ ಸ್ಥಿತಿಯಲ್ಲಿದ್ದವರು ಇವನ ವ್ಯಕ್ತಿತ್ವಕ್ಕೆ ಮಾರು ಹೋದರು. ಆ ಕಾಲದಲ್ಲಿ ಇವನ ಕ್ರಾಂತಿಯ ಉತ್ಸಾಹ, ಕಾಲಕ್ಕೆ ತಕ್ಕಂತಿದ್ದ ಕೆಚ್ಚು, ಅವನದೇ ಆದ ಪ್ರಾಮಾಣಿಕತನ, ಹಾಗೂ ಯಾರೂ ಹೇಳಿಕೊಡದೇ ಮೈಗೂಡಿಸಿಕೊಂಡ ಒಂದು ಬಗೆಯ ಅಂಧತೆ ಅವನನ್ನು ಬದುಕಿನ ಈ ನೆಲೆಯಲ್ಲಿ ತಂದು ನಿಲ್ಲಿಸಿದ್ದವು.

ಅಧಿಕಾರಿಗಳು ಆತನ ಮೇಲಿಟ್ಟಿದ್ದ ವಿಶ್ವಾಸವನ್ನಾತ ಉಳಿಸಿಕೊಂಡಿದ್ದ.

ಆತನ ದಾಳಿಯ ದಾಖಲೆಗಳಲ್ಲಿ, ಯೂರಿ ರೈಲು ಹಾದುಬಂದ, ಲೋ ಆರ್ ಕೆಲ್ಮೆಸ್ ಕೂಡ ಸೇರಿತ್ತು.

ಸ್ಟ್ರೇಲಿನ್‌ಕೊವ್ ('ಕೋವಿಗಾರ') ಎಂಬ ಹೆಸರನ್ನು ತಿರುಗಿಸಿ 'ದಾಳಿಕೋರ 'ಎಂದು ಕೆಲವರು ಅಣಕ ಮಾಡುತ್ತಿದ್ದರೆಂದು ಅವನಿಗೆ ಗೊತ್ತಿದ್ದರೂ ಅದನ್ನು ಹಗುರವಾಗಿ ತೆಗೆದುಕೊಂಡಿದ್ದ. ಆತನ ತಂದೆ ೧೯೦೫ರ ಕ್ರಾಂತಿಯಲ್ಲಿ

ಪಾಲ್ಗೊಂಡಿದ್ದರಿಂದ ಜೈಲು ವಾಸ ಅನುಭವಿಸಿದ್ದ. ಆತನಿನ್ನೂ ಚಿಕ್ಕವನಾದ್ದರಿಂದ, ಆಮೇಲೆ ವಿಶ್ವವಿದ್ಯಾಲಯ ದಿಂದಾಗಿ ಕ್ರಾಂತಿಯಲ್ಲಿ ಪಾಲ್ಗೊಂಡಿರಲಿಲ್ಲ.....

೨೮

ಕೋಣೆಗೆ ಹೋಗಿ ಆರಾಮವಾಗಿ ಕೂತದ್ದೇ ಸ್ಟ್ರೇಲಿನ್‌ಕೋವ್ ಮತ್ತೊಮ್ಮೆ ಹೇಳಿದ: ಝಿವಾಗೋ ! ಝಿವಾಗೊ... ಮನೆತನ ಅಂತ ಕಾಣುತ್ತೆ. ಅಥವಾ ಮಧ್ಯಮ ವರ್ಗದವರೋ ? ಇರಲಿ, ಮಾಸ್ಕೋದ ಡಾಕ್ಟರ್ ಅಲ್ಲವೇ ? ವೆರಿಕಿನೋಕ್ಕೆ ಹೋಗ್ತಾ ಇರೋದು ಆಶ್ಚರ್ಯ, ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ, ಮಾಸ್ಕೋ ಬಿಟ್ಟಿದ್ಯಾಕೆ ?

'ಶಾಂತಿ, ನೆಮ್ಮದಿಯನ್ನು ಹುಡುಕಿಕೊಂಡು ಹೋಗೋದಕ್ಕೊಂದು ನೆಪವಷ್ಟೇ!'

'ಓ ಗೆಳೆಯ ಎಷ್ಟೊಂದು ಭಾವುಕ ! ವೆರಿಕಿನೋ ? ಇಲ್ಲಿನ ಬಹಳಷ್ಟು ಸ್ಥಳ ನನಗೆ ಗೊತ್ತು. ಅದು ಕ್ರೈಗೇರ್‌ನ ತೋಟವಾಗಿತ್ತು. ನೀನೇನಾದರೂ ಅವರ ಬಂಧುವೇ ? ಅಥವಾ ಅವರ ವಾರಸುದಾರನೆ ?'

'ವ್ಯಂಗ್ಯವೇಕೆ ? ವಾರಸುದಾರನಾಗಿರೋದಕ್ಕೂ ಹೋಗೋದಕ್ಕೂ ಸಂಬಂಧವಿಲ್ಲ. ನನ್ನ ಹೆಂಡತಿ ಅವರ.....ಎನ್ನೋದು ನಿಜವಾದರೂ !'

'ಓಹೋ ! ಹಾಗೋ ಹಾಗಾದರೆ ! ಆದರೆ ನಿನಗೆ ಬಿಳಿಯರ ಬಗ್ಗೆ ಭಾರಿ ಮಮತೆಯಿದ್ದರೆ ನಿನ್ನನ್ನು ನಿರಾಶೆ ಮಾಡಬೇಕಾಗುತ್ತೆ. ಜಿಲ್ಲೆ ನಮ್ಮ ಹಿಡಿತದಲ್ಲಿದೆ.!'

'ಈಗಲೂ ನನ್ನನ್ನು ಗೇಲಿ ಮಾಡ್ತೀದಿಯ ?'

'ಅದೂ ಡಾಕ್ಟರ್ ಜತೆಗೆ ? ಸೈನ್ಯ ಅಧಿಕಾರಿ ? ನಾವು ಯುದ್ಧದಲ್ಲಿರೋರು. - ನಮ್ಮ ಕೆಲಸವೇ ಅದು. ನೀನೊಬ್ಬ ಅನಾಥ. ಹಸಿರು ಪಟ್ಟಿ ರೈತರು ಕೂಡ ಕಾಡಿನಲ್ಲಿ ಆಶ್ರಯ ಪಡಿತಿದಾರೆ .' ನಿನ್ನ ಕಾರಣಗಳು ?

'ಎರಡು ಸಲ ಈಗಾಗಲೇ ಎರಡು ಹೊಡೆತ ತಿಂದು ಅಪಮೌಲ್ಯಗೊಂಡವನು ನಾನು !..' ಯೂರಿ ಅವನ ಸವಾಲುಗಳಿಗಾಗಲಿ, ಹೆದರಿಕೆಗಾಗಲಿ ಬಾಗದೆ ಹೇಳಿದ

'ನನ್ನ ಬಗ್ಗೆ ನಿನ್ನ ಅಭಿಪ್ರಾಯವೇನೂಂತ ಗೊತ್ತು. ನಿನ್ನ ದೃಷ್ಟಿಕೋನದಲ್ಲಿ ಅದು ಸರಿ - ಆದರೆ ನಿನ್ನ ಜೊತೆ ನಾನು ಮಾತನಾಡಬೇಕು ಅಂತ ಇಷ್ಟ ಪಡುವ ವಿಷಯ-

ಇಡೀ ಜೀವನ ನಾನೊಬ್ಬನೇ ತಪ್ಪಿತಸ್ಥ ಅನ್ನುವ ಊಹಾತ್ಮಕ ನಿರ್ಧಾರಕ್ಕೆ ಬಂದು ಬಿಟ್ಟಿರೋದರ ಬಗ್ಗೆ. ಈ ವೇಳೆ ನಾನೊಂದು ನಿರ್ಧಾರಕ್ಕೆ ಬಂದಿಲ್ಲದಿದ್ದರೆ ಅದೊಂದು ಆಭಾಸವಾಗುತ್ತೆ. ಅದನ್ನು ಶಬ್ದ ಒಡೆದು ಹೇಳುವಂತಿಲ್ಲ ಅಷ್ಟೇ. ನಾನು ನಿಜವಾಗಿಯೂ ಸ್ವತಂತ್ರ ಅನ್ನೋದಾದರೆ ನನ್ನನ್ನು ಹೋಗಲು ಬಿಡು. ಒಂದು ವೇಳೆ ಅಪರಾಧಿಯಾದರೆ ಯಾವ ವಿವಾದವಿಲ್ಲದೆ ಶಿಕ್ಷೆಗೆ ತಯಾರಾಗಿದ್ದೇನೆ.....'

ಟೆಲಿಫೋನ್ ಕಿಣಕಿಣಿಸಿ, ಮಾತು ಕಡಿದುಬಿತ್ತು. ಸ್ಟ್ರೆಲಿನ್‌ಕೊವ್ ಫೋನೆತ್ತಿ ಕೊಂಡ. 'ಕೃತಜ್ಞತೆ ಗುರ್‍ಯಾನ್, ಸ್ವಲ್ಪ ಒಳ್ಳೆಯವನಾಗಿ ಯಾರನ್ನಾದರೂ ಕಳಿಸಿ, ಸಂಗಾತಿ ಜಿವಾಗೋನನ್ನು ರೈಲಿನವರೆಗೂ ಬಿಟ್ಟು ಬರಲು ಹೇಳು.... ಇಂಥ ಆಘಾತಗಳು ಇನ್ನು ಮೇಲೆ ಇಷ್ಟ ಪಡೊಲ್ಲ ನಾನು. '

ಜಿವಾಗೋ ಹೋದಮೇಲೆ ಸ್ಟ್ರೆಲಿನ್‌ಕೊವ್ ರೇಲ್ವೆ ನಿಲ್ದಾಣಕ್ಕೆ ಫೋನು ಮಾಡಿ ಹೇಳಿದ :

'ಇಲ್ಲೊಬ್ಬ ಶಾಲಾಬಾಲಕನನ್ನು ತಂದಿದ್ದೇನೆ. ತಲೆ ಮೇಲೆ ಟೋಪಿಯನ್ನು ಕಿವಿಯವರೆಗೂ ಎಳೆದುಕೊಳ್ಳೋನು. ಅವನ ತಲೆಗೆ ಪೆಟ್ಟಾಗಿದೆ, ಬಹಳ ಖೇದಕರ. ಅವನಿಗೆ ವೈದ್ಯಕೀಯ ಸಹಾಯ ಬೇಕಾದರೆ ನೀಡಿ ..... ಹೌದು... ನಿನ್ನ ಕಣ್ಣುಗುಡ್ಡೆ ಥರ..... ಹೌದು ವೈಯಕ್ತಿಕವಾಗಿ ನೀನು ಜವಾಬುದಾರಿ. ತಗೋ ನನಗಾಗಿ ....'

ಫೋನ್‌ನ ಲೈನು ತುಂಡಾಯಿತು. ತಾತ್ಕಾಲಿಕ ತನ್ನ ಮಾತನ್ನು ಅಪೂರ್ಣ ವಾಗಿಯೇ ನಿಲ್ಲಿಸಿದ. ಆತ ತಾನು ಪಾಠ ಮಾಡೋದು ಬಿಟ್ಟು ಎಷ್ಟು ದಿನವಾಯಿತು ಎಂದು ಎಣಿಸಿದ. ಆಮೇಲೆ ಕಿಟಕಿಯಿಂದ ತಾನು, ತನ್ನ ಸಂಸಾರ ವಾಸವಾಗಿರುವ ಯೂರ್‍ಯತಿನ್ ನಗರ ನೋಡಿದ. ಹೆಂಡತಿ - ಮಗಳು ಇನ್ನೂ ಅಲ್ಲೇ ಇದ್ದಾರೆಯೆ ? ಯಾಕೆ ಹೋಗಿ ನೋಡಬಾರದು ? ಈ ಕ್ಷಣವೇ ? ಹೋಗಬಹುದು, ಆದರೆ ಹೇಗೆ? ಅವರು ಬೇರೆಯ ಬದುಕಿನಲ್ಲಿದ್ದರು. ಈತ ಮೊದಲು ಈ ಬದುಕನ್ನು, ಈ ಹೊಸ ಬದುಕನ್ನು ನೋಡಬೇಕು. ಆಮೇಲೆ ಈಗ ತುಸು ಅಡೆ-ತಡೆಯುಂಟಾದ ಹಳೆಯ ಬದುಕು. ಸ್ವಲ್ಪ ದಿನಗಳಲ್ಲೇ ಅವನು ಹಳೆಯ ಬದುಕಿಗೆ ಮರಳಬಹುದು. ಒಂದು ದಿನ. ಆದರೆ ಆ ದಿನ ಯಾವುದು, ಯಾವಾಗ?

★

★

[Dr. Zivago : Part : ONE : ' The Journey']

ಆತ್ಮವಿವರಣೆ

ಮಾಯಕೊವಸ್ಕಿಯ ನೆನಪುಗಳು

I

೧೯೦೦ರ ಸಮಯದ ರಣಬಿಸಿಲಿನ ಒಂದು ಅಪರಾಹ್ನ : ಮಾಸ್ಕೋದ ಕರ್ಸ್ಕ ನಿಲ್ದಾಣವನ್ನು ಬಿಡಲು ರೈಲು ಸಿದ್ಧವಾಗಿತ್ತು. ರೈಲು ಇನ್ನೇನು ಹೊರಡುತ್ತದೆ ಎನ್ನುವಾಗ ಕರಿಯ ನಿಲುವಂಗಿ ತೊಟ್ಟವರೊಬ್ಬರು ಹೊರಗಿನಿಂದ ಕಿಟಕಿಯಲ್ಲಿ ಹಣುಕಿದರು. ಅವರೊಂದಿಗೆ ಎತ್ತರದ ಹೆಂಗಸೊಬ್ಬರಿದ್ದರು. ಆಕೆ ಆ ವ್ಯಕ್ತಿಯ ತಾಯಿ ಅಥವಾ ಅಕ್ಕ ಇದ್ದಿರಬೇಕು. ಅವರು ನನ್ನ ತಂದೆಯೊಂದಿಗೆ ಯಾವುದೋ ಗಹನ ವಿಚಾರ ವಿನಿಮಯ ನಡೆಸಿದ್ದರು. ಮೂವರು ಒಂದೇ ಹುರುಪಿನಲ್ಲಿದ್ದರು. ಹೆಂಗಸು ಆಗೀಗ ನನ್ನ ಅಮ್ಮನೊಂದಿಗೆ ಒಂದೆರಡು ಪದ ರಷಿಯನ್‌ನಲ್ಲಾಡಿದರೂ ಅಪ್ಪನೊಂದಿಗೆ ಆಡುತ್ತಿದ್ದುದು ಮಾತ್ರ ಜರ್ಮನ್. ಆ ಭಾಷೆಯ ಅವು ಸಂಪೂರ್ಣವಾಗಿದ್ದರೂ ಆ ವ್ಯಕ್ತಿಯು ಬಡಬಡನೆ ಮಾತಾಡುವ ಜರ್ಮನಿಯನ್ನು ನಾವೆಲ್ಲೂ ಕೇಳಿರಲಿಲ್ಲ. ಈ ಕಾರಣದಿಂದಾಗಿಯೇ ಆ ವಿದೇಶಿಯ ಎರಡು ಬಾರಿ ಬಾರಿಸಿದ ಗಂಟೆ ಸಪ್ಪಳ, ಕಿಕ್ಕಿರಿದ ಪ್ಲಾಟ್‌ಫಾರಂನಲ್ಲಿ ಜನರ ನೆರಳಿನಂತೆ, ಕಥೆಯಲ್ಲದ ಕಥಾಪಾತ್ರದಂತೆ, ಮಹಾಮಾಂತ್ರಿಕನಂತೆ, ಕಂಡ (ಕವಿ : ರೇನೆ ಮಾರಿಯಾ ರಿಲ್ಕ್).

ಪ್ರಯಾಣದ ನಡುವೆ ತೂಲಾ ಸಮೀಪದಲ್ಲಿ ಈ ಜೋಡಿ ಮತ್ತೆ ನಮ್ಮ ಬೋಗಿಯಲ್ಲಿ ಕಾಣಿಸಿಕೊಂಡರು. ಈ ಎಕ್ಸ್‌ಪ್ರೆಸ್ ಗಾಡಿ ಕೊರೆಝ್ಲೋವಾದಲ್ಲಿ ನಿಲ್ಲುವುದಿಲ್ಲವೆಂದೂ, ಟಾಲ್‌ಸ್ಟಾಯ್ಸ್‌ನಲ್ಲಿ ನಿಲ್ಲಿಸುವಂತೆ ಗಾರ್ಡ್ ಡ್ರೈವರನಿಗೆ ಹೇಳುತ್ತಾನೋ ಇಲ್ಲವೋ ಎಂದೂ ಅವರು ಆತಂಕಗೊಂಡಿದ್ದರು. ಅವರ

ಮಾತುಕತೆಯಿಂದ ಅವರಿಬ್ಬರು ಸೋಫಿಯಾ ಅಂದ್ರೆಯಿವ್ನರನ್ನು ಕಾಣಲು ಹೊರಟಿದ್ದಾರೆಂದು ನನಗೆ ಗೊತ್ತಾಯಿತು. ಕೆಲವು ದಿನಗಳ ಹಿಂದಷ್ಟೇ ಮಾಸ್ಕೋದಲ್ಲಿ ಸಂಗೀತ ಗೋಷ್ಠಿಗೆ ಬಂದಾಗ ಸೋಫಿಯಾ ನಮ್ಮ ಮನೆಗೆ ಭೇಟಿ ನೀಡಿದ್ದುಂಟು. ನಂತರ ಅವರಿಬ್ಬರೂ ತಂದೆಯನ್ನು ವಂದಿಸಿ ತಮ್ಮ ಬೋಗಿಗೆ ಹೊರಟರು. ...

ತಟ್ಟನೆ ಧಡಕಿಯಲ್ಲಿ ರೈಲು ಕಿರುಗುಟ್ಟಿ ಮೌನದಲ್ಲಿ ನಿಂತಿತು. ನಾವೇನೂ ಅಲ್ಲಿ ಇಳಿಯಬೇಕಿರಲಿಲ್ಲ. ಆ ಜೋಡಿ ಕೈಯಲ್ಲಿದ್ದ ಕರವಸ್ತ್ರ ನಮ್ಮೆಡೆಗೆ ಬೀಸಿದಾಗ ನಾವೂ ಬೀಸಿದೆವು. ಇನ್ನೊಂದು ಕ್ಷಣದಲ್ಲಿ ಅವರು ಕಾಣದಾಗುತ್ತಿದ್ದರು. ಇಷ್ಟರಲ್ಲಿ ಬಂಧ ತಿರುವೊಂದರಿಂದ ರೈಲು ನಿಧಾನಕ್ಕೆ ಬಾಗತೊಡಗಿತು; ಓದಿದ ಪುಟವನ್ನು ಮುಗಚಿ ಹಾಕುವಂತೆ . ಈ ಘಟನೆ, ಮುಖಗಳು ಮರೆಯಾಗಿ ಎಂದೆಂದಿಗೂ ಎಂಬಂತೆ ಮರೆಯಾದವು.

೨

ಮೂರು ವರ್ಷ ಉರಳಿ ಹೊರಗೆ ಚಳಿಗಾಲ. ರಾತ್ರಿ ಚಳಿಗಾಲದ ಉಡುಪು ಎಲ್ಲರ ಮೈಗಳಲ್ಲೂ ಕಾಣಿಸಿಕೊಂಡವು. ಇದರೊಂದಿಗೆ ನಿಶಬ್ದ ಚಲಿಸುವ ಕುದುರೆ ಗಾಡಿ ಕಂದೀಲು. ಅಂತ್ಯವನ್ನು ಅನೂಚಾನವಾಗಿ ವಾಡಿಕೆಯಿಂದ ಬಂದದ್ದಕ್ಕೆ ಕೊಟ್ಟು ಕೂರುವುದು - ಎಷ್ಟೋ ಸಲ ಭಗ್ನಗೊಂಡಿದ್ದರೂ ಅವರೆಲ್ಲ ಅತ್ಯಂತ ಬಲಶಾಲಿಯಾದ ಯಶಸ್ಸಿನಲ್ಲಿ ಮುಖ ಸಮೇತ ಕೊಚ್ಚಿಹೋಗಿದ್ದರು.

ಇದೆಲ್ಲ ಏನು ಎನ್ನುವುದು ವಿವರವಾಗಿ ಹೇಳುವ ಅಗತ್ಯವೇನೂ ನನಗಿಲ್ಲ: ನಿಸರ್ಗ ಈ ಹತ್ತು ವರ್ಷಗಳಲ್ಲಿ ಗುಮಿಲೆವ್‌ನ 'ಆರನೆಯ ಆಯಾಮ'ದಂತೆ ಹೇಗೆ ಹೊಸ ರೂಪ ಪಡೆಯಿತೆಂಬುದನ್ನು ಹೆಣ್ಣಿನ ಬಗೆಗಿನ ನನ್ನ ಮೊದಲ ತಿಳುವಳಿಕೆ ನಗ್ನತೆಯೊಂದಿಗೆ ಬೆರೆತಿರುವುದನ್ನು ಮುಖಾಮುಖಿಯ ವೇದನೆಯನ್ನು, ೧೯೦೩ರಲ್ಲಿ ನಾವು ವಾಸಿಸುತ್ತಿದ್ದ ಸ್ಥಳದ ಬಳಿ ಹುಡುಗಿಯೊಬ್ಬಳು ಈಜಲು ಹೋಗಿ ಸಾಯುವ ಸ್ಥಿತಿಯಲ್ಲಿದ್ದಾಗ ವಿದ್ಯಾರ್ಥಿಯೊಬ್ಬ ನೀರಿಗೆ ಧುಮುಕಿ ಆಕೆಯನ್ನು ಎಳೆದು ತಂದುದನ್ನು, ಆಮೇಲೆ ನನ್ನ ಕಾಲಿಗೆ ಪೆಟ್ಟಾಗಿ ಹೆಳವನಾಗಿ ಯುದ್ಧಕ್ಕೆ ಹೋಗುವುದನ್ನು ತಪ್ಪಿಸಿಕೊಂಡಿದ್ದನ್ನು... ಇಂಥ ಅನೇಕ ಘಟನೆಗಳನ್ನು ನಾನು ವಿವರಿಸುವುದಿಲ್ಲ, ಓದುಗನೇ ನನಗಾಗಿ ಅದನ್ನು ಮಾಡುತ್ತಾನೆ.

III

ಮಾಸ್ಕೋ ನಗರದ ಮುಖ್ಯ ರಸ್ತೆಯ ಗುಂಟ ಸಾಲುಮರಗಳು. ಮನೆಗಳಲ್ಲಿ ಬೆಳಗುವ ಮಂದ ಹಳದಿಬೆಳಕು - ನಿಂಬೆಹಣ್ಣನ್ನು ಮಧ್ಯದಲ್ಲಿ ಕತ್ತರಿಸುವಂತೆ ಹಿಮತುಂಬಿದ ಆಕಾಶ ಗಿಡಗಳಿಗೆ ಜೋತುಬಿದ್ದಂತೆ. ಸುತ್ತ ಬಿಳಿಯಿರುವುದೆಲ್ಲ ನೀಲಿಗೆ ತಿರುಗಿದಂತೆ. ಹಂಡಬಂಡ ಬಟ್ಟೆ ತೊಟ್ಟ ಜನ ತಲೆ ಬಾಗಿಸಿ ಸಾಲು ಮರಗಳಡಿ ಹೆಜ್ಜೆ ಹಾಕುವಾಗ ಅವರೆಲ್ಲ ಪೊಟರೆಯೊಳಗೆ ಹೊಗುತ್ತಾರೆ ಅನ್ನಿಸುವುದು. ಅವರಲ್ಲಿ ಕೆಲವರನ್ನು ನಾನು ಗುರುತಿಸಬಲ್ಲನಾಗಿದ್ದರೂ ಬಹುತೇಕ ಜನರು ಅಪರಿಚಿತರು. ಅವರೆಲ್ಲ ನನ್ನ ಸಮಕಾಲೀನರು ನನ್ನ ಬಾಲ್ಯದಲ್ಲಿ ಹಾದುಹೋದ ಅಸಂಖ್ಯಾತ ಮುಖಗಳು.

ಈ ಜಗತ್ತಿನಲ್ಲಿ ಸಾವು-ಭವಿಷ್ಯ, ಎರಡೂ ಇದ್ದವು. ಅಪರಿಚಿತ ಯಾವಾಗಲೂ ಆತ್ಮೀಯನಾಗುತ್ತಾನೆ. ಬದುಕು ಯಾವತ್ತೂ ಇರುತ್ತದೆ, ಅನುರಾಗ ಹೇಗೋ ಚಿಮ್ಮಿ ಬರುತ್ತದೆ. ಯಾಕೆಂದರೆ ಈ ಕ್ಷಣವನ್ನು ಮೀರಿ ಚಿರಂತನ ಸಮಯ, ಹಲವೆಂಟು ದಾರಿಗಳು ಇರುತ್ತವೆ, ತಡೆಯಿಲ್ಲದೆ ನಿರಂತರವಾಗಿ ತಮ್ಮನ್ನು ತಾವು ಕಾಣಲು. ಹಾಗೆಂದೇ, ಪ್ರತಿ ಹೊಸತಲೆಮಾರು - ಈ ನಿರಂತರತೆಯ ಕೊಂಡಿಯಾಗುತ್ತದೆ, ಯುವಕರು ತುಂಬಿದ ಹಿಮದಲ್ಲಿ ಬಾಗುತ್ತ ಓಡುತ್ತಾರೆ. ಎಲ್ಲರಿಗೂ ಅವರದೇ ಆದ ಕಾರ್ಯ-ಕಾರಣ.....

ಈ ಎಲ್ಲದರ ಹಿಂದಿನ ತುಡಿತದ ಕಲೆ ಯಾವುದು ? ಬಹುಶಃ ತಾರುಣ್ಯ ಶಕ್ತಿಯಲ್ಲಿ ತಮ್ಮನ್ನೇ ಬಿಚ್ಚಿಟ್ಟ ಸ್ಕ್ರೇಬಿಯನ್, ಬ್ಲೋಕ್, ಬೆಲಿ-ಇವರ ಮನಸೆಳೆವ, ಸ್ವಂತಿಕೆಯ ಕಲೆಗಾರಿಕೆ ಇರಬೇಕು. ಇಲ್ಲಿನ ಕಲೆಗಾರಿಕೆ ಯಾವ ಅಡ್ಡಿಯಿಲ್ಲದೆ ಸರಾಗವಾಗಿ ಒಡಮೂಡಿದ್ದು. ....

ನಾನು ಹೊರದೇಶದಿಂದ ಮರಳಿದಾಗ ದೇಶವಿಡೀ ನೆಪೋಲಿಯನ್‌ನ ವಿರುದ್ಧದ ಸಮರದಲ್ಲಿ ನಿರತವಾಗಿತ್ತು. ಬ್ರೆಸ್ಟ್ -ರೇಖೆಗೆ ಅಲೆಗ್ಸಾಂದ್ರೋವಸ್ಕಿಯಾ ಎಂದು ಮರುನಾಮಕರಣ ಮಾಡಿದ್ದರು. ರೇಲ್ವೆ ನಿಲ್ದಾಣಗಳಿಗೆ ಸುಣ್ಣ ಬಣ್ಣ ಹೊಡೆದಿದ್ದರು. ರೇಲ್ವೆ ಕತ್ತರಿಯಲ್ಲಿರುವ ನೌಕರ ಶುಭ್ರ ಬಟ್ಟೆ ತೊಟ್ಟು ಠೀಕಾಗಿದ್ದ. ಕುಬಿನ್ಸ್ಕಾ ನಿಲ್ದಾಣದ ಮೇಲೆಲ್ಲ ಬಾವುಟಗಳು ಹಾರಾಡುತ್ತಿದ್ದವು. ಮುಂಬಾಗಿಲಿನಲ್ಲಿ ಹೆಚ್ಚುವರಿ ಪೋಲಿಸರು ನಿಂತಿದ್ದರು.

ಪ್ರಯಾಣಿಕರಿಗೆ ಯಾವ ಕಾರಣದಿಂದ ಈ ಸಂಭ್ರಮದ ಆಚರಣೆ ಎಂದು ಅರ್ಥವಾಗಲಿಲ್ಲ. ಸಮಾರಂಭ ಯಾವುದೇ ಇರಲಿ ರೈಲು ಗಾಡಿಗಳು ವೇಳಾಪಟ್ಟಿ ತಪ್ಪಿ ಗಂಟೆಗಟ್ಟಲೇ ತಡವಾಗುವುದಂತೂ ತಪ್ಪುತ್ತಿರಲಿಲ್ಲ.

ನನ್ನ ನೆನಪಿನಲ್ಲಿ ಸೆರೋವ್ ಬರುತ್ತಿರುವುದನ್ನು ತಡೆಯಲಾಗುತ್ತಿಲ್ಲ. ಈತ ಕಳೆದ ಚಳಿಗಾಲದಲ್ಲಿ ತೀರಿಕೊಂಡ. ತ್ಸಾರ್ ದೊರೆಗಳ ಕುಟುಂಬದ ಭಾವ ಚಿತ್ರಗಳನ್ನು ಬಿಡಿಸುವಾಗ ನಡೆದ ಘಟನೆ ಈತ ಕತೆ ಮಾಡಿ ಹೇಳುತ್ತಿದ್ದುದೂ ನೆನಪಿಗೆ ಬರುತ್ತಿದೆ .... ನನ್ನ ಅರೆ ಬೆಂದ ಕ್ರಾಂತಿಕಾರಿತನದಿಂದ ಆದ ಅನಾಹುತ ನೆನಪಿಗೆ ಬರುತ್ತದೆ....

ಆ ಜನಾಂಗವೇ ರಾಜಕೀಯದಿಂದ ಪ್ರೇರಿತವಾಗಿತ್ತು ಎನ್ನಲೆ ? ಆದರೆ ನನಗೆ ರಾಜಕೀಯದ ಒಳ-ಹೊರ ಏನೇನೂ ಗೊತ್ತಿರಲಿಲ್ಲ. ನನಗೆ ಎದುರಾದ ಸಂದರ್ಭಗಳು ರಾಜಕೀಯ ನಿರ್ಧಾರ ತೆಗೆದುಕೊಳ್ಳಲು ಏನೇನೂ ಸಾಲದಾಗಿದ್ದವು. ಅದೇನಿದ್ದರೂ ವಯಸ್ಸಿಗೆ ಸಹಜವಾಗಿದ್ದ ಯೋಚನೆಗಳು ಅನ್ನಬಹುದು....

೨

ಅದೇನೆ ಇರಲಿ, ಸಂಸ್ಕೃತಿ ಆರಂಭಕಾಲದಲ್ಲಿ ತನ್ನ ತೋಳಿಗೆ ಎಳೆದುಕೊಂಡು ಮುದ್ದಿಸುವುದಿಲ್ಲ. ಪಟ್ಟಿ ಮಾಡುವ ಎಲ್ಲವನ್ನೂ ಹೋರಾಟದ ಮೂಲಕವೇ ಗಳಿಸಬೇಕಾಗುತ್ತದೆ. ಪ್ರೀತಿಯ ಗುಣವೂ ಇಬ್ಬಗೆಯದೋ ಏನೋ! ತಾರುಣ್ಯದಲ್ಲಿ ಹೀಗೆ ಬಂದು ಹಾಗೆ ಹೋಗುವ 'ಕಲೆ'ಗೆ ಕಾರಣ ಅದರ ಉತ್ಕಟ ಆಕರ್ಷಣೆ. ಈ ಅನುಭವ ಕೂಡ ಬದುಕಲ್ಲಿ ಉನ್ಮತ್ತನಾಗಿ, ವಯಸ್ಸಿಗನುಗುಣವಾಗಿ ಅನುಭವಿಸಿದ ವೈಯಕ್ತಿಕ ಅನುಭವ. ಆರಂಭ ಕಾಲದಲ್ಲಿ ಬರೆದ ಸಾಹಿತ್ಯಕ್ಕೆ ಈ ಎಲ್ಲ ಲಕ್ಷಣಗಳೂ ಇರುತ್ತವೆ. ಇಂಥ ಅನನುಭವಿಗಳು ಗುಂಪು ಕಟ್ಟಿದರು. ಗುಂಪುಗಳು ಅನುಭವನಿಷ್ಠವೆಂದೂ, ಅನ್ವೇಷಣಾ ನಿಷ್ಠವೆಂದೂ ಭಾಗವಾದವು. ಅನುಭವ ನಿಷ್ಠರು ಉತ್ಸಾಹವನ್ನು ಆವೇಶ- ಅಬ್ಬರ ಇತ್ಯಾದಿ ಇಲ್ಲದೆ ಹೇಳಿದರು. ಅನ್ವೇಷಣಾ ನಿಷ್ಠರು ಆವೇಶಭರಿತರು. ಈ ಪದಗಳು ಚರ್ಚಾಸ್ಪದವಿರಬಹುದು. ಆದರೂ ಯಾವುದೇ ಯೋಚನೆಯಿಲ್ಲದೆ, ಈ ಅರ್ಥದ ಚಂಡಮಾರುತದ ಪ್ರಭಾವದ ಅರಿವಿಲ್ಲದೆ ಎಲ್ಲ ಕಡೆ ಹೋಗುತ್ತಿದ್ದ ಕೋತಿಯೊಬ್ಬ ಬಿಡಿಬಿಡಿಯಾಗಿ ಈ ಪದಗಳನ್ನು ಹೇಳಿದ !

ಕೇವಲ ಇರುವಿಕೆಯಿಂದ ಹೇಳುವುದಾದರೆ ಕಡೆಯಪಕ್ಷ ಒಂದು ಡಝನ್ನಿನಷ್ಟು

ಯುವಕರು ಅತ್ಯಂತ ಅಶಾಂತ ಸ್ಥಿತಿಯಲ್ಲಿದ್ದವರಿದ್ದರು. ಒಂದು ಚಳವಳಿಯಾಗಿ ಅನ್ವೇಷಣಾ ನಿಷ್ಠರಿಗೆ ಯಾವ ವೈರಿಗಳೂ ಇರಲಿಲ್ಲ. ಆದರೆ ಯಾವುದೇ ಚಳವಳಿಗೆ ವಿಮರ್ಶೆಯಿಲ್ಲದಿರುವುದು ಡಬ್ಬಿಯಲ್ಲಿ ಲಾಟರಿ ತಿಕೀಟು ಹಾಕಿ ಕಲೆಸಿ ಲಾಟರಿ ಎತ್ತಿದಂತೆ. ಚಳವಳಿಯ ವಿಧಿಯೆಂದರೆ ಚಳವಳಿಯಾಗಿಯೇ ಉಳಿಯುವುದು, ಇದೊಂದು ಗಣಿತದ ಲೆಕ್ಕಾಚಾರದ ಸರದಿಯಂತೆ. ಲಾಟರಿ ಹೊಡೆದು ಗೆಲುವಿನ ಪಂಜು ಹಚ್ಚಿ, ವಿಜಯವನ್ನು ಮೆರೆದು, ಒಂದು ಅಂಕಿತ ಪಡೆಯುವುದು. ಈ ಚಳವಳಿಯನ್ನು 'ಫ್ಯೂಚರಿಸಂ' ಎಂದು ಕರೆದರು. ಈ ಲಾಟರಿಯಲ್ಲಿ ಗೆದ್ದು ಅಂಕಿತ ಪಡೆದವನು - ಮಾಯಕೊವಸ್ಕಿ.

೩

ನಮ್ಮಿಬ್ಬರ ಪರಿಚಯವಾದದ್ದು ಗುಂಪುಗಾರಿಕೆಯಿಂದ ಕಲುಷಿತಗೊಂಡ ಈ ವಾತಾವರಣದಲ್ಲಿ. ಇದಕ್ಕಿಂತ ಹಿಂದೆ ಯೂಲಿಯೆನ್ ಅನಿಸಿವೊವ್ ಮಾಯ್‌ಕೊವಸ್ಕಿಯ ಕವಿತೆಯೊಂದನ್ನು ತೋರಿಸಿದ್ದ; ಒಬ್ಬ ಕವಿ ಇನ್ನೊಬ್ಬರ ಕವಿತೆಗಳನ್ನು ತೋರಿಸುವಂತೆ. ಆತ ತೋರಿಸಿದ ಇನ್ನೊಂದು ಕವನ ಎಪಿಗೋನಿಕ್ ವೃತ್ತದಲ್ಲಿ ಬಹಳ ಪ್ರಸಿದ್ಧವಾದದ್ದು. ಆ ಗುಂಪಿನವರಿಗಂತೂ ತುಸುವು ನಾಚಿಕೆ ಇರಲಿಲ್ಲ. ಮಾಯಕೊವಸ್ಕಿ ಭವಿಷ್ಯದ ಕವಿ ಇತ್ಯಾದಿ ಎಂದೆಲ್ಲ ಅವರು ಹೇಳಿ ಆತನನ್ನು ದೈತ್ಯ ವ್ಯಕ್ತಿಯನ್ನಾಗಿ ಮಾಡಿದ್ದರು.

ಇನ್ನೊಂದೆಡೆ ಅನ್ವೇಷಣಾ ನಿಷ್ಠರು (ಇನೋವೇಟರ್ಸ್ ಗ್ರೂಪ್) ಇದ್ದ 'ತ್ಸೆಂತ್ರಿ ಫ್ಯೂಗಾ' ದ ಸದಸ್ಯನಾಗಿ ಸುಮಾರು ೧೯೧೪ರ ವೇಳೆಗೆ ನಾನೂ ಸೇರಿಕೊಂಡೆ. ಬಹುಬೇಗ ಷೆರ್ಷೆನೆವಿಯೆಚ್, ಬೋಲ್ಷ್‌ಕೊವ್ ಹಾಗೂ ಮಾಯಕೊವಸ್ಕಿ ನಮ್ಮ ಗುಂಪಿನ ಬದ್ಧ ವೈರಿಗಳೆಂದು ಕಂಡುಕೊಂಡೆ. ಅತ್ಯಂತ ವಿನೋದಭರಿತವಾದ ವಾಗ್ವಾದ ಬಾಕಿಯಿದೆಯೆಂದೂ ತಿಳಿಯಿತು. 'ಸೆಂಟ್ರಿಫ್ಯೂಗಾ'ದ ಹುಟ್ಟು ಚಳಿಗಾಲ ಪೂರ್ತಿ ಕೊನೆಯಿಲ್ಲದ ಚಿಲ್ಲರೆ ಜಗಳದಲ್ಲಿ ಕಳೆಯಿಸಿತು. ನಾನು ಮಾಡಿದ್ದೆಲ್ಲ ನನ್ನ ಅಭಿರುಚಿ, ಸಾಕ್ಷಿಪ್ರಜ್ಞೆ ಬಲಿಕೊಟ್ಟು, ಮೂಕವಾಗಿ ಇಲ್ಲೆಲ್ಲ ಪಾಲ್ಗೊಂಡಿದ್ದು. ಇದೀಗ ನಾನು ಗಟ್ಟಿ ಮನಸ್ಸು ಮಾಡಿ, ಸ್ಥೈರ್ಯ ಹೆಚ್ಚಿಸಿಕೊಂಡೆ, ಇವನ್ನೆಲ್ಲ ಎದುರಿಸಲು.

ಅದೊಂದು ಬೇಸಿಗೆಯ ಕಡೆಯ ದಿನಗಳ ಧಗೆಯ ದಿನ. ನಾವಾಗಲೇ ಚಹಾ

ಕೋಣೆಯಲ್ಲಿ ಕುಳಿತಿದ್ದೆವು. ಆ ಮೂವರೂ ಗದ್ದಲ ಎಬ್ಬಿಸುತ್ತ ತಾರುಣ್ಯದ ಉತ್ಸಾಹದಲ್ಲಿ ಬೀದಿಯಿಂದ ಒಳಗೆ ಬಂದು ತಮ್ಮ ಟೋಪಿಗೆಯನ್ನು ನೇತು ಹಾಕಿ, ಮಾತಿನ ವಿಷಯ ಹೇಳದೆ ಮಾತಿಗೆ ತೊಡಗಿದರು. ಅವರ ಧ್ವನಿಗಳು ಆಕರ್ಷಕವಾಗಿದ್ದವು. ಅನಂತರದ ಕಾವ್ಯದಲ್ಲಿನ ಹೊಸ ಛಂದಸ್ಸಿನ ಉಗಮವಾದದ್ದು ಅಂದೇ. ಅವರ ಬಟ್ಟೆ ಶುಭ್ರ-ಚೊಕ್ಕಟವಾಗಿದ್ದವು, ನಮ್ಮವನ್ನು ಹೋಲಿಸಿದರೆ ! ಯಾವ ಕಡೆಯಿಂದ ನೋಡಿದರೂ ನಮ್ಮ ವೈರಿಗಳು ಉತ್ಕೃಷ್ಟರಾಗಿದ್ದರು !

ಈ ಎಲ್ಲಾ ವಾಗ್ವಿವಾದ ನಡೆಯುತ್ತಿದ್ದಾಗ ನಾನು ಮಾಯಕೊವಸ್ಕಿಯನ್ನು ಗಮನಿಸುತ್ತಿದ್ದೆ. ನನ್ನ ನೋಟ ಬೇರೆಡೆಗೆ ತಿರುಗಿಸುವುದು ನನಗೆ ಸಾಧ್ಯವೇ ಆಗುತ್ತಿರಲಿಲ್ಲ. ಬಹುಶಃ ಇಷ್ಟೊಂದು ಸನಿಹದಿಂದ ಆತನನ್ನು ನಾನು ನೋಡಿದ್ದು ಇದೇ ಮೊದಲಬಾರಿ.

ಒಂದು ಪದ ಉಚ್ಚಾರಣೆಯಲ್ಲಿ ಆತ 'ಇ' ಬದಲು 'ಅ' ಹೇಳಿದ್ದು, ಕಬ್ಬಿಣದ ಹಾಳೆಯೊಂದು ಕೊರೆದ ಅನುಭವ ನೀಡಿತ್ತು. ಅಷ್ಟೊಂದು ನಾಟಕೀಯತೆ ಅವನಲ್ಲಿತ್ತು. ಆತ ಇದ್ದಕ್ಕಿದಂತೆ ಅಸಂಗತವಾಗಿ ಮಾತು ನಿಲ್ಲಿಸುತ್ತಿದ್ದುದು ಬೇರೆಯವರನ್ನು ಸೆಳೆಯಲು ಎಂದು ತಿಳಿಯುತ್ತಿತ್ತು. ಆತನದು ಕೇವಲ ಎದ್ದು ಕಾಣುವ ವ್ಯಕ್ತಿತ್ವ ಮಾತ್ರವಲ್ಲ, ಅನುಕರಣೀಯವೂ ಆಗಿತ್ತು. ಆತನ ಪಕ್ಕ ಕೂತ ಸಂಗಾತಿಗಳು ಆತನ ಚಹರೆ ಅನುಕರಣೆಯಲ್ಲಿ ತೊಡಗಿದ್ದು ಸ್ಪಷ್ಟವಾಗಿತ್ತು. ಎಲ್ಲರು ಎದ್ದು ನಿಂತಾಗ, ನಡೆಯುವಾಗ ಅವರ ಎತ್ತರದಿಂದ ಗಮನ ಸೆಳೆಯುವಂತಿದ್ದರೂ ಇವರೆಲ್ಲರನ್ನೂ ಮೀರಿಸಿ ಮಾಯಕೊವಸ್ಕಿ ತನ್ನೆಡೆಗೆ ಎಲ್ಲರ ಗಮನ ಸೆಳೆಯುತ್ತಿದ್ದುದು ಆಶ್ಚರ್ಯಕರವಾಗಿತ್ತು. ದೈವಿಕವಾದದ್ದೇನೋ ಆತನಲ್ಲಿರಬೇಕೆಂದು ಅನ್ನಿಸುವಂತೆ ಮಾಡುತ್ತಿತ್ತು. ಬೇರೆಲ್ಲರಿಗಿಂತ ಸಿದ್ಧಾಂತವನ್ನು ಆತ ತನ್ನಲ್ಲಿ ತುಂಬಿಕೊಂಡಿದ್ದ. ಆತ ಹೇಳುವಂತೆ ಬೇರಾರಿಗೂ ಹೇಳಲಾಗುತ್ತಿರಲಿಲ್ಲ. ಆತ ಎಲ್ಲ ಘಟನೆಗಳನ್ನೂ ಊಹಿಸಿ ಹುಟ್ಟಿದ ಒಂದು ಅತೀತ ಶಕ್ತಿಯ ಮನುಷ್ಯ ಉದ್ಭವಿಸಿದಂತೆ ಇದ್ದ.

ಆದರೆ ಆತನಿನ್ನೂ ಎಳೆಯ. ಆತನ ಮಾದರಿಗಳು ಇನ್ನೂ ಮುಂದೆ ನಡೆಯಬೇಕಿತ್ತು. ಆತನ ವಸ್ತುವೂ ಪೂರ್ಣ ತೃಪ್ತಿ ನೀಡುವಂತಿರಲಿಲ್ಲ. ಆತನ ವಾದ ಸರಣಿ ಆಕರ್ಷಕವೆಂದು ಹೇಳಿದೆ. ಆತನ ಕೆಚ್ಚಿನ ಮಾತು ಬಂಡವಾಳಶಾಹಿಯ

ಐಭೋಗದ ಬಗೆಗೆಂದು ಅನ್ನಿಸದೇ ತನ್ನೊಳಗಿನ ಪ್ರತಿಭೆಯೊಂದಿಗೆ ಮಾತುಕತೆಗಿಳಿದಿದ್ದಾನೆಂದು ಅನ್ನಿಸುತ್ತಿತ್ತು.

ಅಂದಿನ ಬಾಜಿಗಾರಿಕೆಯ ಮಾತುಕತೆ ಅಸಂಬದ್ಧವಾಗಿ ಮುಗಿದಿತ್ತು. ನಾವು ಮುಗಿಸಿಯೇ ಬಿಡಬೇಕಾಗಿದ್ದ ಶತ್ರುಗಳು ಸರಳವಾಗಿ ಎದ್ದುಹೋಗಿದ್ದರು. ಯುದ್ಧದ ಬದಲು ಶಾಂತಿಯ ಮಾತು ಬಂದು ನಮ್ಮನ್ನು ಅವಮಾನಿಸಿದ್ದವು.

ಹೊರಗೆ ಬೀದಿಯಲ್ಲಿ ಕತ್ತಲು ಆವರಿಸಿ, ತುಂತುರು ಹನಿಯುತ್ತಿತ್ತು. ವೈರಿಗಳಿಲ್ಲದ ನಮ್ಮ ಚಹಾಕೋಣೆ ಭಣಗುಟ್ಟುತ್ತಿತ್ತು. ಕೇಕ್‌ಅನ್ನು ಸುತ್ತುವರೆದ ನೊಣಗಳು ಕಣ್ಣಿಗೆ ಎದ್ದು ಕಾಣತೊಡಗಿದವು. ಬಿಸಿ ಹಾಲಿನ ಲೋಟಗಳನ್ನೂ ಅವು ಮುತ್ತಿದ್ದವು. ಯಾವ ಗುಡುಗು ಸಿಡಿಲು ಉದ್ಭವಿಸದ ಆ ದಿನ, ಬೇಸಿಗೆ - ೧೯೧೪. ಇತಿಹಾಸದ ಬದಲಾವಣೆಗೆ ತುಂಬು ಹತ್ತಿರದಲ್ಲಿದ್ದೆವು! ಆದರೆ ಅದರ ಬಗ್ಗೆ ಯಾರು ಚಿಂತಿಸಿದ್ದರು? ನಗರದಲ್ಲೆಲ್ಲ ದೀಪಗಳು ಬೆಳಗಿದವು. ಎತ್ತರಕ್ಕೆ ಬೆಳೆದ ಹಸಿರು ಮರ ತಲೆ ಅಲುಗಿಸಿದವು. ಬಹುಬೇಗ ಮರೆಯಾಗಲಿದ್ದ ಹಸಿರು ಎದ್ದು ಕಾಣುವಂತಿತ್ತು. ನನಗೆ ಮಾಯಕೊವಸ್ಕಿಯ ಹುಚ್ಚು ಹಿಡಿದಿತ್ತು, ಆದರೆ ಆತ ಹೊರಟುಹೋಗಿದ್ದ. ನಾನು ಆತ್ಮ ಸ್ಥೈರ್ಯ ಗಟ್ಟಿಮಾಡಿಕೊಂಡಿದ್ದು ಇದಕ್ಕಾಗಿ ಅಲ್ಲವೇ ಅಲ್ಲ ಎಂದು ಹೇಳಲೇಬೇಕೆ?

●

●

೫

ನಿಜ ಹೇಳುವುದಾದರೆ ಮಾಯಕೊವಸ್ಕಿಯನ್ನು ನಾನು ನನ್ನ ಬದುಕಿನೊಳಗೆ ತುಂಬಿಕೊಂಡಿದ್ದೆ. ಆದರೆ ಆತನನ್ನು ಬಿಟ್ಟರೆ ಆತನಿಗೆ ಬೇರೆ ಯಾವ ಬಂಧನವೂ ಇರಲಿಲ್ಲ, ಆತ ವಿಶಾಲ - ಅಗಲ. ಆತನನ್ನು ನಾನು ನಿಧಾನಕ್ಕೆ ಕಳೆದುಕೊಳ್ಳತೊಡಗಿದೆ. ನಮ್ಮ ಬಿಡುಗಡೆಗೆ ಬಂದ ಎಲ್ಲ ಹೊತ್ತೂ ನಮ್ಮನ್ನು ತಯಾರಾಗಲು ಬಿಟ್ಟಿರಲಿಲ್ಲ. ಪ್ರತಿಯೊಂದು ಕವನವೂ ಅವನಿಗೆ ಸ್ಥಾನಮಾನ ಗಳಿಸಿಕೊಟ್ಟು, ಆತ ಸಂಪೂರ್ಣ ಹೊಸಬನೆನ್ನುವಂತೆ ಮಾಡುತ್ತಿತ್ತು. ಆತನೊಂದಿಗೆ ಹೊಂದಿಕೊಳ್ಳುವುದು ಅಸಾಧ್ಯವಾಯಿತು. ಆತನೊಂದಿಗಿದ್ದ ಆ ವಿಭಿನ್ನವಾದುದು ಯಾವುದು?

ಆತನ ಬಳಿ ಕೆಲವು ಎಲ್ಲ ಕಾಲಕ್ಕೂ ಬದಲಿಸದ ಗುಣಗಳಿದ್ದವು. ನನ್ನ ಆರಾಧಾನಾ ಭಾವವೂ ಹೆಚ್ಚು ಕಡಿಮೆ ಸ್ಥಿರವಾಗಿತ್ತು, ಆತನಿಗಾಗಿ ಯಾವಾಗಲೂ ಸಿದ್ಧವಿತ್ತು. ಈ ಎಲ್ಲ ಪರಿಸ್ಥಿತಿಯಲ್ಲಿ ನಿಷ್ಠೆ ಬದಲಿಸದೆ ನಾನು ಆತನಿಗೆ ಅಂಟಿಕೊಂಡಂತಿತ್ತು.

ಹೆಚ್ಚು ಕಡಿಮೆ ಆತ ಕ್ರಿಯಾಶೀಲವಾಗಿದ್ದ ನಾಲ್ಕು ವರ್ಷ ಆತನಿಗೇ ಅಂಟಿಕೊಳ್ಳಲು ಯತ್ನಿಸಿ, ಆಗದೆ ಸೋತೆ. ನಂತರ ನಮ್ಮಿಬ್ಬರ ನಡುವಿನ ಅಂತರದ ನಡುವೆ, ಆತ ಸುದೀರ್ಘ ಕವನವಾಚನ ಕೇಳುತ್ತ ಆ ಕಂದರ ತುಂಬಲು ನೋಡುತ್ತಿದ್ದೆ. ಇವೆಲ್ಲ ಆದಮೇಲೂ ಸುಮಾರು ಹತ್ತುವರ್ಷ ಆತನಿಗಂಟಿಕೊಂಡು ಸುಮ್ಮನೆ ಸಹಿಸಿದೆ. ಆದರೆ ಇದ್ದಕ್ಕಿದಂತೆ, ಇವೆಲ್ಲದರಿಂದ ಹಗುರಾದೆ, ಕಣ್ಣೀರು ಹನಿಸುತ್ತ. ಆತ ತನ್ನ ಅದೇ ಎತ್ತರ ದನಿಯಲ್ಲಿ ಎಚ್ಚರಿಸಿದ್ದ, ಯಾವಾಗಲೂ ಮಾಡುವಂತೆ. ಆದರೆ ಈಗ ಅದೆಲ್ಲ ಗೋರಿಯಾಚೆ ನಡೆದುಬಿಟ್ಟಿತ್ತು.

ವಾಡಿಕೆಯಾಗದಿದ್ದುದು ಮಾಯಕೊವಸ್ಕಿಯಲ್ಲಿ ಬದಲಿಗೆ ಆತ ಕೈಯಲ್ಲಿ ಹಿಡಿದು ಬದಲಿಸಲು ನೋಡುತ್ತಿದ್ದ, ನಿಲ್ಲಿಸಲು ಯತ್ನಿಸಿದ ಭ್ರಮಾ ಜಗತ್ತು. ನನಗೆ ಈಗಲೂ ಅರ್ಥವಾಗಿಲ್ಲ - ನೋಟದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಕಾಂತದ ಕಾಂತಿಯನ್ನು ಬದಲಾಯಿಸಲು ಆತ ಹೊರಟನೇಕೆಂದು ; ಕೊನೆಗುಳಿದದ್ದು ಒಂದು ಮರಳಿನ ಕಣ ಮಾತ್ರ. ಕ್ರಾಂತಿಯೊಂದಿಗಿನ ಆತನ ಹೊರಗಿನ ಸಂಬಂಧ- ತುಂಬ ತಾರ್ಕಿಕವಾದದ್ದು, ಒಳಗಿನದು ಮಾತ್ರ ಬಲವಂತದಿಂದ ಒತ್ತಿಹಿಡಿದದ್ದು, ಖಾಲಿ ಖಾಲಿ, ಇದು ಹೀಗೇಕೆಂಬುದು ಕೊನೆಯವರೆಗೂ ಬಿಡಿಸಲಾರದ ಒಗಟಾಯಿತು....

೭

ಯುದ್ಧ ಘೋಷಣೆಯಾದದ್ದೇ ಆಕಾಶ ಕಾರ್ಮುಗಿಲು ತುಂಬಿಕೊಂಡಿತ್ತು. ಹೆಣ್ಣು ಮಕ್ಕಳ ಮೊದಲ ಕಣ್ಣೀರ ಹನಿ ಹರಿಯತೊಡಗಿದವು - ಮಳೆ. ಯುದ್ಧ ಹೊಸತು, ಎಲ್ಲವನ್ನೂ ನಡುಗಿಸಿ, ಭಯಾನಕತೆಯ ದರ್ಶನ ಮಾಡಿಸುವಲ್ಲಿಯೂ ಮೊದಲನೆಯದು....

ಇಂಥ ಸಮಯದಲ್ಲಿ ಗೆಳೆಯರು ಸೇರಿದಾಗ ಮಾಯಕೊವಸ್ಕಿ, ಆನಾ ಆಖ್ಮತೋವಾ, ಸೆವರ್‌ಯೆನಿನ್ ಹಾಗೂ ತನ್ನ ಕವಿತೆಗಳನ್ನು ಓದುತ್ತಿದ್ದ, ಎಲ್ಲ ಕವಿತೆಗಳು ಯುದ್ಧ ಹಾಗೂ ನಗರದ ಕುರಿತು ಇರುತ್ತಿದ್ದವು. ನಗರ- ಗೆಳೆಯರನ್ನೆಲ್ಲ

ಭೇಟಿಯಾಗಿ ಹಿಂದಿರುಗುವ ಇರುಳಲ್ಲಿ ಯುದ್ಧದ ವಾಸನೆಯಿಂದ ನಾರುತ್ತಿತ್ತು. ಎಲ್ಲ ಗೋಸುಂಬೆಗಳಂತೆ ಮಾಸ್ಕೋ ಸಹ ತನ್ನ ಕಪಟವೇಷ ತೊಡುತ್ತಿತ್ತು. ಹೊರಗೆ ಐಶಾರಾಮಿ ಬದುಕು - ಚಳಿಗಾಲದಲ್ಲೂ ತುಂಬಿ ತುಳುಕುವ ಹೂವಿನಂಗಡಿಗಳು.... ರಾತ್ರಿಗಳು ಮಾಯಕೊವಸ್ಕಿಯ ಧ್ವನಿಯ ಪ್ರತಿಮೆಯಂತಿರುತ್ತಿದ್ದವು. ಈ ನಗರಕ್ಕೆ ಏನಾಗುತ್ತಿದೆ ? ಈ ಧ್ವನಿ ಏನನ್ನು ಧ್ವಂಸಗೊಳಿಸುತ್ತಿದೆ ? ಎರಡು ನೀರಿನ ಹನಿಯಂತೆ, ಇದೇನು ಸಹಜವಾದ ಕನಸಿನ ಪ್ರತಿಮೆಯಲ್ಲ, ಇರಲಿ, ಋಣ ವಿದ್ಯುತ್ ಹಾಗೂ ಧ್ರುವ ವಿದ್ಯುತ್, ಕಲಾವಿದ - ಬದುಕು, ಕವಿ - ಆತನ ಕಾಲಮಾನವನ್ನು ಕೂಡಿಸುವ ಕೊಂಡಿಯಷ್ಟೇ.

ಇದಾದ ವರುಷದ ನಂತರ ನಾನು ಉರುಲ್ಸ್‌ಗೆ ಹೋದೆ, ಅದಕ್ಕಿಂತ ಮುಂಚಿನ ಸಮಯವನ್ನು ಪೀತರ್ಸ್‌ಬರ್ಗ್‌ನಲ್ಲಿ ಕಳೆದೆ. ಇಲ್ಲಿ ಯುದ್ಧದ ಹಬೆ ಮಾಸ್ಕೋದಷ್ಟು ತೀವ್ರವಾಗಿರಲಿಲ್ಲ. ಮಾಯಕೋವಸ್ಕಿಯೂ ಇಲ್ಲಿ ಕೆಲಕಾಲ ವಾಸ್ತವ್ಯ ಹೂಡಿದ್ದ... ಫೆಬ್ರವರಿ. ಕ್ರಾಂತಿಯನಂತರ ನಾನು ಮಾಸ್ಕೋಕ್ಕೆ ಮರಳಿದೆ. ಮಾಯಕೋವಸ್ಕಿ ಸಹ ಪೀತರ್ಸ್‌ಬರ್ಗ್‌ನಿಂದ ಮರಳಿದ್ದ. ಒಂದು ಮುಂಜಾನೆ ನಾನವನನ್ನು ಕಾಣಲು ಆತ ತಂಗಿದ್ದ ಹೊಟೇಲ್‌ಗೆ ಹೋದೆ. ಆತ ಹೊಸದಾಗಿ ಬರೆದ - 'ಯುದ್ಧ ಮತ್ತು ವಿಶ್ವ' ಕವಿತೆಯೋದಿದ. ಕವಿತೆ ಕೇಳಿ ನಾನೇನೂ ಉಬ್ಬಿ ಹೋಗಲಿಲ್ಲ, ನನ್ನ ಕಣ್ಣುಗಳ ಪ್ರತಿಕ್ರಿಯೆಯಿಂದ ಆತನೂ ಇದನ್ನು ಕಂಡುಕೊಂಡ.

೧೧.

ಇಲ್ಲಿಯವರೆಗೆ ನಾನು ತೋರಿಸಿರುವುದೆಲ್ಲ ಮಾಯಕೊವಸ್ಕಿ ನನಗೆ ಕಂಡಂತೆ. ಆದರೆ ಎಲ್ಲಿ ತ್ಯಾಗ ಹಾಗೂ ಹೆದರಿಕೆಯಿರುವುದಿಲ್ಲವೋ ಅಲ್ಲಿ ಪ್ರೀತಿ ಅಸಾಧ್ಯ. ನಾನು ಹೇಳಿದ್ದೆಲ್ಲ ಮಾಯಕೋವಸ್ಕಿ ಹೇಗಿದ್ದ, ನನ್ನ ಬದುಕಿಗೆ ಹೇಗೆ ಬಂದ ಎಂಬುದು. ಈಗ ಉಳಿದಿರುವುದು ಇವೆಲ್ಲದರಿಂದ ನನ್ನ ಬದುಕಿನ ಪರಿಕಲ್ಪನೆ ಹೇಗೆ ಬದಲಾಯಿತು ಎಂಬುದು. ಈ ಕಂದರವನ್ನು ನಾನೀಗ ತುಂಬಬೇಕಿದೆ.

ನಾನು ವಾಪಸ್ ಬಂದಮೇಲೆ ಒಂದು ರೀತಿಯ ಗೊಂದಲದಲ್ಲಿ ಬಿದ್ದೆ. ಏನು ಮಾಡಬೇಕೆಂಬುದರ ಬಗ್ಗೆಯೂ ಯೋಚಿಸಿರಲಿಲ್ಲ. ನಾನೊಬ್ಬ ನಿಷ್ಪ್ರಯೋಜಕ ಎಂಬ ಭಾವನೆ ಬೇರೆ; ಹಾಗೆಂದುಕೊಳ್ಳುವ ಅಗತ್ಯವಿಲ್ಲದಿದ್ದರೂ ಮಾಯಕೊವಸ್ಕಿ ಯೆದುರು ನನ್ನ ಬಲಹೀನತೆ ನನಗೇ ಅರಿವಾಗುತ್ತಿತ್ತು. ನಾನಿನ್ನೂ ಎಳೆಯವ

ನಾಗಿದ್ದರೆ ಸಾಹಿತ್ಯವನ್ನು ಬಿಟ್ಟುಬಿಡುತ್ತಿದ್ದೆ. ಆದರೆ ವಯಸ್ಸು ಅದನ್ನು ತಡೆಹಿಡಿಯಿತು. ಇಷ್ಟೆಲ್ಲ ರೂಪಾಂತರದ ನಂತರ ಮತ್ತೊಂದು ಬದಲಾವಣೆ ತರಲಾರದವನಾಗಿದ್ದೆ. ಆದರೆ ಆದದ್ದು ಬೇರೆ. ಕಾಲ, ಸಮಾನ ಮನಸ್ಥಿತಿ, ಪ್ರಭಾವ ಮಾಯಕೊವಸ್ಕಿ ಯೊಂದಿಗೆ ಸಂಬಂಧ ಬೆಸೆದವು. ನನಗಾಗಿ ನಾನೇನೂ ಮಾಡಿಲ್ಲವೆಂಬ ಅರಿವು ಬಂತು, ಮುಂದೆ ನನ್ನೊಂದಿಗೆ ಇರುವಂಥದ್ದು. ಹೀಗಾಗಿ ನನ್ನ 'ಅಬೌವ್ ದಿ ಬ್ಯಾರಿಯರ್ಸ್' ಹೊರಬರುವ ಹಾಗಾಯಿತು.

ಆದರೆ ಇಲ್ಲಿ ಇಡೀ ಬದುಕಿನ ಪರಿಕಲ್ಪನೆ ಅತ್ಯಂತ ರೋಮ್ಯಾಂಟಿಕ್ ಮೂಡ್‌ನಲ್ಲಿತ್ತು. ಇದನ್ನು ಮುಂದೆ ನಾನು ತಡೆಯಬೇಕಿತ್ತು. ರೋಮ್ಯಾಂಟಿಕ್ ಕಲ್ಪನೆ ತನ್ನ ಕಲ್ಪನೆಯ ಹೊರಗೆ - ಪೊಳ್ಳಾಗಿತ್ತು. ಕವಿತೆ ಕಟ್ಟಿದ ವ್ಯಕ್ತಿ ಅತೀತ, ಆತನ ಈ ಪ್ರತಿಭೆ ಗುರುತಿಸಲು ಹೊರಗಿನವನೊಬ್ಬ ಬೇಕು. ಕವಿ ಕೇವಲ ಒಂದು ನೈತಿಕ ಎಚ್ಚರವಿರುವ ವ್ಯಕ್ತಿಯಲ್ಲ, ಎಲ್ಲವನ್ನೂ ಕಾಣಿಸಬಲ್ಲ ಚರಿತ್ರೆಯ ಸಂಕೇತ. ಇದನ್ನು ತಿಳಿಯಲು, ಈ ಕಲಾಚಾತುರ್ಯ ಕಾಣಲು ಹಿನ್ನೆಲೆಯ ಅಗತ್ಯವಿದೆ. ಅನುರಾಗ-ಆರ್ದ್ರತೆ ತುಂಬಿದ ನಾಟಕಗಳಿಗೆ ಭಿನ್ನ ರೀತಿಯ ಮನೋಧರ್ಮದ ಈ ನಾಟಕವನ್ನು ನೋಡಲು ಸಾಮಾನ್ಯ ವರ್ಗದ ಅಭಿರುಚಿ ಬಯಸುವ ಈ ರೋಮ್ಯಾಂಟಿಕ್ ಭಾವನೆಯವರು ಈ ಮಧ್ಯಮವರ್ಗದ ಅಭಿರುಚಿಯಿಂದಾಗಿ ಅರ್ಥ ಗಂಭೀರತೆ, ವಸ್ತುವಿನ ಗಹನತೆಯನ್ನು ಕಳೆದುಕೊಂಡು ಬಿಡುತ್ತಾರೆ.

ನನ್ನ ಕಾಲದಲ್ಲಿ ಜೀವನಚರಿತ್ರೆಗಳು ಕನ್ನಡಕದಂತೆ ಸಾಂಪ್ರದಾಯಿಕ ಬಳುವಳಿಯಾಗಿದ್ದವು. ನನ್ನ ಬರಹದಲ್ಲೂ ಈ ಬಗೆಯನ್ನು ಕಾಣಬಹುದು. ಸಂಕೇತವಾದಿಗಳ ನಡುವೆ ಇನ್ನೂ ಆಯ್ಕೆಯದ್ದಾಗಿದ್ದಾಗ, ಮೆದುವಾಗಿದ್ದಾಗ ನಾನು ಈ ಪ್ರಾಕಾರ ತೆಗೆದುಕೊಂಡಿದ್ದೇನೆ. ಜೀವನ ಚರಿತ್ರೆಯ ನಾಯಕನ ಸೋಗು, ರಕ್ತದ ವಾಸನೆ, ಬಡಿಯುವ ಮೊದಲೇ, ನನಗರಿವಿಲ್ಲದಂತೆ ನಾನು ಈ ರೋಮ್ಯಾಂಟಿಸಿಸಂನಿಂದ ಕಳಚಿಕೊಂಡಿದ್ದೆ. ಯಾವುದೇ ಹುಸಿಸೋಗು ನನ್ನ ಕಾವ್ಯದ ಛಾಯೆಯೂ ಬಾರದೆಂಬ ಎಚ್ಚರ ನನ್ನಲ್ಲಿತ್ತು.

ನನ್ನ 'ಮೈ ಸಿಸ್ಟರ್, ಲೈಫ್' ಈ ಎಲ್ಲ ಪರಿಸರವನ್ನು ಮೀರಿದ ಕಾವ್ಯಭಾಷೆಯಿಂದ ಹೊರಬಂದು ಕ್ರಾಂತಿಕಾರಕ ನಿಲುವನ್ನು ಹೇಳುವಂತಿತ್ತು. ಎಲ್ಲ ಕ್ರಿಯಾಶಕ್ತಿ ಹೊರ ಹಾಕಿದ ಪುಸ್ತಕದಿಂದಾಗಿ ನಾನು ಸಂಪೂರ್ಣ ಭಿನ್ನವಾಗಿದ್ದೆ.

ಇದಕ್ಕೆ ಕಾರಣ ನನಗಿಂತ ನನ್ನ ಸುತ್ತಮುತ್ತಲ ಕಾವ್ಯ ಪರಿಕಲ್ಪನೆಗಿಂತ ಬಹು ಎತ್ತರದಲ್ಲಿದ್ದ ನನ್ನ ಕೃತಿ.

೧೨

ಚಳಿಗಾಲದ ಮುಂಜುಬೆಳಕು; ಭಯಾನಕತೆ, ಮಹಡಿ, ಮರ, ಆರ್ಬೆಟ್ ರಸ್ತೆಯ ವೃತ್ತ ಎಲ್ಲವನ್ನೂ ಹಾದು ಸಿವ್ಟೆವ್ ರಜ್ಹೆಕ್‌ನ ಊಟದ ಕೋಣೆಗೆ ಬಂತು. ಕೋಣೆ ತಿಂಗಳುಗಳಿಂದ ಗುಡಿಸಿರಲಿಲ್ಲ. ಕೋಣೆಯ ಮಾಲಿಕ ಅರೆಮರುಳನಂತಿದ್ದ ಗಡ್ಡಧಾರಿ. ಮದುವೆಯಾಗಿ ಸಂಸಾರ ಬೇರೊಂದೆಡೆ ಇದ್ದರೂ ಬ್ರಹ್ಮಚಾರಿಯಂತೆ ಬದುಕುತ್ತಿದ್ದವ. ವೇಳೆ ದೊರಕಿದಾಗಲೆಲ್ಲ ಎಲ್ಲೆಡೆ ಹರಡಿದ ನ್ಯೂಸ್ ಪೇಪರ್ ಗಳನ್ನು ಅರೆ ತಿಂದುಳಿದ ತಿಂಡಿ -ಪದಾರ್ಥವನ್ನು ಎರಡೂ ಕೈಗಳ ತುಂಬ ಹೇರಿಕೊಂಡು ಅಡುಗೆಮನೆಗೊಯ್ದು ದೊಪ್ಪಂದು ಹಾಕುತ್ತಿದ್ದ....

ಒಮ್ಮೊಮ್ಮೆ ಆಚೆ ಮನೆಯಲ್ಲಿದ್ದ ದೂರವಾಣಿಯಲ್ಲಿ ನನಗಾಗಿ ಕರೆಗಳು ಬರುತ್ತಿದ್ದವು; ಮಾಸ್ಕೋದಲ್ಲಿ ನಡೆಯುವ ಕವಿಗೋಷ್ಠಿ ಇತ್ಯಾದಿ ವಿಷಯ ತಿಳಿಸಲು. ಇದೇ ಟೆಲಿಫೋನಿನಲ್ಲೊಮ್ಮೆ ಮಾಯಕೊವಸ್ಕಿಯೊಂದಿಗೆ ತುಸು ಗಡುಸಾಗಿ ಮಾತಾಡಬೇಕಾಗಿ ಬಂದಿತ್ತು.

ಮಾಯಕೊವಸ್ಕಿ ತನ್ನ ಕಾರ್ಯಕ್ರಮವೊಂದರ ಭಿತ್ತಿ ಚಿತ್ರದಲ್ಲಿ ಬೊಲ್ಷಿಕೊವ್ ಹಾಗೂ ಲಿಪ್ಸೆಕೊರೆವ್ ಪಕ್ಕ ನನ್ನ ಹೆಸರನ್ನು ಹಾಕಿದ್ದಾಗಿ ಹೇಳಿದ. ಆತನ ಬಗೆಗೆ ಅತಿ ಪ್ರೀತಿ, ನಂಬುಗೆಯವರಲ್ಲಿ ನಂಬಿಕೆಯವ ನಾನಾಗಿದ್ದರೂ ಆತನ ರಾಜಕೀಯ ಧೋರಣೆಗಳನ್ನು ಇಷ್ಟಪಡದವನಾಗಿದ್ದೆ. ನನ್ನ ಪ್ರೀತಿಪಾತ್ರನೊಂದಿಗೆ ಅಪರಿಚಿತನಂತೆ ದೂರವಾಣಿಯಲ್ಲಿ ಮಾತಾಡುವುದು ನನಗೆ ಖುಷಿ ತಂದಿದ್ದರೂ ನನ್ನನ್ನು ನಾನೇ ಸಮರ್ಥಿಸಿಕೊಳ್ಳುತ್ತ ವಾಗ್ದಾನಕ್ಕಿಳಿದು ಸಹನೆ ಕಳೆದು ಕೊಳ್ಳತೊಡಗಿದ್ದೆ. ಈ ಎರಡು ವರ್ಷಗಳಲ್ಲಿ ನನ್ನ ಬದುಕಿನ ನಂಬಿಕೆಯಾಗಲಿ, ನನ್ನ ಆಸಕ್ತಿಗಳಾಗಲಿ ಬದಲಾಗಿಲ್ಲ ಎಂಬುದನ್ನು ಅರಿತುಕೊಳ್ಳದೆ, ಸ್ವಲ್ಪವೂ ವಿವೇಚನಾ ಶಕ್ತಿಯಿಲ್ಲದೆ ಈ ಕಾರ್ಯಕ್ರಮದಲ್ಲಿ ನನ್ನ ಹೆಸರನ್ನು ಹಾಕಿದ್ದು ನನಗೆ ಕಿರಿಕಿರಿ ಯುಂಟುಮಾಡಿತ್ತು. ಹೆಸರು ಹಾಕುವಲ್ಲಿ ನನ್ನ ಅಪ್ಪಣೆ ಅಗತ್ಯವಿತ್ತೆಂದಲ್ಲ. ಬದಲಿಗೆ ಆತ ಮೊದಲಿಗೆ ನಾನಿನ್ನೂ ಜೀವಂತವಾಗಿದೇನಾ, ಬದುಕನ್ನು ಬೇರೆ ಕಡೆ ಹೊರಡಿಸಿ ಸಾಹಿತ್ಯಕ್ಕೆ ತಿಲಾಂಜಲಿ ನೀಡಿದ್ದೆನಾ ಎಂದು ವಿಚಾರಿಸಬೇಕಿತ್ತೆಂದು. ಇದಕ್ಕಿಂತ ಉರಾಲ್ಸ್‌ನಿಂದ

ಬಂದಾದ ಮೇಲೆ ಬೇಸಿಗೆಯಲ್ಲೊಮ್ಮೆ ನಿನ್ನನ್ನು ಭೇಟಿಯಾಗಿದ್ದೆ ಎಂದು ಹೇಳಿದ್ದು ಸಮಂಜಸವಾಗಿತ್ತು. ಆದರೆ ಈ ಕಾರಣ ನನ್ನನ್ನು ಸಮಾಧಾನ ಪಡಿಸಲಿಲ್ಲ. ಹೀಗಾಗಿ, ನಾನು ಈ ಕಾರ್ಯಕ್ರಮಕ್ಕೆ ಹೊಂದುವುದಿಲ್ಲ, ಅಲ್ಲದೆ ಪ್ರಸಿದ್ಧನೂ ಅಲ್ಲ, ಎಲ್ಲಅನರ್ಥವಾಗುವುದರಿಂದ ಕಾರ್ಯಕ್ರಮಕ್ಕೆ ಸಮಯವೂ ಇಲ್ಲದಿರುವುದರಿಂದ ನನ್ನ ಹೆಸರನ್ನು ತೆಗೆದುಹಾಕಿ ಪೋಸ್ಟರ್ ಮುದ್ರಿಸಲು ಹೇಳಿದೆ.

ನನ್ನ 'ಮೈ ಸಿಸ್ಟರ್, ಲೈಫ್' ಎಲ್ಲರಿಂದ ಮುಚ್ಚಿಟ್ಟು ಸುತ್ತ ಏನಾಗುತ್ತಿದೆ ಎಂದು ನಾನಾಗ ಗಮನಿಸುತ್ತಿದ್ದೆ. ಸುತ್ತ-ಮುತ್ತಲೆಲ್ಲ ಹಿಂದೆ ಹೇಗಿತ್ತೋ ಈಗಲೂ ಹಾಗೇ ಇದೆ ಎಂದು ನನಗೇಕೊ ಮನವರಿಕೆಯಾಗದು. ಇದರ ಜತೆಗೆ ಬೇಸಿಗೆಯಲ್ಲಿ ಮಾಯಕೊವಸ್ಕಿಯೊಂದಿಗಾದ ಮಾತುಕತೆ ತೃಪ್ತಿಕರವಾಗಿರಲಿಲ್ಲ. ಅದರ ನೆನಪಿನ್ನೂ ಆಳದಲ್ಲಿದ್ದೆ ಇದೆ. ಈ ಕಾರ್ಯಕ್ರಮದ ಅಸಂಬದ್ಧತೆಗೂ ಆಗಿನ ಮಾತುಕತೆಗೂ ಯಾವುದೇ ಹೋಲಿಕೆಯಿಲ್ಲದಿರುವುದರಿಂದ ಬೇಸರವುಂಟುಮಾಡಿತ್ತು.

ಕೆಲವು ತಿಂಗಳಾದ ಮೇಲೆ ಹವ್ಯಾಸಿ ಕವಿಯೊಬ್ಬನ ಮನೆಯಲ್ಲೊಂದು ಕವಿಗೋಷ್ಠಿ ಇತ್ತು. ನಮ್ಮ ಟೆಲಿಫೋನಿನ ಲಟಾಪಟಿಯ ನಂತರವೂ ನನ್ನನ್ನಾತ ಕರೆದಿದ್ದ. ಅಲ್ಲಿದ್ದವರು - ಬಾಲ್ ಮೊಂಟ್, ಖೋದಾಸೆವೆಚ್, ಬಾಲ್ ತ್ರೈತ್ಸ್, ಎಹ್ರೆನ್‌ಬರ್ಗ್, ವೆರಾ ಇನ್ಬರ್, ಆಂಟೋಕೊಲೆಕ್ಸಿ, ಕಮೆನ್‌ಕ್ಸಿ, ಮಾಯಕೊವಸ್ಕಿ, ಅಂದ್ರೈಯಿ ಬೆಲಿ, ತ್ಸ್ವತಯೇವಾ. ಈ ತ್ಸ್ವೇತಯೇವಾ ಆಮೇಲೆ ಅತ್ಯುತ್ತಮ ಕವಿಯಾಗುತ್ತಾಳೆಂದು ನಾನಾಗ ಎಣಿಸಿರಲಿಲ್ಲ. ಆ ಸಂದರ್ಭಕ್ಕೂ ಅತ್ಯುತ್ತಮವಾದ ಕವಿತೆಯನ್ನೇ ಓದಿದ್ದಳು. ನನ್ನ ಗಮನ ಸೆಳೆದದ್ದು ಅದಲ್ಲ. ಆಕೆಯ ಸರಳತೆ. ಆ ಕೋಣೆಯಲ್ಲಿರುವವರಿಗಿಂತ ಈಕೆ ಭಿನ್ನಳು ಎಂದೆನಿಸಿತ್ತು. ಆಕೆಯ ಸ್ವಭಾವದಲ್ಲಾವುದೋ ನನ್ನ ಸ್ವಭಾವಕ್ಕೆ ಹೋಲುತ್ತಿತ್ತು. ಆಕೆ, ಆಕೆಗೆ ದೊರೆಯ ಬಹುದಾದ ಎಲ್ಲ ಹೊಗಳಿಕೆ, ಕೀರ್ತಿಯೆಲ್ಲವನ್ನೂ ಯಾವುದೇ ಗಳಿಗೆಯಲ್ಲಿ ತ್ಯಜಿಸಲು ಸಿದ್ಧಳಾಗಿದ್ದ ಜ್ವಾಲೆಯಂತೆ ಕಂಡಳು. ನಾವಿಬ್ಬರೂ ಆತ್ಮೀಯವಾಗಿ ಒಂದೆರಡು ಮಾತಾಡಿಕೊಂಡೆವು. ಆ ಸಂಜೆ ಸೇರಿದ್ದ 'ಸಿಂಬಲಿಸ್ಟ್' ಹಾಗೂ ಫ್ಯೂಚರಿಸ್ಟ್ ಜಾತ್ರೆಯಲ್ಲಿ 'ತ್ಸ್ವೇತಯೇವಾ' ನನಗೊಂದು ಜೀವಂತ ದೇವತೆಯಂತೆ ಕಂಡಳು.

ಗೋಷ್ಠಿ ಆರಂಭವಾದಾಗ ಹಿರಿಯರಿಂದ ವಾಚನ ಪ್ರಾರಂಭವಾಯಿತು, ಯಾರೂ ಅಷ್ಟೇನೂ ಯಶಸ್ವಿಯಾಗಲಿಲ್ಲ. ಮಾಯಕೊವಸ್ಕಿ ಸರದಿ ಬಂದಾಗ ಆತ

ಎದ್ದು ನಿಂತು, ಕೈಗಳನ್ನು ಶೆಲ್ಫಿಗೆ ಆಧಾರವಾಗಿಟ್ಟು ಆತನ ಮನುಷ್ಯ ಕವಿತೆ ಓದತೊಡಗಿದ. ತನ್ನ ಸಮಕಾಲೀನರ ನಡುವೆ, ನಾನು ಯಾವಾಗಲೂ ಕಂಡಂತೆ, ಆತ ಗಮನ ಸೆಳೆವ ಕೆತ್ತಿದ ಮೂರುತಿಯಂತೆ. ಎಲ್ಲರನ್ನೂ ಮೀರಿಸುವ ಕಂಬದಂತೆ ನಿಂತಾಗ ತಲೆ ಆಡಿಸುತ್ತ, ಕಾಲು ಮಡಚುತ್ತ ಆಳ-ಅಗಲ-ವಿಸ್ತಾರವಿರುವಂತೆ, ಸ್ಫೂರ್ತಿ ತುಂಬುವಂತೆ ಕವಿತೆ ವಾಚಿಸಿದ.

ಆತನಿಗೆದುರಾಗಿ ಮಾರ್ಗರೀತಾಳ ಬಳಿ ಕುಳಿತಿದ್ದು ಅಂದ್ರೆಯಿ ಬೆಲಿ. ಸ್ವಿಟ್ಸರ್‌ಲ್ಯಾಂಡ್ ಯುದ್ಧದಲ್ಲಿ ಪಾಲ್ಗೊಂಡಿದ್ದನಂತೆ. ಕ್ರಾಂತಿ, ಮರಳಿ ತನ್ನ ದೇಶಕ್ಕಾತನನ್ನು ತಂದಿತ್ತು. ಬಹುಶಃ ಮಾಯಕೊವಸ್ಕಿಯನ್ನು ಮೊದಲ ಬಾರಿ ನೋಡಿರಬೇಕು., ಆತ ಕವಿತೆಯೋದುವುದನ್ನು ಮೊದಲಸಲ ಕೇಳಿರಬೇಕು. ಮಾಯಕೊವಸ್ಕಿ ವಾಚನದಿಂದ ಮಂತ್ರಮುಗ್ಧನಾದದ್ದು ಮುಖ ಚಹರೆಯಲ್ಲಿ ಗುರುತಿಸಬಹುದಿತ್ತು. .... ನನ್ನ ಕಣ್ಣೆದುರು - ಇಬ್ಬರು ಮೇಧಾವಿಗಳು ಎರಡು ಚಳವಳಿಯನ್ನು ಸಮರ್ಥಿಸಿಕೊಂಡರು. ಬೆಲಿಯ ವಾಗ್ಝರಿಯನ್ನು ಮನಸ್ಸಿಗೆ ಮುದ-ಹೆಮ್ಮೆ ತಂದರೆ ಮಾಯಕೋವಸ್ಕಿಯ ಮಾತಿನ ಮೋಡಿ ಬೆಲಿಯ ಎರಡು ಪಟ್ಟು .... ಆ ಸಂಜೆ ಇಂಥ ಕಡೆಯ ಅನುಭವ ಪಡೆದೆ.

ಇದಾದ ನಂತರ ವರುಷಗಳು ಉರುಳಿದವು. ಮಾಯಕೋವಸ್ಕಿ ಎದುರು ಒಬ್ಬನೇ ಇದ್ದಾಗ ನನ್ನ 'ಮೈ ಸಿಸ್ಟರ್, ಲೈಫ್' ಕವಿತೆಗಳನ್ನು ಓದಿದಾಗ ಬೇರೆಲ್ಲರಿಗಿಂತ ಬಹುವಾಗಿ ಮೆಚ್ಚಿಕೊಂಡಿದ್ದ. ಆದಾದ ಎರಡು ವರ್ಷಕ್ಕೆ ಕೆಲವು ಗೆಳೆಯರು ಆತನ '೧,೫೦,೦೦೦,೦೦೦ ' ಓದಿದರು. ಮೊದಲಬಾರಿಗೆ ಆತನೊಂದಿಗೆ ಹೇಳುವುದಕ್ಕೇನೂ ನನ್ನ ಬಳಿ ಇರಲಿಲ್ಲ. ಇನ್ನೂ ಸಮಯ ಕಳೆಯಿತು. ನಾವೂ ಆಗೀಗ ದೇಶ-ವಿದೇಶದಲ್ಲಿ ಭೇಟಿಯಾಗುತ್ತಿದ್ದೆವು. ಗೆಳೆಯರಾಗಿರಲು ಯತ್ನಿಸಿ,ಒಟ್ಟಿಗೆ ಸಾಹಿತ್ಯದಲ್ಲಿ ತೊಡಗಲು ನೋಡಿದೆವು. ದಿನೆ ದಿನೆ ಆತ ನನಗೆ ಅಪರಿಚಿತನಾಗುತ್ತ ನಡೆದ....

೧೪

ಕವಿಯ ಕಳೆದುಹೋದ ಕಾಲದ ಬಗೆಗೆ, ಕಾಲದಿಂದ ಆವರಿಸುವ ಅನ್ಯತೆಯ ಬಗೆಗೆ ಹೇಳಬೇಕೆನ್ನಿಸುತ್ತದೆ.

ಎಲ್ಲ ಯೋಜನೆಗಳೂ ಪೂರ್ತಿಯಾಗದೆ ಇದ್ದಕ್ಕಿದ್ದಂತೆ ಕೊನೆ ತಲುಪಿ

ಬಿಡುತ್ತವೆ. ಹಲವೊಮ್ಮೆ ಅಪೂರ್ಣತೆಗೆ ಏನನ್ನೂ ಸೇರಿಸಲಾಗುವುದಿಲ್ಲ, ಹೊಸತನ್ನು ಬಿಟ್ಟಂತೆ; ಇಲ್ಲಿಯವರೆಗಿನ ಒಪ್ಪದ ಈಗ ಪೂರ್ಣವಾಗಿರುವ ನಿಶ್ಚಯಗಳನ್ನು ಬಿಟ್ಟಂತೆ. ಈ ನಿಶ್ಚಯಗಳೇ ಮುಂದಿನ ತಲೆಮಾರಿಗೆ ತಿಳಿಸುವುದು.

ಅಭ್ಯಾಸ ಬದಲಾಗಿ ಹೊಸ ಯೋಜನೆ ಹುಟ್ಟಿದವು. ಆಧ್ಯಾತ್ಮಿಕ ಲವಲವಿಕೆ ನುಗ್ಗಿ ಬಂತು. ಜತೆಗೆ ದಿಢೀರನೆ - ಹಲವೊಮ್ಮೆ ಸಹಜವಾಗಿ, ಹಲವೊಮ್ಮೆ ವಿಕಾರವಾಗಿ, ಆತ್ಮಹತ್ಯೆಯಂತೆ, ಕೊನೆ ಬಂದಿಳಿಯುತ್ತಿತ್ತು. ಇದು ಏಕೆಂದರೆ ನಮ್ಮನ್ನೇ ನಾವು ಸ್ವಮರ್ಥಿಸಿಕೊಳ್ಳಲು ಆಗದಿರುವ ಬಲಹೀನತೆ. ಇದ್ದಕ್ಕಿದ್ದಂತೆ ಹೋಲಿಕೆ ಪ್ರಾರಂಭಿಸಿದೆವು. ವಿದೇಶಕ್ಕೆ ಹೋಗಲು ಪಾಸ್‌ಪೋರ್ಟ್‌ಗಾಗಿ ಯತ್ನ ನಡೆದವು. ಇದೇ ಸಮಯದಲ್ಲಿ ಇತರರು ಖಿನ್ನರಾಗಿ, ಕಣ್ಣೀರು ಹನಿಸುತ್ತ, ತಮ್ಮ ಮೇಲೆ ತಾವೇ ಹೇರಿಕೊಂಡ ಏಕಾಂತವನ್ನು ನೆನೆಸಿಕೊಂಡು ನಡುಗುತ್ತಿದ್ದರು : ಚಿಕ್ಕ ಮಗು ಅತಿಥಿಗಳ ಕೈಗೆ ಸಿಕ್ಕಲು ಹೆದರಿ ಕತ್ತಲೆ ಕೋಣೆ ಹೊಕ್ಕು ಶೂನ್ಯಕ್ಕೆ ಮುದುರಿಕೂತಂತೆ. ಅಂಥ ಬದುಕಿನ ಕಾಲಮಾನ. ವಾಸ್ತವ-ನೆತ್ತರು, ಅನುಭವಿಸಿದ ಕಾಲ.

ದೊಡ್ಡ, ಅತಿದೊಡ್ಡ ನಗರ, ಚಳಿಗಾಲ. ಇರುಳು ಬೇಗ ಬಂದಿಳಿಯುತ್ತದೆ ಅಲ್ಲಿ. ಬಹಳ ಹಿಂದೆ ಭಯಾನಕವಾಗಿತ್ತದು. ಅದನ್ನು ಜಯಿಸಿ, ಗುರುತು ಸ್ಥಾಪಿಸುವುದು. ಆದಾದಮೇಲೆ ಎಷ್ಟೋ ನೀರು ಹರಿದಿದೆ. .... ದೊಡ್ಡ, ಅತಿ ದೊಡ್ಡ ನಗರ. ಚಳಿಗಾಲ. ಎಲ್ಲವನ್ನೂ ಹಿಮ ಮುತ್ತಿಕೊಳ್ಳುವುದು. ಆಮೇಲೆ ಎಲ್ಲ ಕಾಣೆಯಾಗುವುದು. ಆದರೆ ಬದುಕು ದುಃಖ ಗಳಿಗೆಯಲ್ಲಿದ್ದಂತೆ ಆನಂದದ ಗಳಿಗೆಯಲ್ಲಿದ್ದಾಗ ಕೂಡಾ ಎನ್ನುವುದು ನಿಜವೇ ? ಹಾಗಿದ್ದರೆ ಇದು ಎರಡನೆಯ ಹುಟ್ಟಲ್ಲವೇ ? ಅಥವಾ ಸಾವೆ ?

೧೫

ಸಾರ್ವಜನಿಕ ನೋಂದಣಿ ಕಛೇರಿಯಲ್ಲಿ ಸತ್ಯವನ್ನು ಒರೆಹಚ್ಚಿ ನೋಡಲು ಯಾವ ಚಿಕಿತ್ಸಾ ವಿಧಾನವೂ ಇಲ್ಲ. ಪ್ರಾಮಾಣಿಕತೆ ನಿಕಷಕ್ಕೊಡ್ಡಲು ಸಾಧನವಿಲ್ಲ. ದಾಖಲಾತಿಗೆ ಅಧಿಕೃತತೆ ಬರಲು ಯಾರಾದರೊಬ್ಬರ ಕೈ ದೃಢವಾಗಿ ಅದನ್ನು ದಾಖಲಿಸಬೇಕಷ್ಟೇ. ಇಷ್ಟಾದ ಮೇಲೆ ಅದರ ಕುರಿತು ಯಾವ ಅನುಮಾನ- ವಿವಾದ ಸಾಧ್ಯವಿಲ್ಲ.

ಆತ ಸಾಯುವ ಮುಂಚೆ ತನ್ನ ಸ್ವಂತ ಕೈಯಿಂದ ಪ್ರಾಮಾಣಿಕನಾಗಿ ವಿಲ್‌ನಲ್ಲಿ ಬರೆದಂತೆ ಜಗತ್ತಿನ ಮೌಲ್ಯಗಳ ಬಗ್ಗೆ ಬರೆಯುತ್ತಾನೆ. ಅದಕ್ಕೆ ಯಾವ ಮಾರ್ಪಾಟು ಸಾಧ್ಯವಿಲ್ಲ. ಜನ ಎಲ್ಲೆಡೆ ಅನುಮಾನಿಸುತ್ತ, ಅದರ ಬಗ್ಗೆ ಚರ್ಚಿಸಲು, ಹೋಲಿಸಲು ಪ್ರಾರಂಭಿಸುತ್ತಾರೆ.

ಜನ ಆತನ ಬರಹವನ್ನು ಆತನ ಮುಂದಾಳುಗಳೊಂದಿಗೆ ಹೋಲಿಸುತ್ತಾರೆ. ಆದರೆ ಅದನ್ನು ಆತನೊಂದಿಗೆ, ಆತನ ಬದುಕಿನೊಂದಿಗೆ ಬಿಟ್ಟರೆ ಬೇರೆಲ್ಲೂ ಹೋಲಿಸಲು ಸಾಧ್ಯವಿಲ್ಲ. ಆತನ ಭಾವನೆಗಳನ್ನು ಅರ್ಥಮಾಡಿಕೊಳ್ಳದೆ ವಿಶೇಷಾರ್ಥ ಸೇರಿಸಲು ನೋಡುತ್ತಾರೆ.

ಒಂದು ಸುಂದರ ಹೆಣ್ಣು, ಒಬ್ಬ ಮೇಧಾವಿ, ಇಬ್ಬರೂ ಸಮಾನ ಅಭಿರುಚಿ ಇದ್ದರೂ ಎಷ್ಟೊಂದು ವಿರೋಧಾಭಾಸಗಳಿದ್ದವು. ಆಕೆಯ ಬಾಲ್ಯದಿಂದಲೂ ತನ್ನ ಪ್ರತಿ ನಡುವಳಿಕೆಯನ್ನಾಕೆ ರೂಢಿಸಿಕೊಂಡವಳು. ತುಂಬ ಪ್ರೀತಿಪಾತ್ರಳು. ಆಕೆಗೆ ತನ್ನನ್ನು ಪೂರ್ಣ ತೊಡಗಿಸಿಕೊಳ್ಳ ಲು ಶಕ್ತವಿದ್ದುದು- ನಾವು ದೇವರ ಕೊಡುಗೆ ಎನ್ನುವ -ನೆಲದೊಂದಿಗೆ ಮಾತ್ರ. ಬೇರೆಯವರೊಂದಿಗೆ ಆಕೆಯ ಪ್ರತಿ ಹೆಜ್ಜೆಯೂ ಒಂದೋ ಅವರಿಗೆ ನೋವುಂಟುಮಾಡುತ್ತಿತ್ತು, ಅಥವಾ ಆಕೆಯನ್ನು ಘಾಸಿಮಾಡುತ್ತಿತ್ತು.

ತರುಣಿಯಾಗಿದ್ದಾಕೆ ಹೊಸಿಲು ದಾಟಿ ಹೊರಟಳು, ಏನು ಆಕೆಯ ಯೋಚನೆ? ಅದಾಗಲೇ ಗುಪ್ತ ಪ್ರೇಮಪತ್ರ ಬರತೊಡಗಿದ್ದವು. ಆಕೆಯ ಗುಟ್ಟು ಅರಿತ ಆತ್ಮೀಯರು ಇಬ್ಬರೊ- ಮೂವರೋ- ಅಷ್ಟೇ.

ಮನೆಯಿಂದ ಹೊರ ಹೊರಟಾಕೆ : ಸಂಜೆ ತನ್ನನ್ನು ಗಮನಿಸಲಿ, ಗಾಳಿ ತನ್ನ ಹೃದಯ ಬಡಿತ ಕೇಳಲಿ, ಆಕಾಶದ ಚುಕ್ಕೆಗಳು ತನಗಾಗಿ ಏನಾದರೂ ತಂದು ಕೊಡಲಿ ಎಂದು ಯೋಚಿಸುವಾಕೆ. ಈ ಭೂಮಿಯ ಮೇಲಿರುವ ಎಲ್ಲ ಖುಷಿಯೂ ತನಗೆ ಬೇಕೆನ್ನುವವಳು. ಇಂಥ ಯೋಚನೆ ಬೇರಾರಿಗಾದರೂ ಇದೆಯೆಂದು ಗೊತ್ತಾದರೆ ಹೊಟ್ಟೆ ಬಿರಿಯುವಂತೆ ನಗುವವಳು. ಆದರೆ ಆಕೆಯ ಇಂಥ ಎಲ್ಲ ಆಲೋಚನೆಗಳನ್ನು ಆಕೆಗಿಂತ ಆಕೆಯ ಬಗೆಗೆ ಚೆನ್ನಾಗಿ ಅರಿತಿದ್ದ ಆಕೆಯ ದೂರದ ಅಸಾಮಾನ್ಯ ಸೋದರ ಸಂಬಂಧಿಯೊಬ್ಬನಿದ್ದ, ಆಕೆಯ ಎಲ್ಲ ಪ್ರಶ್ನೆಗೆ ಉತ್ತರ ಗೊತ್ತಿದವ.

ಚೈತ್ರ, ಸಂಜೆಯ ಚೈತ್ರ. ಕುಳ್ಳ ಮುದಿಕಿಯರು ಕಲ್ಲು ಬೆಂಚಿನಮೇಲಿದ್ದಾರೆ.

ವಿಲ್ಲೋ ಮರ, ಒರಟೊರಟು ಬೆಳೆದು ಹಬ್ಬಿದೆ. ಮಂದ ಆಕಾಶ, ಪಾಚಿ ಹಸಿರು, ಧೂಳು, ಒಣಗಿದ 'ದನಿಗಳು, ಗೊರಸು ದನಿ, ಒಣಗಿದ ಕೊರಡಿನಂತೆ. ಧಗೆ - ಮೌನ.

ಬೀದಿಯಲ್ಲಿ ನಡೆಯುತ್ತಿರುವ ಆಕೆಯನ್ನು ಭೇಟಿಯಾಗಲು, ನಿಶ್ಚಿತವಾದಂತೆ ಯಾರೋ ಬರುತ್ತಿದ್ದಾರೆ. ಸಂತೋಷ, ತುಳುಕಿ, ನಾನು ಬಂದದ್ದು ನಿನ್ನನ್ನು ಭೇಟಿಯಾಗಲೆಂದು, ಆಕೆ ಅವನಿಗೆ ಹೇಳುತ್ತಿದ್ದಾಳೆ. ಒಂದರ್ಥದಲ್ಲಿ ಹೇಳಿದ್ದು ನಿಜ. ಇಂಥ ಚೈತ್ರದ ಸಂಜೆಯಲ್ಲಿ ನಿಜವಲ್ಲದೆ ಮತ್ತೇನು ಹೇಳಿಯಾಳು ? ಆಕೆ ಹೊರಬಂದದ್ದು ಯಾಕೆಂದು ಮರೆತುಬಿಟ್ಟಿದ್ದಳು. ಆದರೆ ಆಕೆಯ ಹೆಜ್ಜೆಗಳು ನೆನಪಿಸಿದವು. ಆಕೆ- ಅವನು ನಡೆಯತೊಡಗಿದರು. ಮುಂದಡಿಯಿಟ್ಟಂತೆ ಹೆಚ್ಚು ಹೆಚ್ಚು ಜನ ಎದುರಾಗುತ್ತಿದ್ದಾರೆ. ಆಕೆಯ ಸಂಗಾತಿಯನ್ನು ಮನತುಂಬಿ ಪ್ರೀತಿಸುವುದರಿಂದ ಅವಳ ಹೆಜ್ಜೆಯೂ ತುಸುವೂ ಹಿಂಜರಿಯದು. ಆಕೆ - ಆತ ಅಳುಕುತ್ತಲೇ ಮುಖನೋಡಿ ನಡೆಯುವಾಗ ಇದ್ದಕ್ಕಿದ್ದ ಹಾಗೆ ರಸ್ತೆ ಕೊನೆಗೊಂಡು ಬಯಲು. ಆರಾಮವಾಗಿ ಗಾಳಿ ಹೀರಲು ಬಂದ ಕೆಲವರು, ಇಬ್ಬರನ್ನೂ ನೋಡುತ್ತಾರೆ, ವಿಚಿತ್ರವಾಗಿ. ಹೀಗಾದಾಗಲೆಲ್ಲ ರಕ್ಷಕನಂತೆ ಆಕೆಯ ದೂರದ ಸೋದರ ಬಂದು ಎಲ್ಲ ನಿರಾಳ. ಏನೇ ಆದರೂ 'ನಾನು ಆತನನ್ನು ಪ್ರೀತಿಸುತ್ತೇನೆ', ಎಂಬುದು ಇಬ್ಬರನ್ನೂ ಭೂಮಿಯ ಮೇಲಿರುವುದೆಲ್ಲವನ್ನೂ ಒಳಗೊಂಡು ಬಂಧಿಸುತ್ತದೆ....

೧೬

ಬೇಸಿಗೆ ಮುಗಿದದ್ದೇ ಮಾಸ್ಕೋಕ್ಕೆ ಚಳಿಗಾಲದ ಮಂಪರು ಕವಿಯಿತು, ಏಳರಂದು ಎರಡನೆಯ ಬಾರಿ ಭವಿಸಲು ಆರಂಭಿಸಿತ್ತು. ಆಮೇಲೆ ಹದಿನಾಲ್ಕು: ಮಾಯಕೊವಸ್ಕಿ ಗುಂಡಿನಿಂದ ತನ್ನನ್ನು ತಾನೇ ಹೊಡೆದುಕೊಂಡಿದ್ದ. ಜನ ಇನ್ನೂ ವಸಂತಕಾಲದ ಹೊಸತಿಗೆ ಹೊಂದಿಕೊಂಡಿರಲಿಲ್ಲ.

ಈ ಭಯಾನಕ ಸುದ್ದಿ ತಿಳಿದದ್ದೇ ಓಲ್ಗಾ ಸಿಲ್ಲೋವಾಳನ್ನು ಆ ಅವಘಡ ನಡೆದ ಜಾಗಕ್ಕೆ ಹೇಳಿಕಳಿಸಿದೆ. ಈ ಆಘಾತ ಆಕೆಯ ಯಾತನೆಗಳ ನಡುವೆ ಇನ್ನೊಂದು ಎಂದು ನನಗನ್ನಿಸಿತು. ಮಧ್ಯಾಹ್ನದೊಳಗೆ ಜನ ಪ್ರವಾಹದಂತೆ ಸೇರತೊಡಗಿದರು. ಎಲ್ಲೆಡೆ ದೂರವಾಣಿ ಹೋದವು. ಮನೆ ಸುತ್ತಮುತ್ತ ಜನ ಸೇರಿ ಕಣ್ಣೀರು ಹನಿಸತೊಡಗಿದರು. ಈ ಸುದ್ದಿಯನ್ನು ನನಗೆ ಮೊದಲು ತಿಳಿಸಿದ

ಚೆರ್ನ್ಯಾಶ್ ಹಾಗೂ ರೊಮಾದಿನ್ ನನ್ನ ಬಳಿ ಬಂದು... ರ್ಘುನ್ಯಾ ದುಃಖ ಕಟ್ಟೆಯೊಡೆದು ಅಳುತ್ತಿದ್ದಳು....

ಹೊರಗಡೆ ಬದುಕು- ನಿರಾಯಾಸವಾಗಿ ಸಾಗುತ್ತಿತ್ತು. ಅಥವಾ ತಪ್ಪಿ ನಾವು ಹಾಗೆ ಕರೆಯುತ್ತೆವೆಯೋ ಮೆತ್ತನೆಯ ಮಣ್ಣಿನಮೇಲೆ ನಡಿಗೆ ಕಲಿಯುವಂತೆ ಗಾಳಿ ಬೀಸುತ್ತಿತ್ತು. ಇದ್ದಕ್ಕಿದ್ದಂತೆ ಯಾರೋ ಅಳುತ್ತಿದ್ದರು. ನಿಂತವರೆದುರು ಕೈ ಚಾಚುತ್ತಿದ್ದರು. ನಿಶ್ಶಕ್ತಿಯಿಂದ ಕುಸಿದು ಬೀಳುತ್ತಿದ್ದರು. ನನ್ನ ಗಂಟಲು ಕಟ್ಟಿ, ಆತನ ಕೋಣೆಗೆ ಹೋಗಲು ಯತ್ನಿಸಿದೆ. ಈ ಸಲ ನನ್ನ ಕಣ್ಣೀರನ್ನು ತಡೆಯುವುದಾಗಲಿಲ್ಲ.

ಆತ ನಿರಾಳವಾಗಿ ಮಲಗಿದಂತಿತ್ತು. ಎತ್ತರದ, ಮುಖ ತುಸು ಗಂಟು ಹಾಕಿಕೊಂಡು ಸಿದ್ದೆ ಮಾಡುವಂತಿದ್ದ. ಆತ ಅತ್ಯಂತ ಗಂಭೀರನಾಗಿ, ಹೆಮ್ಮೆಯಿಂದ, ನಿದ್ದೆಯಲ್ಲೂ ಎಲ್ಲದರಿಂದ ಬಿಡಿಸಿಕೊಂಡು ಹೋಗಬೇಕೆನ್ನುವವನಂತೆ ಎಲ್ಲರನ್ನೂ ತೊರೆದು ಹೋಗಿದ್ದ. ಆತನ ಮುಖ ನೋಡಿದ್ದೇ ಕಾಲ ಹಿಂದಕ್ಕೋಡಿ ಆತನೇ ಹೇಳಿದ್ದ - ನಾನು ಇಪ್ಪತ್ತೆರಡರ ಹರೆಯದ, ಆಕರ್ಷಕ ಹುಡುಗ, ಮಾತು ನೆನಪಿಗೆ ಬಂದವು. ತನ್ನೊಳಗಿನದೋ- ಹೊರಗಿನದೋ ಆತನಿಗೆ ಸಹಿಸುವುದಾಗಲಿಲ್ಲ. ಹೀಗಾಗಿ ಘನತೆಯಿಂದ ತನ್ನನ್ನು ತಾನೇ ಮುಗಿಸಿಕೊಳ್ಳುವತ್ತ ಆತ ನಡೆದಿದ್ದ.

ನೆರೆದ ಜನ ನಡುವೆ ಕೊನೆಯಿಲ್ಲದಂತೆ ರೋಧಿಸುತ್ತಿದ್ದ ಅವನ ತಾಯಿ-ಹಿರಿಯ ಅಕ್ಕ ವರಾಂಡದಲ್ಲಿದ್ದರು. ಇದೀಗ ಮನೆಗೆ ಆತನ ಕಿರಿಯ ಸಹೋದರಿ ಓಲ್ಗಾ ವ್ಲದಿಮಿರೋವ್ನಾ ಬಂದದ್ದೇ ದುಃಖ ಎದ್ದು ತೋರುವಂತಿತ್ತು. ಆಕೆ ಜೋರಾಗಿ ಅಳುತ್ತಿದ್ದಳು. ಮೆಟ್ಟಿಲು ಹತ್ತಿ ಬರುವಾಗ ಆಕೆ, ತನ್ನ ಅಣ್ಣನೊಂದಿಗೆ ಗಟ್ಟಿಯಾಗಿ ಮಾತನಾಡಿಕೊಂಡೇ ಬರುತ್ತಿದ್ದಳು. ಅಣ್ಣನ ಕೋಣೆ ಮುಟ್ಟಿದ್ದೇ, ಆಕೆಯ ಕೈ ಗಾಳಿಯಲ್ಲಿ ಅಲುಗಾಡತೊಡಗಿದವು. 'ಓಲೋದ್ಯಾ' ಎಂದು ಜೋರಾಗಿ ಆಕೆ ಕೂಗಿದ್ದು, ಮನೆಯೆಲ್ಲ ತುಂಬಿಕೊಂಡಿತು. ಗಳಿಗೆ ಬಿಟ್ಟು ತಾನೇ ಹೇಳಿದಳು - 'ಆತ ಮಾತಾಡ್ತ ಇಲ್ಲ, ಉತ್ತರ ಕೊಡ್ತಾ ಇಲ್ಲ, ಓಲೋದ್ಯಾ !'

ಕುಸಿದು ಬೀಳುತ್ತಿರುವವಳನ್ನು ಜನ ಎತ್ತಿ ಹಿಡಿದರು. ಆಕೆಗೆ ಎಚ್ಚರವಾದದ್ದೇ ಮತ್ತೆ ದೇಹದ ಬಳಿ ಓಡಿದಳು. ಆತನ ಕಾಲಿನ ಬಳಿ ಕುಳಿತು ಮತ್ತೆ ತುಂಡು ತುಂಡು ಮಾತು ಆರಂಭಿಸಿದಳು. ನನ್ನ ವೇದನೆ ತಡಯಲಾರದೆ ಹೋ ಎಂದು ಅಳಲು ಆರಂಭಿಸಿದೆ...

೧೭

ಸಂಜೆ ಮತ್ತೆ ಆತನ ಮನೆಗೆ ಹೋದಾಗ ಆತ ಶವವಸ್ತ್ರದಲ್ಲಿದ್ದ. ಬೆಳಿಗ್ಗೆ ಸೇರಿದ್ದ ಜನ ಕರಗಿ, ಹೊಸಜನ ಸೇರಿದ್ದರು. ಎಲ್ಲ ಸಂಪೂರ್ಣ ಸ್ತಬ್ದವಾಗಿತ್ತು. ಯಾರ ಅಳುವಿನ ಧ್ವನಿಯೂ ಇಲ್ಲ.

ತನ್ನೊಳಗೆ ಕುದಿಯುತ್ತಿದ್ದುದನ್ನು ಹೊರಹಾಕಿ ಆತ ಕಾಲಕ್ಕೆ ಹೊಸತನ ತುಂಬಲು ನೋಡಿದ್ದ. ಆತ ನಮ್ಮ ಕಾಲದ ವಿಚಿತ್ರ ಗುಣಗಳನ್ನು ತುಂಬಿಕೊಂಡಿದ್ದ. ನಾನ್ನು ಆತನ ಸ್ವಭಾವದ ವೈಶಿಷ್ಟ್ಯ, ಆತನ ಸ್ವತಂತ್ರ ಮನೋಭಾವ ನೆನಪಿಸಿ ಕೊಳ್ಳತೊಡಗಿದೆ. ಎಲ್ಲ ಅರ್ಥದಲ್ಲೂ ಅವನೊಬ್ಬ ಬೇರೆ ಬಗೆಯ ವ್ಯಕ್ತಿಯಾಗಿದ್ದ. ಬಾಲ್ಯದಿಂದಲೂ ಭವಿಷ್ಯ ಆತನನ್ನು ದಾರಿತಪ್ಪಿಸಿ, ವಿಶೇಷ ಪರಿಶ್ರಮವಿಲ್ಲದೆ ಎಳೆವೆಯಲ್ಲಿಯೇ ಆತನನ್ನು ಬಲಿ ತೆಗೆದುಕೊಂಡಿತ್ತು.

೧೯೩೦

(A Safe - Conduct)

ಜನ ಅವರ ನಡೆ ನುಡಿ

೧

ಇಪ್ಪತ್ತರ ದಶಕದಲ್ಲಿ ನಾನು ಬರೆದ ಆತ್ಮ ವಿವರಣೆ 'ಎ ಸೇಫ್ ಕಂಡಕ್ಟ್'ನಲ್ಲಿ ನನ್ನ ವ್ಯಕ್ತಿತ್ವ ನಿರ್ಮಾಣದಲ್ಲಿ ಪರಿಸರ ಬೀರಿದ ಪ್ರಭಾವನ್ನು ನಿಕಟವಾಗಿ ನೋಡಿದ್ದೆ. ದುರ್ದೈವವೆಂದರೆ ಆ ಕಾಲದ ರೂಢಿಯಂತೆ ನನ್ನ ಬರಹದಲ್ಲೂ ಅನಗತ್ಯ ಸೋಗಲಾಡಿತನ ತುಂಬಿತ್ತು. ಈಗ ಬರೆಯುತ್ತಿರುವ 'ಆತ್ಮ ನಿರೂಪಣಾ ಗೀಚುಗೆರೆ' ಯಲ್ಲಿ ಹಳೆಯ ಕೆಲವು ತುಣುಕುಗಳನ್ನು ಕೈಬಿಡಲಾಗದ್ದಿದ್ದರೂ ಎಲ್ಲವೂ ಮರುಕಳಿಸದಂತೆ ನೋಡಿಕೊಳ್ಳಬೇಕು.

೨

ನಾನು ಹುಟ್ಟಿದ್ದು - ಮಾಸ್ಕೋ, ಹಳೆ ಪಂಚಾಂಗದಂತೆ ಜನೆವರಿ ೨೯, ೧೮೯೦ರಂದು. ನಾವಿದ್ದ ಮನೆಯ ಹೆಸರು, ಅದರ ಯಜಮಾನನದೇ ಲೈಜೀನ್, ಮನೆಯಿದ್ದುದು ಓರುರ‍್ಝ್ಯುನಿ ಓಣಿಯಲ್ಲಿ. ಎದುರಿಗೆ ಕ್ರೈಸ್ತ ವಿದ್ಯಾಪೀಠ. ಯಾಕೋ ಗೊತ್ತಿಲ್ಲ : ಮ್ಹಾಗಿಯಲ್ಲಿ ಮೈಯಿಡಿ ತೊಯ್ದಿರುವ ನಮ್ಮ ದಾದಿಯೊಡನೆ ವಿದ್ಯಾಪೀಠದ ನೆಲದ ಮೇಲೆ ಓಡಾಡುತ್ತಿದ್ದುದು ನೆನಪಿನಲ್ಲಿ ಹಸಿರಾಗಿದೆ. ಮರದಿಂದ ಉದುರಿ, ಒಣಗಿ ಕಾಲು ಹಾದಿಯಲ್ಲೆ ಚೆಲ್ಲಾಪಿಲ್ಲಿಯಾಗಿ ಹರಡಿದ ಎಲೆಗಳು, ನಿಸರ್ಗ ಚಿತ್ರಣವನ್ನು ಕಟ್ಟಿಹಾಕಿಸಿ ನೇತು ಹಾಕಿದ ವಿದ್ಯಾಪೀಠದ ಗೋಡೆ, ಊಟದ ನಂತರ ಬಿಡುವಿನ ವೇಳೆಯಲ್ಲಿ ವಿದ್ಯಾಪೀಠದ ಮಾಣಿಗಳ ಹರಟೆ, ಆಟ, ಹುಸಿ ಹೊಡೆದಾಟ, ... ವಿದ್ಯಾಪೀಠಕ್ಕೆ ನೇರ ಎದುರಾಗಿ ... ಎರಡು ಮಹಡಿಯ ಮನೆ, ಕುದುರೆ ಲಾಯ, ಮುಂಬಾಗಿಲಿನ ಹಾದಿಗೆ ಹೊಂದಿಕೊಂಡು ನಮ್ಮ ಮನೆ, ಕಮಾನುಹೆಬ್ಬಾಗಿಲು.

೩

ಎಳೆತನದ ಮೊದಲ ದಿನಗಳು ಆತಂಕ, ರಾಗಪರವಶತೆಯ ಸಮಾಗಮ. ಎಲ್ಲದರ ಮೇಲೂ ಮೇಲುಗೈ ಸಾಧಿಸಿ, ಎಲ್ಲ ಒಟ್ಟಿಗೆ ಸೇರಿಸುತ್ತಿದ್ದ ಕಿನ್ನರ ಕಥೆಯ ಆ ಬಣ್ಣದ ಲೋಕವನ್ನು ಎರಡು ಕೇಂದ್ರಬಿಂದುವಾಗಿ ಮಾಡಬಲ್ಲೆ ನಾನು. ಕರೇಟ್ನಿ ರೈಡ್ ನಿಲ್ದಾಣದಲ್ಲಿ ಹತ್ತಿ ತುರುಕಿದ ಕರಡಿಯ ಗೊಂಬೆಗಳು, ದುಂಡುತೋಳು, ಒರಟುಗೂದಲು, ಗಡಸು ದನಿಯ ಠೊಣಪ ಗೆಳೆಯನ ಚಿತ್ರ, ತನ್ನ ಕುಟುಂಬದೊಡನೆ ಬರುತ್ತಿದ್ದ ಪ್ರಕಾಶಕ ಕೊಂಚ್‌ಲೆವ್‌ಸ್ಕಿ, ತಮ್ಮ ಪೆನ್ನು-ಪೆನ್ಸಿಲ್ಲಿನ ರೇಖಾಚಿತ್ರಗಳ ಕಲಾವಿದ ಸೆರೊವ್, ವ್ರೂಬೆಲ್, ನನ್ನ ಅಪ್ಪಾಜಿ, ವಾಸ್ನಿತೋವ್, ಸೋದರರು.....

ಜನ ಅರ್ಧದಲ್ಲೇ ನನ್ನ ಕೈಬಿಡಲು ನೋಡುತ್ತಿದ್ದರು. ಯಾವಾಗಲೂ ನಾನು ನೋಡಬಾರದ, ಕೇಳಬಾರದ ಸುಮಾರು ವಿಷಯಗಳಿದ್ದವು. ಅದೃಷ್ಟವಶಾತ್ ಒಬ್ಬರೇ ಇದ್ದೂ ಇದ್ದೂ ಬೇಸರಗೊಂಡ ನಮ್ಮ ದಾದಿ, ಆಯಾಗಳು ತಮ್ಮ ಜಗತ್ತಿಗೆ ನನ್ನನ್ನು ಸೇರಿಸಿಕೊಳ್ಳುತ್ತಿದ್ದರು. ಎಲ್ಲಿ ಹೋದಲ್ಲೆಲ್ಲ ನಮ್ಮ ವರ್ಣರಂಜಿತ ಗುಂಪು ಇದ್ದೇ ಇರುತ್ತಿತ್ತು. ಮಧ್ಯಾಹ್ನವಾದರೆ ಸಾಕು ದಳದಳ ಬೆವರುವ ಪೊಲೀಸರು ಪರೇಡ್ ಮೈದಾನದಲ್ಲಿ ಕವಾಯಿತು ನಡೆಸುತ್ತಿದ್ದರು.

ಹೀಗೆ ಮನೆಯ ಹಿರಿಯರ ಜಗತ್ತಿನಿಂದ ಬಹಿಷ್ಕೃತರಾದ ನಾವು ಅಲೆಮಾರಿಗಳ - ಭಿಕ್ಷುಕರ ಸ್ನೇಹ ಬೆಳೆಸಿದೆವು. ಸಾಲುಮರದ ಕೆಳಗೆ ಕೂತು ಅವರು ಹೇಳುತ್ತಿದ್ದ ಹೃದಯ ವಿದ್ರಾವಕ ಕತೆಗಳು ಬುದ್ಧಿ ಬಲಿಯದ ನನ್ನ ಎಳೆಮನಸ್ಸನ್ನು ಹೊಕ್ಕು, ಹೆಂಗಸರ ಬಗ್ಗೆ ಹೃದಯ ಕುಗ್ಗುವ ಕನಿಕರ ತುಂಬಿಕೊಳ್ಳುವಂತೆ ಮಾಡಿದವು. ಇದಕ್ಕಿಂತಲೂ ಎದೆ ನಡುಗಿಸಿದ ವಿಷಯ - ನರಕದ ಹಿಡಿಶಾಪದಿಂದ ನನಗಿಂತ ಮೊದಲೇ ಸಾಯುವ ನನ್ನ ತಾಯಿ-ತಂದೆಯರದು. ಅವರನ್ನು ಉಳಿಸಲು ಭಾರೀ ಮಾಂತ್ರಿಕ ದೈವಿ ಶಕ್ತಿ ಪಡೆಯಬೇಕೆಂದು ನಾನು ಯೋಚಿಸುತ್ತಿದ್ದೆ.

೪

ನಾನು ಮೂರು ವರ್ಷದವನಿದ್ದಾಗ ನಮ್ಮ ಮನೆಯನ್ನು ಮತ್ತೆ ಬದಲಿಸಿದರು. ಈ ಸಲ ಲಲಿತಕಲೆಗಳ ಶಾಲೆಯಲ್ಲಿ ಕಲಿಸುತ್ತಿದ್ದ ನನ್ನ ತಂದೆಗೆ ಈ ಮನೆ ವಾಸಕ್ಕೆ ಕೊಟ್ಟಿದ್ದರು. ಬಹುಮಹಡಿ ಕಟ್ಟಡದಲ್ಲಿ ನಮ್ಮ ಮನೆಯಿದ್ದರೂ ಮುಖ್ಯ ಕಟ್ಟಡದಿಂದ ಹೊರತಾಗಿತ್ತು.

ಹಳೆಯದಾದ, ಸುಂದರವಾದ ಮುಖ್ಯ ಕಟ್ಟಡ ಐತಿಹಾಸಿಕ ಕಾರಣಗಳಿಂದಲೂ ಗಮನಾರ್ಹವಾಗಿತ್ತು. ೧೮೧೨ರ ಭಾರಿ ಬೆಂಕಿಯಪಘಾತವನ್ನದು ಸಹಿಸಿತ್ತು. ಅದಕ್ಕೂ ನೂರುವರ್ಷ ಮುಂಚೆ ಕ್ಯಾಥರೀನ್ ಆಳ್ವಿಕೆಯಲ್ಲಿ ಇದೇ ಕಟ್ಟಡ ಭೂಗತ ಸಂಘಟನೆಯ ಸಂಗಾತಿಗಳಿಗೆ ಆಶ್ರಯನೀಡಿತ್ತು. ಮೂರನೇ ಅಲೆಕ್ಸಾಂಡರ್‌ನ ಅಸ್ಥಿಗಳ ಮೆರವಣಿಗೆಯನ್ನು; ಅದಾದ ಎರಡು ವರ್ಷದ ನಂತರ ಪಟ್ಟವೇರಿದ ಎರಡನೇ ನಿಕೊಲಸ್‌ನ ಅಧಿಕಾರ ಗ್ರಹಣ ಮೆರವಣಿಗೆಯನ್ನು, ಅಲ್ಲಿನ ನಿವಾಸಿಗಳೆಲ್ಲ ಇದೇ ಕಟ್ಟಡದ ಕಟಾಂಜನಮೇಲೆ ನಿಂತು ನೋಡಿದ್ದು ಮಸುಕು ಮಸುಕಾಗಿದೆ. ವಿದ್ಯಾರ್ಥಿ, ಉಪಾಧ್ಯಾಯ, ಜನ... ಹೀಗೆ ಕಟಾಂಜನಕ್ಕೆ ಒರಗಿನಿಂತ ಮಂದಿ. ನನ್ನನ್ನು ಕಂಕುಳಲ್ಲಿ ಕವಚಿಕೊಂಡ ಅಮ್ಮ. ಆಕೆಯ ಅಂಗಾಲು ಕೆಳಗೆ ಕಣ್ಣೀರಿನ ಹನಿ. ನಿರ್ಜನ ಬೀದಿ ಉಸಿರು ಬಿಗಿಹಿಡಿದು ಕಾಯುತ್ತಿತ್ತು. ಜನವೆಲ್ಲ ಕೇಳಲಿ ಎಂದು ಸೇನಾಧಿಕಾರಿಗಳು ಘೋಷಣೆ ಕೂಗುತ್ತಿದ್ದರು. ಇವರ ಕೂಗು ಹೇಗಿತ್ತೆಂದರೆ - ತಮ್ಮ ಕೂಗಿನ ಮೂಲಕವೇ ಬೀದಿಯಲ್ಲಿದ್ದ ಜನರನ್ನು ಗುಡಿಸಿ, ಒಗ್ಗೂಡಿಸಿ ಎಲ್ಲರನ್ನೂ ಕಟಾಂಜನದಂಚಿಗೆ ತಂದು ನಿಲ್ಲಿಸಿದರೊ- ಎನ್ನುವಂತೆ. ಅಲೆಯ ಹೊಡೆತಕ್ಕೆ ಕರಗಿಹೋಗುವ ಉಸುಕಿನಂತೆ. ಮೆಲ್ಲಗೆ, ಸೋಮಾರಿಯಂತೆ ಗಂಟೆ ಬಾರಿಸಿತು. ದೂರದ ಗಂಟೆಯ ನಿನಾದ ಕೇಳಿದೊಡನೆ ಸಾವಿರಾರು ಕೈಗಳು ತಲೆಯ ಮೇಲೆದ್ದವು. ಇಡೀ ಮಾಸ್ಕೋ ತನ್ನ ತಲೆಯ ಮೇಲಿನ ಟೊಪ್ಪಿಯನ್ನು ತೆಗೆದು ತಲೆಬಾಗಿತು. ಜನ ಕಣ್ಮುಚ್ಚಿ ಮನದಲ್ಲೇ ಪ್ರಾರ್ಥಿಸಿದರು. ಎಲ್ಲೆಡೆ ಮರಣದ ಗಂಟೆಯ ನಿನಾದ ಕೇಳತೊಡಗಿದೊಡನೆ ಕಣ್ಣು ಕಾಣುವವರೆಗೂ ಹಬ್ಬಿದ ಮೆರವಣಿಗೆ ಪ್ರವಾಹದ ಹಾಗೆ ಹರಿದು ಬರತೊಡಗಿತು. ಕವಾಯಿತು, ಸೇನೆ, ಚರ್ಚಿನ ಅರ್ಚಕರು, ಕಪ್ಪುಬಟ್ಟೆ ರೆಕ್ಕೆಪುಕ್ಕದಿಂದ ಸಿಂಗರಿಸಿದ ಕುದುರೆಗಳು, ಅಲಂಕರಿಸಿದ ಶವ ವಾಹನ, ಕಿರೀಟ, ದಂಡದ ರಾಜಯುಗದ ವೇಷತೊಟ್ಟ ರಾಜಘೋಷಕ, ಪ್ರತಿ ಮನೆಯ ಮುಂದೆ ಜೋಲು ಮೋರೆಯ ಸೂತಕವನ್ನು ಸೂಚಿಸುವ ಕಪ್ಪು ಹಾಗೂ ಹುರಿಮಂಜಿನ ಬಾವುಟಗಳನ್ನು ದಾಟಿ ದಾಟಿ ಶವಯಾತ್ರೆ ಹೊರಟಿತ್ತು.....

೫

ಅಂಗಳದ ಎದುರಿಗಿದ್ದ ಬಾಗಿಲು ಪುರಾತನ ಕಾಲದ ಮರಗಳಿದ್ದ ತೋಟಕ್ಕೆ ಕರೆದೊಯ್ಯುತ್ತಿತ್ತು. ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ತಿಂಡಿ-ಊಟವನ್ನು ತಯಾರಿಸುತ್ತಿದ್ದುದು ನೆಲಮಾಳಿಗೆ ಕೋಣೆಯಲ್ಲಿ. ಅಟ್ಟದ ಬಳಿ ಯಾವಾಗಲೂ

ಮಸಾಲೆಯ, ಮಾಂಸದ ತುಂಡು ಕುಚ್ಚುತ್ತಿರುವ ವಾಸನೆ ಇರುತ್ತಿತ್ತು. ಅಟ್ಟ ಬಿಟ್ಟು ಈಚೆ ಬಂದರೆ ನಮ್ಮ ಮನೆ ಬಾಗಿಲು. ಮಹಡಿಯ ಮೇಲೆ ಶಾಲೆಯ ಕಾರಕೂನ ವಾಸಿಸುವ ಮನೆ.

ಇದೆಲ್ಲ ಆದ ಐವತ್ತು ವರ್ಷಗಳ ನಂತರ, ಆಧುನಿಕ ಸೋವಿಯೆತ್‌ನಲ್ಲಿ, ಅಕಸ್ಮಾತ್ ಎನ್.ಎಸ್. ರೊಡಿನೋವ್ ಬರೆದ 'ಟಾಲ್‌ಸ್ಟಾಯ್ ಬದುಕು - ಬರಹದಲ್ಲಿ ಮಾಸ್ಕೋ' ಎಂಬ ಪುಸ್ತಕ ಓದುತ್ತೇನೆ. ೧೨೫ನೇ ಪುಟದಲ್ಲಿ ೧೮೯೪ರ ಕುರಿತು ಒಂದು ಪ್ಯಾರಾ ಹೀಗಿದೆ :

''ನವೆಂಬರ್ ೨೫ರಂದು ಟಾಲ್‌ಸ್ಟಾಯ್ ತನ್ನ ಹೆಣ್ಣುಮಕ್ಕಳೊಂದಿಗೆ ಲಲಿತ ಕಲಾ ಶಾಲೆಗಳ ನಿರ್ದೇಶಕರಾಗಿದ್ದ ಎಲ್.ಓ. ಪಾಸ್ತರ್‌ನಾಕ್‌ರನ್ನು ಭೇಟಿಯಾಗಲು ಹೋದರು. ಪಾಸ್ತರ್‌ನಾಕ್‌ನ ಹೆಂಡತಿ ಪಿಯಾನೋ ಕಛೇರಿಯನ್ನು ಕೇಳುವುದು ಭೇಟಿಯ ಉದ್ದೇಶ.... ''

ಬರೆದದ್ದೆಲ್ಲ ಸರಿ, ಒಂದು ಚಿಕ್ಕ ತಿದ್ದುಪಡಿಯ ಹೊರತಾಗಿ - ಕಲಾಶಾಲೆಯ ನಿರ್ದೇಶಕರು ನನ್ನ ತಂದೆಯವರಾಗಿರಲಿಲ್ಲ. ಬದಲಿಗೆ ಡ್ಯೂಕ್‌ಲೆವ್ ಆ ಹುದ್ದೆಯಲ್ಲಿದ್ದರು.

ರೊಡಿನೆವ್ ವಿವರಿಸಿದ ಆ ರಾತ್ರಿಯ ನೆನಪು ನನ್ನ ಕಣ್ಣ ಮುಂದೆಯೇ ಇದೆ. ನಡುವೆ ಯಾವಾಗಲೋ ಎಚ್ಚರವಾದಾಗ ಹಿಂದೆ ನಾನೆಂದೂ ಅನುಭವಿಸಿದ ಉಸಿರುಗಟ್ಟಿಸುವ ಮಧುರ ಯಾತನೆ. ಇದ್ದಕ್ಕಿದ್ದಂತೆ ಅರುಚುತ್ತ, ಭಯದಿಂದ ಅಳಲು ಪ್ರಾರಂಭಿಸಿದ್ದೆ. ನನ್ನನ್ನು ಎಚ್ಚರಿಸಿದ ಸಂಗೀತ ಕಣ್ಣೀರಿನಲ್ಲಿ ಮುಳುಗಿಸಿತ್ತು. ಕೋಣೆಯನ್ನು ಎರಡು ಭಾಗವಾಗಿ ಮಾಡಿದ್ದ, ನಾನು ನಿದ್ರಿಸುತ್ತಿದ್ದ ಪರದೆಯನ್ನು ಎಳೆದರು. ನನ್ನ ತಾಯಿ ಬಂದು ನನ್ನನ್ನು ಸಮಾಧಾನ ಪಡಿಸತೊಡಗಿದರು. ಬಹುಶಃ ಅತಿಥಿಗಳನ್ನು ಭೇಟಿಯಾಗಲು ಕಮಾನು ಬಾಗಿಲನ್ನು ದಾಟಿಸಿ, ಡ್ರಾಯಿಂಗ್ ರೂಮಿಗೆ ನನ್ನನ್ನು ಕರೆದೊಯ್ದರು. ತಂಬಾಕಿನ ಹೊಗೆಯಿಂದ ಖೋಲಿ ತುಂಬಿಹೋಗಿತ್ತು. ಮೊಂಬತ್ತಿ ಬೆಳಕಿನಲ್ಲಿ ಕಣ್ಣುಗಳು ಅತ್ತಿತ್ತ ಚಲಿಸುತ್ತ ಮಹೋಗನಿ ಮರದ ಕಟ್ಟಿಗೆಯ ವಾಯಲಿನ್ ಮೇಲೆ ಬೆಳಕು ಚೆಲ್ಲುತ್ತಿದ್ದವು. ಪಿಯಾನೋ ಅವುಗಳ ಹಿಂದೆ ಕತ್ತಲಿನಲ್ಲಿ ಕೂತಂತಿತ್ತು. ಅಲ್ಲೇ ಮೊಳೆಗೆ ಪುರುಷರ ನಿಲುವಂಗಿ ಜೋತು ಬಿದ್ದಿದ್ದವು. ಹೆಂಗಸರೆಲ್ಲ ತೋಳುತುಂಬಿದ ಕಸೂತಿ

ದಿರಿಸಿನಲ್ಲಿದ್ದರು, ಕೈಯಲ್ಲೊಂದು ಕೈಚೀಲ ಕೂಡ. ತಲೆ ಬೆಳ್ಳಗಾದ ಮೂರು - ನಾಲ್ಕು ಮುದುಕರು ಹೊಗೆ ಎಬ್ಬಿಸುತ್ತ, ಹೊಗೆಯಿಂದ ಮಾಡಿದವರೋ ಎಂಬಂತೆ ಕುಳಿತಿದ್ದರು. ಅವರಲ್ಲೊಬ್ಬರನ್ನು ನಾನು ಆಮೇಲೆ ಪದೇ ಪದೇ ನೋಡುತ್ತಿದ್ದೆ - ಖ್ಯಾತ ಕಲಾವಿದರಾಗಿದ್ದ ನಿಕೊಲಾಯ್ ಘೇ. ಇನ್ನೊಬ್ಬರು ನಾನು ಜೀವನ ಪೂರ್ತಿ ನೆನಪಿಟ್ಟ, ನನ್ನ ಹಾಗೆಯೇ ಬೇರೆಯುವರಿಗೂ ಬದುಕಿನಾದ್ಯಂತ ನೆನಪಿನ ಗಣಿಯಾಗಿದ್ದವರು. ಅದರಲ್ಲೂ ನನ್ನ ಅಪ್ಪಾಜಿ ಅವರ ರೇಖಾಚಿತ್ರ , ಭಾವಚಿತ್ರ ಬರೆಯತ್ತಿದ್ದರು. ಅವರ ಮನೆಗೆ ಹೋಗುತ್ತಿದ್ದರು. ಬದುಕಿಡೀ ಆರಾಧ್ಯದೈವದಂತೆ ಪೂಜಿಸುತ್ತಿದ್ದರು. ನಿಜ ಹೇಳಬೇಕೆಂದರೆ ಆ ವ್ಯಕ್ತಿಯ ಚೇತನ ನಮ್ಮ ಮನೆಯನ್ನೆಲ್ಲ ತುಂಬಿತ್ತು. ಅವರೇ ಟಾಲ್‌ಸ್ಟಾಯ್.

ನಾನು ಅತ್ತದ್ದೇಕೆ ? ಆ ಯಾತನೆಯಲ್ಲಿ ನೆನಪಿನಲ್ಲುಳಿಯುವಂಥದ್ದೇನಿತ್ತು? ನಾನಾಗಲೇ ಪಿಯಾನೋ ಸಂಗೀತದೊಂದಿಗೆ ಬೆಳೆಯುವುದನ್ನು ಕಲಿತಿದ್ದೆ. ನನ್ನ ಅಮ್ಮ ಕಛೇರಿಯ ತಾಲೀಮಿಗಾಗಿ ಯಾವಾಗಲೂ ನುಡಿಸುತ್ತಿದ್ದರು. ಪಿಯಾನೋ ದನಿ ನನ್ನ ಬದುಕಿನ ಅನಿವಾರ್ಯ ಸಂಗಾತಿಯಂತಿತ್ತು. ಪಿಯಾನೋದಿಂದ ಹೊರಡುವ ಪ್ರತಿ ನಾದತರಂಗವೂ ನನಗೇಕೋ ಅಪರಿಚಿತರಂತೆ ಕಂಡು ನನ್ನನ್ನು ತುಂಬ ಘಾಸಿಗೊಳಿಸುತ್ತಿದ್ದವು. ಅವು ನುಡಿದಾಗಲೆಲ್ಲ ಯಾರೋ ಸಹಾಯಕ್ಕಾಗಿ ಕೂಗಿದಂತೆ ಅಥವಾ ಹೊರಗಿನ ಭಾರೀ ದುರಂತದ ಸುದ್ದಿಯೊಂದು ತೆರೆದ ಕಿಟಕಿಯ ಮೂಲಕ ಒಳಬಂದಂತೆ ನನಗನ್ನಿಸುತ್ತಿತ್ತು.

ಆ ರಾತ್ರಿ : ನೆನಪುಗಳೇ ಇಲ್ಲದ ಹಸುಳೆತನ ಮತ್ತು ಬಾಲ್ಯಗಳ ನಡುವಿನ ಒಂದು ಭಾರೀ ಜಲಪ್ರವಾಹ. ಆನಂತರ ನನ್ನ ಮನಸ್ಸು ಬಲಿಯತೊಡಗಿ ನೆನಪು ಸ್ಫಟಿಕವಾದವು. ಯಾವ ಅಡ್ಡಿ-ಆತಂಕಗಳಿಲ್ಲದೆ ಇರುವ ಹಿರಿಯನಂತೆ.

೬

.... ತೊಂಬತ್ತರ ದಶಕದ ಕೊನೆಯಲ್ಲಿ ತನ್ನಿಡಿ ಬದುಕನ್ನು ಇಟಲಿಯಲ್ಲಿ ಕಳೆದಿದ್ದ ಶಿಲ್ಪಿ ಪಾವೆಲ್ ತ್ರುಬೆತ್‌ಸ್ಕೋಯ್ ಮಾಸ್ಕೋಕ್ಕೆ ಬಂದು ಒಂದು ದೊಡ್ಡ ಸ್ಟುಡಿಯೋ ತೆರೆದರು. ಇದೇ ಸ್ಟುಡಿಯೋದ ಕೋಣೆಯೊಂದರಲ್ಲಿ ನನ್ನ ತಂದೆ ತಮ್ಮ ಅತ್ಯುತ್ತಮ ರೇಖಾಚಿತ್ರಗಳನ್ನು ಟಾಲ್‌ಸ್ಟಾಯ್‌ರ 'ಪುನರುತ್ಥಾನ' ಕಾದಂಬರಿಗಾಗಿ ರಚಿಸುತ್ತಿದ್ದರು. ಕಾದಂಬರಿಯ ಒಂದು ಭಾಗ ಪೂರ್ಣವಾದಂತೆ ಆ ಭಾಗವನ್ನು

ಪೀತರ್ಸ್‌ಬರ್ಗ್‌ನ ಪ್ರಕಾಶಕ ಮಾರ್ಕ್ಸ್ ತಮ್ಮ 'ನೀವಾ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಆ ಕೆಲಸವನ್ನು ಹೊತ್ತು-ಗೊತ್ತಿಲ್ಲದೆ ಜ್ವರ ಬಂದವರಂತೆ ನನ್ನ ತಂದೆ ಮಾಡುತ್ತಿದ್ದುದು ಚೆನ್ನಾಗಿ ನೆನಪಿದೆ. ಪತ್ರಿಕೆ ತುಸುವು ತಪ್ಪದೆ ಕರಾರುವಾಕ್ಕಾಗಿ ಬರುತ್ತಿತ್ತು.

ಟಾಲ್‌ಸ್ಟಾಯ್ ಕರಡುತಿದ್ದುವುದರಲ್ಲಿ ಬಹಳ ಶಿಸ್ತಿನವರು, ಕೊನೆಗಳಿಗೆಯಲ್ಲಿ ಸುಮಾರು ಬದಲಾವಣೆ ಇರುತ್ತಿದ್ದವು. ಎಷ್ಟೆಂದರೆ ಮೊದಲು ರೇಖಿಸಿದ ಚಿತ್ರಗಳಿಗೂ ತಿದ್ದಿದ ಭಾಗಕ್ಕೂ ಸಂಬಂಧವಿಲ್ಲವೇನೋ ಎಂದು ಭಯವಾಗುವಷ್ಟು! ಆದರೆ ನನ್ನ ತಂದೆ ಟಾಲ್‌ಸ್ಟಾಯ್‌ರ ಸ್ಫೂರ್ತಿಗೆ ತಕ್ಕಂತೆ ಹೊಂದಿಕೊಂಡು ರೈಲು ನಿಲ್ದಾಣ, ಕೋರ್ಟು ಯಾವುದೇ ಇರಲಿ, ಚಿತ್ರ ಬರೆಯುತ್ತಿದ್ದುದುಂಟು. ಚಿತ್ರ ನಿರ್ದಿಷ್ಟ ವೇಳೆಗೆ ಮುಟ್ಟಬೇಕಾಗುತ್ತಿದ್ದುದರಿಂದ ರೇಲ್ವೆ ನಿಲ್ದಾಣದಿಂದ ಚಿತ್ರ ಬರೆವ ಕೋಣೆವರೆಗೂ ವ್ಯವಸ್ಥಿತ ರೀತಿಯಲ್ಲಿ ಸರಪಳಿ ಇರುತ್ತಿತ್ತು. ಈಗೋ! ಇನ್ನೇನು ರೈಲು ಹೊರಟೇ ಬಿಡುತ್ತದೆ, ಇವರಿನ್ನೂ ಇಲ್ಲೇ ಕಾಯುತ್ತಿದ್ದಾರೆಂದು ಆತಂಕದಲ್ಲಿ ನಾನು ಬಾಲಿಶವಾಗಿ ಆತಂಕಗೊಳ್ಳುತ್ತಿದ್ದೆ.

ಬಡಗಿಯ ಗೋಂದು ಸ್ಟೋವ್‌ನಲ್ಲಿ ಕುದಿಯುತ್ತಿರುತ್ತಿತ್ತು, ಚಿತ್ರಗಳ ಹಿಂಭಾಗಕ್ಕೆ ಅಂಟಿಸಿ ಒಣಗಿಸಲಾಗುತ್ತಿತ್ತು. ಆಮೇಲೆ ದಪ್ಪಕಾಗದದಲ್ಲಿ ಭದ್ರವಾಗಿ ಕಟ್ಟಿ ರೈಲಿಗೆ ಹೊರಡಲು ತಯಾರಾಗಿ ನಿಂತವನ ಕೈಗೆ ಇಟ್ಟದ್ದೆ ಆತ ರೈಲು ನಿಲ್ದಾಣಕ್ಕೆ ದೌಡುತ್ತಿದ್ದ.

೧೯೦೦- ಸಮಯ

೧

ಅಕ್ಟೋಬರ್ ೧೭ರ ಪಕ್ಷದ ಕಾರ್ಯಕ್ರಮದ ನಂತರ, ವಿದ್ಯಾರ್ಥಿಗಳ ಆಂದೋಲನಕ್ಕೆ ಪ್ರತಿಕ್ರಿಯೆಯಾಗಿ, ವೊಖೊತ್ನಿ ರೈದ್‌ನ ಹುಚ್ಚೆದ್ದ ಜನಸಮೂಹ ವಿಶ್ವವಿದ್ಯಾಲಯ, ತಾಂತ್ರಿಕ ಶಾಲೆ, ಉಚ್ಚ ಶಿಕ್ಷಣ ಶಾಲೆಗಳನ್ನು ನುಗ್ಗಿ ದಾಂಧಲೆ ಎಬ್ಬಿಸಿದರು. ಕಲಾ ಶಾಲೆಗೂ ದಾಳಿಯಿಡುವ ಬೆದರಿಕೆ ಬಂತು. ಶಾಲೆಯ ನಿರ್ದೇಶಕರ ಆದೇಶದ ಮೇಲೆ ದಾಳಿಕೋರರನ್ನು ಎದುರಿಸಲು ಮುಖ್ಯಬಾಗಿಲಿನ ಬಳಿ ದುಂಡು ಕಲ್ಲಿನ ರಾಶಿ ಪೇರಿಸಲಾಯಿತು. ಬೆಂಕಿ ನಂದಿಸುವ ನಳಗಳ ಹತ್ತಿರ ಮೊಳಕಾಲು ಚೀಲಗಳನ್ನು ತಂದೊಟ್ಟಲಾಯಿತು.

ಬೀದಿಬೀದಿಯಲ್ಲಿ ಮೆರವಣಿಗೆ ಹೊರಟ ಜನ ಶಾಲೆಗಳನ್ನು ಹೊಕ್ಕು ಮಹಡಿಯ ಮೇಲೆ ನಿಂತು ಜನರನ್ನುದ್ದೇಶಿಸಿ ಭಾಷಣ ಮಾಡಲು ತಯಾರಿ ನಡೆಸುವರು. ಶಾಲೆಯ ಕೋಣೆ, ಕೋಣೆ, ಬಾಲ್ಕನಿ, ಸಮಾವೇಶದ ಅಂಗಳ ಎಲ್ಲೆಡೆಯೂ ಅವರೇ. ರಾತ್ರಿಯಲ್ಲಿ ಕಟ್ಟಡ ಕಾಯಲು ಒಂದು ಪಡೆಯನ್ನು ಅವರು ತಯಾರಿಸಿದ್ದರು.

ಈ ಘಟನೆಯ ರೇಖಾ ಚಿತ್ರಗಳೆಲ್ಲ ಅಪ್ಪನ ಕಾಗದದಲ್ಲಿಡಗಿವೆ : ಜನರನ್ನುದ್ದೇಶಿಸಿ ಬಾಲ್ಕನಿಯಿಂದ ಭಾಷಣ ಮಾಡಿದ ಯುವತಿಯೊಬ್ಬಳಿಗೆ ಅವರು ಗುಂಡಿಟ್ಟರು. ಆಕೆಯನ್ನು ಸೈನಿಕರು ಘಾಸಿಗೊಳಿಸಿದರೂ, ಕೆಳಗೆ ಕುಸಿದು ಬೀಳದಂತೆ ಕಂಬ ಹಿಡಿದುಕೊಂಡು, ಆಕೆ ಮತ್ತೆ ಭಾಷಣ ಮುಂದುವರೆಸಿರುವ ಚಿತ್ರ......

೧೯೦೫ರ ಕೊನೆಗೆ ಮಾಸ್ಕೋ ನಗರವಿಡೀ ಸಮೂಹ ಹರತಾಳದಲ್ಲಿದ್ದಾಗ ಒಮ್ಮೆ ಮಾಕ್ಸಿಂ ಗೋರ್ಕಿ ನಗರಕ್ಕೆ ಬಂದರು. ಹಿಮತುಂಬಿ, ಕಾವಳಮಯವಾದ ನಗರಕ್ಕೆ ಪಂಜುಗಳ ಬೆಳಕು. ಗೊತ್ತುಗುರಿಯಿಲ್ಲದ ಕಾಡತೂಸುಗಳು ಚೀತ್ಕರಿಸುತ್ತ ಆಕಾಶಕ್ಕೆ ನೆಗೆಯುತ್ತಿದ್ದವು. ಸದ್ದಿಲ್ಲದ ಕನ್ನೆಯಂತೆ ಹಿಮಸುರಿಸುವ ಇರುಳಲ್ಲಿ ಕಸ್ಸಾಕರು ಜಮಾಯಿಸುತ್ತಿದ್ದರು. ಜನರ ಕಾಲ್ತುಳಿತಕ್ಕೆ ಸಿಕ್ಕು ಇನ್ನೂ ಅವರ ಕತೆ ಮುಗಿದಿರಲಿಲ್ಲ, ಅಷ್ಟೇ.

ನನ್ನ ತಂದೆ ಗೋರ್ಕಿಯೊಂದಿಗೆ ಭಾಷಣಗಳಿಗೆ ಹೋದರು : ತಂದೆಯನ್ನು ಪತ್ರಿಕೆಗಳಲ್ಲಿನ ರಾಜಕೀಯ ವಿಡಂಬನೆ ವಿಷಯ ಕುರಿತು ಚರ್ಚಿಸಲು ಕರೆಯುತ್ತಿದ್ದರು. ಬಹುಶಃ ಇದೇ ಸಮಯದಲ್ಲಿಯೋ ಅಥವಾ ಈ ಘಟನೆಯ ನಂತರ ತುಸು ಕಾಲ ಬರ್ಲಿನ್‌ನಲ್ಲಿದ್ದಾಗ ಮೊದಲಬಾರಿಗೆ ನಾನು 'ಬ್ಲೋಕ್'ನ ಪದ್ಯದ ಕೆಲವು ಸಾಲು ಓದಿದ ನೆನಪು. ಯಾವ ಪದ್ಯ ಸರಿಯಾಗಿ ನೆನಪಿಲ್ಲ.

೩

ಹಾಗಾದರೆ ಸಾಹಿತ್ಯವೆಂದರೆ 'ಜನಪ್ರಿಯ'ವಾದ ಎಲ್ಲೆಡೆ ಹಬ್ಬಿದ 'ಪದ'ವೆಂದೆ ? ಅದು ಅಲಂಕಾರಿಕ ಮಾತು, ಹಳಸುಮಾತು, ನಯವಾಗಿರುವ ಮಾತಿನ ಜೋಡಣೆ, ಹಿಂದೊಮ್ಮೆ ದಟ್ಟ ಅನುಭವದ ಸುಗ್ಗಿ ಸವೆದು, ಹೆಸರುಮಾಡಿ, ಅಸ್ಪಷ್ಟತೆಯೆಡೆ ನಡೆದು ಹಳೆಯ ಬರಹವನ್ನು ನಾಜೂಕು ಕಾರಣಕ್ಕೆ ಮೆಲುಕು ಹಾಕುವುದು ? ಈ ಪದಗಳ ರಾಜ್ಯದ ಕಸುಬುದಾರ ಬಾಯಿತೆರೆದಾಗ - ಆತನಿಗೆ ಅಲಂಕಾರಿಕ ಭಾಷೆ ಬಲ್ಲದು ಎಂಬ ಕಾರಣಕ್ಕಲ್ಲ- ದಿಢೀರನೆ, ಬದುಕಿನ ಮುಚ್ಚಿದ ಬಾಗಿಲಿನ ಶಬ್ದಗಳೆಲ್ಲ ಪ್ರವಾಹದಂತೆ ಹರಿದು, ಯಾರೂ ಕಾಣದ ಮೂಲೆಮೂಲೆಯಿಂದ ನುಗ್ಗಿ ಬಂದು, ಬದುಕಿನ ಹೊರಗೆ ಹಾಯುತ್ತಿರುವುದನ್ನೆಲ್ಲ ಒಬ್ಬ ವ್ಯಕ್ತಿಯೊಳಗೆ ತುಂಬುತ್ತವೆ. ಹೀಗೆ ತುಂಬಿದ ಅನುಭವದ ಗಣಿ-ಬ್ಲೋಕ್. ಆತನ ಧ್ವನಿಗೆ ಇಂಥ ಶಕ್ತಿಯಿತ್ತು. ಮುಗ್ಧ ಬಾಲಕನ ಬೆರಗಿನ ಜಗತ್ತಿನಂತೆ ಆತನ ಪದಗಳಲ್ಲಿ ಅನುಭವ ತುಂಬಿ ತುಳುಕುತ್ತಿತ್ತು.

ಆ ಕಾಗದದಲ್ಲಿ ಏನೋ ಹೊಚ್ಚ ಹೊಸ ಪದಗಳು ತುಂಬಿದ್ದವು. ಇಲ್ಲಿಯವರೆಗೂ ಯಾರೂ ಬರೆದಿರದಿದ್ದ, ಯಾವ ಕವಿಯೂ ಕಟ್ಟದ ಕವಿತೆಗಳೂ ಯಾರನ್ನೂ ಕೇಳದೆ ನೇರವಾಗಿ ಈ ಕಾಗದದಲ್ಲಿ ಪ್ರಕಟವಾದಂತಿದ್ದವು. ಈ ಕಾಗದದಲ್ಲಿ ಪದ್ಯಗಳ ಬದಲು ಆಕಾಶದಲ್ಲಿನ ಮೋಡಗಳ ಹೊಂಡ, ನಕ್ಷತ್ರಗಳ ದೀಪದ ಕಂಬಗಳು ತುಂಬಿಕೊಂಡಿವೆ ಅನ್ನಿಸುತ್ತಿತ್ತು. ಓದುತ್ತಿದ್ದಂತೆ ಕಾಗದದಲ್ಲಿ ಅಚ್ಚಾದ ಲೋಕದಾಚೆಯ ದೈವಿಕ ಆರ್ದ್ರತೆ, ತೆರೆತೆರೆಯಾಗಿ ತಂಗಾಳಿ ಎಲ್ಲೆಡೆಯೂ ಹಬ್ಬಿ ಪ್ರಕಾಶಿಸುತ್ತಿದ್ದವು.

೪

ಮಾಸ್ಕೋ ನಗರದಲ್ಲಿ ಬದುಕಿದ್ದ ಹಳೆಯ ತಲೆಮಾರಿನ ಬ್ರ್ಯೊಸೆವ್, ಅಂದ್ರೆ ಬೆಲಿ, ಖೋದಾಸೆವಿಚ್ ಮುಂತಾದವರನ್ನು ಭೇಟಿಯಾಗುವ ಸುಯೋಗ ನನಗೆ

ದೊರೆತದ್ದುಂಟು. ಮೊಟ್ಟಮೊದಲು ನನ್ನ ಪರಿಚಯ ಮಾಡಿಕೊಂಡಿದ್ದು ಗಾರುಡಿಗ 'ಬ್ಲೋಕ್'-ರಿಗೆ. ಆ ಸಂಜೆ ಪಾಲಿಟೆಕ್ನಿಕ್ ಅಂಗಳದಲ್ಲಿ ತಮ್ಮ ಕವಿತೆಗಳನ್ನವರು ಓದಲಿದ್ದರು. ಮುಖಾಮುಖಿಯಾದದ್ದು ಬಹುಶಃ ಮೊಗಸಾಲೆಯಲ್ಲೋ ಅಥವಾ ಅಟ್ಟದ ಮೆಟ್ಟಿಲಿನ ಬಳಿಯೋ ಇರಬೇಕು. ಬ್ಲೋಕ್ ನನ್ನೊಂದಿಗೆ ತುಂಬ ಸ್ನೇಹದಿಂದ ನಡೆದುಕೊಂಡರು. ಆ ಸಂಜೆ ಮೂರು ಕಡೆ ತಮ್ಮ ಕವಿತೆಯನ್ನವರು ಓದಿದರು. ಅವರು ಪಾಲಿಟೆಕ್ನಿಕ್ ಸಂಗ್ರಹಾಲಯದಲ್ಲಿ ಕವಿತೆ ಓದುವಾಗ ಮಾಯಕೊವಸ್ಕಿಯೂ ಅಲ್ಲಿದ್ದ. ಪದ್ಯ ಓದುವಾಗ ಮಾಯಕೋವಸ್ಕಿ - 'ಹೌಸ್ ಆಫ್ ಪ್ರೆಸ್'ನಲ್ಲಿ ಬ್ಲೋಕ್ ಕವಿತೆಯೋದುವಾಗ ವಿಮರ್ಶೆಯ ಹೆಸರಿನಲ್ಲಿ ಕೆಲವರು ಅವರನ್ನು ಅವಹೇಳನ ಮಾಡುವ ಸಾಧ್ಯತೆಯಿರುವುದರಿಂದ ನಾವು ಅಲ್ಲಿರುವುದು ಬ್ಲೋಕ್‌ಗೆ ಕ್ಷೇಮ, ಎಂದು ಹೇಳಿದ. ನಾವಿಬ್ಬರೂ ಅರ್ಧದಲ್ಲೇ 'ಹೌಸ್ ಆಫ್ ಪ್ರೆಸ್' ಕಡೆಗೆ ಕಾಲ್ನಡಿಗೆಯಲ್ಲಿ ಹೊರಟೆವು. ಬ್ಲೋಕ್‌ರನ್ನು ಕಾರಿನಲ್ಲಿ ಆ ಸ್ಥಳಕ್ಕೆ ಕರೆದೊಯ್ದರಂತೆ. ನಾವಲ್ಲಿಗೆ ತಲುಪುವ ವೇಳೆಗೆ ನಾವಂದುಕೊಂಡಂತೆ ಎಲ್ಲ ಮುಗಿದಿತ್ತು. ಬ್ಲೋಕ್‌ರು ಇನ್ನೊಂದು ಸ್ಥಳಕ್ಕೆ ಕವಿತೆ ಓದಲು ಹೊರಟು ಹೋಗಿದ್ದರು. ಬ್ಲೋಕ್‌ರಿಗೆ ತುಂಬಾ ಅವಮಾನವಾಗುವ ರೀತಿಯಲ್ಲಿ ಅನೇಕರು ವರ್ತಿಸಿದರಂತೆ. ಯಾರೋ ಉದ್ಧಟನೊಬ್ಬ ಬ್ಲೋಕ್ ಈಗಾಗಲೇ ಬದುಕಿದ್ದು ಅತಿಯಾಯಿತು. ಆತನ ಆತ್ಮ ಸತ್ತು ಬಹಳ ಕಾಲವಾಯ್ತು ಎಂದೂ ಹೇಳಿಧನಂತೆ. ಬ್ಲೋಕ್ ಇದನ್ನೆಲ್ಲ ಸ್ಥಿತಪ್ರಜ್ಞತೆಯಿಂದ ಸ್ವೀಕರಿಸಿದರಂತೆ. ಈ ಘಟನೆ ನಡೆದು ಕೆಲವು ತಿಂಗಳಿಗೆ ಅವರು ಕೊನೆಯುಸಿರೆಳೆದರು.

೫

ಅತಿ ದಿಟ್ಟತನದಿಂದ ಕವಿತೆ ಬರೆಯುತ್ತಿದ್ದ ಆ ಆರಂಭದ ಕಾಲದಲ್ಲಿ ಕೇವಲ ಇಬ್ಬರು ಮಾತ್ರ ಪ್ರೌಢತೆ, ಕೌಶಲ್ಯ, ತಮ್ಮದೇ ಶೈಲಿಯನ್ನು ರೂಢಿಸಿಕೊಂಡಿದ್ದರು. ಅಸೆಯೆವ್ ಹಾಗೂ ತ್ಸ್ವೇತಯೇವಾ. ನನ್ನನ್ನೂ ಸೇರಿದಂತೆ ಅನೇಕ ಬರಹಗಾರರು ತಮ್ಮತನವನ್ನು ಅತಿಯಾಗಿ ಕೊಚ್ಚಿಕೊಳ್ಳುವುದಿತ್ತು- ಅಸಹಾಯಕತೆಯಲ್ಲಿ . ಹಿಂದಿನ ರೂಢಿಗತ ಬರಹದ ಮೇಲೆ ಅತಿ ಅವಲಂಬನೆ ನಡುವೆಯೂ ನಮ್ಮ ಬರಹ - ಅನುವಾದ ಸಾಗಿತ್ತು. ಮನೋವೇದನೆಯ ಅಸಂಬದ್ಧ ಪ್ರಯತ್ನಗಳ ಮಧ್ಯೆ ನನ್ನ ಅತ್ಯಂತ ನೋವಿನ ಕಾರ್ಯವಾಗಿದ್ದೆಂದರೆ - ಬೆನ್ ಜಾನ್‌ಸನ್‌ನ ನಾಟಕ 'ಆಲ್ಕೆಮಿಸ್ಟ್' ಹಾಗೂ ಗೋಥೆಯ 'ಸೀಕ್ರೆಟ್ಸ್' ಕವಿತೆಯ ಅನುವಾದ. ಬ್ಲೋಕ್‌ರು ಈ

ಅನುವಾದದ ಕುರಿತು ಮಾಡಿದ ವಿಮರ್ಶೆ ಆನಂತರ ಅವರ ಆಯ್ದ ಬರಹದಲ್ಲಿ ಸೇರ್ಪಡೆಯಾಯಿತು. ಅತ್ಯಂತ ಕಟುವಾದ ಆ ವಿಮರ್ಶೆಯ ತೀರ್ಮಾನ ಈ ಅನುವಾದಕ್ಕೆ ಸರಿಯಾಗಿಯೇ ಹೊಂದುತ್ತಿದ್ದವು. ಅದು ಹೇಗೇ ಇರಲಿ, ಇದೀಗ ಆ ಸ್ಪರ್ಶರೇಖೆಯಿಂದ, ಆ ವಿವರಗಳಿಂದ ಹೊರಬರಬೇಕು. ಎಲ್ಲಿ ನನ್ನ ಹಿಂದಿನ-ಅಂದರೆ ೧೯೦೦ರ ಸಮಯದ - ನೆನಪುಗಳು ಕಡಿದುಕೊಂಡಿವೆಯೋ, ಅಲ್ಲಿಂದ.

೬

ಜಿಮ್ನಾಸಿಯಂನಲ್ಲಿ ಓದುತ್ತಿದ್ದ ಮೂರೋ-ನಾಲ್ಕನೆಯ ವರ್ಷ ಕ್ರಿಸ್‌ಮಸ್ ರಜೆಯಲ್ಲಿ ರೇಲ್ವೆಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ಚಿಕ್ಕಪ್ಪನ ಪಾಸನ್ನು ಬಳಸಿ ಸೇಂಟ್ ಪೀತರ್ಸ್‌ಬರ್ಗ್‌ಗೆ ಹೊರಟೆ. ದಿನ ಮುಗಿವವರೆಗೂ ಕಾಲ್ನಡಿಗೆಯಲ್ಲಿ ತಿರುಬೋಕಿಯಂತೆ ಆ ಚಿರಂತನ ನಗರವನ್ನು ಗಸ್ತು ಹಾಕುತ್ತಿದ್ದೆ. ಸಂಜೆ - ಕೊಮಿರ್ಝೆರೆವಸ್ಕಿಯಾ ರಂಗಮಂದಿರದಲ್ಲಿ ಕಳೆಯುತ್ತಿದ್ದೆ. ಅಲ್ಲಿನ ಹೊಸ ಸಾಹಿತ್ಯ ಚಳವಳಿಯಿಂದ ಉನ್ಮತ್ತನಾಗಿದ್ದೆ, ಅದರ ರೂವಾರಿಗಳು ಅಂದ್ರೆಯಿ ಬೆಲಿ, ಹಾಮ್‌ಸನ್, ಪ್ರೆಸ್ಸಿಬ್ಯೆಜೆವ್‌ಸ್ಕಿ.

ಇದಕ್ಕಿಂತ ಪ್ರಭಾವಶಾಲಿಯಾದ ಪ್ರಯಾಣದ ಅನುಭವವನ್ನು ನನ್ನ ಮನೆಯವರೊಂದಿಗೆ ೧೯೦೬ರಲ್ಲಿ ಬರ್ಲಿನ್‌ಗೆ ಹೋದಾಗ ಪಡೆಯಲಿದ್ದೆ. ಇದು ಹೊರ ಜಗತ್ತಿನೊಂದಿಗೆ ನನ್ನ ಮೊದಲ ಅನುಭವ. ಪ್ರತಿಯೊಂದು ಹೊಸಬಗೆಯದು, ಇದು ನಿಜವಲ್ಲ ಕನಸು ಎಂಬಂತೆ. ಹೊಸತರ ಅನ್ವೇಷಣೆಯಲ್ಲಿ ತೊಡಗುವುದು ; ಒಪ್ಪಿ ಅಥವಾ ಬಿಡಿ ಒಂದು ಸೈದ್ಧಾಂತಿಕ ಚರ್ಚೆಯಲ್ಲಿ ತೊಡಗುವುದು . ಅಲ್ಲಿ ಯಾರೂ ಎಲ್ಲ ಅರಿತವರಿಲ್ಲ. ಅಲ್ಲಿ ಉದ್ದೋ ಉದ್ದ ತೆರೆದು ನಿಂತ ಬಾಗಿಲುಗಳ ಸಾಲು, ರಸ್ತೆ ತುಂಬ ಹಬ್ಬಿದ ರೈಲಿನ ಕಂಬಿಗಳು - ಒಂದನ್ನೊಂದು ಹಿಂದೆ ಹಾಕಲು ಹವಣಿಸುತ್ತ ಓಡುವ ರೈಲು.

ಬರ್ಲಿನ್ ತುಂಬ ರಷಿಯನ್ನರಿದ್ದರು. ಮಾಕ್ಸಿಂ ಗೋರ್ಕಿ ಕೂಡಾ ಬರ್ಲಿನ್‌ನಲ್ಲಿದ್ದರು. ಅಪ್ಪ ಗೋರ್ಕಿಯವರ ರೇಖಾಚಿತ್ರ ಬಿಡಿಸಿದ್ದರು. ಆದರೆ ಅಪ್ಪ ಬರೆದ ಚಿತ್ರ ಅಂದ್ರೆಯೆವಾಳಿಗೆ ಹಿಡಿಸಲಿಲ್ಲ. ಗೋರ್ಕಿಯ ಕೆನ್ನೆಯ ಎಲುಬು ಎದ್ದು ಕಾಣುತ್ತಿದ್ದುದು ಆಕೆಗೆ ಕೆಟ್ಟದ್ದಾಗಿ ಕಂಡಿತ್ತು. ಆಕೆ ಅಪ್ಪನಿಗೆ ಹೇಳಿದ್ದಳು. ನೀನು ಗೋರ್ಕಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಆತನೊಬ್ಬ ಒರಟು ಒರಟು

ಮನುಷ್ಯ. ಆ ಕಾಲದಲ್ಲಿ ಜನ ಹೀಗೇ ಮಾತನಾಡುತ್ತಿದ್ದುದು.

೭

ಬಹುಶಃ ಬರ್ಲಿನ್ ವಾಸ್ತವ್ಯದಿಂದ ಬಂದ ನಂತರವಿರಬೇಕು - ನನ್ನ ಬದುಕಿನಲ್ಲಿ ಇನ್ನೊಬ್ಬ ಶ್ರೇಷ್ಠ ಕವಿಯ ಪ್ರವೇಶವಾಯಿತು - ಜರ್ಮನಿಯ ರೇನೆ ಮಾರಿಯ ರಿಲ್ಕ್. ಇದೀಗ ಜಗತ್ತಿಗೆಲ್ಲ ತಿಳಿದಿರುವ ಅವರು ಅಂದೊಬ್ಬ ಅನಾಮಿಕ.

ಸುಮಾರು ೧೯೦೦ರಲ್ಲಿ ಟಾಲ್‌ಸ್ಟಾಯ್‌ರನ್ನು ನೋಡಲು ರಿಲ್ಕ್ ಯಸ್ನಾಯಾ ಪೊಲನ್ಯಾಕ್ಕೆ ಹೋಗಿದ್ದರು. ನನ್ನ ತಂದೆಗೆ ಅವರ ಪರಿಚಯವಿತ್ತು. ಪತ್ರ ವ್ಯವಹಾರವೂ ಇತ್ತು. ಆ ಕಳೆದು ಹೋದ ದಿನಗಳಲ್ಲಿ ತಮ್ಮ ಕವನ ಸಂಕಲನಗಳನ್ನು ನನ್ನ ತಂದೆಗೆ ಪ್ರೀತಿಯ ಹಸ್ತಾಕ್ಷರದೊಂದಿಗೆ ಅವರು ನೀಡಿದ್ದರು. ಈ ಪುಸ್ತಕಗಳು ದೀರ್ಘವಿರಾಮದ ನಂತರ ಒಂದು ಚಳಿಗಾಲ ನನ್ನ ಕೈಗೆ ಸಿಕ್ಕಿದವು. ಓದುತ್ತ ಹೋದಾಗ ಅದ್ಭುತವೇ ಕಣ್ಣು ಕಟ್ಟಿತ್ತು. ಮೊದಲಿಗೆ ಬ್ಲೋಕ್‌ರನ್ನು ಓದಿದಾಗ ಆದಂತೆ. ತಟ್ಟನೆ ಹಿಡಿದಿರುವ ವಸ್ತು, ಯಾವ ಸಂಕೋಚವೂ ಇಲ್ಲದೇ ನೇರ - ಸರಳ ಮಾತಿನ ಕಾವ್ಯ.

೧೨

೧೯೦೭ರಷ್ಟೊತ್ತಿಗೆ ಎಲ್ಲೆಡೆ ಹೊಸಗಾಳಿ. ಪ್ರಕಾಶನ ಸಂಸ್ಥೆಗಳು ನಾಯಿಕೊಡೆಗಳಂತೆ ತಲೆಯೆತ್ತಿದವು. ಹೊಸ ಸಂಗೀತದ ಆಲಾಪದ ಅಲೆ ಹರಡಿತು, ಕಲಾ ಪ್ರದರ್ಶನ ಸಂಸ್ಥೆಗಳು ಹುಟ್ಟಿಕೊಂಡದ್ದೂ ಆಗಲೇ...

ಆ ದಿನಗಳು - ಈಗಿನಂತಲ್ಲ, ನಗರದಿಂದ ಹೊರಹೋದರೆ ಎಲ್ಲರಿಗೂ ಬಹುಬೇಗ ಗೊತ್ತಾಗಿಬಿಡುತ್ತಿತ್ತು. ಜತೆಗೆ ಹಳ್ಳಿಗಾಡಿನ ಬದುಕು ನಗರದ ವಾಸನೆಯಿಂದ ತುಂಬ ದೂರವಿದ್ದಂತಿತ್ತು..... ಮುಂಜಾನೆಯಿಂದ ಕತ್ತಲು ಕವಿಯುವವರೆಗೂ ಸಾರೋಟುಗಳ ಕಿಟಕಿಯನ್ನು ಹಾಳುನೆಲ ತುಂಬಿ ಕೊಂಡಿರುತ್ತಿತ್ತು. ಅಲ್ಲಿ-ಇಲ್ಲಿ ಚಾಚಿಕೊಂಡ ಹಳ್ಳಿಗಳ ಒಡಲನ್ನು ಹಲವೊಮ್ಮೆ ಹಿಂಗಾರಿನ ಬೆಳೆ ತುಂಬಿಸಲು ಅಶಕ್ತವಾಗುತ್ತಿತ್ತು. ಕಣ್ಣು ಹಾಯಿಸಿದಲ್ಲೆಲ್ಲ ಸಾವಿರಾರು ಮೈಲಿ ಹಾಳು ಜಮೀನು. ರಷ್ಯಾದ ನಗರದ ಬದುಕನ್ನು ಹಸನು ಮಾಡಲು ಶ್ರಮಿಸುವ ಹಳ್ಳಿಗಳು, ಉತ್ತಿ ಬೆಳೆಗಾಗಿ ಕಾದ ನೆಲ. ಚಳಿಗಾಲದ ಆರಂಭದ ಹೆಪ್ಪುಗಟ್ಟಿದ ಹಿಮ ನೆಲಕ್ಕೆ ಬೆಳ್ಳಿಕಟ್ಟು ಹೊಡೆದಂತೆ, ಪೂರ್ತಿ ಎಲೆಯುದರದ

ಬಂಗಾರಬಣ್ಣದ ಬರ್ಚ್‌ಮರದ ಸಾಲು ಭೂಮಿಯ , ಸೀಮಾರೇಖೆ ಗುರುತಿಸುವಂತೆ ಗೋಚರಿಸುತ್ತಿದ್ದವು. ಬೆಳ್ಳಿ ಹಿಮ - ಬಂಗಾರದ ಬರ್ಚ್‌ಮರಗಳ ರೇಖಿನ ಚೌಕಟ್ಟಿನಿಂದ ಅಲಂಕರಿಸಿದ ಆದರಣೀಯ - ಮುಗ್ಧ ನೆಲ - ಗತಕಾಲದ ಸ್ಮಾರಕದಂತೆ ಕಾಣುತ್ತಿತ್ತು.

ಇದೀಗ ಸಾರೋಟಿನ ಕಿಟಕಿಯಿಂದ ನೋಡಬಹುದಾದ, ದಣಿವಾರಿಸಿ ಕೊಳ್ಳುವಂತೆ ಕಾಣುವ ಉತ್ತಿದ ಭೂಮಿಗೆ ಬಹುಶಃ ಗೊತ್ತಿರಲಿಕ್ಕಿಲ್ಲ. ಇಲ್ಲೇ ಒಂದು ಕಲ್ಲು ಬೀಸಿದರೆ ಹೋಗಿ ಬೀಳುವಷ್ಟು ಹತ್ತಿರದಲ್ಲೇ, ಆಕೆಯ ಶ್ರೇಷ್ಠ ನಾಯಕನೊಬ್ಬ ಅಸುನೀಗಿದನೆಂದು. ಆತನ ಪುರಾತನ ಜಹಗೀರಿಯಿಂದ ಆಕೆಯನ್ನಾತ ಆಳಬಹುದಿತ್ತು. ಆತನ ಅನೇಕ ಭಟ್ಟಂಗಿಗಳಿಂದ ಭೋಪರಾಕು ಹೇಳಿಸಿಕೊಂಡು ಅವರೆಲ್ಲರಿಗೂ ಮೆಚ್ಚಿನವನಾಗಬಹುದಿತ್ತು. ಆದರೆ ಜಗತ್ತು ನೀಡುವ ಎಲ್ಲ ಸೂಕ್ಷ್ಮತೆಯ ಗಣಿಯಾದ, ಧರ್ಮನಿಷ್ಠನಾದ ಆತ ಈ ನೆಲವನ್ನು ಸದಾ ಪ್ರೀತಿಸುತ್ತಿದ್ದ, ಸಜ್ಜನನಾದ. ರೈತರು ತೊಡುವ ಸಾಧಾರಣ ಕುಡತಿ ತೊಟ್ಟು ಇದೇ ನೆಲದ ತುಂಬ ಓಡಾಡಿದ್ದ.

೧೩

ತೀರಿಹೋದವರ ಶರೀರ ತೆಗೆದುಕೊಂಡು ಹೋಗುತ್ತಾರೆಂದು ಎಲ್ಲ ಕಡೆ ಸುದ್ದಿ ಹರಡಿರಬೇಕು. ಜನ ಪ್ರವಾಹದಂತೆ ಸೇರತೊಡಗಿದರು. ಅಷ್ಟರಲ್ಲಿ ಶಿಲ್ಪಿಯೊಬ್ಬ ತೀರಿಹೋದವರ ಮುಖವನ್ನೊಮ್ಮೆ ಸ್ಪಷ್ಟವಾಗಿ ನೋಡಲು ಮೆರ್ಕುರೋವ್ ರೊಂದಿಗೆ ಬಂದ. ಅಂತಿಮ ನಮನ ಸಲ್ಲಿಸಲು ಬಂದವರನ್ನೆಲ್ಲಾ ಕೋಣೆಯಿಂದ ಹೊರಗೆ ಕಳಿಸಲಾಯ್ತು. ನಾವು ಒಳಹೋದಾಗ ಎಲ್ಲ ಖಾಲಿಯಾಗಿತ್ತು. ಒಂದು ಮೂಲೆಯಲ್ಲಿ ಕಣ್ಣೀರು ಹಾಕುತ್ತ ನಿಂತಿದ್ದ ಸೋಫಿಯಾ ಅಂದ್ರೆಯೆವ್ನಾ ತಂದೆಯವರನ್ನು ನೋಡಿ ನಮ್ಮ ಕಡೆ ನಡೆದುಬಂದು ತಂದೆಯ ಕೈಗಳನ್ನು ಹಿಡಿದು ಕೊಂಡು ಒತ್ತುತ್ತ ಕಣ್ಣೀರು ತುಂಬಿಕೊಂಡು ನಡುಗುವ ದನಿಯಲ್ಲಿ ಹೇಳಿದಳು : ' ಓ ಲಿಯೊನಿದ್ ಎಂಥ ಗತಿ ಬಂತು ನನಗೆ ! ನಾನು ಆತನನ್ನು ಎಷ್ಟು ಹಚ್ಚಿಕೊಂಡಿದ್ದೆಯೆಂದು ನಿನಗೆ ಗೊತ್ತು !' ನಂತರ ಸೋಫಿಯಾ ನಿಧಾನಕ್ಕೆ ತಾನು ಆತ್ಮಹತ್ಯೆಗೆ ಯತ್ನಿಸಿದ್ದು, ಟಾಲ್‌ಸ್ಟಾಯ್ ಹೋದನಂತರ ಕೊಳದಿಂದ ಹೊರಬಿದ್ದ ಅರೆಸತ್ತ ಮೀನಿನಂತೆ ಒದ್ದಾಡಿದ್ದು.... ಹೇಳಿದಳು.

ಕೋಣೆ ಕಿಕ್ಕಿರಿದಿತ್ತು. ಸಂಬಂಧಿಗಳು, ಹೊರಗಿನ ಜನ, ಮಡುಗಟ್ಟಿದ ದುಃಖದ ಮೋಡ, ಬೆಟ್ಟದಂತೆ ಮಲಗಿದ ವ್ಯಕ್ತಿ. ಸೋಫಿಯಾಳಿಗೆ ಈ ಹೆಪ್ಪುಗಟ್ಟಿದ ಮೌನದಲ್ಲಿ ತಾನೊಂದು ಸಿಡಿಲು ಎಂದು ಗೊತ್ತಾಗಲಿಲ್ಲ. ಟಾಲ್‌ಸ್ಟಾಯ್‌ರನ್ನು ಪ್ರೀತಿಸುವ ಜನರೊಂದಿಗೆ ಒಡಪಿನ ಮೌನದೊಂದಿಗೆ ವ್ಯವಹರಿಸಬೇಕೆಂದು ಗೊತ್ತಿರಲಿಲ್ಲ. ಹುಚ್ಚುಹುಚ್ಚಾಗಿ ವರ್ತಿಸಿ, ಜನರೊಡನೆ ಸಣ್ಣಪುಟ್ಟ ಜಗಳ ದ್ವೇಷದೊಂದಿಗೆ ಸದಾ ಕಿರಿಕಿರಿ ಮಾಡುತ್ತಿದ್ದಳು. ಆಕೆ ನನ್ನ ತಂದೆಯೆದುರಿಗೆ ತನ್ನ ವೈರಿಗಳನ್ನು ಅತಿ ಜಾಣ್ಮೆ ಕುಶಲತೆಯಿಂದ ಸದೆಬಡಿದು ಆ ಟಾಲ್‌ಸ್ಟಾಯ್‌ರನ್ನು ತನ್ನ ವೈರಿಗಳಿಗಿಂತ ಚೆನ್ನಾಗಿ ನೋಡಿಕೊಂಡೆ ಎಂದು ಬೀಗುತ್ತಿದ್ದಳು. ಮನಸ್ಸಿನಲ್ಲೇ ನಾನಂದುಕೊಂಡೆ - 'ದೇವರೆ, ಮನುಷ್ಯ ಎಷ್ಟೆಲ್ಲಾ ನೀಚತನಕ್ಕೆ ಇಳಿಯಬಹುದು -ಈಕೆಗಿಂತ ? ಟಾಲ್‌ಸ್ಟಾಯ್‌ರ ಈ ಹೆಂಡತಿಗಿಂತ ?... '

೧೪

ಚಿಕ್ಕಹಳ್ಳಿಯಾದ ಅಸ್ತಪೊವೊ, ಆ ನಿರ್ದಿಷ್ಟ ದಿನ ಜಗತ್ತಿನ ಎಲ್ಲ ಪತ್ರಕರ್ತರಿಂದ ತುಂಬಿ ಗಿಜಿಗಿಡುತ್ತಿತ್ತು. ಸ್ಟೇಶನ್ನಿನಲ್ಲಿದ್ದ ಹೊಟೇಲಿನ ಮಾಣಿಗಳಿಗೆ ಜನರ ತಿಂಡಿ-ತೀರ್ಥ ಊಟ ಕೊಡಲು ಎರಡು ಕೈ-ಕಾಲು ಸಾಕಾಗುತ್ತಿರಲಿಲ್ಲ. ಅಂದು ಹೊಟೇಲ್ಲಿಗೆ ಭರ್ಜರಿ ವ್ಯಾಪಾರ. ಮಾದಕ ಪಾನೀಯ ಹೊಳೆಯಂತೆ ಹರಿಯುತ್ತಿತ್ತು.

ಟಾಲ್‌ಸ್ಟಾಯ್ ಮಕ್ಕಳಾದ ಇಲ್ಯಾ ಮತ್ತು ಅಂದ್ರೆಯಿ ನಿಲ್ದಾಣದಲ್ಲಿದ್ದರು. ನಂತರ ಅವರನ್ನು ರೈಲಿನಿಂದ ಬಂದಿಳಿದ ಸರ್ಗೆಯಿ ಕೂಡಿಕೊಂಡ. ರೈಲು ಟಾಲ್‌ಸ್ಟಾಯ್ ಶರೀರವನ್ನು ಯಸ್ನಯಾ ಪೊಲ್ಯಾನ್‌ಗೆ ಕೊಂಡೊಯ್ಯಲಿತ್ತು.

ಸೇರಿದ್ದ ಜನ, ವಿದ್ಯಾರ್ಥಿಗಳು 'ಚಿರಂತನ ನೆನಪು 'ಹಾಡುತ್ತಿದ್ದರು. ಅಲ್ಲಿಂದ ಟಾಲ್‌ಸ್ಟಾಯ್‌ರ ಕಫನ್ನನ್ನು ಹೊತ್ತು ನಿಲ್ದಾಣದ ತೋಟದ ಗುಂಟ ಒಯ್ದು ಅದಕ್ಕಾಗಿ ಕಾದಿದ್ದ ವಿಶೇಷ ರೈಲಿನಲ್ಲಿಡಲಾಯಿತು. ಜನರೆಲ್ಲ ಎತ್ತರದ ದನಿಯಲ್ಲಿ ತಲೆಬಾಗಿಸಿ ಹಾಡತೊಡಗಿದಂತೆ ರೈಲು ನಿಧಾನಕ್ಕೆ ತೂಲಾದ ಕಡೆಗೆ ಚಲಿಸತೊಡಗಿತು.

ಟಾಲ್‌ಸ್ಟಾಯ್‌ರು ಈ ಪ್ರಯಾಣದಲ್ಲಿ ಮೌನವಾಗಿದ್ದುದು ಸಹಜವಾಗಿತ್ತು. ಆಗ ರಷ್ಯಾದ ಮುಖ್ಯಮಾರ್ಗಗಳೆಂದು ಕರೆಯಿಸಿಕೊಂಡಿದ್ದ, ಈಗಿನ ಕಿಷ್ಕಿಂದ ನಿಲ್ದಾಣಗಳನ್ನು ನಿರಂತರ ಯಾತ್ರಾರ್ಥಿಯಂತೆ ಸಂಚರಿಸುತ್ತಿದ್ದ, ತನ್ನ ನಾಯಕ-ನಾಯಕಿಯನ್ನು ಸೃಷ್ಟಿಸಿ ಅವರನ್ನು ಚಿರಂತನರನ್ನಾಗಿಸಿದ್ದ ಟಾಲ್‌ಸ್ಟಾಯ್‌ರ ಕಣ್ಣುಗಳು ಎಂದೆಂದಿಗೂ ಮುಚ್ಚಿಕೊಂಡಿದ್ದವು.

೧೫

ತನ್ನ ಸಮಕಾಲೀನ ಬರಹಗಾರರಿಂದ ಭಿನ್ನ ಎನ್ನಲು ಬರಹಗಾರನ ಯಾವ ಮುಖ್ಯ ಗುಣವನ್ನು ನಾವು ತೆಗೆದುಕೊಳ್ಳುವುದು ? ಲೆರ್ಮಂತೋವ್‌ನ ಉತ್ಕಟತೆ, ತ್ಯುಚೆವ್‌ನ ಶ್ರೀಮಂತ ವಸ್ತುವಿನ್ಯಾಸ, ಚೆಕಾಫ್‌ನ ಬಡತನದ ಬೇಗೆಯ ಚಿತ್ರಣ, ತುರ್ಗನೇವ್‌ನ ಮನಸೆಳೆವ ಶೈಲಿ, ಅಥವಾ ದಸ್ತಯೆವ್‌ಸ್ಕಿಯ ಅದ್ಭುತ ಕಲ್ಪನಾ ಜಗತ್ತು ? ಟಾಲ್‌ಸ್ಟಾಯ್‌ರನ್ನು ಹೀಗೆ ನಿರ್ದಿಷ್ಟವಾಗಿ ಗೆರೆಕೊರೆದು ನೋಡಿದಾಗ ಅವರ ಕೃತಿಗಳಲ್ಲಿ ಎದ್ದು ಕಾಣುವುದೇನು?

ನೈತಿಕ ಎಚ್ಚರದ, ಶುದ್ಧ ಬಾಳುವೆಯ ಪ್ರತಿಪಾದನೆ, ಎತ್ತರದ ಆಲೋಚನೆಯ ಟಾಲ್‌ಸ್ಟಾಯ್‌ರ ಬರಹದ ಮುಖ್ಯಗುಣ -ಎಲ್ಲ ಸಾಧ್ಯತೆಗಳನ್ನೊಳಗೊಂಡೂ ಯಾವುದೇ ಮಹತ್ತರ ಆಕಾಂಕ್ಷೆಯಿಲ್ಲದ, ಅತಿ ಆಶಾಪೂರಣೆಯಿಲ್ಲದ ನಿಚ್ಚಳವಾಗಿ ಸಕಲವನ್ನೂ ಕಾಣಿಸುವ ಬರಹದ ಶಕ್ತಿ. ಅವರ ಸ್ವಂತಿಕೆ ಇತರರಲ್ಲಿ ಕಾಣದ್ದು, ಬೇರೆ ಬಗೆಯದು. ಪ್ರಚಲಿತ ವಿರೋಧಾಭಾಸಗಳಿಂದ ಕೂಡಿದ್ದು.

ಟಾಲ್‌ಸ್ಟಾಯ್ ತಮ್ಮ ಬದುಕಿಡೀ ಎಲ್ಲ ಕ್ಷಣದಲ್ಲೂ ಪ್ರತಿಯೊಂದನ್ನೂ ಬದುಕಿನ ಅಂತಿಮ ಸತ್ಯದ ಘಳಿಗೆಯೊಂದಿಗೆ ನಿಕಷಕ್ಕೊಡ್ಡಿ ನೋಡಲು ಸಮರ್ಥ ರಾಗಿದ್ದರು. ಇಂಥ ಛಾಯಾರೂಪ ನಾವೆಲ್ಲ ಬದುಕಿನ ಬಾಲ್ಯದ ನಿಷ್ಕಲ್ಮಶ ಗಳಿಗೆಗಳಲ್ಲಷ್ಟೇ ನೋಡುತ್ತೇವೆ. ಹಾಗೆ ಕಣ್ತೆರೆದು ನೋಡುವಲ್ಲಿ ಆರ್ದ್ರತೆ ತುಂಬಿದ ಮನಸ್ಸು ಬೇಕು. ಈ ನಿಷ್ಕಲ್ಮಶ ಮನಸ್ಸು ಪ್ರತಿಯೊಂದನ್ನು ಹಿಂದೆಂದಿಗಿಂತ ನಿಚ್ಚಳವಾಗಿ ಕಾಣುವಂತೆ ಮಾಡುತ್ತದೆ.

ಈ ಇಂಥ ಆರ್ದ್ರತೆ, ನಿಷ್ಕಲ್ಮಶತೆ, ಸೃಷ್ಟಿಶೀಲತೆಯ ಮೂಲವಾದ ಮುಗ್ಧತೆ ಟಾಲ್‌ಸ್ಟಾಯ್‌ರಲ್ಲಿ ಮನೆ ಮಾಡಿತ್ತು. ಈ ಇಂಥ ಪ್ರೀತಿ ತುಂಬಿದ ಮನಸ್ಸಿನಿಂದಲೇ ಅವರು ಬದುಕಿನ ಎಲ್ಲ ಮೂಲಗಳನ್ನು ಅದರ ಅತ್ಯುತ್ತಮತೆಯಲ್ಲಿ ಹಿಡಿದಿಟ್ಟಿದ್ದರು, ಹೊಚ್ಚಹೊಸತೆಂಬಂತೆ. ಟಾಲ್‌ಸ್ಟಾಯ್ ಕಂಡ ಬದುಕಿನ ಮೂಲ ಲಕ್ಷಣಗಳು ಬೇರೆ ದೃಷ್ಟಿಯಿಂದ ಅದನ್ನು ಕಂಡ ನಮಗೆಲ್ಲ ವಿಚಿತ್ರವಾಗಿ ಕಾಣಿಸಬಹುದು. ಆದರೆ ಟಾಲ್‌ಸ್ಟಾಯ್‌ರಿಗೆ ಇದು ವೈಚಿತ್ರ್ಯವೆಂದೆನಿಸಿರಲಿಲ್ಲ. ಅದು ಅವರ ಗುರಿಯೂ ಆಗಿರ ಲಿಲ್ಲ. ಜತೆಗೆ ಅವರಿಗೆ ಈ ವೈಚಿತ್ರ್ಯ - ವೈರುಧ್ಯ ಸಾಹಿತ್ಯದ ತಂತ್ರವೂ ಆಗಿರಲಿಲ್ಲ.

(An Autobiographical Sketch' ನಿಂದ)

ಲೇಖನ

ಬಿಡಿ ಬಿಡಿ ಚಿಂತನೆಗಳು

೧

ಅನುಭಾವ, ಚಿತ್ರಕಲೆ, ರಂಗಭೂಮಿಯ ಕುರಿತು ನಾನು ಮಾತನಾಡುವಾಗಲೆಲ್ಲ ಯಾವ ಒತ್ತಡಕ್ಕೂ ಒಳಗಾಗದ, ಮುಕ್ತ ಮನಸ್ಸಿನ, ಅಂತಃಕರಣ ತುಂಬಿದ ಹವ್ಯಾಸಿಯೊಬ್ಬ ತನ್ನನ್ನು ಚರ್ಚೆಯಲ್ಲಿ ತೊಡಗಿಸಿಕೊಳ್ಳುತ್ತಾನಲ್ಲ, ಹಾಗಿರುತ್ತೇನೆ.

ಆದರೆ ಅದೇ ಮಾತುಕತೆ ಸಾಹಿತ್ಯದ ಕಡೆಗೆ ಹೊರಳಿದಾಗ, ನನ್ನ ಆಲೋಚನೆಯ ಒತ್ತೆಲ್ಲಾ ಪುಸ್ತಕದ ಮೇಲೆ ಬಿದ್ದು, ಪುಸ್ತಕದ ಕುರಿತು ಒಂದು ಅಭಿಪ್ರಾಯಕ್ಕೆ ಬಂದು ಮುಟ್ಟುವ ಮನಸ್ಥಿತಿಯನ್ನು ಕಳೆದುಕೊಂಡು ಬಿಡುತ್ತೇನೆ. ಆಗೆಲ್ಲ ಯಾರಾದರೂ ಮುಂದೆ ತಳ್ಳಬೇಕಾಗುತ್ತದೆ. ಅದೊಂದು ಬಲವಂತ ಮಾಘಸ್ನಾನದ ಅಪ್ರಜ್ಞಾಸ್ಥಿತಿ, ದೈಹಿಕವಾಗಿ ಈ ಲೋಕದಲ್ಲಿ ಇಲ್ಲದಂತೆ. ಆಗಲೂ ಮನಸ್ಸಿಲ್ಲದ ಮನಸ್ಸಿನಿಂದ ಮಾತುಕತೆಯಲ್ಲಿ ಪಾಲ್ಗೊಳ್ಳುವ ಪರಿಸ್ಥಿತಿ. ಪುಸ್ತಕವೊಂದನ್ನು ಬಿಟ್ಟು ಈ ಜಗತ್ತಿನ ಬೇರೆ ಯಾವ ವಸ್ತುವಾದರೂ ಸರಿ ಮಾತಾಡಬಹುದು - ರಂಗಭೂಮಿಯ ಸಾಧ್ಯತೆ, ಕವಿಗಳು, ಶಾಲೆ..... ಇತ್ಯಾದಿ.

ನನಗೆ ಯಾವ ಕಡ್ಡಾಯ ಒಪ್ಪಂದ, ಅಭಿಪ್ರಾಯಗಳಿಲ್ಲ. ಹಾಗಾಗಿ ನನ್ನದೇ ಯೋಚನೆ ತುಂಬಿಕೊಂಡಿರುವ, ನನ್ನ ಹವ್ಯಾಸಿ ಅಂತಃಕರಣದ ಮನಸ್ಸಿನೊಳಗೆ, ಪ್ರತಿಯೊಬ್ಬರೂ ಸರಳವಾಗಿ ಪ್ರವೇಶಿಸಬಹುದು.

೨

ಇತ್ತೀಚಿನ ಚಳವಳಿಗಳು, ಕಲೆ : ಭಾವುಕವಾಗಿದ್ದಾಗ ಚಿಮ್ಮುವ ಕಾರಂಜಿ ಎಂದು ನಂಬಿಸುತ್ತಿವೆ. ಅಂಥ ಒಲವಿನವರೆಲ್ಲ ಕಲೆ ಎಲ್ಲವನ್ನೂ ತುಂಬಿತುಂಬಿ ತೋಯಿಸಬೇಕು ಎಂದು ನಿರ್ಧರಿಸಿಬಿಟಿದ್ದಾರೆ. ಸೃಜನಶೀಲತೆಗೆ ಶಬ್ದ ರಸ ರುಚಿ ಸ್ಪರ್ಶವಿರುವುದರಿಂದ ಅದನ್ನು ಖಚಿತವಾಗಿ ವರ್ಣಿಸಬಹುದೆಂಬ ನಿರ್ಣಯವನ್ನೂ ಇವರೆಲ್ಲ ತೆಗೆದು ಕೊಂಡಿದ್ದಾರೆ.

ಸೃಜನಶೀಲತೆ : ಯಾವಾಗಲೂ, ಎಲ್ಲದರ ಬಗೆಗೂ ತೆರೆದುಕೊಂಡಿದ್ದು; ಪರಿಶುದ್ಧವಾದ, ಅತ್ಯಂತ ಸೂಕ್ಷ್ಮವಾದ, ನಿಚ್ಚಳ ಪ್ರಾಮಾಣಿಕ ಅಭಿಪ್ರಾಯಗಳನ್ನು ದಾಖಲಿಸಬೇಕು. ಆದರೆ ನಮ್ಮ ಕಾಲದಲ್ಲಿ ಇದಕ್ಕೆ ವಿರುದ್ಧ ವಾತಾವರಣವಿದೆ. ಕಲೆ ಅಲಂಕಾರ ಕೋಣೆಯಿಂದ ಸುಣ್ಣ ಬಣ್ಣ ಮೆತ್ತಿಕೊಂಡು ಮೆರವಣಿಗೆ ಹೊರಡುತ್ತಿದೆ: ತನಗೆ ವ್ಯತಿರಿಕ್ತವಾದ ಇನ್ನೊಂದಿದೆ ಎನ್ನುವ ಬಿಂಕದಲ್ಲಿ! ಜಗತ್ತಿನಲ್ಲಿ ಎರಡು ಬಗೆಯ ಕಲೆಗಳಿವೆ ಎನ್ನುವ ಭಾವನೆ ಇದಕ್ಕೆ. ಒಂದು - ಸುಣ್ಣ ಬಣ್ಣಕ್ಕೆ ಮರುಳಾಗಿರುವ ತಾನು; ಇನ್ನೊಂದು - ತನ್ನಿಂದಾಗಿ ಆತ್ಮಹತ್ಯೆ ಕಡೆಗೆ ನಡೆದ ಎದುರಾಳಿ! ನಿಜವೆಂದರೆ, ತೆರೆಮರೆಯ ಹಿಂದೆ ಕವಿದ ಕತ್ತಲೆಯಲ್ಲಿ ಮುಖ ಮುಚ್ಚಿಕೊಂಡಿರಬೇಕಾದ ಇದು, ಭಾರಿ ಶೋಕಿಯಲ್ಲಿ ಕವಾಯತು ನಡೆಸುತ್ತದೆ. ಆಟ ಆಗಲೇ ಮುಗಿದುಹೋಗಿದೆ ಎನ್ನುವ ಅರಿವೂ ಇಲ್ಲದೆ ತೆಳು ತೆರೆಯ ನಡುವೆ ಸಿಕ್ಕಿಹಾಕಿಕೊಂಡು, ಯಾವುದೋ ರೋಗದಿಂದ ನರಳುವವರಂತೆ ಬಣ್ಣದಿಂದ ಬಿಳಿಚಿಕೊಂಡು ಮಂಕಾಗಿದೆ.

೩

ಒಂದು ಪುಸ್ತಕವೆಂದರೆ - ಬದುಕಿನಲ್ಲಿ ಎಲ್ಲ ಆಯಾಮಗಳನ್ನೂ ತನ್ನಲ್ಲಿ ಹೊಂದಿದ, ನಿಗಿನಿಗಿ ಪ್ರಜ್ಞೆಯಿಂದ ಹುಟ್ಟಿದ ವಸ್ತುವಲ್ಲದೆ ಬೇರೇನೂ ಅಲ್ಲ.

ಕಾಡು ನಮ್ಮನ್ನೆಲ್ಲ ತನ್ನತ್ತ ಕರೆಯುವುದೇ ಜೀವಜಾಲದ ಎಲ್ಲ ವಸ್ತು ಬದುಕುಳಿಯಲಿ ಎಂಬ ತನ್ನ ಆಶಯವನ್ನು ಖಚಿತಪಡಿಸಿಕೊಳ್ಳಲು. ನಮ್ಮ ಕಿವಿಗೆ ಕೇಳುವ ಸಂಗೀತ - ನಿಸರ್ಗದ ಚೈತ್ರದ ಕರೆ. ಹಾಗೆಂದೆ, ಪುಸ್ತಕ-ಕಾಡುಹಕ್ಕಿಯಾಗುತ್ತದೆ. ಅದಕ್ಕೆ ಬೇರೆ ಯಾವ ದನಿಯೂ ಆಲಿಸದು. ತನ್ನ ಕರೆ ತಾನೇ ಕೇಳುತ್ತ ಮೈಮರೆತ ಹಕ್ಕಿಯಂತೆ ಅದು.

ಪುಸ್ತಕಗಳಿಲ್ಲದೆ ಆಲೋಚನಾಶಕ್ತಿಯಿರುವ ಸಮಾಜ ಮುಂದುವರೆಯುವುದಿಲ್ಲ. ನಾಶವಾಗಿ ಬಿಡುತ್ತದೆ. ಪೂರ್ವಿಕ ವಾನರರಿಗೆ ಪುಸ್ತಕಗಳಿರಲಿಲ್ಲ. ಪುಸ್ತಕ ಭಾಷೆಯಲ್ಲಿ ಒಡಮೂಡಿ, ಅನುಭವ, ಅನುಭಾವ ಪಡೆಯುತ್ತ ಬೆಳೆಯುತ್ತದೆ. ಬೆಳೆದು ಪೂರ್ಣಫಲವಾದುದನ್ನು ನಾವು ಕಾಣುತ್ತೇವೆ. ಕೆಟ್ಟ ಪುಸ್ತಕವನ್ನು ಓದಿದಾಗ ಅದು ಪುಸ್ತಕದ ತಪ್ಪಲ್ಲವೆಂದು ತಟ್ಟನೆ ಅರಿವಾಗುತ್ತದೆ. ಇದು ಜಗತ್ತಿನ ಆಲೋಚನಾ ಕ್ರಮ.

ಬಹಳ ಹಿಂದೆಯೇನೂ ಅಲ್ಲ, ಮೊನ್ನೆ ಮೊನ್ನೆಯವರೆಗೆ ಮನುಷ್ಯ ಪುಸ್ತಕದ ಪಾತ್ರ, ದೃಶ್ಯಗಳೆಲ್ಲ ಕೇವಲ ರಂಗಭೂಮಿಗೆ ಸಂಬಂಧಿಸಿದ್ದು ಎಂದುಕೊಂಡಿದ್ದ. ಅದೊಂದು ಭ್ರಮೆಯಾಗಿತ್ತು. ಇಷ್ಟಕ್ಕೂ ಪುಸ್ತಕಗಳಿಗೇಕೆ ಇವೆಲ್ಲ ಬೇಕು ? ಹಾಗೆ ತಿಳಿದುಕೊಂಡವರೆಲ್ಲ - ನಮ್ಮೊಳಗಿನ ಅಧಿಕಾರ ದಾಹ ನಮ್ಮ ಆತ್ಮದ ದನಿಯನ್ನು ಬದುಕಿನ ಚೇತನವನ್ನು ದಮನ ಮಾಡುತ್ತದೆ ಎಂಬುದನ್ನು ಮರೆತಿದ್ದರು.

೪

ನಿಜವನ್ನು ಕಾಣುವುದು, ಆಡುವುದು ಮಾಡಲಾಗದಿದ್ದರೆ ಅದೊಂದು ಕೊರತೆಯೇ, ಅಯೋಗ್ಯತನವೇ. ಅದೆಂದೂ ಎಲ್ಲ ಚಾತುರ್ಯದಿಂದ ಆಡುವ ಕಪಟತನದ ಮಾತುಕತೆಯನ್ನು ಅಡಗಿಸಲಾರದು. ಪುಸ್ತಕ, ನೆನಪು ಹಾಗೂ ನಿಷ್ಕಲ್ಮಶ ಮನಸ್ಸಿನಿಂದ ಕಟ್ಟಿದ ಜೀವಂತ ಸೃಷ್ಟಿ. ಅಲ್ಲಿನ ಪಾತ್ರ, ದೃಶ್ಯಗಳೆಲ್ಲ ಕಳೆದ ಕಾಲದಿಂದ ಹೆಕ್ಕಿ ತಂದಂಥವು - ಯಾವತ್ತೂ ಮರೆಯದೆ, ನೆನಪಿಟ್ಟುಕೊಳ್ಳಲು ಕಟ್ಟಿದಂಥವು.

ಬದುಕು ಹುಟ್ಟಿದ್ದು ಬಹಳ ಹಿಂದೆ. ಕಲೆ ಮಾತ್ರ ಎಂದೂ ಗೆರೆ ಕೊರೆದಂತೆ ಹುಟ್ಟಲಿಲ್ಲ. ಅನಾದಿ ಕಾಲದಿಂದಲೂ ಅದಿತ್ತು. ನಾವು ಮಾತ್ರ ಎಂದೋ ಒಂದು ಕಾಲಕ್ಕೆ ಅದರ ಈಗಿನ ಬಂಧವನ್ನು ಕಂಡುಕೊಂಡೆವಷ್ಟೇ.

ಸೃಷ್ಟಿಕ್ರಿಯೆಗೆ ಕೊನೆಯೆಂಬುದಿಲ್ಲ. ಅದು ಈ ಕ್ಷಣದಲ್ಲಿ ನನ್ನೊಳಗೆ, ಹಿಂದೆ - ಮುಂದೆ ಎಲ್ಲೆಡೆ ಇದೆ. ದಿಢೀರನೆ ಒಳಾಂಗಣದಿಂದ ಕಾರಂಜಿಯಂತೆ ಚಿಮ್ಮಿ ತನ್ನ ನಿಬ್ಬೆರಗಾಗಿಸುವ ತಾಜಾತನದಿಂದ ನನ್ನನ್ನು ವ್ಯಾಪಿಸುತ್ತದೆ. ಸುತ್ತಿಕೊಳ್ಳುತ್ತದೆ. ಅದಕ್ಕೆ ಕಾಲವೆಂಬುದಿಲ್ಲ, ಆದರೂ ಆ ಕ್ಷಣಕ್ಕೆ ವಿಧೇಯನಾಗಿರುವ ಬಗ್ಗೆ ವಿಧಿಯುಕ್ತ ವಚನ ತೆಗೆದುಕೊಳ್ಳುತ್ತದೆ.

ನಿಜವಾದ ಪುಸ್ತಕಕ್ಕೆ ಮೊದಲ ಪುಟವೆಂಬುದಿಲ್ಲ ಕಾಡಿನ ಮರ್ಮರ ಹುಟ್ಟುವುದೆಲ್ಲಿ ಎಂದು ಯಾವ ದೇವರಿಗೆ ಗೊತ್ತು ? ಆದರೆ ಅದು ಹುಟ್ಟುತ್ತದೆ, ಬೆಳೆಯುತ್ತದೆ, ಉರುಳುತ್ತದೆ. ಕಗ್ಗಾಡಿನಲ್ಲಿ, ಇಳಿಜಾರು ಕಣಿವೆಯಲ್ಲಿ, ಕಾಳರಾತ್ರಿಯಲ್ಲಿ ಹೆಜ್ಜೆ ಹಾಕುತ್ತದೆ. ತುಂಬು ಖುಷಿಯ ಕಡುಯಾತನೆಯ ಗಳಿಗೆಯ ಕುರಿತು ಕಾಡಿನ ಎಲ್ಲ ಮರದ ಟೊಂಗೆಯ ಮೇಲೂ ನಿಂತ ಒಂದೊಮ್ಮೆ ಮಾತಾಡುತ್ತದೆ. ತನ್ನ ಗೊತ್ತು-ಗುರಿ ಮುಟ್ಟುತ್ತದೆ.

೫

ತಪ್ಪು ತಿಳುವಳಿಕೆ ಉಂಟಾಗುವುದು ಸಹಜ, ಅವನ್ನೆಲ್ಲ ದೂರವಿರಿಸಬೇಕು. ಇದೀಗ ಸುದೀರ್ಘ ಬೇಸರಕ್ಕೆ ಕಾಣಿಕೆ ಸಲ್ಲಿಸುವ ಕಾಲ.

ಜನ ಹೇಳುತ್ತಾರೆ ಅರೆ ! ಕವಿ, ಬರಹಗಾರ....

ಅಲಂಕಾರ ಶಾಸ್ತ್ರ ಎನ್ನುವ ಯಾವ ಪ್ರತ್ಯೇಕ ಶಾಸ್ತ್ರವೂ ಇಲ್ಲ. ನನ್ನ ತಿಳುವಳಿಕೆಯಲ್ಲಿಲ್ಲದ, ಆದರೆ ಈಗ ಒಂದು ಶಿಕ್ಷೆ ಎನ್ನುವಂತೆ ಆಗಿ ಕೂತಿರುವ ಈ ಶಾಸ್ತ್ರದ ಕುರಿತು ದಯೆ - ಕರುಣೆಯ ನೋಟ ಬೀರಿ, ವಿನಯದಿಂದಲೇ ಕಂಡೂ ಕಾಣದಂತಿರೋಣ. ಮನುಷ್ಯನ ಬಗೆಗೆ ಏನೇನೂ ಜ್ಞಾನವಿಲ್ಲದ ಈ ಶಾಸ್ತ್ರಗಳು ಪ್ರಕಾಢಗಳ ಕುರಿತು ಕಾಡುಹರಟೆಯಂಥ ಕಟ್ಟುಕತೆ ಕಟ್ಟಲಾರಂಭಿಸುತ್ತವೆ.

ಭಾವಚಿತ್ರ ಕಲಾವಿದ, ಪ್ರಕೃತಿ ಚಿತ್ರ ಕಲಾವಿದ, ಸ್ತಬ್ದಚಿತ್ರ ಕಲಾವಿದ, ನಿರ್ದಿಷ್ಟ ಪಂಥದ ಕಲಾವಿದ ? ನವೋದಯ, ಪ್ರಗತಿಶೀಲ, ನವ್ಯ? ಇಂಥ ಲೊಡಲೊಡ ಮಾತುಗಳು ಕುತ್ತಿಗೆ ಹಿಸುಕುವಂತಿರುತ್ತವೆ.

ಇವೆಲ್ಲ ವೈಜ್ಞಾನಿಕ ವಿಧಾನವೆಂಬುದು ನಿಚ್ಚಳ. ಈ ವಿಧಾನವೇ ಗಾಳಿಪಟದ ಕುಲಗೋತ್ರ ಹಾರುವ ಎತ್ತರ, ಕಟ್ಟಿದ ಬಾಲಂಗೋಚಿ ಇತ್ಯಾದಿಯನ್ನು ವರ್ಗೀಕರಿಸಿ ವಿವರಿಸುತ್ತದೆ.

ಕವಿತೆ : ಗದ್ಯ ಬರಹ ಒಂದೇ ಮುಖದ ಎರಡು ಕಣ್ಣು. ಸಾಹಿತ್ಯದ ಎರಡು ಆಧಾರ ಕಂಬಗಳು.

ಕವಿತೆ ತನ್ನ ಸ್ವಭಾವ ಸಹಜ ಕೇಳುವಿಕೆಯಿಂದ ನಿಸರ್ಗದಲ್ಲಡಗಿದ ಸ್ವರ ಮಾಧುರ್ಯ ಹುಡುಕಿ ಹೊರಡುತ್ತದೆ. ಪದಗಳೊಂದಿಗೆ ಆಟವಾಡಿ, ತಟ್ಟನೆ ಅವುಗಳ ಮೇಲೆ ಮಿಂಚು ಹರಿಸುವ ಕವಿತೆಯ ಸ್ವರವನ್ನು ಯಾರಾದರೂ ಕೈಗೆತ್ತಿಕೊಂಡರೆ ತನ್ನನ್ನು ತಾನೇ ಕೊಟ್ಟುಕೊಂಡು ರಾಗವನ್ನು ಮತ್ತಷ್ಟು ಮಧುರವಾಗಿಸುತ್ತದೆ.

ಗದ್ಯ : ತನ್ನ ಹುಟ್ಟು ಪ್ರತಿಭೆ,ಸ್ಫೂರ್ತಿಯಿಂದ ಭಾಷೆಯಲ್ಲಿ ಅನಾವರಣಗೊಳಿಸುವವನಿಗಾಗಿ ಶೋಧಿಸುತ್ತದೆ. ಕೆಲವೊಮ್ಮೆ ವಿಸ್ಮೃತಿಯಲ್ಲಿ ಕೊರಗುವ ಮನುಷ್ಯನನ್ನು ಹಳೆಯ ನೆನಪುಗಳತ್ತ ಕರೆದೊಯ್ದು, ಆತನನ್ನು ವರ್ತಮಾನದಲ್ಲಿ ನಿಲ್ಲಿಸಿ, ಮನುಷ್ಯ ಬದುಕಿನ ಒಳಿತಿಗಾಗಿ ನೋಟ ಹರಿಸುವಂತೆ

ಮಾಡುತ್ತದೆ. ಗದ್ಯ ಬರಹ - ಕವಿತೆಯ ನಿಯಮಗಳನ್ನೆಂದೂ ಬೇರೆ ಅಸ್ತಿತ್ವವೆನ್ನುವಂತೆ ನೋಡಲಾಗದು.

ಪೂರ್ಣಮಾಗಿದ ಕವಿತೆ : ನಿಸರ್ಗಕ್ಕೆ ಮುಖಕೊಟ್ಟು ನಿಲ್ಲುತ್ತದೆ. ಒಂದು ಕಾಲಕ್ಕೆ ಸಫಲವಾದ, ಅಂತ್ಯವಿಲ್ಲದ ಸಫಲತೆಯತ್ತ ನಡೆಯುತ್ತಿರುವ ವಾಸ್ತವ ಪ್ರಪಂಚವೂ ಕಲ್ಪನೆಯ ಕೂಸು. ಕನಸಿನಲ್ಲಿ, ನನಸಲ್ಲಿ ಯಾವ ಕಟ್ಟುಪಾಡಿಲ್ಲದೆ ಚಲಿಸುವ ಬದುಕು ಹಿಂದೆ-ಈಗ-ಮುಂದೆ ಯಾವಾಗಲೂ ನಿಜವೇ, ಅಗಾಧವೇ, ಅದರ ಆಕರ್ಷಣೆಯೂ ಅಪಾರ. ಇರುಳಿನ ನಂತರ ಬರಬೇಕಾದ ಬೆಳಗನ್ನು ಅದೆಂದೂ ನಿರಾಶೆಗೊಳಿಸದು. ಕವಿಗೆ ತನ್ನೆಲ್ಲವನ್ನು ಧಾರೆ ಎರೆದರೂ ಅದೊಂದು ಉದಾಹರಣೆ ನೀಡುವಂಥ ನಕಲು ಆಗಿರದು.

೬

ಹುಚ್ಚೆಂದರೆ - ವಿವೇಕವನ್ನು ನಂಬುವುದು. ಹುಚ್ಚೆಂದರೆ - ವಿವೇಕವನ್ನು ಪ್ರಶ್ನಿಸುವುದು. ಹುಚ್ಚೆಂದರೆ - ಮುಂದೆ ಬರುವ ಕಾಲವನ್ನು ಕನಸುವುದು. ಹುಚ್ಚೆಂದರೆ - ಮುಂಬರುವ ಕಾಲದ ಕಡೆ ಕಣ್ಣುಹಾಯಿಸದೆ ಬದುಕುವುದು. ಆಗೀಗಲಾದರೂ ನಮ್ಮ ಕಣ್ಣು - ಕಿವಿ ಅಗಲಿಸಿ ತೆರೆದಿಡಬೇಕು. ಕೊಳೆ ಕಸ ಧೂಳು ತುಂಬಿದ ಮನೆ- ಮಾಳಿಗೆ, ಗೋಡೆಗೆ ಮಿಂಚಿನ ಸುರುಳಿ ಬೆಳಕು ಹರಿಸುವ ನಿಸರ್ಗ ವೈಚಿತ್ರ ನೋಡಿ, ನಮ್ಮ ಒಳಮೈಯನ್ನೂ ತೆರೆದುಕೊಳ್ಳಬೇಕು. ಅನವರತ ನಮ್ಮ ಪ್ರಜ್ಞಾವಲಯವನ್ನು ಹಾದು ಹೋಗುವ ಬೆಳಕಿನ ಬಿರುಗಾಳಿ.... ಅದೇ, ಅಚ್ಚ ಹುಚ್ಚುತನ.

ಶುದ್ಧತೆಗಾಗಿ ಹಂಬಲಿಸುವುದು - ಸಹಜ.

ಹೀಗೆಯೇ ಕವಿತೆಯ ಶುದ್ಧ ಸತ್ವಕ್ಕಾಗಿ ನಾವು ಹಪಹಪಿಸುವುದು. ಆ ಹಂಬಲ ಬರಗಾಲದಿಂದ ಬೆಂಗಾಡಾದ ನೆಲದ ಮೇಲೆ ಸುತ್ತಿಸುತ್ತಿ ಬೀಸುವ ಚಂಡಮಾರುತದ ಹಾಗೆ ಮನಸ್ಸು ಕಲಕುತ್ತದೆ.

೧೯೧೯, ೧೯೨೨

[Random Thoughts]

ಗೆಳೆಯರಿಗೆ ಪತ್ರ

ನನ್ನ ನೆನಪಿನಿಂದ

ನನ್ನ 'ಸೇಫ್ ಕಂಡೆಕ್ಟ್ 'ಆತ್ಮ ವಿವರಣೆ ಪ್ರಕಟವಾದ ಮೇಲೆ ದಶಕಗಳ ಕಾಲ, ನಾನು ಅದನ್ನು ಮತ್ತೊಮ್ಮೆ ಮರುಮುದ್ರಣ ಮಾಡುವುದಾದರೆ ಅದರಲ್ಲಿ ಕಾಕ್‌ಸಸ್ ಹಾಗೂ ಇನ್ನಿಬ್ಬರು ಜಾರ್ಜಿಯನ್ ಕವಿಗಳ ಬಗ್ಗೆ ಒಂದು ಅಧ್ಯಾಯ ಸೇರಿಸುವ ಯೋಚನೆಯಿತ್ತು. ಸಮಯ ಕಳೆಯಿತು. ಆದರೆ ಪುಸ್ತಕದ ಮರುಮುದ್ರಣದ ಅಗತ್ಯ ಬೀಳಲಿಲ್ಲ. ಅದರಲ್ಲಿನ ಒಂದೇ ಕೊರತೆ ಈ ಅಧ್ಯಾಯ, ಅದನ್ನೀಗ ಬರೆಯುತ್ತಿರುವೆ.

೧೯೩೦ರಲ್ಲಿರಬೇಕು, ಪಾವೆಲೊ ಯಾಷಿವಿಲಿ ಹಾಗೂ ಆತನ ಪತ್ನಿ ಮಾಸ್ಕೋದ ನಮ್ಮ ಮನೆಗೆ ಭೇಟಿ ನೀಡಿದ್ದರು. ಯಾಷಿವಿಲಿ ಬುದ್ಧಿವಂತ ವ್ಯಕ್ತಿ, ಜಗತ್ತಿನ ಅತ್ಯಂತ ಸುಸಂಸ್ಕೃತ , ಜತೆಗೆ ಮನರಂಜಿಸುವ ಮಾತುಗಾರ. ಒಟ್ಟಿನಲ್ಲಿ ಎತ್ತರದ, ಆಕರ್ಷಕ, 'ಯೂರೋಪಿಯನ್'.

ಅವರ ಭೇಟಿಯ ನಂತರ ಇಬ್ಬರ ಕುಟುಂಬದಲ್ಲೂ ಬದಲಾವಣೆ - ಏರುಪೇರುಗಳಾದವು. ಇಬ್ಬರೂ ಖಾಸಾ ಸ್ನೇಹಿತರಾದೆವು. ಅವರ ಬದುಕಿನಲ್ಲಿ ಇಕ್ಕಟ್ಟಿಗೆ ಸಿಕ್ಕಾಗ ಅವರು ತುಂಬ ನೊಂದಿದ್ದರು. ಕೆಲವು ಕಾಲ ನನ್ನ ಸಂಗಾತಿಯಾಗಿದ್ದು, ನಂತರ ಎರಡನೆಯ ಪತ್ನಿಯಾಗಿದ್ದ ಜೆನ್ನೈದಾ ನಿಕೊಲೈವ್ನಾಳಿಗೂ ನನಗೂ ತಲೆಯ ಮೇಲೆ ಸೂರಿರಲಿಲ್ಲ. ಯೂಷಿವಿಲಿ ಟೆಫ್ಲಿಸ್‌ನಲ್ಲಿ ನಮಗೆ ಆಶ್ರಯ ಕಲ್ಪಿಸಿದ.

ಆ ವೇಳೆಯಲ್ಲಿ ಕಾಕ್ಸಸ್, ಜಾರ್ಜಿಯಾ, ಜಾರ್ಜಿಯಾದ ಜನ, ಹಲವು-ಕೆಲವು ಗೆಳೆಯರು ನನ್ನ ಆಪ್ತರಾದರು. ಎಲ್ಲ ಹೊಸತು, ಎಲ್ಲವೂ ಆಶ್ಚರ್ಯಕವಾಗಿತ್ತು. ಎಲ್ಲ ರಸ್ತೆಗಳಿಂದಲೂ ಕಾಣುವ, ತೂಗುವಂತೆ ತೋರುವ ಕಡು ಬೆಟ್ಟದ ಸಾಲು, ಇಲ್ಲಿಂದ 'ಟಿಫ್ಲಿಸ್'ನ ವಿಹಂಗಮ ನೋಟ. ಇಲ್ಲಿನ ಮೂಲ ನಿವಾಸಿಗಳು ಬಡವರು,

ಆದರೆ ಧೈರ್ಯಶಾಲಿಗಳು. ಉತ್ತರದವರಿಗಿಂತ ನಾಚಿಕೆ ಸ್ವಭಾವ. ಇಲ್ಲಿನ ಬದುಕು ಹೆಚ್ಚು ಖುಷಿಯಲ್ಲಿದ್ದಂತೆ, ಸರಳವಾಗಿದ್ದಂತಿತ್ತು. ಇಲ್ಲಿನ ಜನಸಮೂಹದ ಅನುಭಾವಿತನ, ಜನಪದ ದಂತಕತೆಗಳು, ಕ್ಯಾಥೋಲಿಕ್ ಪೋಲೆಂಡಿನಲ್ಲಿನಂತೆ, ಸಮೃದ್ಧವಾಗಿದ್ದವು. ಕಲ್ಪನೆಯನ್ನು ಹಿಗ್ಗಿಸುವಂತಿದ್ದವು - ಈ ವಾತಾವರಣದಲ್ಲೇ ಇಲ್ಲಿನ ಎಲ್ಲರನ್ನೂ ಕವಿಯನ್ನಾಗಿಸಿದ್ದವು. ಸಮಾಜದ ಮೇಲುವರ್ಗ ಆ ಕಾಲದಲ್ಲಿ ವಿರಳವೆನ್ನಿಸುವ ಸಂಸ್ಕೃತಿ, ಬೌದ್ಧಿಕತೆ ಮೈಗೂಡಿಸಿಕೊಂಡಿದ್ದರು. ಇಲ್ಲಿನ ಚೆಂದ ಕಾಣುವ ಕಟ್ಟಡಗಳು ಪೀತರ್ಸ್ ಬರ್ಗ್ ನೆನಪಿಗೆ ತರುತ್ತಿದ್ದವು. ಕೆಲವು ಮನೆಗಳ ಹೊರಗೆ, ನೆಲದಿಂದ ಮಹಡಿಗೆ ಸುತ್ತು ಬಳಸುವ ಮೆಟ್ಟಿಲು ಮಂಕರಿಯನ್ನೋ, ಕಿನ್ನರಿಯನ್ನೋ ನೆನಪಿಸುವಂತಿದ್ದವು. ನಗರ ಅತ್ಯಂತ ಚಿತ್ರಕವಾಗಿತ್ತು. ದೊಡ್ಡ ದೊಡ್ಡ ಮದ್ದಳೆಯ ಲಯಬದ್ಧ ಬಾರಿಸುವಿಕೆ ನೀವೆಲ್ಲೆ ಇದ್ದರೂ ಹಿಡಿಯಲು ಬರುವಂತಿರುತ್ತಿತ್ತು. ನಗರದ ದಕ್ಷಿಣಭಾಗದಲ್ಲಿ ರಾತ್ರಿ- ಆಕಾಶದಲ್ಲಿ ನಕ್ಷತ್ರಗಳು ಚೆಲ್ಲಿದಂತಿರುತ್ತಿದ್ದವು. ಹೂಗಳ ಸುಗಂಧದೊಂದಿಗೆ ಕಾಫಿಯ ವಾಸನೆ ಅಂಗಡಿಗಳಿಂದ ನುಗ್ಗಿ ಬರುತ್ತಿತ್ತು.

ಪಾವೆಲೋ ಯಾಷಿವಿಲಿ ಸಂಕೇತವಾದಿ ಚಳವಳಿ ನಂತರದ ಗಮನಾರ್ಹ ಕವಿಯಾಗಿದ್ದ. ಆತನ ಕಾವ್ಯ ಸಮೃದ್ಧ ವಿವರಗಳಿಂದ, ಅತಿ ಸೂಕ್ಷ್ಮತೆಯಿಂದ ಕೂಡಿರುತ್ತಿತ್ತು. ಆಧುನಿಕ ಯೂರೋಪಿನ ಬೆಲಿ, ಹಾಮ್ಸನ್, ಪ್ರೌಸ್ಟ್‌ರ ಗದ್ಯ ಬರವಣಿಗೆಯನ್ನು ಪಾವೆಲೋ ಕಾವ್ಯ ಹೋಲುತ್ತಿತ್ತು - ಊಹಿಸದಂತಹ ಹೊಸತನ, ಖಚಿತವಾದ ಗ್ರಹಿಕೆ. ಇದೊಂದು ಸೃಜನಶೀಲ - ಅತ್ಯುತ್ಕೃಷ್ಟವಾದ ಕಾವ್ಯ. ಹುಬ್ಬು ಗಂಟಿಕ್ಕುವಂಥದ್ದಲ್ಲ. ಗಾಳಿಯಂತೆ ನಿರಾಳ. ಹತ್ತಿಯಂತೆ ಹಗುರ. ಮನಸ್ಸನ್ನು ತೇವವಾಗಿಸಿ, ಹಗುರಮಾಡುವಂಥದ್ದು.

ಮೊದಲ ಮಹಾಯುದ್ಧ, ವಿದ್ಯಾರ್ಥಿಯಾಗಿದ್ದ ಯಾಷಿವಿಲಿಯನ್ನು ಪ್ಯಾರಿಸ್‌ನಲ್ಲಿ ಕಟ್ಟಿಹಾಕಿತ್ತು. ಸುತ್ತು ಬಳಸಿ ತನ್ನ ದೇಶಕ್ಕಾಗಿ ಹಿಂತಿರುಗಿದ್ದ. ನಾರ್ವೆಯ ಕಗ್ಗಾಡಿನಂಥ ರೇಲ್ವೆ ನಿಲ್ದಾಣವೊಂದರಲ್ಲಿ ಹಗಲುಗನಸು ಕಾಣುತ್ತಿದ್ದ ಪಾವೆಲ್ ರೈಲು ತಪ್ಪಿಸಿಕೊಂಡಿದ್ದ. ಆದಾಗ ಮದುವೆಯಾಗಿದ್ದ ರೈತಕುಟುಂಬದ ನಾರ್ವೆ ದಂಪತಿಗಳು ಅಂಚೆ ವಿಚಾರಿಸಲು ನಿಲ್ದಾಣಕ್ಕೆ ಬಂದಾಗ, ಹಗಲುಗನಸಿನಲ್ಲಿ ಮೈಮರೆತವನ ಅವಸ್ಥೆ ನೋಡಿದರು. ಹೇಗೋ ಅರೆಬರೆ ಭಾಷೆಯಲ್ಲಿ ಪರಿಸ್ಥಿತಿ ಅರ್ಥ ಮಾಡಿಕೊಂಡು ಮುಂದಿನ ರೈಲು ಬರುವವರೆಗೆ ಪಾವೆಲ್‌ನನ್ನು ತಮ್ಮ

ತೋಟದ ಮನೆಗೆ ಕರೆದೊಯ್ದರು. ಯಾಷಿವಿಲಿ ಹುಟ್ಟು ಕಥೆಗಾರ. ಅದ್ಭುತವಾಗಿ ಸಾಹಸವನ್ನು ಚಿತ್ರಿಸುವವನು. ಕೇವಲ ಕಾದಂಬರಿಯಲ್ಲಷ್ಟೇ ಸಿಕ್ಕುವ ಘಟನೆಗಳನ್ನಾತ ಸ್ವಾರಸ್ಯದಿಂದ ನಿರೂಪಿಸಿದ್ದ. ಅದೃಷ್ಟ ಆತನ ಜೀವನದಲ್ಲಿ ಬಗೆಬಗೆಯಲ್ಲಿ ಕೈ ನೀಡಿತ್ತು. ಆ ದೃಷ್ಟಿಯಿಂದಾತ ಅದೃಷ್ಟವಂತ. ಆತನ ಜತೆಗಿದ್ದವರಿಗ್ಯಾರಿಗೂ ಆತನೊಬ್ಬ ಮಹಾನ್ ಪ್ರತಿಭಾವಂತನೆಂದು ಅನ್ನಿಸಿದಷ್ಟು ಸರಳನಾಗಿದ್ದ. ಆತನ ಕಣ್ಣು ಯಾವಾಗಲೂ ಆತನ ಆತ್ಮದ ಬೆಳಕಿಂದ ಝಗ ಝಗಿಸುತ್ತಿದ್ದವು. ಆತನ ತುಟಿ - ಅವನೆಲ್ಲ ಅಂತಃಕರಣ ಕೆನೆಗಟ್ಟಿದಂತಿದ್ದವು. ಅವನ ಮುಖ ಅನುಭವದಿಂದ ವಿಚಿತ್ರ ಬಗೆಯಲ್ಲಿ ಬಣ್ಣ ತುಂಬಿಕೊಂಡಿತ್ತು. ಹೀಗಾಗಿ ಹೆಚ್ಚು ವಯಸ್ಸಾದವನಂತೆ ಕಾಣುತ್ತಿದ್ದ. ಬಟ್ಟೆಗಳ ಬಗ್ಗೆ ತಲೆಕೆಡಿಸಿಕೊಳ್ಳದ, ಅಪರೂಪದ ವ್ಯಕ್ತಿ.

ನಾವು ಅಲ್ಲಿದ್ದಾಗ ತಾನೇ ನಾಯಕನಾದ ಗೆಳೆಯರ ಗುಂಪೊಂದನ್ನು ಮನೆಗೆ ಕರೆದಿದ್ದ. ಆದಿನ ಯಾರ್‍ಯಾರು ಬಂದಿದ್ದಾರೆಂದು ನೆನಪಿಲ್ಲ. ಪಾವೆಲ್‌ನ ಪಕ್ಕದ ಮನೆಯಾತ ಹಾಗೂ ಟೈಟಿಯಾನ್ ತಬಿಜೆ ದಂಪತಿಗಳು ಅಲ್ಲಿದ್ದುದು ಖಚಿತ.

ಆ ಕೋಣೆಯಲ್ಲಿ ನಾವು ಮೂವರೇ ಇದ್ದಂತೆನಿಸಿತ್ತು. ಅದನ್ನು ಹೇಗೆ ಮರೆಯಲಿ ? ಆ ಸಂಜೆ ಒಳಗೆ ಶೇಖರಣೆಗೊಂಡಿದ್ದ ದೊಡ್ಡ ಆಘಾತವೊಂದು ಮುಂದೆ ಸಂಭಾವಿಸಿ ನನ್ನ ಹೃದಯವಿದ್ದ ಭಾಗಕ್ಕೆ ತುಂಬ ನೋವನ್ನುಂಟು ಮಾಡುತ್ತೆಂಬುದರ ಸುಳಿವೂ ಇರಲಿಲ್ಲ.

ಆ ಇಬ್ಬರೂ ವ್ಯಕ್ತಿಗಳು ನನ್ನ ಬಳಿ ಏಕೆ ಬಂದರು ? ನಮ್ಮ ಸಂಬಂಧವನ್ನು ವಿವರಿಸುವುದು ಹೇಗೆ ? ಅವರಿಬ್ಬರು ನನ್ನ ಒಳಜಗತ್ತಿನ ಭಾಗವಾಗಿದ್ದರು. ಅವರಿಬ್ಬರನ್ನು ಬೇರೆ ಬೇರೆಯಾಗಿ ನೋಡಲು ನನಗೆ ಸಾಧ್ಯವೇ ಇರಲಿಲ್ಲ. ಏಕೆಂದರೆ ಅವರಿಬ್ಬರೂ ಸಮಕಾಲೀನರು - ಒಂದೇ ಆಗಿದ್ದವರು. ವಿಧಿ ಲಿಖಿತವೆಂದರೆ ಪಾವೆಲ್, ಟೈಟಿಯನ್ ಹಾಗೂ ಮರೀನಾ ತ್ಸ್ವೆತಯೇವಾ ನನ್ನ ಅತ್ಯಂತ ನೋವಿನ ಭಾಗವಾಗಲಿದ್ದರು.

ಪಾವೆಲ್ ಹೊರಗಿನಿಂದ ಕೇಂದ್ರವೃತ್ತಕ್ಕೆ ಜಿಗಿದರೆ, ಟೈಟಿಯನ್ ತಬಿಜೆ ಒಳಾವರಣಕ್ಕೆ ಮುಖಮಾಡಿದ್ದ. ಆತ ಇಟ್ಟ ಪ್ರತಿ ಹೆಜ್ಜೆ, ಬರೆದ ಸಾಲು ಆತನ ನಿಗಿನಿಗಿ ಆತ್ಮವನ್ನು ತೋರಿ, ಅವನ ಕಾಣ್ಕೆಯನ್ನು ಕಾಣಿಸುತ್ತಿತ್ತು. ಅವನ ಕಾವ್ಯದ

ಮುಖ್ಯ ಲಕ್ಷಣವೆಂದರೆ ಎಂದೂ ಮುಗಿಯದಂತಿದ್ದ, ಅವನೆಲ್ಲ ಕವಿತೆಗಳಲ್ಲಿ ಕಾಣುವ ಭಾವಗೀತಾತ್ಮತೆ , ಹಿಂದೆ ಹೇಳಿಲ್ಲದ ವಿಚಾರಗಳ ಅಭಿವ್ಯಕ್ತಿ. ಯಾರೂ ಮುಟ್ಟದ ಇಂಥ ಅನುಭಾವಿ ಸಂಗತಿ ಆತನ ಕಾವ್ಯಕ್ಕೆ ಹಿನ್ನೆಲೆಯೊದಗಿಸುತ್ತಿದ್ದವು. ಕವಿತೆಗೆ ಕಡುಚೆಲುವು ನೀಡುತ್ತಿದ್ದವು. ಅವನಲ್ಲಿ ಎಷ್ಟು ಆತ್ಮವಿತ್ತೋ ಅದನ್ನು ಕವಿತೆಯಲ್ಲೂ ಕಾಣಬಹುದಿತ್ತು. ಸಂಕೀರ್ಣವಾದ, ನಿಗೂಢ ಆತ್ಮ : ಒಳ್ಳೆಯದರೆಡೆ ಮುಖಮಾಡಿದ ಎಲ್ಲ ತ್ಯಾಗಕ್ಕೂ ಸಿದ್ಧವಾದ ಆತ್ಮ.

ಪಾವೆಲ್ ಯಾಷಿವಿಲಿಯನ್ನು ನೆನಸಿಕೊಂಡರೆ ನಗರದ ಬದುಕು ಕಣ್ಣು ಕಟ್ಟುತ್ತದೆ. ಕೋಣೆ, ವಾದ, ಸಾರ್ವಜನಿಕ ಸಭೆಯ ಭಾಷಣ, ತುಂಬಿ ತುಳುಕುವ ಸಭೆಯಲ್ಲಿನ ಅವನ ವಾಗ್ಝರಿ. ಟೈಟಿಯನ್ ನೆನಪಿಗೆ ಬಂದರೆ - ನಿಸರ್ಗ ಕಾಣುತ್ತದೆ. ಹಳ್ಳಿಗಾಡಿನ ಚಿತ್ರ ಕಟ್ಟುತ್ತದೆ. ಸ್ವತಂತ್ರವಾಗಿ ಅರಳುವ ಮೊಗ್ಗು, ಸಮುದ್ರದ ಅಲೆಗಳು- ಕಣ್ಣು ತುಂಬುತ್ತದೆ.

ಬೆಟ್ಟವನ್ನು ಮುತ್ತಿಕ್ಕಲು ಒಂದೇ ಗೆರೆಯ ಅಂತರದಲ್ಲಿ ಭಾರಿ ಮೋಡಗಳು ತೇಲುತ್ತಿದ್ದವು. ನಿರುಮ್ಮಳವಾಗಿ, ಗಟ್ಟಿಯಾಗಿ ನಗುವ ಕವಿಯೊಬ್ಬ ಬೆಟ್ಟ-ಮೋಡದೊಂದಿಗೆ ಬೆರೆತು ಹೋಗುತ್ತಾನೆ. ತುಸು ನಡುಗುವಂತೆ ನಡೆಯುವ ಭಂಗಿ ಅವನದು. ನಕ್ಕಾಗ ಮೈಯೆಲ್ಲ ಅಲಗುತ್ತದೆ. ಈಗ, ಕುರ್ಚಿಯಿಂದೆದ್ದು ಪಕ್ಕನಿಂತು ಕೈಯಲ್ಲಿದ್ದ ಲೋಟ ಟೇಬಲ್ಲಿಗೆ ಕುಕ್ಕುತ್ತಾನೆ, ಇದೀಗ ಆತ ಭಾಷಣ ಮಾಡಲಿದ್ದಾನೆ. ಯಾವಾಗಲೂ ಒಂದು ಭುಜದ ಮೇಲೆ - ಕೆಳಗೆ ಮಾಡುವುದರಿಂದ ಗೂಂಡಾನಂತೂ ಕಾಣುತ್ತಾನೆ.

ಕೊರ್ಝೋರಿಯಲ್ಲಿದ್ದ ಆತನ ಮನೆ ರಸ್ತೆಯ ತಿರುವಿನಲ್ಲಿದೆ. ರಸ್ತೆ, ಮನೆಯ ಮುಂದಿನಿಂದ ಶುರುವಾಗಿ ಮನೆಯ ಹಿಂಭಾಗಕ್ಕೆ ತಿರುಗುತ್ತದೆ. ಮನೆಯೊಳಗಿಂದ ಓಡಾಡುವುದನ್ನು ಕಾಣಬಹುದು.

ಬೆಲಿಯ ತಮಾಶೆಯ ಮಾತುಗಳಲ್ಲಿ, ಭೌತಿಕವಾದ ಉತ್ಸಾಹದಲ್ಲಿ ವಸ್ತುವನ್ನು ನಿಷೇಧಿಸಿಬಿಟ್ಟಿತು. ಉಡಲು-ಉಣ್ಣಲೂ ಏನೂ ಇಲ್ಲದಾಯ್ತು. ಸುತ್ತಮುತ್ತ ಏನೂ ಇಲ್ಲ- ಬರೀ ವಿಚಾರಗಳು. ಆದರೆ ಈ ವಿಚಾರದಲ್ಲಿ ಟೆಫ್ಲಿಸ್‌ನ ಗೆಳೆಯರಿಗೆ ಅತ್ಯಂತ ಕೃತಜ್ಞನಾಗಿರಬೇಕು. ಮಾಂತ್ರಿಕರು ಅವರು, ಯಾವಾಗಲೂ ಅಗತ್ಯವಾದುದನ್ನು ಪೂರೈಸುತ್ತಿದ್ದರು. ಪ್ರಕಾಶನ ಸಂಸ್ಥೆಗಳಿಂದ ಮುಂಗಡ ಹಣ

ತಂದು ನೀಡುತ್ತಿದ್ದರು, ಯಾವುದರ ಸುಳಿವೂ ನೀಡದೆ.

ಭೇಟಿಯಾದಾಗ ಹರಟುತ್ತಿದ್ದೆವು, ಉಣ್ಣುತ್ತಿದ್ದೆವು, ಒಬ್ಬರಿಗೊಬ್ಬರು ಏನಾದರೂ ಓದಿ ಹೇಳುತ್ತಿದ್ದೆವು. ತಂಗಾಳಿ, ಬೆಳಕು ಕೈಬೆರಳುಗಳೊಂದಿಗೆ ಆಡುತ್ತಿರುವಂತೆ ಗಿಡದ ಎಲೆಗಳೊಂದಿಗೆ ಆಡುತ್ತಿದ್ದೆವು. ಸುಗಂಧ ಹೊತ್ತು ತರುತ್ತಿದ್ದ ಗಾಳಿಗೆ ನನ್ನ ನೆಲದ ವಾಸನೆಯಿರುತ್ತಿತ್ತು.... ರಸ್ತೆಯಲ್ಲಿ ತಿರುಗುವ ಚಕ್ಕಡಿಯನ್ನು , ಮೋಟಾರನ್ನು ಒಳಗಿನಿಂದ ಹೋಗುವಾಗ- ಬರುವಾಗ ನೋಡಬಹುದಿತ್ತು. ಮನೆಯಲ್ಲಿ ಇಲ್ಲದಿದ್ದರೆ ಜಾರ್ಜಿಯನ್ ಮಿಲಟರಿ ರಸ್ತೆ, ಇಲ್ಲದಿದ್ದರೆ ಬರ್ಜೋಮ್, ಇಲ್ಲದಿದ್ದರೆ ಅಬಸ್ತಮನ್. ಅಥವಾ ಹಳ್ಳಿಗಾಡಿನ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುತ್ತಿದ್ದೆವು. ನಾನು ಹಲವೊಮ್ಮೆ ಲಿಯೊನಿದ್ ಮನೆಯಲ್ಲಿರುತ್ತಿದ್ದೆ. ಆತನೊಬ್ಬ ಅಸಲೀ ಕವಿ. ಭಾಷೆಯ ಅಗಾಧತೆಯೊಡನೆ ಚಕ್ಕಂದವಾಡುವವನು. ಆತನ ಭಾಷೆಯ ಬಳಕೆಯಿಂದಾಗಿ ಅವನ್ನು ಅನುವಾದಿಸಲಾಗಲಿಲ್ಲ.

ಒಂದು ಮಧ್ಯರಾತ್ರಿ - ಕಾಡಿನ ನಡುವೆ ಭೂರಿ ಭೋಜನ. ಚೆಂದದ ಅತಿಥೇಯರು. ಇಬ್ಬರೂ ಹುಡುಗಿಯರು. ಮರುದಿನ ಅನಿರೀಕ್ಷಿತವಾಗಿ ಕಿಂದರ ಜೋಗಿಯೊಬ್ಬ ಬಂದ. ಸರದಿಯಂತೆ ಎಲ್ಲರ ಗುಣಗಾನ ಮಾಡಿ ಹಾಡಿ, ರಂಜಿಸಿದ.

ಕೆಲವೊಮ್ಮೆ ಕಬುಲೇಟಿಯ ಸಮುದ್ರ ತೀರಕ್ಕೆ ಹೋಗುತ್ತಿದ್ದೆವು. ಮಳೆ - ಭಾರಿ ಅಲೆ. ಸಮುದ್ರ ! ನಾವಿದ್ದ ಹೊಟೇಲಿನಲ್ಲೇ ಮುಂದೆ ಗದ್ಯದಲ್ಲಿ ಸಿದ್ಧಹಸ್ತನಾಗಲಿದ್ದ, ಆಗಿನ್ನೂ ಯುವ ಕಮ್ಯೂನಿಷ್ಟ್ ಲೀಗ್‌ನಲ್ಲಿದ್ದ ಸೈಮನ್ ಚಿಕೋವ್ನ ನೆಲೆಸಿದ್ದ. ಭಾರಿ ಬೆಟ್ಟಗಳಾಚೆ ಕ್ಷಿತಿಜ. ನನ್ನ ಪಕ್ಕದಲ್ಲಿ ನಗುತ್ತ ನಡೆಯುತ್ತಿದ್ದ ಕವಿ. ಪ್ರತಿಭೆ ಕಳೆಯುಕ್ಕುತ್ತಿದ್ದ ಮುಖ, ಆತನ ನಗುವಿನಲ್ಲಿ ಮುಂದಿನ ವಿಷಾದದ ನೆರಳಿತ್ತೆ ? ಇದೀಗ ಮತ್ತೊಮ್ಮೆ, ಈ ಪುಟಗಳಲ್ಲಿ ಆತನಿಗೆ ಕೊನೆಯ ನೋವಿನ ವಿದಾಯ ಹೇಳುವೆ. ಆ ಕವಿಗೆ; ನನ್ನ ನೆನಪಿಗೆ ಕೈ ಬೀಸಿ ಕಳಿಸುತ್ತಿರುವೆ.

ಬೋರಿಸ್ ಪಾಸ್ತರ್‌ನಾಕ್

[I Remember]

ಪತ್ರಗಳು

(ಆನಾ ಅಖ್ಮತೋವಾಗೆ)

೨೮-೭-೧೯೪೯ ಪತ್ರ : ೧

ಪ್ರಿಯ ಆನಾ ಅಂದ್ರೆಯೆವ್ನ,

ಈ ಪತ್ರವನ್ನು ಎಷ್ಟೋ ದಿನಗಳಿಂದ ನನ್ನ ಮನಸ್ಸಿನೊಳಗೆ ಬರೆಯುತ್ತಲೇ ಇದ್ದೆ, ಹಾಗೂ ಎಷ್ಟೋ ಕಾಲದಿಂದ ಮನಸ್ಸಿನೊಳಗೆ ನಿನ್ನ ಇತ್ತೀಚಿನ ಸಂಕಲನ ಬಗ್ಗೆ ('ಇವಾ') ಶುಭಾಶಯಗಳನ್ನು ಹೇಳುತ್ತಲೇ ಇದ್ದೆ. ಸುತ್ತಮುತ್ತಲ ಜನ ಎರಡು ತಿಂಗಳಿಂದ ನಿನ್ನ ಪುಸ್ತಕದ ಬಗ್ಗೆಯೇ ಮಾತಾಡುತ್ತಿದ್ದಾರೆ.

ನಿನ್ನ ಪುಸ್ತಕದ ಪ್ರತಿ ನನ್ನಲ್ಲಿಲ್ಲ, ಫೆದಿನ್‌ನಿಂದ ಎರವಲು ಪಡೆದಿದ್ದೆ. ಪುಸ್ತಕದಲ್ಲಿ ಆತ ಮಾಡಿದ ಟಿಪ್ಪಣಿಯನ್ನು ಪರೀಕ್ಷಿಸಲು ಹೋಗಲಿಲ್ಲ. ಆದರೆ ನಾನು ಪ್ರತ್ಯೇಕವಾಗಿ ಟಿಪ್ಪಣಿಯನ್ನು ಮಾಡಿಕೊಂಡಿರುವೆ, ಹೊಸ ಪ್ರತಿ ಪಡೆದ ಮೇಲೆ ಎಲ್ಲವನ್ನೂ ಅದರೊಳಗೆ ನಕಲು ಮಾಡಬೇಕು.

ಪುಸ್ತಕ ಬಿಡುಗಡೆಯಾದಾಗ ಬೆನ್ನು ನೋವಿನಿಂದಾಗಿ ಆಸ್ಪತ್ರೆಯಲ್ಲಿದ್ದುದರಿಂದ, ಆ ಕ್ಷಣಕ್ಕೆ ಅದು ಉಂಟುಮಾಡಿದ್ದ ಪ್ರಭಾವವನ್ನು ಅನುಭವಿಸುವುದಾಗಲಿಲ್ಲ. ಪುಸ್ತಕದ ಪ್ರತಿಯನ್ನು ಪಡೆಯಲು ಬೀದಿಗುಂಟ ಜನ ಸಾಲಾಗಿ ನಿಂತದ್ದು, ಪಡೆದಾದ ಮೇಲೆ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಅದು ಓಡಾಡಿದ್ದು ಎಲ್ಲ ದಂತಕಥೆಯಂತಿವೆ. ಕೆಲವು ದಿನದ ಹಿಂದೆ ಭೇಟಿಯಾಗಲು ಬಂದಿದ್ದ ಅಂದೆಯಿ ಪ್ಲೊತನೋವ್ ಹೇಳುತ್ತಿದ್ದ - ಈಗಲೂ ಸಂಕಲನಕ್ಕೆ ಭಾರಿ ಬೇಡಿಕೆಯಿದೆಯಂತೆ. ಹಳೆಯ ಪ್ರತಿಗಳು ನೂರುಪಟ್ಟು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿವೆಯಂತೆ.

ನಿನ್ನತನ ತೋರಿಸಿದ ನಿನಗೆ ದೊರೆತ ಈ ಯಶಸ್ಸು ಆಶ್ಚರ್ಯಕರವೇನಲ್ಲ.

ಖುಷಿಯ ವಿಚಾರವೆಂದರೆ, ಒಂದು ಚಿಕ್ಕ ಕಾಲಾವಧಿಯಲ್ಲಿ ಉಂಟಾದ ಗೊಂದಲವನ್ನು ಮೀರಿ, ಈ ಭೂಮಿಯ ಮೇಲಿನ ಯಾರು ನಿರಾಕರಿಸದ ಹಾಗೆ ದೊರೆತ ಈ ಜಯ - ಪರಿಪೂರ್ಣವಾದುದ್ದೆಂಬುದು.

ಇದೀಗ ನಿನ್ನ ಹೆಸರು ಮತ್ತೊಮ್ಮೆ ಆಖ್ಮತೋವಾ-ನೀನೇ ವಿವರಿಸುವ ಪೀತರ್ಸ್‌ಬರ್ಗ್‌ನ ಉತ್ಕೃಷ್ಟತೆಯನ್ನು ತನ್ನೊಳಗೆ ಹುದುಗಿಕೊಂಡ ಹೆಸರು. ನಿನ್ನ ಪರಿಚಯವಾಗಿ, ನಿನಗೆ ಪತ್ರ ಬರೆಯುವ ಸುಯೋಗ ಒದಗಿ ಬರುತ್ತದೆಂಬುದನ್ನು ನಾನೆಂದೂ ಊಹಿಸಿರಲಿಲ್ಲ. ಅದೆಂದೂ ನನಗೆ ಆಶ್ಚರ್ಯವೇ. ಹಿಂದೆ ನಾನಂದು ಕೊಂಡದ್ದಕ್ಕಿಂತ ಪ್ರಬಲವಾಗಿ, ಪ್ರಮುಖವಾಗಿ ಈ ಬೇಸಿಗೆಯಲ್ಲಿ, ನಿನ್ನ ಹೆಸರಿನ ಪ್ರಾಮುಖ್ಯತೆ ನನಗೆ ಮನದಟ್ಟಾಗುತ್ತಿದೆ. ನಿನ್ನ ಹೊಸ ಬರಹ 'ವಿಲ್ಲೋ' ನಿನ್ನ ಇನ್ನೊಂದು ಮಗ್ಗುಲು. ಈಗಿನ ಶೈಲಿ ಕೂಡಾ ಹಿಂದಿನದಕ್ಕೆ ತಿದ್ದಿ-ತೀಡಿ, ಇನ್ನಷ್ಟು ಹೊಸರೂಪ ನೀಡಿ ಬೆಳೆಸಿದಂತಿದೆ. ಜನ ಹೊಸದಾಗಿ ನಿನ್ನೊಳಗೆ ನಿನಗಿರವಿಲ್ಲದಂತೆ ರೂಪುಗೊಳ್ಳುತ್ತಿರುವ ನಿನ್ನ ಉತ್ತರಾಧಿಕಾರಿಯ ಕುರಿತು ಮಾತಾಡಬಹುದು. ಇಲ್ಲಿ 'ಪರಿಣಾಮ' (ಇಂಪ್ರೆಷನಿಸ್ಟ್) ವಾದದ ಮೇಲೆ ನಿನ್ನ ವಾಸ್ತವವಾದ ಸಂಪೂರ್ಣ ಮೆಲುಗೈ ಪಡೆದಿದೆ. ಜತೆಗೆ, ಲಯಬದ್ಧ ಕಾವ್ಯದ ಆಲೋಚನೆಯಿಂದ ಪೂರ್ತಿಯಾಗಿ ಸ್ವತಂತ್ರವಾಗಿ ನಿಂತು ಒಟ್ಟು ಪರಿಣಾಮದತ್ತ ದಿಕ್ಕು ಬದಲಿಸುವತ್ತ ನಿನ್ನ ಕಾವ್ಯ ನಡೆದಿದೆ.

ಮೊದಲಿಗೆ ಪ್ರಕಟವಾದ ಕವಿತೆಗಳು ಕಾಲದ ಮೇಲೆ ಬೀರಿದ ಪ್ರಭಾವ ಹಿಂದೆಂದಿಗಿಂತಲೂ ಹೆಚ್ಚು. ಈಗ ಕೂಡಾ ಜನ ಮತ್ತೊಮ್ಮೆ, ಬ್ಲೋಕ್‌ನ ನಂತರ ಅಷ್ಟೊಂದು ಸೂಕ್ಷ್ಮ ವಿವರಗಳೊಂದಿಗೆ ಕಾವ್ಯ ಕಟ್ಟಿದವರಾರು ಇಲ್ಲವೆಂದು - ಮನಗಾಣುತ್ತಾರೆ. ಇದರೊಂದಿಗೆ ಪುಷ್ಕಿನ್ ಬರಹದ ಸಮಗ್ರ ಅರಿವಿಗೆ ಸಹಾಯವಾಗುವಲ್ಲಿನ ಸಾಹಿತ್ಯವನ್ನು ಹೆಸರಿಸುವಾಗ ನಿನ್ನ ಹೆಸರು ಆದ್ಯತೆ ಪಡೆಯುತ್ತದೆ. ತತ್ವಶಃ ನಾನು, ಸೆವ್ರಾನಿನ್, ಮಾಯಕೊವಸ್ಕಿ ನಮ್ಮ ಮಾನ್ಯತೆಯನ್ನು ಅಂತಃಸ್ಫೂರ್ತಿಗೆ ತಗುಲಿಸುವ ಬದಲು ನಿನಗೆ ಋಣಿ ಯಾಗಿರಬೇಕು. ನಿಜ ಹೇಳುವೆ, ಕಲ್ಪನೆ ಎಂದು ನಾವು ಪ್ರಕಟಿಸಿದ್ದೆಲ್ಲ - ಬೇರೆ ಯಾವುದರದೋ ಪ್ರತಿಧ್ವನಿ. ಪದಗಳನ್ನು ಇನ್ನಷ್ಟು ನಾಜೂಕಾಗಿ ಬಳಸಿ ಅದನ್ನು ಅಂತಃಸ್ಪೂರ್ತಿ, ಖಚಿತತೆ ಎಂದಿದ್ದೆವು !

ನಿನ್ನ ಆಯ್ಕೆ ಕೂಡ, ಅತ್ಯಂತ ಸಮಂಜಸವಾಗಿದೆ. ಇಡೀ ಸಂಕಲನದಲ್ಲಿ

ಒಂದೇ ಒಂದು ಕವಿತೆಯನ್ನು ಕೂಡಾ ಬೆರಳು ತೋರಿಸಿ ಸುಮಾರಾಗಿದೆ ಎಂದು ಹೇಳದಿರುವಷ್ಟು ಖಚಿತವಾಗಿದೆ.

ನಾನು ಭಾವುಕನಾಗಿ ಬರೆಯುತ್ತಿರುವುದು ನಿನಗೆ ಬೇಸರ ತರಿಸಬಹುದು. ಹೀಗಾಗಿ ಪತ್ರವನ್ನು ಆದಷ್ಟು ಚಿಕ್ಕದಾಗಿ ಮಾಡುವೆ. ಇಲ್ಲದಿದ್ದರೆ ನಿನಗೆ ಕಳಿಸಲಾರೆನೆಂಬ ಭಯ. ನಿನಗೆ ಪತ್ರ ಬರೆಯುತ್ತೇನೆಂದು ಹೇಳಿದಾಗ, ಸೋಫಿಯಾ ಅಂದ್ರೆಯೆವ್ನ, ನೈನಾ ಅಲೆಕ್ಸಾಂದ್ರೋವ್ನಾ, ಫೆದಿನ್ ಮತ್ತಿತರರು ಅವರ ನೆನಪು ಕೊಡಲು ಹೇಳಿದ್ದಾರೆ. ಮುಂದಿನ ಸಲ ನೀನು ಮಾಸ್ಕೋಕ್ಕೆ ಬಂದಾಗ ಖಂಡಿತ ನಮ್ಮನ್ನು ಕಾಣಲು ಬಾ. ಇದು ನಿಜವಾದ ಸ್ವರ್ಗ ! ನಾನು ಆಸ್ಪತ್ರೆಯಲ್ಲಿರುವೆ ಎಂದು ಹೇಳಿದ್ದೇನಲ್ಲ. ಈ ಬೇಸಿಗೆಯಲ್ಲಿ ಪ್ರಕೃತಿ ಹಿಂದೆಂದಿಗಿಂತ ಸುಧಾರಿಸಿದೆ.

ನಿನ್ನ ಪುಸ್ತಕ ಪ್ರಕಟವಾದದ್ದು ನನ್ನ ಬದುಕಿನಲ್ಲೊಂದು ಸಂತಸದ ಘಟನೆ ಯೆಂದು ಒತ್ತಿ ಹೇಳಬೇಕೆಂದು ಈ ಪತ್ರ ಬರೆಯಲು ಪ್ರಾರಂಭಿಸಿದೆ. ಆದರೆ ಪತ್ರ ಎಷ್ಟು ಕೆಟ್ಟದಾಗಿದೆಯೆಂದರೆ ಇದರಿಂದ ನಿನಗೇನೂ ಅನ್ನಿಸದಿರಬಹುದು.

ನನ್ನಂಥ ಯೋಗ್ಯತೆಯಿಲ್ಲದವನಿಗೆ ನೀನು ನೀಡಿದ 'ಪದ್ಯ' ಹಾಗೂ 'ಲೇಖನ'ದ ಕಾಣಿಕೆ ಅಪೂರ್ವವಾದುದೆಂದು ನೀನು ಅರಿಯಬೇಕು. ನೀನು ಪತ್ರ ಬರೆದು ಹೇಳಿದಾಗ ನಾನೇ ನಂಬಿರಲಿಲ್ಲ. ಕಣ್ಣಾರೆ ನೋಡಿದಮೇಲೆ ನಂಬಿಕೆ ಬಂತು.

ಶುಭಾಶಯಗಳು. ಮತ್ತೊಮ್ಮೆ ಭಾವೋದ್ವೇಗದ ಕೃತಜ್ಞತೆಗಳು, ಚಮತ್ಕಾರಿಕ ವ್ಯಕ್ತಿತ್ವಕ್ಕೆ.

ನಿನ್ನ, **ಬೋರಿಸ್ ಪಾಸ್ತರ್‌ನಾಕ್**

(ಆನಾ ಆಖ್ಮತೋವಾಗೆ)

೧೧-೧೧-೧೯೪೦ **ಪತ್ರ : ೨**

ಪ್ರಿಯ ಆನಾ ಅಂದ್ರೆಯೆವ್ನ,

ನಮ್ಮಿಬ್ಬರ ಮಧ್ಯೆ ಮತ್ತೊಮ್ಮೆ ಕವಿದಿರುವ ಕತ್ತಲೆ ಹೋಗಲಾಡಿಸಿ, ಮಂಕು ಕವಿದ ನಿನ್ನಲ್ಲಿ ಆಸಕ್ತಿ ತುಂಬಿ ಲವಲವಿಕೆಯಾಗಿರುವಂತೆ ಮಾಡುವಂಥದ್ದೇನಾದರೂ ಇದೆಯೆ ? ನಮ್ಮನ್ನು ಕವಿದ ನೆರಳನ್ನು ನೆನೆಸಿಕೊಂಡರೆ ದಿನವೂ ನಲುಗುತ್ತಿರುವೆ. ನಿನಗೆ ಯಾವ ರೀತಿ ತಿಳಿಸಿ ಹೇಳಲಿ, ಬದುಕುವುದು, ಬದುಕಲು ಬಯಸುವುದು ನೀನು ಬದುಕಿಗೆ ಸಲ್ಲಿಸುವ ಕರ್ತವ್ಯ (ಹೇಗೆಂದರೆ ಹಾಗಲ್ಲ, ನೀನು ಬಯಸಿದಂತೆ ಬದುಕುವುದರ ಮೂಲಕ). ಬದುಕಿನ ಪರಿಕಲ್ಪನೆಗಳು ನಾಶಪಡಿಸುವುದು ಸುಲಭ. ಅದನ್ನು ತಡೆ ಹಿಡಿಯಲಾರರು, ಯಾರೂ. ಏಕೆಂದರೆ ಅಂಥ ಪರಿಕಲ್ಪನೆಗಳ ರೂವಾರಿ ನೀನೇ.

ನನ್ನ ಪ್ರಿಯ ಗೆಳತಿ, ಉಪಮೇಯವಿಲ್ಲದ ಮಾದರಿ, ಈ ಎಲ್ಲವನ್ನೂ ಕಳೆದ ಸಲ ಆಗಸ್ಟ್‌ನಲ್ಲಿ ಭೇಟಿಯಾದಾಗಲೇ ಹೇಳಬೇಕಿತ್ತು. ಎಷ್ಟೊಂದು ಆತ್ಮೀಯ ದನಿಯಲ್ಲಿ ನಾನು ನಿನ್ನ ಪ್ರೀತಿ ಪಾತ್ರ ಎಂದಾಗ ಹೇಳಿದ್ದೆ ನೀನು. ನಿನ್ನನ್ನು ಭೇಟಿಯಾಗುವ ಕೆಲವು ಸಂದರ್ಭಗಳನ್ನು ನೂರೆಂಟು ಗೊಂದಲದಲ್ಲಿ ತಪ್ಪಿಸಿಕೊಳ್ಳುವಂತಾಯಿತು. ನಿನ್ನ ಕುತೂಹಲಕ್ಕಾಗಿ ಹೇಳುತ್ತಿರುವೆ ಈಗ ಎಲ್ಲ ಗೊಂದಲವೂ ಸರಿಯಾಗಿದೆ.

ನಿನಗೆ ಗೊತ್ತಿರುವಂತೆ ನಾನು ದಿನಪತ್ರಿಕೆ ತಿರುವಿ ಹಾಕುವವನಲ್ಲ. ಜನರನ್ನು ಜಗತ್ತಿನಲ್ಲಿ ಏನೇನು ನಡೆಯುತ್ತಿದೆ ಎಂದು ಕೇಳಿದಾಗ ಒಂದು ಸಂತಸದ, ಇನ್ನೊಂದು ದುಃಖದ ಸಮಾಚಾರ ಹೇಳಿದರು. ಬ್ರಿಟೀಶರು ಹೋಗುತ್ತಿದ್ದಾರೆ ನ್ನುವುದೊಂದು, ಆಖ್ಮತೋವಾ ದಾಳಿಗೆ ಒಳಗಾದಳೆನ್ನುವುದಿನ್ನೊಂದು.

ನಿನಗೆ ಹೇಳಿದ್ದೆ, ನನ್ನ ತಂದೆ, ಸೋದರಿಯರು ಕುಟುಂಬದೊಂದಿಗೆ

ಆಕ್ಸ್‌ಫರ್ಡ್‌ನಲ್ಲಿದ್ದಾರೆಂದು. ನಾನು ಕಳಿಸಿದ ಟೆಲಿಗ್ರಾಫ್‌ಗೆ ಉತ್ತರ ಬರಲು ಒಂದು ತಿಂಗಳಾದಾಗ ನನ್ನ ಮಾನಸಿಕ ಸ್ಥಿತಿ ಹೇಗಾಗಿದ್ದಿರಬಹುದೆಂದು ಊಹಿಸಿಕೋ. ಅವರೆಲ್ಲ ಯಾರೋ ಹಾಕಿದ ಬಾಂಬಿನ ಸ್ಫೋಟದಲ್ಲಿ ಸಿಕ್ಕು ಸತ್ತಿದ್ದಾರೆಂದೇ ನಾನು ತಿಳಿದಿದ್ದೆ, ಅವರೆಲ್ಲ ಸುರಕ್ಷಿತವಾಗಿದ್ದಾರೆಂಬ ಸುದ್ದಿ ಅಷ್ಟರಲ್ಲಿ ಬಂದಿತ್ತು.

ಮಗುವಿಗೆ ಹೇಳುವ ಹಾಗೆ ಈ ಎಲ್ಲವನ್ನೂ ಸೂಕ್ಷ್ಮತೆಯ ಗಂಧವಿಲ್ಲದೆ ಹೇಳುತ್ತಿರುವುದಕ್ಕೆ ದಯವಿಟ್ಟು ಕ್ಷಮಿಸು. ಆದರೆ ಶ್ರದ್ಧಾವಂತ ಕ್ರಿಸ್ತಳಾದ ನಿನಗೆ ನಂಬಿಕೆ ಯಾವತ್ತೂ ಕಳೆದುಕೊಳ್ಳಬಾರದೆಂಬುದು ಚೆನ್ನಾಗಿಯೇ ಗೊತ್ತು. ನಿನಗೆ ಗೊತ್ತಿದೆಯೋ ಇಲ್ಲವೋ, ನಿನ್ನ 'ನಂಬಿಕೆ' ಎನ್ನುವ ಪದ್ಯ ಎಷ್ಟೊಂದು ಪರಿಣಾಮಕಾರಿಯಾಗಿ ಮೂಡಿದೆ ಎಂಬುದು : 'ಯಾವುದಕ್ಕೂ ಬಲಿಯಾಗದ ನಿನ್ನ ಆತ್ಮದ ಪಿಸುದನಿ ಗೆಲ್ಲುವುದು'.... ನಾಲ್ಕು ಸಾಲನ್ನು ನಾನು ಬರೆದಿಟ್ಟಿರುವೆ, ಉಳಿದದ್ದನ್ನು ನೀನು ಹೇಳಲಿಲ್ಲ. ನಿನ್ನ ಪುಸ್ತಕದ ಪ್ರತಿಯೊಂದನ್ನು 'ಗೊಸ್ಲಿತ್ಸಿದಾತ್'ಗೆ ಕೊಟ್ಟಿರುವೆ. ನೀನು ಖುಷಿಯಾಗಿದ್ದ ಗಳಿಗೆಯಲ್ಲಿ ಏನಾದರೂ ಬರೆಯಬೇಕೆನ್ನಿಸಿದರೆ ಬರೆದು ಕಳಿಸು, ಅದರಲ್ಲಿ ಸೇರಿಸುವೆ. ನಾನು ಹೇಳಿರುವುದನ್ನು ಮರೆತುಬಿಡು ಬೇಕಾದರೆ. ನಾನೇನು ನಿನ್ನನ್ನು ಒತ್ತಾಯಿಸುವುದಿಲ್ಲ.

ಏನೇನೋ ಬರೆದಿರುವುದಕ್ಕೆ ತಪ್ಪು ತಿಳಿಯಬೇಡ. ನನ್ನ ಹೃದಯಪೂರ್ವಕವಾಗಿ ನಿನ್ನ ಆರೋಗ್ಯ ಸುಧಾರಿಸಲೆಂದು ಹಾರೈಸುವೆ.

ನಿನ್ನ ಬಿ.ಪಿ.

(ಪಾವೆಲ್ ಯಾಕಿವಿಲಿಗೆ)

೩೦ ಜುಲೈ ೧೯೩೨

ಪ್ರಿಯ ಪಾವೆಲೋ,

ವಾರಗಳು ಉರುಳಿ, ತಿಂಗಳಿಗೆ ಸೇರುತ್ತಿವೆ. ಹೀಗೆ ಆದರೆ ಈ ಕೆರೆ ದಂಡೆಗೆ ಕುಳಿತು ನಿನಗೆ ಬರೆಯುತ್ತಿರುವುದನ್ನು ನೀನೆಂದೂ ಅರಿಯಲಾರೆ ! ನಿನಗಾಗಿ ಪತ್ರ ಬರೆಯಲು ಆರಂಭಿಸಿ, ಎಷ್ಟೋ ಪತ್ರಗಳನ್ನು ಅರ್ಧಕ್ಕೇ ಬಿಟ್ಟಿರುವೆ, ಅವುಗಳು ಎಷ್ಟು ಉದ್ದವಾಗಿದ್ದವೆಂದರೆ ಉರಾಲ್ಸ್ ಮತ್ತು ಜಾರ್ಜಿಯಾದ ಇತಿಹಾಸವನ್ನು ನಿನಗೆ ತಿಳಿಸುವತ್ತ ಹೊರಟಿದ್ದವು !

ಖುಷಿಯ ವಿಚಾರವೆಂದರೆ ನಿಮ್ಮೊಂದಿಗೆ ಬೇಸಿಗೆ ಕಳೆದು ಬಂದ ಮೇಲೆ ಸಾಕಷ್ಟು ಸುಗಮವಾಗಿ ಇಲ್ಲಿನ ಬದುಕಿಗೆ ಹೊಂದಿಕೊಳ್ಳುತ್ತಿರುವುದು. ನಮ್ಮೆಲ್ಲ ಯೋಚನೆಗಳು ಅಲ್ಲೇ ಇರುವುದು ಎಷ್ಟೊಂದು ನಿಜ ! ಇಲ್ಲಿಗೆ ಬಂದಾದ ಮೇಲೆ ಉರಾಲ್ಸ್‌ನಲ್ಲಿ ಕಮ್ಯೂನಿಷ್ಟ್ ಪಕ್ಷ ನೀಡಿದ ಮನೆಯಲ್ಲಿನ ಮೊದಲನೇ ಬೆಳಗೇ ಅಲ್ಲಿನ ನೆನಪು ಮುತ್ತಿದಾಗ ಆ ದಿನಗಳ ನೆನಪು ಎಷ್ಟೊಂದು ಪ್ರಭಾವ ಬೀರಿವೆ ಎಂಬುದರ ಅರಿವಾದುದು. ಕೆರೆಯ ದಂಡೆ ಗುಂಟ ಬೆಳಗಿನ ವಾಯುವಿಹಾರಕ್ಕೆ ಹೊರಟಾಗ ದಾರಿಯುದ್ದ ಹೊಳೆವ ಕಲ್ಲಿನ ಮೇಲೆ ಹರಿವ ನೀರು, ನೂರು ಮೈಲಿಗೂ ಆಚೆ ಹಬ್ಬಿರುವ ಕಾಡು, ಸಾಲು ಸಾಲು ಪೈನ್, ಬರ್ಚ್ ಮರಗಳು, ಮೋಡ, ಪುರಾತನದ ಸ್ಮಶಾನ ಕಲ್ಲುಗಳು ಎಲ್ಲ ಉತ್ತರದ ಅಲ್ಲಿ ಕಳೆದ ದಿನಗಳ ನೆನಪು ತಂದವು. ನಾವು ಯಾವುದನ್ನು ಹೋಲಿಸಿ ನೋಡಲು ಹೋಗಲಿಲ್ಲ; ಮೊದಲ ನೋಟಕ್ಕೆ ಹಾಗೆ ಮಾಡಬೇಕೆಂದು ಅನ್ನಿಸಿದರೂ, ಸುಮ್ಮನೇ ಹೆಸರಿಸುತ್ತ ಹೋದೆವು - ಇದು ಝೋಝಾರಾ, ಹಾಗೆ ಹತ್ತುತ್ತ ಹೋದಂತೆ ಟಿಫ್ಲಿಸ್, ಓಝ್ರೋನಿ, ಕೊಬತ್ತಿ, ಸಗ್ವೆರಿ,

ಬಖುರ್ರೈನಿ ಹಾಗೆ ಇನ್ನೂ ಯಾವ ಯಾವ ಯಾವುದೋ ಸ್ಥಳಗಳು. ಇವತ್ತು ಯಾರನ್ನೋ ನೋಡಿದಾಗ ತಾಝಿಕ್ ನೆನಪಿಗೆ ಬಂತು. ನಾಳೆ ಇನ್ನೇನೋ ? ಇದೀಗ ನೀನು ಅಲ್ಲೇ ಇರುವೆ, ಈ ಎಲ್ಲದರ ಸುತ್ತುವರಿದಿರುವೆ ಅನ್ನೋ ವಿಚಾರ ಖುಷಿಯುಕ್ಕಿಸುತ್ತಿದೆ.

ಈ ನೋಟದಿಂದಲೇ ಜಾರ್ಜಿಯಾ ನೋಡಲು ಆರಂಭಿಸಿದ್ದೇವೆ. ನಿಮ್ಮ ಜತೆ ಇದ್ದಾಗ ಅನುಭವಿಸಿದ ಹೇಳಲಾರದ ಖುಷಿ ಕಿನ್ನರಲೋಕದ ಕಥೆಯಂತಿತ್ತು. ಈ ಜಾರ್ಜಿಯಾ ದೈವಿಕವಾದದ್ದು ಎಂಬ ಅನ್ನಿಸಿಕೆಯನ್ನು ಜಾರ್ಜಿಯನ್ ಕವಿ ಝೂವಾಷಿಕಿವಿಲಿಯೊಂದಿಗೆ ಮಾತನಾಡುವಾಗ ಸರಿಯಾದ ಶಬ್ದ ಸಿಗದೆ ಯಾಕೆ ಹೇಳಲಾಗಲಿಲ್ಲವೆಂದು ಈಗ ಸ್ಪಷ್ಟವಾಗಿ ಗೊತ್ತಾಗಿದೆ. ಈ ನಗರ (ಟಿಫ್ಲಿಸ್) ಅಲ್ಲಿ, ನಾನು ಭೇಟಿಯಾದ ಜನಗಳು, ಆದ ಆನಂದ, ನನ್ನ ಜೀವನಚರಿತ್ರೆ 'ಸೇಫ್ ಕಂಡೆಕ್ಟ್'ನಲ್ಲಿ ಬರೆಯಲಿರುವೆ. ನಿನಗೇ ಗೊತ್ತಿರುವ ಹಾಗೆ ಹೀಗೆ ಬರೆಯಲಿರುವ ಅಧ್ಯಾಯಗಳು ಅಸಂಖ್ಯ ! 'ಬರೆಯುಲಿರುವೆ' ಎಂದು ಹೇಳಿದೆ, ಇವೆಲ್ಲ ಬರೆಯಬೇಕಿರುವುದರಿಂದ ಈಗಾಗಲೇ ಅವಕ್ಕೆಲ್ಲ ಸರಿಯಾದ ಮಾಧ್ಯಮ ಸಿಕ್ಕಿರುವುದರಿಂದ, ಬರೆಯಲಿರುವೆ ಎಂದಿರುವುದಕ್ಕೆ ಇನ್ನೊಂದು ಕಾರಣ, ನನಗೆ ಸಂಬಂಧಪಟ್ಟಂತೆ ಅದಾಗಲೇ ನಿಜವಾಗಿದೆ ಎನ್ನುವುದು.

ಹೀಗಾಗಿಯೇ ಒಂದಾದ ಮೇಲೊಂದರಂತೆ ಪತ್ರವನ್ನು ನಿನಗೆಂದು ಬರೆಯುತ್ತ ಹರಿದುಹಾಕುತ್ತಲಿರುವೆ. ಇದೊಂದು ಬೇಕಾದಂತೆ ಬರೆದುಹಾಕುವ ವಿಷಯವಾಗಿ ಉಳಿದಿಲ್ಲ. ಆ ನೆನಪಿನ ಗುಂಗು ನನ್ನನ್ನು ಆವರಿಸಿ ನನ್ನಿಂದ ಬರೆಯಿಸುತ್ತಿದೆ, ಟೈಟಿಯನ್ ಹೇಳುತ್ತಾನಲ್ಲ ಆತನ ಕವಿತೆಯಲ್ಲಿ .

'ನಾನು ಕವಿತೆಗಳನ್ನು ಬರೆಯುವುದಿಲ್ಲ. ಒಂದು ಕಾದಂಬರಿಯಂತೆ. ಅವೇ ನನ್ನನ್ನು ಬರೆಯುತ್ತವೆ, ಬದುಕಿನ ಚಕ್ರ ಕವಿತೆಗೆ ಹೆಗಲು ನೀಡುತ್ತದೆ.'

ಹಾಗೆ. ಅಭಿವ್ಯಕ್ತಿ ಅದಾಗಲೇ ನನ್ನಿಂದ ಬೇರೆಯಾಗಿ ತನ್ನದೊಂದು ಮಾಧ್ಯಮವನ್ನು ಹುಡುಕಿಕೊಂಡು ಬಿಟ್ಟಿದೆ ಚಿಗುರೊಡೆದ ಸಸಿಯಂತೆ. ನಾನು ಅನುಭವಿಸಿದ, ಅನುಭವಿಸುವ ಪ್ರತಿಯೊಂದನ್ನೂ ಸರಿದೂಗಿಸುವ ಶಕ್ತಿ ಅವಕ್ಕಿದೆ. ಅದಕ್ಕೊಂದು, ತನ್ನ ಯೋಗ್ಯತೆಗೆ ತಕ್ಕಂತಹ ಭಾವ ಅಭಿವ್ಯಕ್ತಿ ಸಿಗುವವರೆಗೂ ಅಲೆಯುತ್ತಲೇ ಇರುತ್ತದೆ ಆ ಚೇತನ. ರಿಲ್ಕ್, ಸ್ಕ್ರೇಬಿಯನ್, ಟಿಫ್ಲಿಸ್, ಭೂಮಿ

ಯೊಳಗಿನ ಎಲ್ಲ ಪರಿಶುದ್ಧ ರಸ ಹೀರಿ, ಕಾಲಚಿಮ್ಮಿದ ಎಲ್ಲವನ್ನೂ ಸ್ವೀಕರಿಸಿ ಬೆಳೆಯುತ್ತಲೇ ಹೋಗುತ್ತದದು. ಉದಾಹರಣೆಗೆ ಹುಡುಕುವುದೇಕೆ, ಉರಾಲ್‌ನ ಪ್ರಾಂತಕ್ಕೆ ಬಂದ ಮೇಲೆ ಅಲ್ಲಿನೆಲ್ಲ ಅನುಭವ, ಟಿಫ್ಲಿಸ್‌ನನ್ನೂ ಸ್ಪಷ್ಟವಾಗಿ ಕಾಣ ತೊಡಗಿದ್ದೇನೆಂದರೆ ಸಾಕು. ನಿನಗೆ ಬರೆಯುತ್ತಿರುವ ಈ ಐದನೆಯ ಪತ್ರದಲ್ಲೂ ಅದೆಲ್ಲವನ್ನೂ ವಿವರವಾಗಿ ಹೇಳುವುದು ಸಾಧ್ಯವಾಗುತ್ತಿಲ್ಲ. ಅದೆಲ್ಲ ಒಂದು ಪತ್ರದಲ್ಲಿ ಹೇಳಿ ಮುಗಿಸುವಂಥದ್ದೂ ಅಲ್ಲ.

ನನ್ನ ಮನಸ್ಸಿನಲ್ಲಿ ಈಗೇನೇ ಇದ್ದರೂ ನನ್ನ ಮುಂದಿನ ಕೃತಿಯಲ್ಲಿ ಜಾರ್ಜಿಯಾವನ್ನು ಕಡೆಗಣಿಸಲಾರೆ. ಹೇಗೆ, ಏನು ಬರೆಯುವೆನೋ ಹೇಳಲಾರೆನಾದರೂ ನಿನ್ನ ಅತ್ಯಂತ ಸುಂದರ ದೇಶದ ಕುರಿತು ಬರೆಯಲಿರುವೆ, ನನ್ನ ಬದುಕಿನ ಒಂದು ಭಾಗವಾಗಿ.

ನನ್ನ ವಿಳಾಸವನ್ನು ನಿನಗೆ ಕೊಡದಿರುವುದಕ್ಕೆ ಗಹನವಾದ ಕಾರಣವೇನೂ ಇಲ್ಲ. ನನಗೂ ನೀನು ಏನು ಮಾಡುತ್ತಿದ್ದೀಯ, ಏನು ಬರೆಯುತ್ತಿದ್ದೀಯ, ನಿನ್ನ ಪ್ರೀತಿಯ ಗೆಳೆಯರೆಲ್ಲ ಏನು ಮಾಡುತ್ತಿದ್ದಾರೆಂದು ತಿಳಿಯುವ ಬಯಕೆ ಇದೆ. ಆದರೂ ವಿಳಾಸ ನೀಡುತ್ತಿಲ್ಲ. ಏಕೆಂದರೆ ಅದನ್ನು ನೋಡಿದಾಗಲೆಲ್ಲ ಬರೆಯಬೇಕೆಂದು ಕೊಂಡು ಆಗದಿದ್ದಾಗ ನೊಂದುಕೊಳ್ಳುತ್ತಿ. ನಮ್ಮ ಯೋಚನೆ ಮರೆತು ಖುಷಿಯಾಗಿರು. ಈ ಚಳಿಗಾಲಕ್ಕೆ ನೀನೇನಾದರೂ ಮಾಸ್ಕೋಕ್ಕೆ, ಒಂದು ವೇಳೆ ಬರದಿದ್ದರೆ ಆಗ ನನ್ನ ವಿಳಾಸ ಕಳಿಸುವೆ. ಈಗ ಅಲ್ಲಿರದ ಈ ಮನುಷ್ಯ [ಗ್ರಿಗರಿ ರೊಬಾಕಿರ್ಝೇ (೧೮೮೪-೧೯೬೩) 'ಬ್ಲೂ ಹಾರ್ನ್ಸ್' ಜಾರ್ಜಿಯನ್ ಸಾಹಿತಿಗಳ ಬಳಗಕ್ಕೆ ಹತ್ತಿರನಾಗಿದ್ದ ಬರಹಗಾರ] ಕಳೆದ ಬೇಸಿಗೆಯಲ್ಲಿ ನನ್ನ ಕೆಲವು ಗುಣಗಳನ್ನು ಅದೆಷ್ಟು ಚೆನ್ನಾಗಿ ಗ್ರಹಿಸಿದ್ದ ಎಂದು ನೆನೆಸಿಕೊಂಡರೆ ಖುಷಿಯಾಗುತ್ತದೆ.

ನಿನಗೆ ನನ್ನ ಬೆಚ್ಚಗಿನ ನೆನಪುಗಳು

ಎಲ್ಲರಿಗೂ ಕೇಳಿದೆನೆಂದು ಹೇಳು,

ಬಿ. ಪಿ.

(ತಮಾರಾ ಯಾಷಿವಿಲಿ ಗೆ.)

೨೮ ಆಗಸ್ಟ್ ೧೯೩೭

ನನ್ನ ಪ್ರೀತಿಯ ದುಃಖಪೂರ್ಣ ತಮಾರಾ ಜಾರ್ಜಿಯೆವ್ನ

ಏನಿದು ? ಒಂದು ತಿಂಗಳಿಂದ ಏನೆಂದರೆ ಏನೂ ಸಂಭವಿಸದೆ ಬದುಕಿರುವೆ. ಈ ಎರಡು ವಾರದಿಂದ ನಿನಗೆ ಬರೆಯುವುದು, ಬರೆದದ್ದನ್ನು ಹರಿದೊಗೆಯುವುದು ನಡೆದಿದೆ. ನನ್ನ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲದೆ, ನೆಮ್ಮದಿ ಅರಸುತ್ತಿರುವೆ. ಇನ್ನು ನಿನಗೆ ಹೇಗೆ ಸ್ವಾಂತ ಹೇಳಲಿ ? ಭಾರಿ ಭಾರಿ ಪದಗಳ ವಾಕ್ಯಗಳು ನಿನ್ನನ್ನು ತಟ್ಟಲಾರವು.

ಮೊದಲಿಗೆ ನನಗೆ ಈ ಕುರಿತು ತಿಳಿದಾಗ ನಂಬಲಿಲ್ಲ. ಹದಿನೇಳರಂದು ನಗರದಲ್ಲಿ ಸುದ್ದಿ ಖಚಿತವಾಯ್ತು. ನೆರಳು ಮುತ್ತಿಕೊಂಡಂತಾಯ್ತು. ಸುದ್ದಿ ಗಂಟಲು ಒಣಗುವಂತೆ ಮಾಡಿತು, ಇನ್ನೂ ದುಃಖ ಹಾಗೆ ಇದೆ. ನಾನು ಅನುಭವಿಸಿದ ಘೋರ ಯಾತನೆ ಗುಣಪಡಿಸಲಾರದಂಥದ್ದು, ಸಾವಿನೊಂದಿಗಿನ ಸೆಣೆಸಾಟವದು.

ಮತ್ತೆಂದೂ ಆ ಸುಂದರ ಮುಖವನ್ನು ನೋಡಲಾರೆ, ಸ್ಫೂರ್ತಿನೀಡುವ ವ್ಯಕ್ತಿತ್ವ ಕಾಣಲಾರೆ. ನಗುವ ಕಣ್ಣು, ಚಿಂತನೆ ಚಿಮ್ಮಿಸುತ್ತಿದ್ದ ಧ್ವನಿಯನ್ನು ಕೇಳಲಾರೆ ಎಂದು ಅರಿವಿಗೆ ಬಂದದ್ದೇ ಕಣ್ಣೀರು ಕೋಡಿ ಹರಿಸಿದೆ. ವೇದನೆ ಹತ್ತಿಕ್ಕಲು ಯತ್ನಿಸಿದೆ, ಅಲ್ಲಿ ಸ್ಥಳವಿರಲಿಲ್ಲ. ನೂರಾರು ಯೋಚನೆಗಳು ಹೇಳುತ್ತವೆ : ನಮ್ಮ ಎಲ್ಲ ಭಿನ್ನಾಭಿಪ್ರಾಯದ ನಡುವೆಯೂ ನಾವು ಜತೆಗಿದ್ದೆವು ; ಬದಲಾದ ಸಂದರ್ಭಗಳ ವಿವರ ಕಣ್ಣಿಗೆ ಕಟ್ಟುತ್ತಿವೆ: ಎಷ್ಟೋ ನಗರದ ಬೀದಿ, ನಡೆದಾಡಿದ ಸಮುದ್ರತೀರ, ಹತ್ತಿರದ ಬೆಟ್ಟ, ಜತೆಗೆ ಪ್ರಯಾಣಿಸಿದ್ದು, ನಿಮ್ಮ ಮನೆ-ನನ್ನ ಮನೆಯಲ್ಲಿ ಹರಟಿದ್ದು ಎಲ್ಲ. ನೆನಪು ಘಾಸಿಮಾಡುತ್ತದೆ, ಮುಖ ನೋವಿನಿಂದ ಕಿವುಚುತ್ತದೆ. ಇಂಥ ಯಾತನಾಮಯ ವಿದಾಯ ಸಹಿಸುವಂಥ ಅಪರಾಧವಾದರೂ ಏನು ಮಾಡಿದ್ದೆ ನಾನು ?

ಮೊದಲ ದಿನವೇ ಇದರ ಅನುಭವವಾಗಿತ್ತು. ೧೭ನೇ ತಾರೀಖು ಖಚಿತವಾಗಿತ್ತು, ಮಗುವೊಂದು ಅತ್ತು ಅತ್ತು ಸುಸ್ತಾಗಿ ಮಂಕುಕವಿದಂತಾಗಿ, ತಕ್ಷಣ ಏನಾದರೂ ತಿಂದು ದಣಿವಾರಿಸಿಕೊಳ್ಳುವಂತೆ ನಿದ್ರೆ ಹೋಗಿ ಬಿಡುತ್ತದೆ. ಈ ಆಘಾತದ ಬಿಸಿ ಎಷ್ಟಿತ್ತೆಂದರೆ, ನಗರದಿಂದಲೇ ಎತ್ತೊಗೆದು, ಹುಚ್ಚುಹುಚ್ಚಾಗಿ ಹೋಗಿ ಪೂರ್ಣ ಶೂನ್ಯ ಆವರಿಸುವಂತಾಗಿತ್ತು. 'ಏನಿದು ಹುಚ್ಚು?' ನನ್ನನ್ನು ನಾನೇ ಕೇಳಿಕೊಂಡೆ - 'ಪಾವೆಲೋ!' ಆತ ನನಗೆಷ್ಟು ಮೆಚ್ಚಿದವನಾಗಿದ್ದನೆಂದರೆ ನನ್ನ ಅವನ ಪ್ರೀತಿ ಯಾವತ್ತೂ ನಾನು ಅಳೆಯಲು ಹೋಗಿರಲಿಲ್ಲ. ಹೆಸರಿನಿಂದಲೇ ಖುಷಿ ತುಂಬುವ, ಎಲ್ಲವೂ ಆಗಿದ್ದ ವ್ಯಕ್ತಿ. ಒಂದು ನಿರ್ದಿಷ್ಟ ಸಂದರ್ಭ ಎಲ್ಲರೂ ಒಮ್ಮೆ ಸಾಯಲೇ ಬೇಕು. ಹೀಗಾಗಿ ಅವರು ಹೇಳಬಹುದು : ಮುಂದಿನ ತಲೆಮಾರು ಉಳಿಸಿಕೊಳ್ಳುವ ಈ ಜೀವ ೧೯೩೭ರ ಬೇಸಿಗೆಯಲ್ಲಿ ಕೊನೆಗೊಂಡಿತು. ಜತೆಗೆ, ಕಾಲದ ಕುರಿತು ವಿವರ, ಜನರ ಮನಸ್ಸಿನಲ್ಲೆದ್ದ ಚರ್ಚೆ, ಪತ್ರಿಕೆಗಳ ಹೆಸರು, ವ್ಯಕ್ತಿ ಪರಿಚಯವನ್ನು ನೀಡುತ್ತಾರೆ.

ನಗರದಲ್ಲಿ ಈ ವಾರ್ತೆ ತಿಳಿದು ರೈಲಿನಲ್ಲಿ ಪೆರೆಡೆಲ್ಕಿನೋ ನಿಲ್ದಾಣದಲ್ಲಿಳಿದೆ. ಈ ಸುದ್ದಿ ಹೇಳಲು ರ್‍ಝ್ಯುನಾ ಮುಂದೆ ಬಾಯಿ ತೆರೆದಾಗ ಮಾತೇ ಹೊರಡಲಿಕ್ಕಿಲ್ಲವೆಂದು ಗೊತ್ತಿತ್ತು. ದಾರಿಯಲ್ಲಿ ನನ್ನ ದುಃಖ ಮರುಕಳಿಸದಂತೆ ಒತ್ತಿ ಹಿಡಿಯಲು ಪ್ರಯತ್ನಿಸಿದೆ. ಆದರೆ ಎಲ್ಲಿಯವರೆಗೂ ಕೊಂಡೊಯ್ಯಿತು ಅದು ನನ್ನನ್ನು!

ದಿನ ಕೊನೆಗೊಳ್ಳುತ್ತಿತ್ತು. ಸ್ನಾನ ಮಾಡಿ ಚೇತರಿಸಿಕೊಳ್ಳುವಷ್ಟರಲ್ಲಿ ಅಲ್ಲಿ - ಇಲ್ಲಿ ಎಲ್ಲೆಲ್ಲೂ ಅವನ ನೆನಪು. ಆತನ ಪ್ರತಿಯೊಂದು ಚಹರೆ, ಶೈಲಿ, ಕಣ್ಣಿಗೆ ಕಟ್ಟಿದವು. ಆತನ ಒರಟುತನ, ಸೂರ್ಯಾಸ್ತ, ಬೇಸಿಗೆ, ಚಳಿಗಾಲ, ಗುಟ್ಟುಗಳು, ಎಲ್ಲ.

ಆತನ ಬಗೆಗೆ ಹೊಸ ಬಗೆಯಲ್ಲಿ ಯೋಚಿಸಲು ತೊಡಗಿದ್ದೆ. ಅವನ ಪ್ರತಿಭೆಯನ್ನು ನಾನು ಯಾವತ್ತೂ ಆರಾಧಿಸಿದ್ದೆ. ಅವನ ಚಿತ್ರಕ ಶಕ್ತಿ ಕೇವಲ ಜಾರ್ಜಿಯನ್ ಸಾಹಿತ್ಯಕ್ಕಷ್ಟೇ ಅಲ್ಲ, ಆಧುನಿಕ ಸಾಹಿತ್ಯಕ್ಕಷ್ಟೇ ಅಲ್ಲ ಎಲ್ಲ ಕಾಲಕ್ಕೂ ಉತ್ಕೃಷ್ಟವಾಗಿತ್ತು. ನನ್ನಲ್ಲಿ ಬೆರಗು ತುಂಬಿದ್ದ ಪಾವೆಲೊ. ಆದರೆ ಮೊದಲ ಬಾರಿಗೆ ನಾನು ಹಿಂದೆ ನೋಡಿದ್ದಕ್ಕಿಂತ ಭಿನ್ನವಾಗಿ ಅವನ ಕುರಿತು ಚಿಂತಿಸುತ್ತಿದೆ. ಒಬ್ಬ ವ್ಯಕ್ತಿ ನಮ್ಮಿಂದ ದೂರ ಬಹುದೂರ ಹೋದಾಗ, ಆತನ ಗೈರು ಹಾಜರಿ ಆತನ ಬಗೆಗಿನ

ಕಲ್ಪನೆ ಸ್ಪಷ್ಟವಾಗಿ ಒಡಮೂಡಿಸತೊಡಗುತ್ತದೆ. ಆತ ನಮ್ಮಿಂದ, ನನ್ನಿಂದ ದೂರವಾಗಿದ್ದ. ಆತನ ಬಗೆಗಿದ್ದ ನಮ್ಮ ಅಭಿಮಾನ, ಆತನ ಯಶಸ್ಸಿನ ಬಗೆಗೆ ನಮಗಿದ್ದ ಕಾಳಜಿಯಿಂದಷ್ಟೇ ಆತ ದೂರವಾಗಿರಲಿಲ್ಲ, ಬದಲಿಗೆ, ನಮ್ಮ ಪ್ರೀತಿಯಿಂದ ದೂರವಾಗಿದ್ದ. ನೀರು-ಕಾಡು, ಆತನ ಭವಿಷ್ಯ - ಸೃಷ್ಟಿಯಿಂದ ದೂರ ಹೋಗಿದ್ದ.

ಅವನ್ನೆಲ್ಲ ಹೇಗೆ ವಿವರಿಸಿ ಹೇಳಲಿ ? ಆತ ಭವಿಷ್ಯದ ಜಾರ್ಜಿಯನ್ ಮಾಯಕೋವಸ್ಕಿಯಾಗಿದ್ದನೆಂದೂ. ಆತನ ಸಾಹಿತ್ಯ ತರುಣಪೀಳಿಗೆಗೆ ಮಾದರಿಯಾಗಿತ್ತು ಎಂದು. ಹಾಗೆ ಹೇಳುವುದು ಕಷ್ಟವಾಗಬಹುದು. ಆತ ಮುಟ್ಟಿದ್ದರಲ್ಲಿ, ಹೆಸರಿಸಿದ್ದರಲ್ಲಿ, ಕಾಲದ ಕೈಯಲ್ಲಿ, ಹೂವಿನಲ್ಲಿ, ಅರಳುವ ಕಾಡಿನಲ್ಲಿ, ಮಾಗಿಯ ಆಕಾಶದಲ್ಲಿ, ಏನು, ಎಷ್ಟು ಉಳಿಯುತ್ತದೆ ಎಂದು ಹೇಳುವುದು ಕಠಿಣ.

ಆತ ನನ್ನ ಮೇಲೆ ಬೀರಿದ ಪ್ರಭಾವ ಅರಿಯದೆ ನಾವು ಬದುಕಿದೆವು. ಆ ಅಧಿಕಾರ ಉಳಿದೇ ಉಳಿಯುತ್ತದೆ.

ಪ್ರೀತಿಯ ತಮಾರಾ, ನನ್ನನ್ನು ಕ್ಷಮಿಸು. ಯಾರೂ ಈ ರೀತಿ, ಅದೂ ನಿನಗೆ, ಪತ್ರ ಬರೆಯಬಾರದು. ನಿನಗೆ ಅನೇಕ ಜನ ಹಿತೈಷಿಗಳಿದ್ದಾರೆ, ಅವರಲ್ಲಿ ನನ್ನನ್ನೂ ಸೇರಿಸಿಕೋ. ನಿನಗಾಗಿ ನಾನು ಮಾಡುವಂಥದ್ದು ಏನಾದರೂ ಇರಲಿ, ಹೇಳು, ಯಾವುದೂ ಅಸಾಧ್ಯವಲ್ಲ. ನಿನ್ನನ್ನು ನೋಡುವ ಬಯಕೆಯಿದೆ. ನನಗಾಗಿ, ನಿನ್ನನ್ನು ಕಾಣಲು ಟೈಟಿಯನ್ ಹಾಗೂ ನೈನಾರಿಗೆ ಹೇಳಿರುವೆ. ನಿನ್ನೊಂದಿಗೆ ದುಃಖ ಹಂಚಿಕೊಂಡು ಹಗುರಾಗಲಿ ಎಂದು. ನನ್ನ ಬಾಲಿಶವಾದ ಪತ್ರಕ್ಕಾಗಿ ಮತ್ತೊಮ್ಮೆ ಕ್ಷಮಿಸು. ಆದರೆ ಈಗಲೂ ಏನಾಯಿತು. ಹೇಗಾಯಿತು ಒಂದೂ ಗೊತ್ತಿಲ್ಲ, ನಿನಗೆ ಅನ್ನಿಸಿದಾಗ ದಯವಿಟ್ಟು ಪತ್ರ ಬರೆ.

ನಿನ್ನ ಪ್ರೀತಿಯ

ಬಿ.ಪಿ.

(ನೈನಾ ತಬಿಙೆ ಗೆ)

೧೭ ಜನವರಿ ೧೯೫೩

ನೈನಾ, ನಾನಿನ್ನೂ ಬದುಕಿರುವೆ, ಮನೆಯಲ್ಲೇ ಇರುವೆ. ಇದೀಗ ಎಷ್ಟೋ ವಿಷಯ ನಿನಗೆ ತಿಳಿಸಬೇಕಿದೆ.

ಪ್ರೀತಿ ಅಂತಃಕರಣದ ಮಹಾಪೂರವೇ ಹರಿದ ನಿನ್ನ ಪತ್ರಿಗಳು ನನ್ನಲ್ಲಿವೆ, ಉತ್ತರ ಬರೆಯಲಾಗಲಿಲ್ಲ. ಮೊದಲಿಗೆ ನೀನು ಬರೆದದ್ದು ಚಳಿಗಾಲದಲ್ಲಿ, ನೀನು ಹಾಗೂ ನೀತಾ ಹೇಗೆ ನನ್ನ ಕವಿತೆಗಳನ್ನು ಮತ್ತೊಮ್ಮೆ ಓದುತ್ತಿದ್ದಿರೆಂದು ತಿಳಿಸಲು. ಎರಡನೆಯದು, ನೀನು ಝ್ಯುನಾಳಿಗೆ ಸಹಾಯ ಮಾಡಲು ಮಾಸ್ಕೋಕ್ಕೆ ಬರಲು ಸಿದ್ಧಳೆಂದು ಬರೆದದ್ದು. ಕೊನೆಯದು, ನಿನ್ನನ್ನು ಸೋದರಿಯೆಂದು ತಿಳಿಯುವಂತೆ ಝ್ಯುನಾಳಿಗೆ ಮಾಡಿದ ಮನವಿ. ಯಾವ ರೀತಿಯಲ್ಲಿ ನಿನಗೆ ಕೃತಜ್ಞತೆ ಸಲ್ಲಿಸಲಿ ? ಯಾವ ಮಾತಲ್ಲಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಲಿ ?

ಇದನ್ನೇ ನಾನು ಹೇಳಬೇಕೆಂದಿರುವೆ. ನೀನು ಸೈಮನ್, ಮಾರಿಕಾ, ಜಾರ್ಜ ನಿಕೋಲೆವಿಚ್, ಯುಫೋಮಾ, ಅಲೆಗ್ಸಾಂದೊವ್ನ ನನ್ನ ಅತ್ಯಂತ ಪ್ರೀತಿ ಪಾತ್ರ ಗೆಳೆಯರು.

ಕೆಲವರು ಹೇಳಬಹುದು : 'ಇವೆಲ್ಲ ನಯವಾದ ಮಾತು, ಆದರ್ಶವಾದ, ಭಾಷಣದ ಧಾಟಿ ಎಲ್ಲ ಗೆಳೆಯರೊಂದಿಗೆ ಹರಟೆಹೊಡೆಯಲು ಯೋಗ್ಯ. ಗಂಭೀರ ಪರಿಸ್ಥಿತಿಯಲ್ಲಿ ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆಂದು ; ಆ ಥರದ ಮೊದಲ ಜಗಳ - ಸತ್ವ ಪರೀಕ್ಷೆ ನಂತರ ಏನಾಗುತ್ತೋ ನೋಡುವಾ - ' ಎಂದು.

ಮೊದಲಿಗೆ ಹಾಗಾದಾಗ, ಮೊದಲ ಐದು ತಾಸು ಸಂದರ್ಶಕ ಸ್ಥಳದಲ್ಲಿ, ಒಂದಿಡೀ ಇರುಳು ತುಂಬಿ ತುಳುಕುತ್ತಿದ್ದ ನಗರದ ಆಸ್ಪತ್ರೆಯ ಒಳಾವರಣದಲ್ಲಿ ಕಳೆಯಬೇಕಾಯಿತು. ಈ ವೇಳೆಯಲ್ಲಿ ವಿಚಿತ್ರ ಶಾಂತ ಅನುಭವದಲ್ಲಿ ನಾನಿದ್ದೆ, ಪರಮ ಸುಖಿ. ಎಚ್ಚರ ತಪ್ಪುವುದು, ಕಾಯಿಲೆ, ನಡುನಡುವೆ ವಾಂತಿ.

ನನ್ನ ಬದುಕಿನ ಕೊನೆಗಳಿಗೆ ಅಥವಾ ವಾಸಿಯಾಗದ ರೋಗ ಖಂಡಿತವೆಂದು ನಾನೆಣಿಸಿದೆ. ಈ ಸ್ಥಿತಿಯಲ್ಲಿ ಆರುತಿಂಗಳ ಕಾಲ ಜ಼ಿನಾ ಹಾಗೂ ಲೆನೋಚ್ಕಾರಿಗೆ ಸಹಿಸುವುದು ಅಸಾಧ್ಯವಾಗಬಹುದು. ನಂತರ ಯಾವುದಾದರೂ ಕೆಲಸದಲ್ಲಿ

ತೊಡಗಲು ನೋಡುತ್ತಾರೆ. ಅವರಿಗೇನೂ ಸ್ನೇಹಿತರ ಕೊರತೆಯಿಲ್ಲ. ಎಲ್ಲರೂ ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ. ಎಲ್ಲ ತೊಂದರೆಗಳ ನಡುವೆ ನಮ್ಮ ಕಾಲದಲ್ಲಿ ಮಾಡಬಹುದಾದದ್ದು ಮಾಡಿದ್ದೇನೆ (ಶೇಕ್ಸ್‌ಪಿಯರ್ ಫೌಸ್ಟ್, ಬಾರ್ಷವಿಲಿಯ ಅನುವಾದ).

ನನ್ನ ಬಗ್ಗೆ ಹೇಳೋದಾದರೆ ಎಲ್ಲ ಮಾಮೂಲು - ಚೂಪಾಗಿ ಅಮರುವ ದಟ್ಟ ನೆರಳು, ಸ್ಪಷ್ಟವಾಗಿ ಹೊಳೆದ ಜಗತ್ತು ! ಉದ್ದನೆಯ ಕಾರಿಡಾರ್‌ನ ಉದ್ದಕ್ಕೂ ಮಲಗಿದ ರೋಗಿಗಳ ದೇಹಕ್ಕೆ ಮೌನ-ಕತ್ತಲು - ಮೂಲೆಯಲ್ಲೊಂದು ಕಿಟಕಿ, ಅದರಾಚೆ, ನನ್ನ ಬಳಿ ಸಾವಿನ ಎಲ್ಲ ಸಾಧ್ಯತೆ.

ಸಾವಿನ ಗಳಿಗೆಗೆ ಹತ್ತಿರವಾದೆ ಎಂದೆನ್ನಿಸಿದಾಗ ಹಿಂದೆಂದಿಗಿಂತ ಹೆಚ್ಚಾಗಿ ದೇವರೊಂದಿಗೆ ಮಾತಾಡುವ ಬಯಕೆ ಬಲವಾಯಿತು. ನಾನು ಕಂಡದ್ದನ್ನು ವರ್ಣಿಸಲು, ಅದನ್ನು ಹಿಡಿದಿಟ್ಟು ನನ್ನ ನೆನಪಿನಾಳಕ್ಕೆ ಮುದ್ರೆಯೊತ್ತಲು. ನಾನು ಪಿಸುನುಡಿದೆ : 'ದೇವರೆ, ವಂದನೆಗಳು ನಿನಗೆ, ಬದುಕು - ಸಾವು ಎರಡನ್ನೂ ನಿನ್ನ ನುಡಿಯಲ್ಲಿ ಸಂಗೀತದಂತೆ, ಘನ ಗಾಂಭೀರ್ಯದಂತೆ, ಸೃಷ್ಟಿಸಿದ್ದಕ್ಕೆ.' ನನ್ನನ್ನು ಕಲಾವಿದನನ್ನಾಗಿಸಿದ್ದಕ್ಕೆ, ಕಲೆಯನ್ನು ನಿನ್ನ ಶಾಲೆಯನ್ನಾಗಿ ಮಾಡಿದ್ದಕ್ಕೆ, ನನ್ನಿಡೀ ಬದುಕನ್ನು ಈ ರಾತ್ರಿಗೆ ಸಜ್ಜುಗೊಳಿಸಿದ್ದಕ್ಕೆ. ಆನಂದ ತುಂಬಿ ಬಂದಂತಾಗಿ ಮನದಣಿಯೆ ಅತ್ತೆ.

ನೀನೀಗ ಖಂಡಿತ ಕೇಳುತ್ತಿ ನಾನೆಲ್ಲಿದ್ದೇನೆ, ಹೇಗಿದ್ದೇನೆ, ಆರೋಗ್ಯ ಹೇಗಿದೆ. ನನ್ನ ತೊಂದರೆಯೆಂದರೆ ವಿಪರೀತ ಬೆನ್ನು - ಸೊಂಟ ನೋವು. ಕಳೆದ ಬೇಸಿಗೆಯಲ್ಲಿ ವಾಸಿಯಾದದ್ದು ಶ್ರಮದಿಂದ ಮತ್ತೆ ಬಂದಿದೆ. ಜೆ಼ನಾ ಚೆನ್ನಾಗಿದ್ದಾಳೆ. ನನಗಾಗಿ ತುಂಬ ಕಷ್ಟ ಪಟ್ಟು ನನ್ನನ್ನು ಉಳಿಸಿದವಳು ಅವಳೇ. ಆಕೆಗೂ ಹೊಟ್ಟೆ ನೋವಿನ ತೊಂದರೆ ಇದ್ದೇ ಇದೆ. ಇಬ್ಬರೂ ತಿಂಗಳ ಮಟ್ಟಿಗೆ ವಿಶ್ರಾಂತಿ-ಚಿಕಿತ್ಸೆಗೆ ಹೋಗಬೇಕು. ಎಲ್ಲ- ಯಾವಾಗ ಎಂಬುದು ಗೊತ್ತಿಲ್ಲ.

ನನ್ನ ಪತ್ರಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಡ. ಈಗಲೂ ಬರೆಯಲು ಕಷ್ಟವಾಗುತ್ತದೆ. ಈ ಥರದ ನಿಶೇಧ ನನಗಂತೂ ಬಹಳ ಕಷ್ಟ.

ನಿನ್ನ - ಬಿ.

(ನೈನಾ ತಬಿಜೆ ಗೆ)

೭ ಜುಲೈ ೧೯೫೩

ಪ್ರೀತಿಯ ನೈನಾ,

ನೀನು ಯಾಕೆ ಬರುತ್ತಿಲ್ಲ ? ನನ್ನ ಅಪೇಕ್ಷೆ ತಿಳಿಸಲು ಬರೆಯಬಾರದೆಂದಿದ್ದರೂ ಬರೆಯುತ್ತಿರುವೆ, ಅವಸರದಲ್ಲಿ. ಬೆನ್ನು ನೋವಿನ ಕಾಯಿಲೆಯ ನಂತರ ಎಲ್ಲ ಕೆಲಸವೂ ಅವಸರದ್ದಾಗಿದೆ.

ಪ್ರಿಯ ಗೆಳತಿ, ನಿನಗೆ ಗೊತ್ತೆ? ಸುದೀರ್ಘಕಾಲ ಟೈಟಿಯನ್ ಬದುಕಿರುವನೆಂದೆ ನಂಬಿದ್ದೆ. ಆತ ಶ್ರೇಷ್ಠ ವ್ಯಕ್ತಿಯಾಗಿದ್ದ, ಎಲ್ಲರಿಗಿಂತ ಭಿನ್ನವಾಗಿದ್ದ. ಆತ ಬದುಕಿದ್ದಾಗ ಯಾವ ಮುಚ್ಚುಮರೆಯಿಲ್ಲದೆ ತನ್ನ ಸುತ್ತಮುತ್ತ ಬೆಳಕು ಚೆಲ್ಲಿದ್ದ. ಆತನನ್ನು ಒಂದು ಗಳಿಗೆ ಮತ್ತೊಮ್ಮೆ ನೋಡಬೇಕು ಎಂದು ನನಗೂ ಅನ್ನಿಸಿದೆ.

ಆತ ಬದುಕಿದ್ದರೆ ಖಂಡಿತ ನಿನ್ನ, ನನ್ನ ಬದುಕಿಗೆ ಮರಳುತ್ತಾನೆ. ಇದೊಂದು ಎಂದೂ ಸಾಧ್ಯವಾಗದ ಒಂದು ಶುಭ ಹಾರೈಕೆ. ಇದೊಂದೇ, ಇದೊಂದೆ ನನ್ನಿಡೀ ಬದುಕನ್ನು ಬದಲಾಯಿಸಿಬಿಡಬಹುದಿತ್ತು. ಹಣ - ಅಂತಸ್ತು ಯಾವುದು ತಂದೀಯದ, ಸಮಾನ ಮೌಲ್ಯ, ಅತೀವ ಯಾತನೆಯ ನಂತರ ವಿಧಿ ನಮಗೆ ನೀಡಬಹುದಾಗಿದ್ದ ಬಹುಮಾನವಾಗಬಹುದಿತ್ತು.

ನಾವೆಲ್ಲ ಬಹಳದಿನಗಳಿಂದ ನಿನಗಾಗಿ ಕಾಯುತ್ತಿದ್ದೇವೆ, ದಯವಿಟ್ಟು ಬಾ. ನನ್ನ ಒತ್ತಡದ ನಡುವೆ ಕಾಗದ ಬರೆಯಲಾಗಲಿಲ್ಲ. ನನ್ನ ಪತ್ರಗಳಲ್ಲಿ ನನ್ನನ್ನು ಕಂಡರಿಲಿಕ್ಕಿಲ್ಲ ನೀನು. ತಣ್ಣಗಿನ, ಅರೆಮರುಳನ ಬರಹದಂತೆ ಕಂಡಿರಬೇಕು. ಕುತೂಹಲಕ್ಕಾಗಿ ಬಂದು ನಮ್ಮೊಂದಿಗಿರು. ಇನ್ನೂ ಎಷ್ಟು ಹದಗೆಟ್ಟಿರುವೆ ಎಂದು ತಿಳಿಯುತ್ತದೆ. ನನ್ನ ಬಗ್ಗೆ - ನಮ್ಮ ಬಗ್ಗೆ ನಾನೇನೂ ಬರೆಯುವುದಿಲ್ಲ.

ನಿನ್ನ ಪತ್ರವನ್ನು ನಿನ್ನ ರಕ್ತದಿಂದ ಬರೆದಂತೆ ಬರೆದಾಗ ನಮಗೆ ತುಂಬ ನೋವಾಗುತ್ತದೆ. ಕಳೆದ ಸಲ ಜೆನಾಗೆ ಪತ್ರ ಬರೆದದ್ದು ಹಾಗೇ ಇತ್ತು. ಅಂಥ ಪತ್ರಗಳಿಗೆ ಸಮಾನವಾದುದ್ಯಾವುದಿದೆ ? ನಾವು ನಿನ್ನನ್ನೆಲ್ಲ ಎಷ್ಟು ಪ್ರೀತಿಸುತ್ತೇವೆಂದು ಅರಿಯಲು ನಮ್ಮೊಡನಿದ್ದು ಬಂದು ನೋಡು. ನೀನು ಮರೆತಿರಬಹುದು, ಈಗಲೂ ನನ್ನೊಂದಿಗೆ ನಿರಾಳವಾಗಿ ಕೂತು ಮಾತನಾಡಬಹುದೆನ್ನುವ ವ್ಯಕ್ತಿ ನಾನು.

ನಿನ್ನ ಬಿ.

(ನೈನಾ ತಬಿಜೆ಼ ಗೆ)

೩೦ ಸಪ್ಟೆಂಬರ್ ೧೯೫೩

.... ಬಾಲ್ಯದಿಂದಲೂ ಹೆಣ್ಣಿನ ಬಗೆಗೆ ಅಚಲವಾದ ಆರಾಧನಾ ಭಾವವನ್ನು ನಾನು ಬೆಳೆಸಿಕೊಂಡು ಬಂದಿದ್ದೇನೆ. ಬದುಕಿಡೀ ಅವಳ ಸೌಂದರ್ಯ, ಬಾಳಿನಲ್ಲಿ ಅವಳ ಪಾತ್ರಗಳ ಕುರಿತು ವಿಸ್ಮಿತನಾಗಿದ್ದೇನೆ. ಆಕೆಯ ಬಗೆಗೆ ಮರುಕ - ಹೆದರಿಕೆಯನ್ನೂ ಪೋಷಿಸಿಕೊಂಡು ಬಂದಿದ್ದೇನೆ. ನೆಲದ ಬಗೆಗೆ ವಾಸ್ತವ ಜ್ಞಾನವಿರುವ ವ್ಯಕ್ತಿ ನಾನು, ಡಾನ್ ಕಿಯೋಟೆಯಂತಲ್ಲ, ಬದಲಿಗೆ ಈ ನೆಲದಮೇಲೆ ಅನೇಕ ಹೆಣ್ಣುಗಳಿಂದ ಖುಷಿ ಪಡೆದಿದ್ದೇನೆ. ಬಾಲ್ಯದಲ್ಲಿ ಆಕೆ ನಡೆದಾಡಿದ ಜಾಗದ ಬೆಣಚು ಕಲ್ಲುಗಳನ್ನು ಭದ್ರವಾಗಿ ಶೇಖರಿಸಿದ್ದೇನೆ. ನನ್ನೊಂದಿಗೆ ಸಂಬಂಧ ಬೆಳೆಸಿದ್ದ ಕೆಲವು ಹೆಣ್ಣುಗಳು ಅಗಾಧರು, ಅಮರರು. ವ್ಯಕ್ತಿಯಾಗಿ ನಾನೊಬ್ಬ ನಿರಾಸಕ್ತಿದಾಯಕನಾದ, ಸಹಿಸಲು ಸಾಧ್ಯವಾಗದವನು. ಹಲವೊಮ್ಮೆ ಎಷ್ಟೊಂದು ಬಲಹೀನತೆಯಿರುತ್ತದೆಂದರೆ ಬದುಕಿನ ಕುರಿತು ನನಗೇನೂ ಗೊತ್ತಿಲ್ಲವೆಂದೇ ಅನ್ನಿಸುತ್ತದೆ ; ಅಷ್ಟೇ ಅಲ್ಲ ನನ್ನ ಬಗೆಗೇ ನನಗೇನೂ ಅರಿವಿಲ್ಲವೆಂದೆನಿಸುತ್ತದೆ..... ಇಂಥವರು ಯಾವಾಗಲೂ ನಿಷ್ಕಲ್ಮಶ ಶುಭ್ರತೆಯಿಂದಾಗಿ ಆತ್ಮೀಯರಾಗುತ್ತಾರೆ. ಅಂಥವರು ಹೆಣ್ಣಿನ ಜಗತ್ತಿನೊಂದಿಗೆ ನಿಕಟವಾಗಿರುತ್ತಾರೆ. ಬಾಲ್ಯದ ತಮ್ಮ ನೆನಪಿನೊಂದಿಗೆ ಹೆಣ್ಣನ್ನು ಸಮೀಕರಿಸುತ್ತಾರೆ. ಹೀಗೆ ಸಂಗ್ರಹವಾದ ಎಷ್ಟೋ ಭಾವಗಳು ಈಗಲೂ ನನ್ನಲ್ಲಿ ಉಳಿದು ಬಂದಿವೆ....

ಎರಡನೆಯದಾಗಿ - ಕಲೆ. 'ರಿಸರೆಕ್ಷನ್' ಹಾಗೂ 'ಅನ್ನಾ ಕರೇನಿನಾ' ದಲ್ಲಿ 'ಟಾಲ್‌ಸ್ಟಾಯ್' ಇದನ್ನು ತೋರಿಸುತ್ತಾರೆ. 'ರಿಸರೆಕ್ಷನ್'ನ ನಿಖ್ಲ್ಯೆಕದೊವ್ 'ಅನ್ನಾ ಕರೇನಿನಾ'ದಲ್ಲಿ 'ವ್ರೊನ್‌ಸ್ಕಿ'. ವ್ರೊನ್‌ಸ್ಕಿ ಅನ್ನಾಳೊಂದಿಗೆ ಕಲೆಗೆ ಅಗತ್ಯವಾದ ಕ್ಯಾನ್‌ವಾಸ್, ಪೆನ್ಸಿಲ್, ಬ್ರಷ್, ಬಣ್ಣ ತೆಗೆದುಕೊಳ್ಳಲು ಇಟಲಿಗೆ ಹೋಗುತ್ತಾನೆ; ಚಿತ್ರ ಬರೆಯಬೇಕೆಂಬ ಉದ್ದೇಶದಿಂದ. ಆದರೆ ಯಾಕೋ ಸರಿಹೋಗುವುದಿಲ್ಲ.

ಪರಿಸರ ಚೆನ್ನಾಗಿಲ್ಲ, ಮನಸ್ಸು ಆಹ್ಲಾದಕರವಾಗಿಲ್ಲ ಹೀಗೆ. ಇದರೊಟ್ಟಿಗೆ ಇನ್ನೊಬ್ಬ ವ್ಯಕ್ತಿಯನ್ನು ಕಾಣುತ್ತೇವೆ. ಕಲೆಯ ಹುಚ್ಚು ಅವನಿಗೆ. ಆದರೆ ಆತನಿಗೆ ಈ ಕಲೆಯಿಂದಾಗಿಯೇ ಕ್ಷಯರೋಗ ತಗುಲಿಕೊಳ್ಳುತ್ತದೆ. ಸಾಮಾನ್ಯ, ಸರಳ, ಹುಚ್ಚು ಮನುಷ್ಯ.... ಇದೊಂದು ಹವ್ಯಾಸಿತನದ, ಸ್ವಾರ್ಥತ್ಯಾಗದ, ಆದರ್ಶಮಯ ನೋಟ. ಕಠಿಣ ಪರಿಶ್ರಮದ ಜಗತ್ತು. ಇದರ ಬಗ್ಗೆ ನನಗೆ ಚೆನ್ನಾಗಿ ಅರಿವಿದೆ. ನನ್ನೆಲ್ಲವನ್ನೂ ನಾನದಕ್ಕೆ ಮುಡುಪಿಟ್ಟಿರುವೆ. ನನ್ನನ್ನದು ಚಕಿತಗೊಳಿಸುತ್ತಲೇ ಪೂರ್ಣನನ್ನಾಗಿಸುತ್ತದೆ. ಬದುಕು - ಶ್ರೇಷ್ಠಮಾನವರ ನಡುವೆ ಯಾವುದೋ ಕೊಂಡಿ ಇರುವುದು ನನ್ನ ಅನುಭವಕ್ಕೆ ಬಂದಿದೆ. ಈ ಥರದ ಮೇಲು ಮಧ್ಯಮ ವರ್ಗದ ಕಲೆಯ ಕಲ್ಪನೆ ಇದೆಯಲ್ಲ, ಅಂದರೆ - ಕಲೆ, ಸಿನಿಮಾ ಆ ವರ್ಗದ ಹೆಂಗಸರಿಗೆ ಸೇರಿದ್ದೆಂಬ ಭಾವನೆ, ಅಂಥದ್ದಕ್ಕೆ ನನ್ನಲ್ಲಿ ಸ್ಥಾನವಿಲ್ಲ.....

ಆದಷ್ಟು ಬೇಗ 'ಫೌಸ್ಟ್' ಕೃತಿಯ ಅನುವಾದ ಪ್ರಕಟವಾದರೆ ಅದನ್ನು ನಿನಗೆ ಕಳಿಸಬಹುದೆಂಬ ತವಕ ನನಗೆ. ಟಿಫ್ಲಿಸ್‌ನಲ್ಲಿ ಪುಸ್ತಕದ ಪ್ರತಿ ಕೊಡುವವಳಂಥವಳು ನೀನೊಬ್ಬಳೆ. ಕೆಲವು ಪ್ರತಿ ತಲುಪಿಸುವೆ. ಹೌದು ! ಪ್ರತಿಯನ್ನು ನಿನ್ನ ಪ್ರೀತಿಯ ಕೈಗಳಿಂದ ಬಿಡಿಸಿ ಓದು. ಹಾಗೆ, ಪ್ರತಿಯನ್ನು ಎರಡು ಭಾಗಮಾಡಿ ಒಂದನ್ನು ನೀನು ಓದು. ಇನ್ನೊಂದನ್ನು ಎಫಿಮಿಯಾಳಿಗೆ ಕೊಡು. ಮೊದಲ ಭಾಗ ಇಹದ ಪ್ರೀತಿಯ ಬಗ್ಗೆ ಹೇಳಿದರೆ ಎರಡನೆ ಭಾಗ ಸ್ವರ್ಗದ ಅನುರಾಗದ ಬಗ್ಗೆ ಹೇಳುತ್ತದೆ. ಎಫಿಮಿಯಾ ಅದ್ಭುತ ಹೆಣ್ಣು , ಅಲ್ಲವೆ ? ಕೃತಿಯ ಹೆಲೆನ್ ಬಹುತೇಕ ಎಫಿಮಿಯಾಳನ್ನು ಹೋಲುತ್ತಾಳೆ. ಕೆಲವು ಕಡೆ ಹೆಲೆನ್‌ಳ ಮಾತುಗಳೆಲ್ಲ ಎಫಿಮಿಯಾ ಆಡಿರುವಂಥವು. ಆಕೆಗೆ ಪ್ರತಿ ಕಳಿಸಿದರೆ ಹೀಗೆ ಬರೆಯುವೆ : 'ಗೋಥೆ ಎರಡನೆಯ ಭಾಗದಲ್ಲಿ ನಿನ್ನ ಬಗ್ಗೆ ಏನು ಬರೆದಿದ್ದಾನೆಂದೂ ಓದು !' ನಿನಗೇನನ್ನಿಸುತ್ತದೆ ಹಾಗೆ ಬರೆದು ಕಳಿಸಲೆ ?

ಪ್ರಕಾಶನ ಸಂಸ್ಥೆಯ ಸಂಪಾದಕ ಚಿಕೊವ್ನಿ ಅನುವಾದಿತ ಕವಿತೆಗೆ ಅಡಿಟಿಪ್ಪಣಿ ಬರೆದುಕೊಡಲು ಹೇಳಿದ್ದಾರೆ. ನನಗನ್ನಿಸುವಂತೆ ಚಿಕೊವ್ನಿ ಸಮಕಾಲೀನ ಕವಿಗಳಲ್ಲಿ ಅತ್ಯಂತ ಗಮನಾರ್ಹ. ಆತನ ಬಗೆಗೆ ನನಗೆ ಅಪಾರ ಪ್ರೀತಿಯುಂಟು. ಇದೀಗ ನಾನು ನನ್ನ ಗಪದ್ಯದ ಬರವಣಿಗೆಯಲ್ಲಿ ತೊಡಗಬೇಕು, ಆಗೀಗ ಆಲೋಚನೆಯಲ್ಲಿ ಬಂದು ಹೋಗುವ ಕವಿತೆಯ ಸಾಲುಗಳನ್ನು ಹೊಂದಿಸಿ ಬರೆಯಬೇಕು....

.... ನಾನು ಆಗೀಗ ಲಹರಿಯಲ್ಲಿ ಹೇಳಿದ ಕವಿತೆಯ ಸಾಲುಗಳನ್ನು ನಿನಗೆ ಬರೆದು ಕಳಿಸಬೇಕು. ಈ ಕವಿತೆಗಳು ಬೇರೆ ಪದ್ಯದೊಂದಿಗೆ ಸರಿಸಾಟಿಯಾಗಲಾರದು. ಇವು ಎರಡನೆಯ ದರ್ಜೆಯವು, ಕೋಮಲವಾಗಿ- ರಾಗಮಯವಾಗಿ ಇರುವಂಥವು. ಆದರೆ, ಕಾವ್ಯ. ಸಂಗೀತದೊಂದಿಗೆ ಅರ್ಥ ಹಾಗೂ ಚಿತ್ರಕಲೆಯ ತಾತ್ಪರ್ಯ ಹೊಂದಿರಬೇಕು. ಈಗಿರುವವು ಚಿಕ್ಕಚಿಕ್ಕ ಕವಿತೆಗಳು. ಇವೆಲ್ಲ ಒಂದೆಡೆ ಸೇರಿಸಿ ಲಾಲಿಹಾಡು ಎಂದಿದ್ದೇನೆ.

.... ನೈನಾ ಇದೊಂದು ಬೆಚ್ಚಗಿನ, ಮೋಡಗಳಿಲ್ಲದ ಮಾಗಿಯ ಮಧ್ಯಾಹ್ನ- ಹನ್ನೆರಡು ಗಂಟೆ. ಸೂರ್ಯ ಅಗಲದ ಕಿಟಕಿಯಿಂದ ಮೇಲೇರುತ್ತಿದ್ದಾನೆ. ನಾನು ನಿನ್ನ ಕೆಲಸವನ್ನೆಲ್ಲ ಕೆಡಿಸುತ್ತ ಈ ದೀರ್ಘ ಪತ್ರದೊಂದಿಗೆ ಕೂತಿದ್ದೇನೆ. ನನ್ನ ಪ್ರಿಯ ನೈನಾ, ನನ್ನ ಖುಷಿಯೇ, ಪ್ರೀತಿಯ ಸೋದರಿಯೇ .

ಕೊನೆಯಿಲ್ಲದ ಪ್ರೀತಿ ನಿನಗೆ,

ನಿನ್ನ - ಬಿ.

(ಎಸ್. ಐ. ಚಿಕೋವ್ನಿಗೆ)

೬ ಅಕ್ಟೋಬರ್ ೧೯೫೭

ಪ್ರಿಯ ಸೈಮನ್,

ನನ್ನ ಬಹುಕಾಲದ ಕಾಯಿಲೆಯಿಂದ ಎಲ್ಲರಿಂದಲೂ ಬೇರೆಯಾಗಿದ್ದೆ. ಯಾವುದರಲ್ಲೂ ಮನಸ್ಸು ತೊಡಗದೆ, ಯಾವುದೂ ಆಸಕ್ತಿ ಸೆಳೆಯದೆ, ಯಾವುದೂ ತಲೆಯಲ್ಲಿ ನಿಲ್ಲದೆ ಕ್ರಿಯಾಹೀನನಾಗಿದ್ದೆ. ನಾನು ಚಿಕಿತ್ಸಾಕೇಂದ್ರದಲ್ಲಿದ್ದಾಗ ನೈನಾ ಅಥವಾ ಜ಼ೆನಾ ನೀನು ಟೈಟಿಯನ್ ತಬಿಜ಼ೆ ಬಗ್ಗೆ ಬರೆದ ವಿಮರ್ಶೆಯ ಪ್ರತಿ ತಂದುಕೊಟ್ಟರು. (ಟೈಟಿಯನ್ ತಬಿಜ಼ೆ ಕವಿತೆಗಳ ರಷಿಯನ್ ಅನುವಾದ : ದಿ ಪೊಯೆಟ್ಸ್ ಲೈಬ್ರರಿ) ಎಲ್ಲೋ ಇಟ್ಟು ಮರೆತು ಬಿಟ್ಟಿರುವೆ.

ಈ ಸಂಜೆ 'ಮೇರಿಯಾ ಸ್ಟು ಆರ್ಟ್' ಹಸ್ತಪ್ರತಿಯನ್ನು ವಿಫಲವಾಗಿ ಹುಡುಕುತ್ತಿರುವಾಗ ನಿನ್ನ ಲೇಖನ ಸಿಕ್ಕಿತು. ಇದೀಗ ಮೊದಲ ಬಾರಿಗೆ ಅದನ್ನು ಓದಿದೆ.

ಇದೊಂದು ಅಚ್ಚುಕಟ್ಟಾದ ಲೇಖನ. ಸೂಕ್ಷ್ಮಗ್ರಹಿಕೆ, ಹಿಂದಿನದನ್ನು ಉದಾಹರಿಸುವ ನಿರೂಪಣೆ, ಕೆಲವು ಮುಖ್ಯವಾದ, ಗಂಭೀರವಾದ, ಸಮರ್ಥಿಸಬಲ್ಲ ಶಕ್ತಿಯಿರುವ ಅಂಶಗಳು.... ನಿನ್ನ ಲೇಖನದ ಬಗೆಗೆ ಇನ್ನೊಂದೆರಡು ಮಾತು ಹೇಳ ಬಯಸುವೆ. ಕಾವ್ಯದಲ್ಲಿ ಅಷ್ಟೊಂದು ಪ್ರಮುಖವಲ್ಲದ ವಿರೋಧಾಭಾಸ, ಹೊರೆಯಾಗದಂತಹ ಉಪಮೆ, ನೇರನುಡಿಗಳಿದ್ದಾಗ ರೂಪಕ ಬಳಸಿಕೊಂಡು ಬೆಳೆಯುತ್ತೆಂಬ ನಿನ್ನ ಅಭಿಪ್ರಾಯ ಅತ್ಯಂತ ಸಮಂಜಸವಾಗಿದೆ. ಪುಷ್ಕಿನ್ ಹಾಗೂ ಬರ್ತಷಿವಿಲಿಯವರನ್ನು ನೀನು ಉದಾರಹಣೆ ಕೊಟ್ಟಿದ್ದು ಸರಿಯಾಗಿದೆ. ಇವನ್ನು ಬರವಣಿಗೆಯ ಭಾಷೆ, ಕ್ರಿಯಾಶೀಲ ಸಾಹಿತ್ಯದ ಗುಣಗಳೆಂದು ಗುರುತಿಸುವುದು ತಪ್ಪು. ನಿಜವೆಂದರೆ, ಅವನ್ನು ಸಾಹಿತ್ಯಕ್ಕೆ ನೀಡಿದ್ದು - ಆಡುಭಾಷೆ- ಸಾಹಿತ್ಯಭಾಷೆಗಿಂತ ಶಕ್ತಿಯುತವಾಗಿ ಹೆಚ್ಚು ಪದಗಳನ್ನು, ಸಂವೇದನಾಶೀಲತೆಯನ್ನು ಹೊಂದಿರುವಂಥದ್ದು. ನನ್ನ ಅನ್ನಿಸಿಕೆಯೆಂದರೆ - ನೇರ ನುಡಿ ಹಾಗು ರೂಪಕಗಳು ಬೇರೆಬೇರೆಯಲ್ಲ. ಬೇರೆಬೇರೆ ಹಂತದಲ್ಲಿ ಚಿಂತನೆಯಾಗಿ ಮಡುವುಗಟ್ಟಿರುವಂಥವು. ಮೊದಲನೆಯದು ತಕ್ಷಣದಲ್ಲಿ ಹುಟ್ಟಿರುವುದು, ನಯಗಾರಿಕೆ ಇಲ್ಲದಿರುವುದರಿಂದ ರೂಪಕವಾಗಿ ಮಾರ್ಪಡದೆ

ಇರುವುದು. ಇನ್ನೊಂದು ಅರ್ಥವನ್ನು ದೃಢೀಕರಿಸಿ, ಖಚಿತವಾಗಿ ಮಾರ್ಪಟ್ಟು ತನ್ನ ಅಭಿವ್ಯಕ್ತಿಯನ್ನು ಸೂಸುವಂಥದು. ಹೇಗೆ ನಿಸರ್ಗ ಕಾಲಕಾಲಕ್ಕೆ ತಕ್ಕಂತೆ ತನ್ನತನ ಬದಲಿಸುತ್ತೋ ಹಾಗೆ.

ಕೊನೆಯದಾಗಿ ಸ್ವರ, ಉಚ್ಚಾರಣೆ ಬಗ್ಗೆ. ಸುಮಾರು ೧೯೧೭-೧೮ರಲ್ಲಿ ನಾನು ಕವಿತೆಗಳನ್ನು ಆದಷ್ಟು ಖಚಿತವಾಗಿ, ನಿರ್ಧಾರಯುತವಾಗಿ ತರಲು ಯತ್ನಿಸಿದ್ದೆ. ಹಾಗೆಂದು ನನ್ನ ಮೂರೂ ಸಂಕಲನಗಳನ್ನು ಒಂದೇಟಿಗೆ ಕೂತು ಬರೆದೆನೆಂದಲ್ಲ ಅಥವಾ ಅವನ್ನು ತಿದ್ದಿತೀಡಿದೆನೆಂದಲ್ಲ. ಇದಕ್ಕಿಂತ ಗುಣಾತ್ಮಕ ಅಂಶ ಅದರ ಉದ್ದೇಶದ ಹಿಂದಿತ್ತು. ಕವಿತೆ ಘನವಾಗಿ, ಅದ್ಭುತವಾಗಿ, ಆರ್ದ್ರವಾಗಿ, ಶಕ್ತಿಯುತವಾಗಿ ಇರಬೇಕು ಎಂದೆಲ್ಲ ಯೋಚಿಸಿದ್ದಕ್ಕಿಂತ ಮೊದಲು ಅಥವಾ ಆಮೇಲೆ ಕೂಡ, ಅಂದರೆ ೧೯೧೭-೧೮ರಲ್ಲಿ, ಕವಿತೆ ಬರೆದದ್ದು ಕೇವಲ ಭಾಷೆಯ ನಡತೆ, ಗುಣ, ಲಕ್ಷಣ ಅವಲಂಬಿಸಿ. ಪದಗಳು ಯಾವ ಅಡೆತಡೆಯಿಲ್ಲದೆ ತಮ್ಮಷ್ಟಕ್ಕೆ ತಾವೇ ಸಹಜವಾಗಿ ಬರುವ ಸಂದರ್ಭದಲ್ಲಿ.

ಆಯ್ಕೆಯ ಮಾನದಂಡ (ಇದೊಂದು ಶುದ್ಧ ತಲೆನೋವೆಂದು ನೀನು ಒಪ್ಪಬೇಕು) ಕವಿತೆಯನ್ನು ಅಲ್ಲಲ್ಲಿ ತಿದ್ದಿತೀಡಿ ಆದಷ್ಟು ಅಚ್ಚುಕಟ್ಟಾಗಿರುವಂತೆ ಮಾಡುವುದಕ್ಕೂ ಯಾವುದೇ ಸಂಬಂಧವಿಲ್ಲ. ಅದರ ಸಂಬಂಧವಿರುವುದು : ಕೆಂಪಗೆ ಕಾದು ಉಕ್ಕಲು ಸಿದ್ಧವಾಗಿರುವ ಪ್ರವಾಹದೊಂದಿಗೆ, ಸಹಜತೆಯೊಂದಿಗೆ ಅದು ಹುಟ್ಟಿದ ಸಂದರ್ಭದೊಂದಿಗೆ, ಹಲವೊಮ್ಮೆ ಅದೃಷ್ಟದೊಂದಿಗೆ.

ನಿನ್ನ ಚಿಂತನೆಯನ್ನು ನಿನಗೇ ತಿರುಗಿಸಿ ಬೋರು ಹೊಡೆಸುತ್ತಿರುವುದಕ್ಕೆ ಕ್ಷಮಿಸು; ಇದೀಗ ನಿನಗೆ ಮುಖ್ಯವಾದ, ದುರಂತದ ಹೊಗಳಿಕೆಯುಂಟು. ಸುಮಾರು ಹೊತ್ತಿನಿಂದ ಕೊಡದೆ ತಡೆದ ಕಟು ಹೊಗಳಿಕೆ, ಈಗೋ ಕೊಡುತ್ತಿರುವೆ. ನಿನ್ನ ಯೋಗ್ಯತೆಗೊಂದು ಅಳತೆಗೋಲು. ನಾಡಿಮಿಡಿತದ ಹದಬಲ್ಲ ಈ ಸಂಶೋಧನೆ ಯಾರಿಗಾಗಿ ? ಯಾರದ್ಯಾರದೋ ಹೆಸರಿನಲ್ಲಿ ನೀನು ಮುಳುಗಿ ಹೋಗುತ್ತಿರುವೆ. ನೀನು ಹೆಸರಿಸುವ ವ್ಯಕ್ತಿಗಳಿಗೆ ಈಗಾಗಲೇ ಪೂರ್ಣವಿರಾಮ ದೊರೆತು ಅವರನ್ನಾರೂ ಗುರುತಿಸುತ್ತಿಲ್ಲ. ಯಾರ ಲಾಭಕ್ಕಾಗಿ ನನ್ನ ವಿದ್ವತ್ತು, ಆಡಂಬರದ ಗಾಂಭೀರ್ಯದ ಪಾಂಡಿತ್ಯ ?

ನಿನ್ನ

ಬಿ. ಪಾಸ್ತರ್‌ನಾಕ್

ಕ್ರುಶ್ಚೇವ್‌ಗೆ ಬೋರಿಸ್ ಪಾಸ್ತರನಾಕ್ ಬರೆದ ಪತ್ರ : 'ತಾಸ್' ಪತ್ರಿಕೆಯ ಟಿಪ್ಪಣಿ

೧ನೇ ನವೆಂಬರ್ ೧೯೫೮

ಸೋವಿಯೆತ್ ಒಕ್ಕೂಟದ ಕಮ್ಯೂನಿಷ್ಟ್ ಪಕ್ಷ

ನಿಕಿತಾ ಸೆರ್ಗೆಯೆಚಿವ್ ಕ್ರುಶ್ಚೇವ್ ಗೆ,

'ಗೌರವಯುತ ನಿಕಿತಾ ಸೆರ್ಗೆಯೆವಿಚ್ ಕ್ರುಶ್ಚೇವ್: ನಾನು ವೈಯಕ್ತಿಕವಾಗಿ ನಿಮಗೆ, ಸೋವಿಯೆತ್ ಕಮ್ಯೂನಿಷ್ಟ್ ಪಕ್ಷಕ್ಕೆ, ಕೇಂದ್ರ ಸಮಿತಿಗೆ ನೇರವಾಗಿ ಬರೆಯುತ್ತಿರುವೆ. ವಿ. ಸೆಮಿಚೆಸ್ತ್ನಿ ಅವರ ಭಾಷಣದಿಂದ, 'ಸೋವಿಯೆತ್ ಒಕ್ಕೂಟದಿಂದ ಹೊರಹೋಗಲು ಸರ್ಕಾರ ಅಡ್ಡಿಪಡಿಸುವುದಿಲ್ಲ' ಎಂದು ತಿಳಿಯಿತು.

ನನ್ನಿಂದ ಇದು ಅಸಾಧ್ಯ. ರಷಿಯಾದೊಂದಿಗೆ ನಾನು ಬೆಸೆದುಹೋಗಿದ್ದೇನೆ., ಹುಟ್ಟು, ಬದುಕು, ಸಾಹಿತ್ಯದಲ್ಲಿ. ರಷಿಯಾದ ಹೊರಗಿನ ನನ್ನ ಬದುಕನ್ನು ಊಹಿಸಿಕೊಳ್ಳಲಾರೆ. ನನ್ನ ತಪ್ಪು-ದೋಷಗಳೇನೇ ಇದ್ದರೂ ಪಶ್ಚಿಮದಲ್ಲಿ ನನ್ನ ಹೆಸರಿನ ಸುತ್ತ ಸೇರಿ ನಡೆಸಿರುವ ರಾಜಕೀಯ ದಾಳವಾಗುವುದನ್ನು ನಾನು ಊಹಿಸಲಾರೆ. ಇದರ ಎಚ್ಚರ ನನಗಿರುವುದರಿಂದ ನೊಬೆಲ್ ಬಹುಮಾನವನ್ನು ನಾನು ಸ್ವೀಕರಿಸುವುದಿಲ್ಲವೆಂದು ಸ್ವೀಡಿಶ್ ಅಕಾಡೆಮಿಗೆ ತಿಳಿಸಿದ್ದೇನೆ.

ನನ್ನ ದೇಶದ ಗಡಿಯಾಚೆಗೆ ಹೋಗುವುದೆಂದರೆ ನನ್ನ ಪಾಲಿಗದು ಸಾವು. ಹೀಗಾಗಿ ನನ್ನ ಬಗೆಗೆ ಕಠಿಣ ನಿಲುವು ತೆಗೆದುಕೊಳ್ಳಬೇಡಿರೆಂದು ಮನವಿ ಮಾಡುತ್ತಿರುವೆ. ನನ್ನ ಮನಸ್ಸಿನ ಸಾಕ್ಷಿಪ್ರಜ್ಞೆ ಮುಟ್ಟಿ ಹೇಳಬಲ್ಲೆ ಸೋವಿಯೆತ್ ಸಾಹಿತ್ಯಕ್ಕೆ ನನ್ನದೂ ಕೊಡುಗೆ ಇದೆ, ನನ್ನಿಂದ ಸಾಹಿತ್ಯಕ್ಕೆ ಪ್ರಯೋಜನವಿದೆ.

ಬಿ. ಪಾಸ್ತರ್‌ನಾಕ್

ತಾಸ್ ಪತ್ರಿಕೆಯ ಟಿಪ್ಪಣಿ

'ಬಂಡವಾಳಶಾಹಿ ಪತ್ರಿಕೆಗಳು ಪಾಸ್ತರ್‌ನಾಕ್ ರಷಿಯಾದಿಂದ ಹೊರಹೋಗುವ ಹಕ್ಕಿನಿಂದ ವಂಚಿತನಾಗಿದ್ದಾನೆಂಬ ಕಥೆ ಹಬ್ಬಿಸಿವೆ. ಇದೊಂದು ಒರಟು ಶೋಧನೆ. ಪಾಸ್ತರ್‌ನಾಕ್ ಇಲ್ಲಿಯವರೆಗೆ ದೇಶದಿಂದ ಹೊರಹೋಗಲು ವೀಸಾ ಕೇಳಿ ಪಕ್ಷಕ್ಕೆ ಮನವಿ ಸಲ್ಲಿಸಿಲ್ಲ. ಪಕ್ಷ ಅದನ್ನು ತಿರಸ್ಕರಿಸಿಯೂ ಇಲ್ಲ.

ಪಾಸ್ತರ್‌ನಾಕ್ ಬಯಸಿದಲ್ಲಿ ಎಂದೆಂದಿಗೂ ಇಲ್ಲಿಂದ ದೂರ ಹೋಗುವಲ್ಲಿ ತನ್ನ ಕೃತಿ 'ಡಾಕ್ಟರ್ ಜ಼ಿವಾಗೋ'ದಲ್ಲಿ ಅವಹೇಳನ ಮಾಡಿದ ಜನರಾಗಲಿ, ಸರ್ಕಾರವಾಗಲಿ ಆತನಿಗೆ ಯಾವ ವಿಧದಿಂದಲೂ ಅಡ್ಡಿಯಾಗದು. ಸೋವಿಯೆತ್ ಒಕ್ಕೂಟದಿಂದ ಹೊರಹೋಗುವ ಬಂಡವಾಳಶಾಹಿಯ ಎಲ್ಲ ಸವಲತ್ತು ಉಪಭೋಗಿಸುವ ಅವಕಾಶವನ್ನು ಪಾಸ್ತರ್‌ನಾಕ್‌ಗೆ ಸರ್ಕಾರ ಕಲ್ಪಿಸಲಾಗುವುದು.'

'ಪ್ರಾವ್ದಾ ಪತ್ರಿಕೆಗೆ ಪಾಸ್ತರ್‌ನಾಕ್ ಪತ್ರ

(ಪ್ರಾವ್ದಾ ೬ನೇ ನವೆಂಬರ್, ೧೯೫೮)

'ನನ್ನ ಈ ಪತ್ರವನ್ನು ಪ್ರಕಟಿಸಲು ಪ್ರಾವ್ದಾ ಪತ್ರಿಕೆಗೆ ಸಂಪಾದಕವರ್ಗಕ್ಕೆ ಬರೆಯುತ್ತಿರುವೆ. ಸತ್ಯದ ಬಗೆಗೆ ಗೌರವವಿರುವುದರಿಂದ ನಾನು ಹೀಗೇ ಮಾಡಬೇಕಾಯಿತು.

ನನ್ನ ಬದುಕಿನಲ್ಲಿ ನನಗೆ ದೊರೆತಿರುವುದೆಲ್ಲ ನನ್ನ ಕ್ರಿಯೆಯಿಂದಾಗಿ. ಹಾಗೆಯೇ ನೊಬೆಲ್ ಬಹುಮಾನ ದೊರೆತಿರುವುದು ಕೂಡ ಸ್ವ ಇಚ್ಛೆಯಿಂದ ನೀಡಿದ್ದು. ನನ್ನ ಸಾಹಿತ್ಯ ಸಾಧನೆಗಾಗಿ ಈ ಪ್ರಶಸ್ತಿಯನ್ನು ಪಡೆದಿದ್ದೇನೆ. ಪ್ರಶಸ್ತಿ ಘೋಷಿಸಿದಾಗ ಖುಷಿಯಾಗಿ, ನನ್ನ ಸಂತೋಷವನ್ನು ಕೇಬಲ್ ಮೂಲಕ ಸ್ವೀಡಿಶ್ ಅಕಾಡೆಮಿಯ ಕಾರ್ಯದರ್ಶಿ ಆಂದ್ರೆ ಎಸ್ತರ್‌ಲಿಂಗ್‌ಗೆ ಕಳಿಸಿದೆ.

ಆದರೆ ನನ್ನದು ಅಪರಾಧವಾಗಿತ್ತು. ನನ್ನ ಈ ಅಪರಾಧಕ್ಕೆ ಕಾರಣವಿತ್ತು. ಈಗ ಐದು ವರ್ಷದ ಹಿಂದೆಯೂ ನೊಬೆಲ್ ಪಾರಿತೋಷಕಕ್ಕಾಗಿ ನನ್ನ ಹೆಸರನ್ನು ಶಿಫಾರಸ್ಸು ಮಾಡಲಾಗಿತ್ತು. ಸುಮ್ಮನೆ ಹೇಳುವುದಾದರೆ ಐದು ವರ್ಷದ ಹಿಂದೆ ನನ್ನ ಕಾದಂಬರಿಯೇ ಪ್ರಕಟವಾಗಿರಲಿಲ್ಲ.

ಒಂದು ವಾರದ ನಂತರ, ಈ ಪ್ರಶಸ್ತಿ ಹಿಂದೆ ರಾಜಕೀಯ ಪ್ರಚಾರದ ಸಾಧ್ಯತೆಯಿರುವುದನ್ನು ಕಂಡುಕೊಂಡೆ. ಅದೇ ಈಗಿನೆಲ್ಲ ಅನಾಹುತಕ್ಕೆ ಕಾರಣವಾಗಿದೆ. ಹೀಗಾಗಿ ನಾನು ಸ್ವಂತ ಇಚ್ಛೆಯಿಂದ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲವೆಂದು ತಿಳಿಸಿದೆ.

ಕ್ರುಶ್ಚೇವ್‌ಗೆ ನಾನು ಬರೆದ ಪತ್ರದಲ್ಲಿ - ನನ್ನ ಹುಟ್ಟು, ಬದುಕು, ಸಾಹಿತ್ಯ ರಷಿಯಾದೊಂದಿಗೆ ಬೆಸೆದುಕೊಂಡಿದೆ, ರಷಿಯಾದ ಹೊರಗೆ ಬದುಕುವುದೂ ಅಸಾಧ್ಯವೆಂದು ತಿಳಿಸಿದ್ದೇನೆ. ಈ ಬೆಸುಗೆಯ ಬಗೆಗೆ ಹೇಳುವಾಗ ದೇಶದೊಂದಿಗಿನ ನನ್ನ ಸಂಬಂಧವೆಂದರೆ ನನ್ನ ಬಾಲ್ಯ, ನನ್ನ ಪರಿಸರ ಮಾತ್ರ ಎಂದು ಹೇಳಿಲ್ಲ. ಬದಲಿಗೆ

ಇಲ್ಲಿನ ಜನ, ಇತಿಹಾಸ, ದೇಶದ ಈಗಿನ ವೈಭವ, ಹಾಗೂ ಭವಿಷ್ಯವನ್ನೂ ಒಳಗೊಂಡು ಹೇಳಿರುವೆ. ಆದರೆ ಇದೀಗ ನನ್ನ ಸ್ವಂತ ಅಪರಾಧವಾದ ಕಾದಂಬರಿಯಿಂದಾಗಿ ನಡುವೆ ಕಂದರ, ಅಪನಂಬಿಕೆ ಹುಟ್ಟಿ ಮಧ್ಯೆ ಗೋಡೆಗಳೆದ್ದಿವೆ.

ನನ್ನ ದೇಶ, ದೇಶದ ಜನತೆಗೆ ಘಾಸಿಮಾಡಬೇಕೆಂದು ನನ್ನ ಉದ್ದೇಶ ವಾಗಿರಲಿಲ್ಲ. 'ನೊವಿಮೀರ್ ' ಪತ್ರಿಕೆಯ ಸಂಪಾದಕ ವರ್ಗ ಕಾದಂಬರಿ ಅಕ್ಟೋಬರ್ ಕ್ರಾಂತಿಯ ವಿರುದ್ಧವೆಂದು ಸೋವಿಯೆತ್ ಒಕ್ಕೂಟದ ನಂಬಿಕೆಯ ವಿರುದ್ಧವೆಂದು ಓದುಗರು ತಿಳಿಯುವ ಸಾಧ್ಯತೆಯಿದೆಯೆಂದು ಹೇಳಿದರು. ಅದು ನನಗೆ ಸರಿತೋರಲಿಲ್ಲ, ಈಗ ಪಶ್ಚಾತ್ತಾಪ ಪಡುತ್ತಿರುವೆ.

'ಹಾಗೆ ನೋಡಿದರೆ, ಮೊದಲೇ ನಿರ್ಧರಿಸಿ ಯಾರಾದರೂ ಈ ಕಾದಂಬರಿಯ ವಿಮರ್ಶೆಗೆ ತೊಡಗಿದಾಗ ಈಗಿನ ನಿಲುವಿಗೆ ನಾನು ಅಂಟಿಕೊಂಡಿದ್ದೇನೆಂದು ವಾದಿಸಬಹುದು. ಅನ್ನಿಸಿಕೆ - ಅಕ್ಟೋಬರ್ ಕ್ರಾಂತಿ ಕೂಡ ನ್ಯಾಯಸಮ್ಮತವಲ್ಲದ ಕ್ರಾಂತಿ. ಇದು ರಷಿಯಾವನ್ನು ಅನೇಕ ತೊಂದರೆಗೆ ಸಿಕ್ಕಿಸಿ, ದೇಶದ ಸಾಂಪ್ರದಾಯಿಕ ವಿದ್ಯಾವಂತ ವರ್ಗವನ್ನು ವಿನಾಶದಂಚಿಗೆ ತಳ್ಳಿತು.'

ಇಂಥ ನಿಲುವು ಅಸಂಗತಕ್ಕೆಡೆ ಮಾಡುವುದರಿಂದ ಸ್ಪಷ್ಟವಾಗಿಯೇ ಇದನ್ನು ನಾನೊಪ್ಪುವುದಿಲ್ಲ. ನೊಬೆಲ್ ಪಡೆದ ನನ್ನ ಕೃತಿ ಈ ಥರದ ಘೋರ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿಕೊಟ್ಟಿದ್ದರಿಂದಲೇ ನಾನದನ್ನು ತಿರಸ್ಕರಿಸಿದ್ದೇನೆ.

ನಾನು ನನ್ನ ಇಟಲಿಯ ಪ್ರಕಾಶಕರಿಗೆ ಕೇಳಿದ್ದಂತೆ ಅವರು ಪ್ರಕಟಣೆಯನ್ನು ತಡೆಹಿಡಿದಿದ್ದರೆ ಕಡೆಯಪಕ್ಷ ಭಾಗಶಃ ನನ್ನ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿದ್ದೆ (ಬೇರೆ ದೇಶಗಳಲ್ಲಿ ಪ್ರಕಟಿಸಿದ ಪುಸ್ತಕದ ಆವೃತ್ತಿಯನ್ನು ನನ್ನ ಅನುಮತಿಯಿಲ್ಲದೆ ಪ್ರಕಟಿಸಲಾಗಿದೆ) ಆದರೆ ಪುಸ್ತಕ ಪ್ರಕಟವಾಗಿರುವುದರಿಂದ ಅದರ ಬಗ್ಗೆ ಮಾತಾಡಲು ಬಹಳ ತಡವಾಗಿದೆ.

ಚಂಡಮಾರುತವೆಬ್ಬಿಸಿದ ಈ ಒಂದು ವಾರದ ಕಾಲಾವಧಿಯಲ್ಲಿ ನನ್ನನ್ಯಾರು ವಿಚಾರಣೆಗೆ ಗುರಿಪಡಿಸಿಲ್ಲ. ನನ್ನ ಬದುಕಿಗಾಗಲಿ, ಸ್ವಾತಂತ್ರ್ಯಕ್ಕಾಗಲಿ ಯಾವ ಅಪಾಯವೂ ಇಲ್ಲ. ನನ್ನನ್ನು ಯಾರೂ ಏನೂ ಕೇಳಿಲ್ಲ. ನನ್ನ ಎಲ್ಲ ಕ್ರಿಯೆಗಳೂ ಸ್ವ ಇಚ್ಛೆಯಿಂದ ಮಾಡಿದ್ದೆಂದು ಇನ್ನೊಮ್ಮೆ ಒತ್ತಿ ಹೇಳುವೆ. ನನ್ನನ್ನು ಹತ್ತಿರದಿಂದ ಬಲ್ಲ

ಜನರಿಗೆ - ಯಾವ ಸಂದರ್ಭವೂ ನನ್ನನ್ನು ಆಶಾಢಭೂತಿಯನ್ನಾಗಿ ಮಾಡಲು, ನನ್ನ ಸಾಕ್ಷಿ ಪ್ರಜ್ಞೆ ಹತ್ತಿಕ್ಕಲು ಸಾಧ್ಯವಿಲ್ಲವೆಂದು ಬಲ್ಲರು. ಈ ವಿಚಾರದಲ್ಲಿ ಅದು ಸತ್ಯ. ನನ್ನ ಮೇಲೆ ಯಾರೂ ಒತ್ತಡ ಹೇರಿಲ್ಲ, ನನ್ನ ಹೇಳಿಕೆಯನ್ನು ಸ್ವಂತ ಆಸಕ್ತಿಯಿಂದ ನೀಡಿದ್ದೇನೆ. ಸಮಾಜದ ಏಳಿಗೆಯ ಬಗೆಗೆ ನನಗೆ ನಂಬಿಕೆ, ಹೆಮ್ಮೆ ಇದೆ. ನನ್ನ ಸುತ್ತಮುತ್ತ ಜನರೊಂದಿಗೆ, ಕಾಲದೊಂದಿಗೆ ಘನತೆಯಿಂದ ಬದುಕುವೆ.

ನನಗಿರುವ ಒಳ್ಳೆಯ ಹೆಸರನ್ನು ಉಳಿಸಿಕೊಂಡು ಸಂಗಾತಿಗಳ ನಂಬಿಕೆ ಗಳಿಸುವೆನೆಂಬ ಆತ್ಮ ವಿಶ್ವಾಸ ನನಗಿದೆ.

ಬಿ. ಪಾಸ್ತರ್‌ನಾಕ್

೫ನೇ ನವೆಂಬರ್ ೧೯೫೮

ಅನುಬಂಧ ೧

ಬೋರಿಸ್ : ಬಾಲ್ಯ, ಬರಹ, ಬದುಕು

೧೮೯೦ : ಮಾಸ್ಕೋ ನಗರದಲ್ಲಿ ಫೆಬ್ರವರಿ ೧೦, ೧೮೯೦, ಬೋರಿಸ್ ಲಿಯೋನಿದೊವಿಚ್ ಪಾಸ್ತರ್‌ನಾಕ್ ಜನನ.

೧೯೦೦ : ಈ ಶತಮಾನದ ಮಹಾನ್ ಲೇಖಕ ಲಿಯೋ ಟಾಲ್‌ಸ್ಟಾಯ್ ಹಾಗೂ ಪೋಲೆಂಡ್ ಸಂಜಾತ ಫ್ರೆಂಚ್ ಕವಿ ರೇನೆರಿಲ್ಕ್‌ರ ಭೇಟಿ

೧೯೦೩ : ವಿಶ್ವವಿಖ್ಯಾತ ಸಂಗೀತ ಸಂಯೋಜಕ ಸ್ಕ್ರೇಬಿಯನ್‌ರ ಮುಖಾಮುಖಿ; ಅವರಿಂದ ಸ್ಫೂರ್ತಿ.

೧೯೦೫ : ವಿದ್ಯಾರ್ಥಿ ಸಮೂಹದ ಬಂಡಾಯ, ಜನರ ತುಳಿತದಲ್ಲಿ, ಚಾಬೂಕಿನ ಹೊಡೆತದಲ್ಲಿ ಕಸ್ಸಾಕರು ನುಚ್ಚುನೂರು.

೧೯೦೬ : ಕುಟುಂಬದೊಂದಿಗೆ ಬರ್ಲಿನ್‌ಗೆ ಭೇಟಿ

೧೯೦೭ : 'ಸೆರ್‌ದರ್ದಾ' ಎಂಬ ಸಾಹಿತ್ಯ ಪ್ರಯೋಗಶೀಲ ಗುಂಪಿಗೆ ಸೇರಿಕೆ.

೧೯೦೮ : ಜಿಮ್ನಾಸಿಯಂನಿಂದ ಸ್ವರ್ಣಪದಕದೊಂದಿಗೆ ಪದವಿ.

೧೯೧೦ : ಮೃತ್ಯುಶಯ್ಯೆಯಲ್ಲಿರುವ ಟಾಲ್‌ಸ್ಟಾಯ್‌ರನ್ನು ಕಾಣಲು ತಂದೆಯೊಡನೆ ಪಯಣ.

೧೯೧೧ : ಆ ಕಾಲದ ಪ್ರಭಾವಿ ಸಾಹಿತಿಗಳ ಗುಂಪು 'ಸೆಂತ್ರಿ ಫ್ಯೂಗಾ' ಸದಸ್ಯ.

೧೯೧೨ : ಪ್ರೊಫೆಸರ್ ಕೊಹೆನ್‌ರ ಮಾರ್ಗದರ್ಶನದಲ್ಲಿ, ಮಾರ್ಬರ್ಗ್‌ನಲ್ಲಿ ತತ್ವಶಾಸ್ತ್ರ ಅಧ್ಯಯನ.

೧೯೧೪ : ಬೆಂಕಿಯುಂಡೆ ಎಂದು ಖ್ಯಾತಿ ಪಡೆದಿದ್ದ ಮಾಯಕೊವಸ್ಕಿ ಭೇಟಿ. 'ಎ ಟ್ವಿನ್ ಇನ್‌ದಿ ಕ್ಲೌಡ್ಸ್' ಪ್ರಕಟ.

೧೯೧೬ : 'ಕಾಮಾ' ನದಿದಂಡೆಯ ರಾಸಾಯನಿಕ ಕಾರ್ಖಾನೆಯಲ್ಲಿ ತುಸುಕಾಲ ಕಾರಕೂನ.

೧೯೧೭ : ಮರಳಿ ಮಾಸ್ಕೋ ನಗರಕ್ಕೆ ಬಂದವನೆ - 'ಎಬೌವ್ ದಿ ಬ್ಯಾರಿಯರ್ಸ್' ಸಂಕಲನ ಪ್ರಕಟಿಸಿದ.

೧೯೨೨ : ಬರ್ಲಿನ್, ಮಾರ್‌ಬರ್ಗ್‌ಗೆ ಪ್ರವಾಸ
ಎವ್ಗೆನಿಯಾ ವ್ಲದಿಮರೊವ್ನ ಲುರೆಳೊಂದಿಗೆ ಮದುವೆ.
'ಮೈ ಸಿಸ್ಟರ್ ಲೈಫ್' ಕವನ ಸಂಕಲನ ಹಾಗೂ 'ಚೈಲ್ಡ್ ಹುಡ್ ಆಫ್ ಲುವ್ವೆರ್' ಕಥೆ ಪ್ರಕಟ.

೧೯೨೩ : ಮಗ ಎವ್ಗೆನಿ ಬೋರಿಸೊವಿಚ್ ಪಾಸ್ತರ್‌ನಾಕ್‌ನ ಜನನ. ಬರ್ಲಿನ್‌ನಲ್ಲಿ 'ಥೀಮ್ಸ್ ಆಂಡ್ ವೇರಿಯೇಶನ್ಸ್' ಸಂಕಲನ ಪ್ರಕಟ.

೧೯೨೪ : ಬಿಡಿ ಚಿಂತನೆಗಳನ್ನು ಸೇರಿಸಿ ' ದಿ ಹೈ ಮೆಲೊಡಿ' ಪುಸ್ತಕ ಪ್ರಕಟ.

೧೯೨೫ : 'ಏರಿಯಲ್ ವೇಯ್ಸ್' ಕಥಾ ಸಂಕಲನ (ಕಥೆಗಳು : ದಿ ಚೈಲ್ಡ್ ಹುಡ್ ಆಫ್ ಲುವ್ವೆರ್, ' ದಿ ಮಾರ್ಕ್ ಆಫ್ ಅಪೆಲೆಸ್', 'ಲೆಟರ್ಸ್ ಫ್ರಮ್ ತೂಲಾ' ಹಾಗೂ ಏರಿಯಲ್ ವೇಯ್ಸ್) ಪ್ರಕಟ.

೧೯೨೬ : ಖಂಡಕಾವ್ಯ 'ಲೆಫ್ಟಿನೆಂಟ್ ಶ್ಮಿದ್' ಪ್ರಕಟ.

೧೯೨೭-೨೮ : '೧೯೦೫' ಕವಿತೆ ಪ್ರಕಟ, 'ನೋವಿಮೀರ್' ಪತ್ರಿಕೆಯಲ್ಲಿ ' ದಿ ಹೈ ಮೆಲೊಡಿ' ಬೆಳಕು ಕಂಡಿತು.

೧೯೩೦ : ಕುಟುಂಬ ಜೀವನದಲ್ಲಿ ಏರುಪೇರು. ಝಿನೈದಾ ನಿಕೊಲೆವ್‌ನಾಳೊಂದಿಗೆ ಜಾರ್ಜಿಯಾಕ್ಕೆ ಪಯಣ. ಎವ್ಗೆನಿಯಾಳೊಂದಿಗೆ ವಿಚ್ಛೇದನ, ಕಾಯಿಲೆಯಿಂದ ನರಳುತ್ತಿದ್ದ ಎವ್ಗೆನಿಯಾ. ಆತ್ಮ ಚರಿತ್ರೆ 'ಸೇಫ್ ಕಂಡೆಕ್ಟ್' ಪ್ರಕಟ.

೧೯೩೨-೩೪ : 'ಸೆಕೆಂಡ್ ಬರ್ತ್' ಸಂಕಲನ.
'ಯೂನಿಯನ್ ಆಫ್ ಸೊವಿಯೆತ್ ರೈಟರ್ಸ್' ಸಂಘಟನೆಯಲ್ಲಿ ತೊಡಗಿಸಿಕೊಂಡದ್ದು. ಝಿನೈದಾ ನೀಗಸ್‌ಳೊಂದಿಗೆ ಮದುವೆ.
ಎರಡನೆ ಬಾರಿ ಜಾರ್ಜಿಯಾಕ್ಕೆ ವಿಹಾರ.

ಒಸಿಪ್ ಮಾಂದಲ್‌ಷ್ತಮ್‌ನನ್ನು ಸ್ತಾಲಿನ್ ಸರ್ಕಾರ ಬಂಧಿಸಿದಾಗ ಸ್ತಾಲಿನ್‌ನೊಡನೆ ನೇರ ಮಾತುಕತೆ ನಡೆಸಿ ಒಸಿಪ್‌ನನ್ನು ಸೆರೆಯಿಂದ ಬಿಡಿಸಿದ್ದು.

೧೯೩೫ : ಅನುವಾದನಾಗಿ ಕಾರ್ಯ ಆರಂಭ - ಜಾರ್ಜಿಯನ್ ಕವಿತೆಗಳ ಆಯ್ಕೆ.

೧೯೩೭ : ಪ್ಯಾರಿಸ್‌ನಲ್ಲಿ ಫ್ಯಾಸಿಸ್ಟ್ ವಿರೋಧಿ ಒಕ್ಕೂಟದಲ್ಲಿ ಭಾಷಣ ಮಾಡಲು ಒಪ್ಪಿ ಅಲ್ಲಿಗೆ ಪಯಣ. ಗೆಳತಿ ತ್ಸ್ವೇತಯೇವಾಳ ಭೇಟಿ. 'ಜಾರ್ಜಿಯನ್ ಭಾವಗೀತೆಗಳ' ಸಂಗ್ರಹ ಪ್ರಕಟ.

೧೯೩೮-೩೯ : ಎರಡನೆ ಮಗ ಲಿಯೊನಿದ್ ಜನನ.
ತಾಯಿ ರೋಸಾ ಲಂಡನ್ನಿನ ಸ್ಟ್ರೀಟ್‌ಹಾಮ್‌ನಲ್ಲಿ ನಿಧನ.

೧೯೪೦-೪೫ : ಅನುವಾದಗಳ ಪ್ರಕಟ, ಜಾರ್ಜಿಯನ್ ಮತ್ತಷ್ಟು ಕವಿತೆಗಳು, ಶೇಕ್ಸ್‌ಪಿಯರ್ ನಾಟಕಗಳು.

೧೯೪೯ : 'ಕಿಂಗ್‌ಲಿಯರ್' ಪ್ರಕಟ.
ಓಲ್ಗಾ ಇವಾನ್‌ಸ್ಕಿಯಾಳ ಸೆರೆ ವರ್ಷಕಾಲ ಬಂಧನದಲ್ಲಿ. ಸೆರೆಯಲ್ಲಿ ಬೋರಿಸ್‌ನಿಂದ ಹುಟ್ಟಬೇಕಿದ್ದ ಮಗುವಿನ ಗರ್ಭಪಾತ - ಓಲ್ಗಾ - ಸೈಬಿರಿಯಾದ ಕ್ಯಾಂಪಿಗೆ ವರ್ಗಾವಣೆ.

೧೯೫೦-೫೨ : ಎರಡು ಸಲ ಹೃದಯಾಘಾತ, ನಿದ್ರಾಹೀನತೆಯ ಕಾಯಿಲೆ.
ನಾಲ್ಕನೆಯ ಬಾರಿ ಹೃದಯಾಘಾತ.

೧೯೫೩ : ಸ್ತಾಲಿನ್ ಸಾವು. ಮತ್ತೊಮ್ಮೆ ಹೃದಯದ ಕಾಯಿಲೆ. ಓಲ್ಗಾಳಿಗೆ ದಯಾಪರತೆಯಿಂದ ಬಿಡುಗಡೆ, ಗೋಥೆಯ 'ಫೌಸ್ಟ್' ಅನುವಾದ ಪ್ರಕಟ.

೧೯೫೫ : 'ಡಾಕ್ಟರ್ ಝಿವಾಗೋ' ಹಸ್ತಪ್ರತಿ ಸಿದ್ಧ.

೫೬, ೫೭ : ಕ್ರುಶ್ಚೇವ್‌ನ 'ರಹಸ್ಯ ಭಾಷಣ' ಬರಹಗಾರ ಫಿದಯೆವ್‌ನ ಆತ್ಮಹತ್ಯೆ. 'ನೋವಿಯರ್'ನಿಂದ ಝಿವಾಗೋ ಹಸ್ತಪ್ರತಿ ತಿರಸ್ಕೃತ. ಕೊನೆಗೆ ಇಟಲಿಯಲ್ಲಿ ಕಾದಂಬರಿ ಪ್ರಕಟ.

೧೯೫೮ : ಬ್ರಿಟನ್, ಅಮೆರಿಕಾದಲ್ಲಿ ಹಾಗೂ ಯೂರೋಪಿನ ಅನೇಕ ಭಾಷೆಗಳಲ್ಲಿ ಝಿವಾಗೋ ಅನುವಾದ ಪ್ರಕಟ.

ಜಗತ್ತಿನ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ 'ನೊಬೆಲ್' ಪುರಸ್ಕಾರ : ಮೊದಲು ಬೋರಿಸ್‌ನಿಂದ ಸ್ವೀಕಾರ.

ರಷ್ಯಿಯಾದ ಬರಹಗಾರರ ಒಕ್ಕೂಟದಿಂದ ಬಹಿಷ್ಕಾರ, ಕಟು ಟೀಕೆ, ವಿಮರ್ಶೆಯ ದಾಳಿ, ಅವಮಾನ, ಕೊನೆಗೆ ಪ್ರಶಸ್ತಿ ತಿರಸ್ಕಾರ.

೧೯೫೯ : ಹೆಚ್ಚಿದ ರಾಜಕೀಯ ಕಿರುಕುಳದಿಂದ ಅನಾರೋಗ್ಯ. ಬ್ರಿಟಿಶ್ ಪ್ರಧಾನಿ ಮ್ಯಾಕ್‌ಮಿಲನ್‌ರ ಭೇಟಿ ತಪ್ಪಿಸಲು ಜಾರ್ಜಿಯಾಕ್ಕೆ ಪ್ರವಾಸ ಹೋಗುವಂತೆ ಸೂಚನೆ !

ನಾಟಕ : 'ಬ್ಲೈಂಡ್ ಬ್ಯೂಟಿ' ಬರವಣಿಗೆ.

೧೯೬೦ : ಬೆಂಬಿಡದ ಕ್ಯಾನ್ಸರ್, ಹೃದಯ ಕಾಯಿಲೆಯಿಂದ ಪೆರಿಡೆಲ್ಕಿನೊದಲ್ಲಿ ೩೦ ಮೇ ೧೯೬೦ರಂದು ನಿಧನ.

ಅನುಬಂಧ - ೨

- **ಆನಾ ಅಖ್ಮತೋವಾ** [೧೮೮೯-೧೯೬೬], ರಷಿಯಾದ ಅತ್ಯಂತ ಪ್ರಮುಖಕವಿ, ಮೊದಲ ಕವಿತೆ ಪ್ರಕಟಿಸಿದ್ದು ೧೯೦೭. ೧೯೧೨-೧೯೧೪ ರಲ್ಲಿ ಪ್ರಕಟಿಸಿದ ಪ್ರೇಮ ಕವಿತೆಗಳು ಜನಪ್ರಿಯತೆ ತಂದಿತ್ತವು. ೧೯೨೩-ರಲ್ಲಿ 'ಕ್ರಿಸ್ತೋತ್ತರ ೧೯೨೧ ' ಸಂಕಲನ ಪ್ರಕಟಿಸಿತು. ನಂತರ ೧೭ ವರ್ಷಗಳ ಕಾಲ ಏನೂ ಪ್ರಕಟಿಸಲಿಲ್ಲ. ಈ ಕಾಲಾವಧಿಯಲ್ಲಿ ಪುಷ್ಕಿನ್ ಬಗ್ಗೆ ಶ್ರೇಷ್ಠ ಪ್ರಬಂಧಗಳನ್ನು ಬರೆದು ಪ್ರಕಟಿಸಿದಳು. ಆಕ್ಮಿಯಿಸಂನ ಪ್ರಮುಖ ಕವಿಯಾದ ಇವಳು ಗುಮಿಲೇವ್‌ನನ್ನು ಮದುವೆಯಾದಳು. ಆದರೆ ಆತ ೧೯೨೧ರಲ್ಲಿ ಕ್ರಾಂತಿಕಾರಿ ಸರಕಾರದ ಹತ್ಯಾಕಾಂಡದಲ್ಲಿ ಮಡಿದ. ೧೯೩೫ರಲ್ಲಿ ಅವಳ ೩ನೇ ಪತಿ ಪೂನಿನ್ ಹಾಗೂ ಮಗ ಲೇವ್ ಬಂಧನಕ್ಕೊಳಗಾದರು. ೧೯೪೦ರಲ್ಲಿ 'ಆರು ಸಂಗ್ರಹಗಳಿಂದ ' ೧೭ ವರ್ಷದ ನಂತರ ಪ್ರಕಟ. ೧೯೬೫ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಡಾಕ್ಟರೇಟ್, ೧೯೬೬ರಲ್ಲಿ ೨೭ನೇ ವಯಸ್ಸಿಗೆ ಮಾಸ್ಕೋ ಬಳಿ ಮಡಿದಳು.
- **ವ್ಲದಿಮೀರ್ ಮಾಯಕೊವಸ್ಕಿ** [೧೮೯೩-೧೯೩೦] ರಷಿಯಾದ ಅತ್ಯಂತ ಜನಪ್ರಿಯ ಯುವ ಕವಿ. ಚಿತ್ರಕಲೆ ಅಭ್ಯಾಸ ಮಾಡಿದ್ದ. 'ಫ್ಯೂಚರಿಸಂ' ಸಂಸ್ಥಾಪಕರಲ್ಲೊಬ್ಬ, ಅದರ ಪ್ರಣಾಳಿಕೆ ಬರೆದು ೧೯೧೨ರಲ್ಲಿ ಸಹಿ ಮಾಡಿದ. ಕ್ರಾಂತಿ ನಂತರ ಸೋವಿಯೆತ್ ಸಮಾಜದ ಪ್ರತಿಪಾದಕನಾದ ೧೯೧೮ 'ಮಿಸ್ಟ್ರಿ ಬಫೆಲ್ಲೋ'; ೧೯೨೮ ರಲ್ಲಿ 'ದಿ ಬೆಡ್ ಬಗ್' ; ೧೯೨೯ರಲ್ಲಿ 'ದಿ ಬಾತ್ ಹೌಸ್' ಪ್ರಕಟಿಸಿದ. ಕ್ರಾಂತಿನಂತರದ ರಷಿಯನ್ ಕಾವ್ಯದಲ್ಲಿ ಯುವ ಜನಾಂಗದ ಮೇಲೆ ಅತ್ಯಂತ ಪ್ರಭಾವಶಾಲಿ ಕವಿ, ವ್ಯಕ್ತಿ. ಅಧಿಕಾರಶಾಹಿ ಕಮ್ಯೂನಿಷ್ಟರಿಂದ ಭ್ರಮನಿರಸ ಹೊಂದಿ ೧೯೩೦ರಲ್ಲಿ ಆತ್ಮಹತ್ಯೆ ಮಾಡಿಕೊಂಡ. *Lef* ಲೆಫ್ಟ್ ಫ್ರಂಟ್ ಆಫ್ ದಿ ಆರ್ಟ್ಸ್, ಕಟ್ಟಿ ಅಸಂಖ್ಯ ಯುವಕವಿಗಳನ್ನು ಹುಟ್ಟುಹಾಕಿದ.

ಲಿಯೋನಿದ್ ಪಾಸ್ತರ್‌ನಾಕ್[೧೮೬೨ - ೧೯೪೫]ಬೋರಿಸ್ ಪಾಸ್ತರ್‌ನಾಕ್ ತಂದೆ. ಪ್ರಖ್ಯಾತ ಕಲಾವಿದ, ರೇಖಾಚಿತ್ರಕಾರ. ೧೯೨೧ರಲ್ಲಿ ರಷಿಯಾದಿಂದ ಜರ್ಮನಿಗೆ ವಲಸೆ ಹೋದ. ೧೯೩೮ರಲ್ಲಿ ಇಂಗ್ಲೆಂಡಿಗೆ ವಲಸೆ ಹೋದ. ಆಕ್ಸ್‌ಫರ್ಡ್‌ನಲ್ಲಿ ಮರಣ. ಟಾಲ್‌ಸ್ಟಾಯ್ ಕಾದಂಬರಿಗಳಿಗೆ ರೇಖಾಚಿತ್ರ ಬರೆದ ಹೆಗ್ಗಳಿಕೆ ಈತನದು.

ರೋಸಲಿಯಾ ಪಾಸ್ತರ್‌ನಾಕ್ ಈತನ ಹೆಂಡತಿ, ಪಿಯಾನೋವಾದಕಿ. ಮರಣ: ೧೯೩೯, ಆಕ್ಸ್‌ಫರ್ಡ್‌ನಲ್ಲಿ.

ಅಲೆಗ್ಸಾಂಡರ್ ಸ್ಕ್ರೇಬಿಯನ್ [೧೮೭೨ - ೧೯೧೫]ಬೋರಿಸ್‌ನ ಬಾಲ್ಯದಲ್ಲಿ ಅತ್ಯಂತ ಪ್ರಭಾವ ಬೀರಿದ ಸಂಗೀತ ಸಂಯೋಜಕ. ೧೯೦೩ರಲ್ಲಿ ಪಾಸ್ತರ್‌ನಾಕ್ ಈತನನ್ನು ಮೊದಲು ಭೇಟಿಯಾದ. ಆತನೇ ಬರೆದು ಸಂಗೀತ ಸಂಯೋಜನೆ - 'ಎಸ್ಟಿಸಿ' ಕವಿತೆ ಪ್ರಖ್ಯಾತ.

ಟೈಟಿಯನ್ ತಬಿಜೆ [೧೮೯೫ - ೧೯೩೭] ಜಾರ್ಜಿಯನ್ ಕವಿ. ಬೋರಿಸ್‌ನ ಪ್ರಾಣಸ್ನೇಹಿತ. ಸಿಂಬಲಿಸಂ ಪ್ರಭಾವದಿಂದ ಕಾವ್ಯ ರಚಿಸಿದವನು. ೧೯೧೦ರಲ್ಲಿ 'ದಿ ಕಂಪನಿ ಆಫ್ ದಿ ಬ್ಲೂ ಡ್ರಿಂಕಿಂಗ್ ಹಾರ್ನ್' ಸಂಕಲನ ಪ್ರಕಟಿಸಿದ. ೧೯೨೧ರಲ್ಲಿ ಸೋವಿಯೆತ್ ಒಕ್ಕೂಟ ಸೇರಿ ಸಮಾಜವಾದಿ ಕವಿತೆ ರಚಿಸಿದ. ೧೯೩೬ರಲ್ಲಿ ಬಂಧಿತನಾದ ಇವನನ್ನು ಗುಂಡಿಟ್ಟು ಕೊಲ್ಲಲಾಯಿತು.

ನೈನಾ ತಬಿಜೆ ಇವನ ಹೆಂಡತಿ, ಬೋರಿಸ್‌ನ ಪ್ರೀತಿ ಪಾತ್ರ ಗೆಳತಿ [ಪತ್ರಗಳ ಅನುವಾದ ನೋಡಿ.]

ಮರೀನಾ ತ್ಸ್ವೇತಯೇವಾ [೧೮೯೨-೧೯೪೧] ಕವಿ, ೧೯೧೦ರಲ್ಲಿ ಕವಿತೆ ಬರೆಯಲು ಆರಂಭಿಸಿದಳು. ೧೯೨೨ರಲ್ಲಿ ಫ್ರಾನ್ಸ್‌ಗೆ ವಲಸೆ ಹೋದಳು. ೧೯೩೯ರಲ್ಲಿ ರಷಿಯಾಕ್ಕೆ ಮಗನೊಡನೆ ಮರಳಿ ಬಂದಳು. ಅದೇ ವೇಳೆಗೆ ಮಗಳನ್ನು - ಗಂಡನನ್ನು ಸರ್ಕಾರ ಬಂಧಿಸಿತು. ಲಯಬದ್ಧ ರಚನೆ, ಪ್ರೇಮ-ಉನ್ಮಾದ, ಜನಪದ ನುಡಿಗಳು ಇವಳ ಕಾವ್ಯದ ಜೀವಾಳ. ಈಕೆ ಬೋರಿಸ್‌ನ ಹಳೆಯ ಪ್ರೇಯಸಿ.

ಪಾವೆಲ್ ಯಾಷಿವಿಲಿ [೧೮೯೫-೧೯೩೭] ಜಾರ್ಜಿಯನ್ ಕವಿ,

ಪಾಸ್ತರ್‌ನಾಕ್‌ನ ಪ್ರಾಣಸ್ನೇಹಿತ ಸಿಂಬಲಿಸಂ ಪ್ರಭಾವದ ಕವಿ. ಸೋವಿಯೆತ್ ವ್ಯವಸ್ಥೆ ಪುರಸ್ಕರಿಸಿ ಕವಿತೆ ಕಟ್ಟಿದವರಲ್ಲೊಬ್ಬ. ಲೆನಿನ್ ಸಾವಿನಬಗ್ಗೆ ಮನಮಿಡಿವ ಕವನ ಬರೆದ. ಮಾಯಕೋವಸ್ಕಿ, ಪುಷ್ಕಿನ್, ಲೆರ್ಮಂತೋವ್‌ರನ್ನ ಜಾರ್ಜಿಯ ಭಾಷೆಗೆ ಅನುವಾದಿಸಿದ. ಟೈಟಿಯನ್ ತಬಿಜ಼ೆ ಬಂಧನದಿಂದ ಹತಾಶನಾಗಿ ರೈಟರ್ಸ್ ಯೂನಿಯನ್ ಕಚೇರಿಯಲ್ಲಿ ಬಂದೂಕಿನಿಂದ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ.

ಬೋರಿಸ್‌ನ ಕಷ್ಟದ ದಿನಗಳಲ್ಲಿ ಆಶ್ರಯವೊದಗಿಸಿದ ಜ಼ೆನ್ನೈದಾ-ಬೋರಿಸ್‌ರಿಗೆ ಸ್ಮರಣೀಯ ಆತಿಥ್ಯ ನೀಡಿದ ಪಾವೆಲ್ - ಟೈಟಿಯನ್ ತಬಿಜ಼ೆ ಕವಿತೆಗಳನ್ನು ಬೋರಿಸ್ ಪಾಸ್ತರ್‌ನಾಕ್ ರಷ್ಯನ್ ಭಾಷೆಗೆ ಅನುವಾದಿಸಿದ.

- **ಎವ್ಗೆನಿ ಯೆತಿಷೆಂಕೊ** [೧೯೩೩ -] ಸೋವಿಯೆತ್ ಕವಿ. ಉಕ್ರೇನಿನ ಜ಼ೀಮಾದಲ್ಲಿ ಜನ. ೧೯೫೧ರಲ್ಲಿ ಗೋರ್ಕಿ ಲಿಟರಲಿ ಇನ್ಸ್ಟಿಟ್ಯೂಟ್ ಸೇರಿದ. ಮೊದಲ ಕವಿತೆ ೧೯೪೯ರಲ್ಲಿ ಪ್ರಕಟ. 'ಪಯೋನೀರ್ಸ್ ಆಫ್ ಫ್ಯೂಚರ್' ಸಂಗ್ರಹ ೧೯೫೨ ರಲ್ಲಿ ಪ್ರಕಟವಾಯಿತು. ೧೯೫೫ರಲ್ಲಿ ಭಾವಗೀತೆ ಸಂಕಲನದ 'ಥರ್ಡ್ ಸ್ನೋ' ೧೯೫೬ರಲ್ಲಿ ಹೈ ರೋಡ್ 'ಎಂಥೂಸ್ಟ್ಸ್ ಪ್ರಕಟಿಸಿದ......
- **ಸೈಮನ್ ಇವಾನೋವಿಚ್ ಚಿಕೋವ್ನಿ** [೧೯೦೨- ೧೯೬೨] ಜಾರ್ಜಿಯನ್ ಕವಿ. ೧೯೪೭ರಲ್ಲಿ ಜಾರ್ಜಿಯನ್ ಸಮಾಜವಾದವನ್ನು ಎತ್ತಿಹಿಡಿದದ್ದಕ್ಕೆ ಸ್ಟಾಲಿನ್ ಪ್ರಶಸ್ತಿ ಪಡೆದ. ಈತ ಜಾರ್ಜಿಯಾದ ಪ್ರಮುಖ ಕವಿ, ವಿಮರ್ಶಕನಾಗಿ ಬೆಳೆದ.
- **ಅಂದ್ರೆ ಬೆಲಿ** [೧೮೮೦-೧೯೩೪], ಇನ್ನೊಂದು ಕಾವ್ಯನಾಮ ಬ್ಯುಗಯೇವ್, ಕವಿ- ಕಾದಂಬರಿಕಾರ, ವಿಮರ್ಶಕ. ರಷಿಯನ್ ಸಿಂಬಲಿಸಂ ಪ್ರತಿಪಾದಕ, ತತ್ವಜ್ಞ. ೧೯೦೨ ಸಿಂಫೋನಿಸ್ ಎಂಬ ಶೀರ್ಷಿಕೆಯಡಿ ಆತನ ರಚನೆ ಪ್ರಕಟವಾಯಿತು. ೧೯೦೪ರಲ್ಲಿ ಪ್ರಥಮ; ೧೯೦೫ ತೃತೀಯ, ಚತುರ್ಥ ಸಿಂಫೋಸಿಯಂ ಪ್ರಕಟವಾದವು. 'ಪೀತರ್ಸ್ ಬರ್ಗ್' ಆತನ ಪ್ರಸಿದ್ಧ ಗದ್ಯ ಬರಹ. ಐತಿಹಾಸಿಕ ಸಾಹಿತ್ಯವನ್ನು ಈತ ಬರೆದ.

ಓಲ್ಗಾ ಇವಾನ್‌ಸ್ಕಯಾ : ಬೋರಿಸ್ ಪಾಸ್ತರ್‌ನಾಕ್‌ನ ಕಾವ್ಯ ಕನ್ನೆ. ಮನದನ್ನೆ. ೧೯೪೬ರಲ್ಲಿ 'ನೋವಿಮೀರ್' ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿದ್ದಳು. ಮುಂದೆ ಬೋರಿಸ್ ಜತೆಗೂಡಿ ಅನುವಾದವನ್ನೂ ಮಾಡಿದಳು. 'ಡಾಕ್ಟರ್ ಝಿವಾಗೋ' ಕಾದಂಬರಿಯ ಲಾರಾ ಪಾತ್ರದ ಸ್ಫೂರ್ತಿಯಾದವಳು. ಪಾಸ್ತರ್‌ನಾಕ್ ಸಂಗವೇ ೧೯೪೯ರಲ್ಲಿ ಸೆರೆಮನೆಗೆ ತಳ್ಳಿತು ; ಐದು ವರ್ಷ ಶ್ರಮ ಶಿಬಿರದಲ್ಲಿ ಕಳೆವಂತೆ ಮಾಡಿತು. ೧೯೫೩ರಲ್ಲಿ ಸ್ಟಾಲಿನ್‌ನ ನಿಧನದ ನಂತರ ಈಕೆಯನ್ನು ಬಿಡುಗಡೆ ಮಾಡಲಾಯಿತು. ೧೯೬೦ರಲ್ಲಿ ಪಾಸ್ತರ್‌ನಾಕ್‌ನ ನಿಧನದ ತುಸುಕಾಲದ ಬಳಿಕ ಓಲ್ಗಾಳನ್ನು, ಅವಳ ಮಗಳನ್ನು ಹಣ ಕಳ್ಳಸಾಗಣೆಯ ಆರೋಪದ ಮೇಲೆ ಮತ್ತೆ ಬಂಧಿಸಲಾಗಿತು. ೧೯೬೪ರಲ್ಲಿ ಬಿಡುಗಡೆಯಾದ ಈಕೆ ಇನ್ನೂ ಮಾಸ್ಕೋ ನಗರದಲ್ಲಿ ಬದುಕಿದ್ದಾಳೆ. ಪಾಸ್ತರ್‌ನಾಕ್‌ನೊಡನೆ ಆಕೆ ಕಳೆದ ದಿನಗಳ ಸ್ಮೃತಿಯನ್ನು ತನ್ನ 'ಕ್ಯಾಪ್ಟಿವ್ ಆಫ್ ಟೈಮ್' ಹಿಡಿಸಿದ್ದಾಳೆ. ಈಕೆ ಹುಟ್ಟಿದ್ದು ೧೯೧೨ರಲ್ಲಿ.

ಎವ್ಗೆನಿ ಪಾಸ್ತರ್‌ನಾಕ್ : [೧೯೨೨ -] ಬೋರಿಸ್ ಮೊದಲ ಪತ್ನಿ ಎವ್ಗೆನಿಯಾ ಹಾಗೂ ಬೋರಿಸ್‌ರಿಗೆ ಹುಟ್ಟಿದ ಏಕೈಕ ಮಗ. ಮಾಸ್ಕೋ ಹಾಗೂ ತಾಷ್ಕೆಂಟ್ ವಿಶ್ವವಿದ್ಯಾಲಯದಲ್ಲಿ ಓದು. ೧೯೪೧ರ ಎರಡನೆಯ ಮಹಾಯುದ್ಧದಲ್ಲಿ ರಷಿಯನ್ ಪಡೆಗೆ ಸೇರ್ಪಡೆ. ಯುದ್ಧಾನಂತರವೂ ಮಿಲಟರಿಯಲ್ಲಿ 'ಎಲೆಕ್ಟ್ರಿಕ್ ಎಂಜಿನಿಯರಿಂಗ್' ವಿಷಯ ತರಬೇತಿ ನೀಡಿದ. ೧೯೫೪ರಲ್ಲಿ ಮಾಸ್ಕೋದ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾನ ಪಡೆದು 'ಸೈಬರ್‌ನೆಟಿಕ್ಸ್ ಮತ್ತು ಆಟೋಮಿನ್ ಕಂಟ್ರೋಲ್‌ನಲ್ಲಿ ಸಂಶೋಧನೆ ನಡೆಸಿ ೧೯೬೮ರಲ್ಲಿ ಪಿ ಎಚ್ ಡಿ ಪದವಿ ಪಡೆದ. ಈತನ ಹೆಂಡತಿ ಎಲೆನಾ ಕೂಡ ಸಾಹಿತ್ಯ ಪದವಿ ಪಡೆದಾಕೆ. ಇಬ್ಬರೂ ಬೋರಿಸ್ ಪಾಸ್ತರ್‌ನಾಕ್‌ನ ಬಗ್ಗೆ ಸಂಶೋಧನೆ ನಡೆಸಿ ವಸ್ತುನಿಷ್ಠ ವಿಮರ್ಶೆಯನ್ನು, ಕವಿಜೀವನವನ್ನು ಪ್ರಕಟಿಸಿದ್ದಾರೆ. 'ಮೆಟಿರಿಯಲ್ಸ್ ಫಾರ್ ಎ ಬಯೋಗ್ರಫಿ ಆಫ್ ಬೋರಿಸ್ ಪಾಸ್ತರ್‌ನಾಕ್' ಹಾಗೂ 'ಬೋರಿಸ್ ಪಾಸ್ತರ್ ನಾಕ್ : ದಿ ಟ್ರಾಜಿಕ್ ಇಯರ್ಸ್ ೧೯೩೦-೬೦' ಎರಡು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಆಕರ

1. ***Fifty years of Russian prose : Pasternak to***
   solzhenitsyn
   Ed. Krystyna pomorska Vol. I
   M I T press cambridge press 1971.

2. ***Boris Pasternak : Selected writing & Letters***
   Ed. EVGENY PASTER NAK
   Progress, Moscow, 1990

3. ***Letters to Georgian friends***
   Tr. David Magarshack
   Penguin Books 1971

4. ***Political Leaders of 20th Century*** *: 'Stalin'*
   Issac Deutschar, Penguin, 1966

5. ***Fifty Russian poets***
   Progress, Moscow, 1974

6. ***Dr. Zivago***
   Tr. Max Hayward & Manya Harom
   Harvill, 1988

7. ***Soviet Litarature*** *: Anna Akhmatova*
   Birth Centenary issue 1989

8. ***Courage of genius***
   Robert Conquest
   Collins & Harvill 1961

9. ***Pasternak : A biography***
   Ronald Hingley,
   Weidenfeld & Necolson, 1983

10. ***Nightingale Fever : Russian poets in Revolution***
    Ronald Hingley
    W & N, 1982,

11. ***'An Introduetion to Russian Language***
& Litarature Vol.2

a. ***From the Golden Age to Silver age***
V. Setcharvkarev

b. ***Litature in the Saoviet Period***
Max Hayward
Cambride university Press, 1977

12. ***'Modern Tragedy' : : Raymond willianms***
Tragic Resignation & Sacrifice : Eliot & Pasternak

13. *Longman D E L, 1985*

14. *Longman D T P, 1989*

15. **ಕಥಾ ಜಗತ್ತು:** ಎಸ್. ದಿವಾಕರ್, ೧೯೮೫

16. **ಕಾವ್ಯ ಜಗತ್ತು :** ಗೋಪಾಲ ಕೃಷ್ಣ ಅಡಿಗ, ೧೯೮೬
ಜಗತ್ ಸಾಹಿತ್ಯ ಮಂಜರಿ

17. **ಆನಾ ಅಖ್ಮತೊವಾ : ರಿಕ್ವಿಯಂ ಮತ್ತಿತರ ನೂರು ಕವಿತೆಗಳು**
ಶಾ. ಬಾಲುರಾವ್, ೧೯೯೧
ಅಕ್ಷರ ಪ್ರಕಾಶನ

18. ***BORIS PASTERNAK : THE TRAGIC YEARS***
(1930-60)
EVGENY PASTERNAK
COLLINS & HARVIL, 1991

ನೊಬೆಲ್ ಪ್ರಶಸ್ತಿ ವಿಜೇತ - ಲೇಖಕ - ಲೇಖಕಿಯರು

ವರ್ಷ	ವಿಜೇತರು	ದೇಶ-ಭಾಷೆ
೧೯೦೧	ಸುಲಿ ಪ್ರುಧೋಮ್ (Sully Prudhomme)	ಫ್ರಾನ್ಸ್ - ಫ್ರೆಂಚ್
೧೯೦೨	ಥಿಯೆಡೋರ್ ಮೊಮೆಸೆನ್ (Theodor Mommesen)	ಜರ್ಮನಿ - ಜರ್ಮನ್
೧೯೦೩	ಬ್ಯೋರ್ನ್‌ಸ್ಟರ್ನ್ ಬ್ಯೋರ್ನ್‌ಸನ್ (Bjornstjerne Bjornson)	ನಾರ್ವೆ- ನಾರ್ವೇಜಿಯನ್
೧೯೦೪	ಫ್ರೆಡೆರಿಕ್ ಮಿಸ್ತ್ರಲಿ (Frederic Mistral)	ಫ್ರಾನ್ಸ್ - ಫ್ರೆಂಚ್
	ಯೋಸೆ ಈಚೆಗಾರೆ (Jose Echegaray)	ಸ್ಪೇನ್ - ಸ್ಪ್ಯಾನಿಷ್
೧೯೦೫	ಹೆನ್ರಿಕ್ ಸಿಯೆನ್‌ಕಿಯೆವಿಚ್ (Henryk Sienkiewicz)	ಪೋಲೆಂಡ್ - ಪೋಲಿಷ್
೧೯೦೬	ಜಿಯೂಸೆ ಕಾರ್ಡೂಚ್ಚಿ (Giouse Carducci)	ಇಟಲಿ - ಇಟಾಲಿಯನ್
೧೯೦೭	ರಡ್‌ಯಾರ್ಡ್ ಕಿಪ್ಲಿಂಗ್ (Rudyard Kipling)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೦೮	ರುಡಾಲ್ಫ್ ಯೂಕೆನ್ (Rudolf Eucken)	ಜರ್ಮನಿ - ಜರ್ಮನ್
೧೯೦೯	ಸೆಲ್ಮಾ ಲಾಗರ್‌ಲಾಫ್ (Selma Lagerlof)	ಸ್ವೀಡನ್ - ಸ್ವಿಡೀಷ್
೧೯೧೦	ಪಾಲ್ ಹೇಸೆ (Paul Heyse)	ಜರ್ಮನಿ - ಜರ್ಮನ್
೧೯೧೧	ಮಾರೀಸ್ ಮೇತರ್ ಲಿಂಕ್ (Mourice Maeterlinck)	ಬೆಲ್ಜಿಯಂ- ಫ್ರೆಂಚ್
೧೯೧೨	ಗೆರ್‌ಹಾರ್ಟ್ ಹಾಪ್ಟ್‌ಮನ್ (Gerhart Hauptmann)	ಜರ್ಮನಿ - ಜರ್ಮನ್
೧೯೧೩	ರವಿಂದ್ರನಾಥ ಠಾಕೂರ್(Rabindranath Togore)	ಭಾರತ - ಬಂಗಾಳಿ

೧೯೧೪	ಯಾರಿಗೂ ಇಲ್ಲ	— —
೧೯೧೫	ರೋಮೆ ರೋಲಾ (Romain Rolland)	ಫ್ರಾನ್ಸ್ - ಫ್ರೆಂಚ್
೧೯೧೬	ವೆರ್ನರ್ ವಿ. ಹೈದೆನ್‌ಸ್ತಾಮ್ (Verner V. Heidenstam)	ಸ್ವೀಡನ್ - ಸ್ವೀಡಿಷ್
೧೯೧೭	ಕಾರ್ಲ್ ಜೈಲೆರೂಪ್ (Karl Gjellerup)	ಡೆನ್ಮಾರ್ಕ್ - ಡೇನಿಷ್
	ಹೆನ್ರಿಕ್ ಪೋಂತೊಪ್ಪಿದಾನ್ (Henrik Pantoppidan)	ಡೆನ್ಮಾರ್ಕ್ - ಡೇನಿಷ್
೧೯೧೮	ಯಾರಿಗೂ ಇಲ್ಲ	– –
೧೯೧೯	ಕಾರ್ಲ್ ಸ್ಪಿಟೆಲರ್ (Carl Spitteler)	ಸ್ವಿಟ್ಜರ್‌ಲ್ಯಾಂಡ್ - ಜರ್ಮನ್
೧೯೨೦	ನುಟ್ ಹ್ಯಾಮ್ಸನ್ (Knut Hamsum)	ನಾರ್ವೆ - ನಾರ್ವೇಜಿಯನ್
೧೯೨೧	ಅನಾತೋಲ್ ಫ್ರಾನ್ಸ್ (Anatole France)	ಫ್ರಾನ್ಸ್ - ಫ್ರೆಂಚ್
೧೯೨೨	ಯಾಸಿಂತೊ ಬೆನಾವೆಂತೆ (Jacinto Benavente)	ಸ್ಪೇನ್ - ಸ್ಪ್ಯಾನಿಷ್
೧೯೨೩	ಡಬ್ಲ್ಯೂ. ಬಿ. ಯೇಟ್ಸ್ (W.B. Yeats)	ಐರ್ಲೆಂಡ್ - ಇಂಗ್ಲಿಷ್
೧೯೨೪	ವ್ಲಾದಿಸ್ಲಾ ರೇಮೋಂತ್ (Wladyslaw Reymont)	ಪೋಲೆಂಡ್ - ಪೋಲಿಷ್
೧೯೨೫	ಜಾರ್ಜ್ ಬರ್ನಾರ್ಡ್ ಷಾ (George Bernard Shaw)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೨೬	ಗ್ರೇತ್ಸಿಯಾ ದೆಲೆದ್ದಾ (Grazia Deledda)	ಇಟಲಿ - ಇಟಾಲಿಯನ್
೧೯೨೭	ಹೆನ್ರಿ ಬೆರ್ಗ್‌ಸನ್ (Henri Bergson)	ಫ್ರಾನ್ಸ್ - ಫ್ರೆಂಚ್
೧೯೨೮	ಸಿಗ್ರಿದ್ ಉಂದ್‌ಸೆತ್ (Sigrid Undset)	ನಾರ್ವೆ-ನಾರ್ವೇಜಿಯನ್
೧೯೨೯	ಥಾಮಸ್ ಮಾನ್ (Thomas Mann)	ಜರ್ಮನಿ - ಜರ್ಮನ್
೧೯೩೦	ಸಿಂಕ್ಲೇರ್ ಲೀವಿಸ್ (Sinclair Lewis)	ಅಮೆರಿಕ- ಇಂಗ್ಲಿಷ್
೧೯೩೧	ಎರಿಕ್ ಏಕ್ಸೆಲ್ ಕಾರ್ಲ್‌ಫೆಲ್ಡ್ (Erik Axel Karlfeldt)	ಸ್ವೀಡನ್ - ಸ್ವೀಡಿಷ್
೧೯೩೨	ಜಾನ್ ಗಾಲ್ಸ್‌ವರ್ದಿ (John Galsworthy)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೩೩	ಇವಾನ್ ಬುನಿನ್ (Ivan Bunin)	ರಷ್ಯಾ / ಫ್ರಾನ್ಸ್ - ರಷ್ಯನ್
೧೯೩೪	ಲುಯಿಜಿ ಪಿರಾಂಡೆಲೊ (Luigi Pirandello)	ಇಟಲಿ - ಇಟಾಲಿಯನ್
೧೯೩೫	ಯಾರಿಗೂ ಇಲ್ಲ	– –
೧೯೩೬	ಯೂಜೀನ್ ಓನೀಲ್ (Eugene O'Neill)	ಅಮೆರಿಕಾ - ಇಂಗ್ಲಿಷ್

೧೯೩೭ ರೋಜರ್ ಮಾರ್ತಿನ್ ದುಗಾರ್ (Roger Martin Du Gard) ಫ್ರಾನ್ಸ್ - ಫ್ರೆಂಚ್

೧೯೩೮ ಪರ್ಲ್ ಎಸ್. ಬಕ್ (Pearl S. Buck) ಅಮೆರಿಕ - ಇಂಗ್ಲಿಷ್

೧೯೩೯ ಫ್ರಾನ್ಸ್ ಈಮಿಲ್ ಸಿಲ್ಲಾನ್‌ಪಾ (Frans Eemil Sillanpaa) ಫಿನ್ಲೆಂಡ್ - ಫಿನ್ನಿಷ್

೧೯೪೦ ಯಾರಿಗೂ ಇಲ್ಲ – –

೧೯೪೦ ಯಾರಿಗೂ ಇಲ್ಲ – –

೧೯೪೧ ಯಾರಿಗೂ ಇಲ್ಲ – –

೧೯೪೨ ಯಾರಿಗೂ ಇಲ್ಲ – –

೧೯೪೩ ಯಾರಿಗೂ ಇಲ್ಲ – –

೧೯೪೪ ಯೊಹಾನ್ನೆಸ್ ವಿ. ಯೆನ್‌ಸೆನ್ (Johannes V. Jensen) ಡೆನ್ಮಾರ್ಕ್ - ಡೆನ್ನಿಸ್

೧೯೪೫ ಗ್ರೇಬಿಯೆಲಾ ಮಿಸ್ತ್ರಲ್ (Gabriela Mistral) ಚಿಲಿ - ಸ್ಪ್ಯಾನಿಷ್

೧೯೪೬ ಹರ್ಮನ್ ಹೆಸ್ (Hermann Hesse) ಸ್ವಿಜರ್‌ಲ್ಯಾಂಡ್- ಜರ್ಮನಿ

೧೯೪೭ ಆಂದ್ರೆ ಜೀದ್ (Andre Gide) ಫ್ರಾನ್ಸ್ - ಫ್ರೆಂಚ್

೧೯೪೮ ಟಿ.ಎಸ್. ಎಲಿಯಟ್ (T.S. Eliot) ಗ್ರೇಟ್ ಬ್ರಿಟನ್ - ಇಂಗ್ಲಿಷ್

೧೯೪೯ ವಿಲಿಯಂ ಫಾಕ್ನರ್ (William Faulkner) ಅಮೆರಿಕಾ - ಇಂಗ್ಲಿಷ್

೧೯೫೦ ಬರ್ಟ್ರಂಡ್ ರಸೆಲ್ (Bertrand Russel) ಗ್ರೇಟ್ ಬ್ರಿಟನ್ - ಇಂಗ್ಲಿಷ್

೧೯೫೧ ಪಾರ್ ಲಾಗರ್ ಕ್ವಿಸ್ಟ್ (Par Lagerkvist) ಸ್ವೀಡನ್ - ಸ್ವೀಡಿಷ್

೧೯೫೨ ಫ್ರಾನ್ಸುವಾ ಮೋರಿಯಾಕ್ (Francois Mouriac) ಫ್ರಾನ್ಸ್ - ಫ್ರೆಂಚ್

೧೯೫೩ ವಿನ್ಸ್ಟನ್ ಚರ್ಚಿಲ್ (Winston Churchill) ಗ್ರೇಟ್ ಬ್ರಿಟನ್ - ಇಂಗ್ಲಿಷ್

೧೯೫೪ ಅರ್ನೆಸ್ಟ್ ಹೆಮಿಂಗ್‌ವೇ (Ernest Hemingway) ಅಮೆರಿಕ - ಇಂಗ್ಲಿಷ್

೧೯೫೫ ಹಾಲ್‌ದೋರ್ ಲ್ಯಾಕ್ಸ್‌ನೆಸ್ (Halldor Laxness) ಐಸ್‌ಲೆಂಡ್ - ಐಸ್‌ಲ್ಯಾಂಡಿಕ್

೧೯೫೬ ಯುವಾನ್ ಆರ್. ಯಿಮೆನೆಸ್ -(Juan R. Jimenez) ಸ್ಪೇನ್ಸ್ - ಸ್ಪ್ಯಾನಿಷ್

೧೯೫೭ ಆಲ್ಬರ್ಟ್ ಕಾಮು (Albert Camus) ಫ್ರಾನ್ಸ್ - ಫ್ರೆಂಚ್

೧೯೫೮ ಬೋರಿಸ್ ಪಾಸ್ತರ್ ನಾಕ್ (Boris Pasternak) ಸೋವಿಯತ್ ಒಕ್ಕೂಟ
(ಪ್ರಶಸ್ತಿ ಪಡೆಯಲಿಲ್ಲ) ರಷ್ಯನ್

೧೯೫೯ ಸಾಲ್ವತೋರೆ ಕಾಸಿಮೋದೊ
(Salvatore Quasimodo) ಇಟಲಿ - ಇಟಾಲಿಯನ್

೧೯೬೦ ಸೇಂಟ್ - ಜಾನ್ ಪೆರ್ಸ್ (Saint-John Perse) ಫ್ರಾನ್ಸ್ - ಫ್ರೆಂಚ್

೧೯೬೧ ಇವೊ ಆಂದ್ರಿಚ್ (Ivo Andric) ಯೂಗೋಸ್ಲಾವಿಯಾ - ಸೆರ್ಬೊ-ಕ್ರೋಶ್

೧೯೬೨ ಜಾನ್ ಸ್ಟೈನ್ ಬೆಕ್ (John Steinbeck) ಅಮೆರಿಕ - ಇಂಗ್ಲಿಷ್

೧೯೬೩ ಜಿಯಾರ್ ಜೋಸ್ ಸೆಫೇರಿಸ್(Giorgos Seferis) ಗ್ರೀಸ್ - ಗ್ರೀಕ್

೧೯೬೪ ಜೀನ್ - ಪಾಲ್ ಸಾರ್ತ್ರ್ (Jean-Paul Sartre) ಫ್ರಾನ್ಸ್ - ಫ್ರೆಂಚ್
(ಪ್ರಶಸ್ತಿ ನಿರಾಕರಿಸಿದ)

೧೯೬೫ ಮಿಖಾಯಿಲ್ ಶೊಲೋಖೋವ್
(Mikhail Sholokhov) ಸೋವಿಯೆತ್ ಒಕ್ಕೂಟ - ರಷ್ಯನ್

೧೯೬೬ ಎಸ್.ವೈ. ಅಗ್ನಾನ್ (S.Y. Agnon) ಇಸ್ರೇಲ್ - ಹೀಬ್ರೂ
ನೆಲ್ಲಿ ಸ್ಯಾಚ್ಸ್ (Nelly Sachs) ಜರ್ಮನಿ - ಜರ್ಮನ್

೧೯೬೭ ಮಿಗೇಲ್ ಏಂಜಲ್ ಅಸ್ತೂರಿಯಾಸ್
(Miguel Angel Asturias) ಗ್ವಾಟೆಮಾಲಾ - ಸ್ಪಾನಿಷ್

೧೯೬೮ ಯಸುನಾರಿ ಕವಾಬಾಟ (Yasunari Kawabata) ಜಪಾನ್ - ಜಾಪನೀಸ್

೧೯೬೯ ಸ್ಯಾಮ್ಯುಯೆಲ್ ಬೆಕೆಟ್ (Samuel Becktt) ಐರ್ಲೆಂಡ್ / ಫ್ರಾನ್ಸ್ -
ಫ್ರೆಂಚ್ / ಇಂಗ್ಲಿಷ್

೧೯೭೦ ಅಲೆಕ್ಸಾಂದರ್ ಸೋಲ್ಜೆನಿತ್ಸಿನ್ ಸೋವಿಯೆತ್
(Alexsander Solzhenitsyn) ಒಕ್ಕೂಟ - ರಷ್ಯನ್

೧೯೭೧ ಪ್ಯಾಬ್ಲೊ ನೆರೂದಾ (Pablo Neruda) ಚಿಲಿ - ಸ್ಪಾನಿಷ್

೧೯೭೨ ಹೇನ್ರಿಶ್ ಬ್ಯೋಲ್ (Heinrich Boll) ಪಶ್ಚಿಮ ಜರ್ಮನಿ - ಜರ್ಮನ್

೧೯೭೩ ಪ್ಯಾಟ್ರಿಕ್ ವೈಟ್ (Patrick White) ಆಸ್ಟ್ರೇಲಿಯ - ಇಂಗ್ಲಿಷ್

೧೯೭೪ ಐವಿಂಡ್ ಜಾನ್ಸನ್ (Eyvind Johnson) ಸ್ವೀಡನ್ - ಸ್ವೀಡಿಷ್
ಹ್ಯಾರಿ ಮಾರ್ತಿನ್‌ಸನ್ (Harry Martinson) ಸ್ವೀಡನ್ - ಸ್ವೀಡಿಷ್

೧೯೭೫ ಯೂಜೀನಿಯೊ ಮೊಂತಾಲೆ (Eugeoio Montale) ಇಟಲಿ - ಇಟಾಲಿಯನ್

೧೯೭೬ ಸಾಲ್ ಬೆಲೊ (Saul Bellow) ಅಮೆರಿಕ - ಇಂಗ್ಲಿಷ

೧೯೭೭ ವಿನ್ಸೆಂತೆ ಅಲೆಕ್ಸಾಂದ್ರೆ (Vincente Aleixandre) ಸ್ಪೇನ್ - ಸ್ಪಾನಿಷ್

೧೯೭೮	ಐಸಾಕ್ ಬಾಷೆವಿಸ್ ಸಿಂಗರ್ (Issac Bashevis Singer)	ಪೊಲೆಂಡ್/ಅಮೆರಿಕ - ಯಿದ್ದಿಶ್
೧೯೭೯	ಒಡಿಸ್ಯೂಸ್ ಎಲೀಟಿಸ್ (Odysseus Elytis)	ಗ್ರೀಸ್ - ಗ್ರೀಕ್
೧೯೮೦	ಚೆಸ್ಲಾ ಮಿಲೋತ್ಸ್ (Czeslaw Milosz)	ಪೋಲೆಂಡ್ / ಅಮೆರಿಕ - ಪೋಲಿಷ್
೧೯೮೧	ಎಲಿಯಾಸ್ ಕ್ಯಾನೆಟಿ (Elias Canetti)	ಗ್ರೇಟ್ ಬ್ರಿಟನ್ - ಜರ್ಮನ್
೧೯೮೨	ಗೇಬ್ರಿಯಲ್ ಗಾರ್ಸಿಯಾ ಮೂರ್ಕೇಸ್ (Gabriel Garcia Marquez)	ಕೊಲಂಬಿಯಾ - ಸ್ಪ್ಯಾನಿಷ್
೧೯೮೩	ವಿಲಿಯಂ ಗೋಲ್ಡಿಂಗ್ (Willam Golding)	ಗ್ರೇಟ್ ಬ್ರಿಟನ್ - ಇಂಗ್ಲಿಷ್
೧೯೮೪	ಯೂರೋಸ್ಲಾವ್ ಸೀಫರ್ತ್ (Jaroslow Seifert)	ಚೆಕೋಸ್ಲೋವಾಕಿಯ - ಚೆಕ್
೧೯೮೫	ಕ್ಲಾದ್ ಸಿಮೋನ್ (Claude Simon)	ಫ್ರಾನ್ಸ್ - ಫ್ರೆಂಚ್
೧೯೮೬	ವೊಲೆ ಪೊಯಿಂಕ (Wole Soyinka)	ನೈಜೆರಿಯಾ
೧೯೮೭	ಜೋಸೆಫ್ ಬ್ರಾಡ್‌ಸ್ಕಿ (Joseph Brodsky)	ರಷಿಯಾ / ಅಮೆರಿಕ - ರಷ್ಯನ್
೧೯೮೮	ನಜೀಬ್ ಮಹಫೌಜ್ (Najib Mahfuz)	ಈಜಿಪ್ಟ್ - ಅರಾಬಿಕ್
೧೯೮೯	ಕಾಮಿಲೆ ಯೋಸೆ ಸೆಲಾ (Camilo Jose cela)	ಸ್ಪೈನ್ - ಸ್ಪಾನಿಷ್
೧೯೯೦	ಒಷಾವಿಯೋ ಪಾಜ಼್ (Octovio Paz)	ಮೆಕ್ಸಿಕೋ - ಸ್ಪಾನಿಷ್
೧೯೯೧	ನ್ಯಾಡಿನ್ ಗೋರ್ಡಿಮರ್ (Nadine Gordimer)	ದ. ಆಫ್ರಿಕಾ -ಇಂಗ್ಲಿಷ
೧೯೯೨	ಡೆರೆಕ್ ವಾಲ್ಕಾಟ್ (Derek Wolcott)	ಸೈಂಟ್ ಲೂಸಿಯ (ಕೆರೆಬಿಯನ್) ಇಂಗ್ಲಿಷ್
೧೯೯೩	ಟೋನಿ ಮೊರಿಸನ್ (Toni Marison)	ಅಮೆರಿಕ - ಇಂಗ್ಲಿಷ್
೧೯೯೪	ಕೆಂಜಬುರೊ ಒಯೆ (Kenzaburo oe)	ಜಪಾನ್ - ಜಪಾನಿ
೧೯೯೫	ಸೀಮನ್ ಹೀನಿ (Seaman Heany)	ಯುಕೆ / ಐರಿಷ್
೧೯೯೬	ವಿಸ್ಲಾವಾ ಸಿಂಬೊ (Wislawa zymo)	ಪೊಲೆಂಡ್ / ಐರಿಷ್



ಬೋರಿಸ್ ಪಾಸ್ತರ್‌ನಾಕ್ ಆಧುನಿಕ ರಷಿಯಾದ ಪ್ರಮುಖ ಕವಿ, ಕಾದಂಬರಿಕಾರ ಹಾಗೂ ಅನುವಾದಕ. ಮಾಸ್ಕೋ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಪಾಸ್ತರ್‌ನಾಕ್ ತತ್ವಶಾಸ್ತ್ರದ ಅಧ್ಯಯನವನ್ನು ಮಾಡಿದ್ದವನು. ಮುಂದೆ ತನ್ನ ಕವನ ಸಂಕಲನಗಳಿಂದ ಗಮನಾರ್ಹ ಕವಿಯೆಂದು ಗುರುತಿಸಿಕೊಂಡ. ಷೇಕ್ಸ್‌ಪಿಯರ್, ಗೋಥೆ ಅವರ ನಾಟಕಗಳನ್ನು ರಷ್ಯನ್ ಭಾಷೆಗೆ ತುಂಬ ಸಮರ್ಥವಾಗಿ ಅನುವಾದಿಸಿ ಉತ್ತಮ ಅನುವಾದಕನಾಗಿಯೂ ಹೆಸರು ಗಳಿಸಿದ. 'ಡಾಕ್ಟರ್ ಝಿವಾಗೋ' ಕಾದಂಬರಿ ಇಟಲಿಯಲ್ಲಿ ಮೊದಲು ಪ್ರಕಟವಾದಾಗ ಪಾಸ್ತರ್‌ನಾಕ್‌ನ ಹೆಸರು ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯಿತು. ೧೯೫೮ ರಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಮೇಲೆ ಈತನ ಖ್ಯಾತಿ ಮತ್ತಷ್ಟು ಹೆಚ್ಚಿದರೂ ವೈಯಕ್ತಿಕ ಬದುಕಿನಲ್ಲಿ ಕಷ್ಟಗಳನ್ನು ಎದುರಿಸಬೇಕಾಯಿತು. ನೊಬೆಲ್ ಪ್ರಶಸ್ತಿಯನ್ನು ತಿರಸ್ಕರಿಸುವಂತೆ ಬಂದ ಒತ್ತಡದಲ್ಲಿ ತೀವ್ರವಾದ ಟೀಕೆಗಳನ್ನೆಲ್ಲ ಎದುರಿಸಿ ಅನಾರೋಗ್ಯಕ್ಕೆ ಈಡಾದ. ೧೯೬೦ ರಲ್ಲಿ ಮರಣ ಹೊಂದಿದ ಪಾಸ್ತರ್ ನಾಕ್ ರಷ್ಯನ್ ಸಾಹಿತ್ಯ ಪರಂಪರೆಯನ್ನು ಸಮೃದ್ಧಗೊಳಿಸಿದ ಮಹಾಲೇಖಕನಾಗಿ ಚಿರಸ್ಥಾಯಿಯಾಗಿದ್ದಾನೆ. ಈ ವಾಚಿಕೆ ಆತನ ಸಾಹಿತ್ಯದ ಬಗೆಗೆ ಒಂದು ತೋರ್ಬೆರಳಿನಂತಿದೆ.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮